ಸಂವಾದ

ಜುಲೈ ೨೦೧೦ ರೂ. ೨೦

ದಲಿತ ನೌಕರರೇ, ನಾಯಕರೇ
ಚೆನ್ನಾಗಿದ್ದೀರಾ?

ಹೊಸ ಅಂಕಣ
ಹೊಸ ಪಕ್ಷಿ ರಾಗ...

ಕರ್ನಾಟಕದ ಸಾಗುತ್ತಿರುವ ದಾರಿ

ಕೈಗಾರೀಕರಣವೋ? ವಿನಾಶವೋ?

ಸಂವಾದ

ಮಾಸ ಪತ್ರಿಕೆ

ಸಂಪುಟ ೮ ಸಂಚಿಕೆ ೯

ಜುಲೈ ೨೦೧೦

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ, ಅಂಜನಾನಗರ, ಮಾಗಡಿ ರಸ್ತೆ, ವಿಶ್ವನೀಡಂ ಅಂಚೆ ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091

✆ Editorial: 9448048306

✆ Circulation: 080-23480278, 9945264687

e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

- ❑ ಪತ್ರಗಳು ೦೩
- ❑ ಹೊಸ ಪುಸ್ತಕ ೦೪
- ❑ ಅಂತರಂಗ ೦೫
- ❑ ಸಂಪಾದಕರೊಂದಿಗೆ ಸಂವಾದ:
  - ○ ಡಾ.ಕಿರಣ.ಎಂ ಗಾಜನೂರು ೦೬
  - ○ ಎಸ್. ಮಾಲಗತ್ತಿ ೦೭
- ❑ ದಲಿತ ನೌಕರರೇ, ನಾಯಕರೇ ಚೆನ್ನಾಗಿದ್ದೀರಾ?
  - ○ ವಿ.ಆರ್. ಮೌರ್ಯ ೦೮
- ❑ ಹುಟ್ಟಲಿರುವ ಹೆಣ್ಣು ಮಗುವಿಗೆ 'ಪದ್ಮ ಪ್ರಿಯಾ' ಎಂದೇ ಹೆಸರಿಟ್ಟು....
  - ○ ಜ್ಯೋತಿ ಗುರುಪ್ರಸಾದ್ ೧೦
- ❑ ನವಕರ್ನಾಟಕದ ನಾಡಪ್ರಭುಗಳು: ಮಿತ್ತಲ್, ಪೋಸ್ಕೋ.......
  - ○ ಶಿವಸುಂದರ್ ೧೨

- ❑ ಇಸಮ್‌ಗಳನ್ನು ನುಂಗುತ್ತಿರುವ ತ್ರಿಕರಣಗಳು
  - ○ ಮಲ್ಲಿಕಾರ್ಜುನ ಗುಮ್ಮಗೋಳ ೧೬
- ❑ ಭೂಪಾಲ್ ದುರಂತದ ತೀರ್ಪು ಏನೆಲ್ಲ ಹೇಳುತ್ತಿದೆ?
  - ○ ಡಿ.ಎಸ್.ನಾಗಭೂಷಣ ೧೮
- ❑ ಅಂತರಜಾತಿ ವಿವಾಹಗಳು ಬೇಕೇ?
  - ○ ಡಾ.ಸಿ.ಜಿ.ಲಕ್ಷ್ಮೀಪತಿ ೨೨
- ❑ ನಮ್ಮೊಳಗೇ ಬುದ್ಧ ಪೂರ್ಣಿಮೆ
  - ○ ಅಪೂರ್ವ ಡಿ,ಸಿಲ್ವ ೨೬
- ❑ ಹಿಂಸೆ-ಪ್ರತಿಹಿಂಸೆ ಮತ್ತು ನಾಗರಿಕ ಸಮಾಜ
  - ○ ನಾ ದಿವಾಕರ್ ೩೦
- ❑ ಜನಗಣತಿ: ಸಾಧಿಸುವುದಾದರೂ ಏನನ್ನು?
  - ○ ಮೇಟಿ ಮಲ್ಲಿಕಾರ್ಜುನ ೩೪
- ❑ ಕಾಲಮಾನ... ೭
  - ○ ಡಾ. ಮುಜಾಫರ್ ಅಸ್ಸಾದಿ ೩೮
- ❑ ಧರೆ ಹತ್ತಿ ಉರಿದರೆ... ೨೨
  - ○ ಡಾ. ಟಿ. ಆರ್ ಚಂದ್ರಶೇಖರ್ ೪೨
- ❑ ದಲಿತ್ ಡೈರಿ
  - ○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
- ❑ ಬುದ್ಧಾಯಣ
  - ○ ಸಿ. ಎಚ್. ರಾಜಶೇಖರ್ ೫೦

ಕವನಗಳು : ❑ ಬಂಗ ೨೫ ❑ ಹೊಸತು ಒಂದು ಮೀನು ಬಂದು ೩೭

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಪತ್ರಗಳು

ಗೋಹತ್ಯೆ: ಒಂದು ಸ್ಪಷ್ಟನೆ

ಮಾನ್ಯರೇ

ಜೋಗನಹಳ್ಳಿ ಗುರುಮೂರ್ತಿ ಅವರು ಗೋಹತ್ಯಾ ಕಾನೂನಿನ ಬಗೆಗೆ ನಾನು ಬರೆದ ನನ್ನ ಅಭಿಪ್ರಾಯವನ್ನು ಕುರಿತು ನನಗೆ ತಿರುಗೇಟು ಹಾಕಿರುವುದಾಗಿ ಹೇಳಿದ್ದಾರೆ.

ಗೋಹತ್ಯಾ ನಿಷೇಧ ಕಾನೂನು ಭಾರತದ ಇತರೇ ರಾಜ್ಯಗಳಲ್ಲಿದ್ದಂತೆ, ಕರ್ನಾಟಕದಲ್ಲೂ 20-25ವರ್ಷಗಳಿಂದ ಜಾರಿಯಲ್ಲಿದೆ. ಗೋಹತ್ಯಾ ನಿಷೇಧ ಕಾನೂನನ್ನು ಭಾರತ ಸರ್ಕಾರ ಹೊಸದಾಗಿ ಜಾರಿಗೊಳಿಸಲು ಹೊರಟಿಲ್ಲ. ಜಾರಿಯಲ್ಲಿರುವ ಈ ಶಾಸನಕ್ಕೆ ತಿದ್ದುಪಡಿತರಲು ಹೊರಟಿದೆ ಅಷ್ಟೆ ಸರ್ಕಾರ ತರಲು ಉದ್ದೇಶಿಸಿರುವ ಈ ತಿದ್ದುಪಡಿಗಳಲ್ಲಿ ಏನಾದರೂ ದೋಷಇದೆಯೋ ಎಂಬುದ್ದನ್ನು ಪತ್ತೆ ಹಚ್ಚಿ, ದೋಷಗಳಿದ್ದರೆ ಅವುಗಳನ್ನು ಸರ್ಕಾರದ ಗಮನಕ್ಕೆ ತರಬೇಕು. ಇದು ಜನತೆಯ ಕರ್ತವ್ಯವೂಹೌದು. ಅದು ಬಿಟ್ಟು ಈಗಗಲೇ ಜಾರಿಯಲ್ಲಿರುವ ಶಾಸನವನ್ನು ಮಸೂದೆ ರೂಪದಲ್ಲಿ ಭಾರತ ಹೊಸದಾಗಿ ಶಾಸನಸಭೆಯಮುಂದೆ ತರುತ್ತಿದೆ ಎಂದು ಭಾವಿಸುವುದು ತಪ್ಪು ಗ್ರಹಿಕೆ.

ನಾನು ಬರೆದ ನನ್ನ ಹಿಂದಿನ ಲೇಖನದಲ್ಲಿ ಗೋವು ಒಂದು ವಿಶಿಷ್ಟ ಪ್ರಾಣಿ, ರೈತಾಪಿಗಳು, ಗ್ರಾಮವಾಸಿಗಳು ಗೋವನ್ನು ತಮ್ಮ ಮನೆಯ ಸದಸ್ಯರಂತೆಯೋ ಕಾಣುತ್ತಾರೆ. ಮಿಕ್ಕ ಪ್ರಾಣಿಗಳನ್ನು ಅವುಗಳನ್ನು ಕೊಂದೇ ನಾವು ನಮ್ಮ ಆಹಾರವಾಗಿ ಬಳಸಬೇಕು. ಗೋವನ್ನು ಅದನ್ನು ಕೊಲ್ಲದೆಯೇ ನಮಗೆ ಪೌಷ್ಠಿಕ ಆಹಾರ ನೀಡುವ ಪ್ರಾಣಿ. ಗಾಡಿಗೆ ನೇಗಲಿಗೆ ಕಟ್ಟುವ ಎತ್ತುಗಳನ್ನು ಹೋರಿಗಳನ್ನು ಕೊಡುವ ಪ್ರಾಣಿ ಎಂದು ಮನವರಿಕೆ ಮಾಡಿಕೊಡಲು ನಾನು ಆ ಲೇಖನದಲ್ಲಿ ಯತ್ನಿಸಿದ್ದೇನೆ.

ಅಮೆರಿಕದಲ್ಲಿ ದನಗಳನ್ನು ಆಹಾರಕ್ಕಾಗಿಯೇ ಸಾಕುತ್ತಾರೆ ಎಂದು ಹೇಳುವದರ ಉದ್ದೇಶವಾದರೂ, ಅಲ್ಲಿ ವ್ಯವಸಾಯ ಕಾರ್ಯಗಳಿಗೆ, ಗಾಡಿ ಎಳೆಯಲು ಎತ್ತುಗಳನ್ನು ಬಳಸುವುದಿಲ್ಲ ಕೇವಲ ಆಹಾರ ಪೂರೈಕೆಗಾಗಿ ಅವರು ಅದನ್ನು ಸಾಕುತ್ತಾರೆ ಎಂಬುದೇ ಆಗಿದೆ. ಗೆಳೆಯ ಗುರುಮೂರ್ತಿಯವರ ಇತರ ವಾದಗಳೆಲ್ಲ ಅಪ್ರಕೃತ ಎಂದು ನಾನು ಭಾವಿಸುತ್ತೇನೆ.

ನನ್ನ ಬಗ್ಗೆ ಈ ತಮ್ಮ ಪತ್ರದಲ್ಲಿ ಅವರು ಕೆಲವು ಒಳ್ಳೆಯ ಮಾತುಗಳನ್ನು ಆಡಿರುವುದು ಅವರ ದೊಡ್ಡತನಕ್ಕೆ ನಿದರ್ಶನ.

ಎಚ್.ಎಸ್. ದೊರೆಸ್ವಾಮಿ,
ಬೆಂಗಳೂರು

ಮಸಿ ಬಳಿಯಬಾರದು

ಮಾನ್ಯರೆ,

ಬಸವಣ್ಣನವರು ಲಿಂಗಪೂಜೆಯಿಂದ ಜಾತೀಯತೆಯ ಸಂಕೋಲೆಯಿಂದ ಹೊರಬಂದು ಜಾತಿರಹಿತ ಸಮಾಜ ನಿರ್ಮಾಣ ಮಾಡಿದ್ದು, ಹರಳಯ್ಯನವರ ಮಗನಿಗೆ ಮಧುವರಸರ ಮಗಳ ಅಂತರ್ಜಾತಿ ವಿವಾಹಮಾಡಿ ಅಸ್ಪೃಶ್ಯತೆ ನಿವಾರಣೆ ಮಾಡಿದ್ದು, ಅನುಭವ ಮಂಟಪ ಕಟ್ಟಿ ಜಾತಿವಿನಾಶ ಮಾಡಿದ್ದು, ಸಾಮಾಜಿಕ ಸಮಾನತೆ, ಸಮಾಜದ ಬದಲಾವಣೆಗೆ ತನ್ನನ್ನೇ ಪ್ರಯೋಗಿಸಿಕೊಂಡು ಮಹಾಮಾನವತಾವಾದಿ ಆದದ್ದು ಬಸವಣ್ಣನ ಅನುಯಾಯಿಗಳೆನಿಸಿಕೊಂಡು ಬಸವಜಯಂತಿ ಆಚರಿಸುವುದು ಎಷ್ಟರ ಮಟ್ಟಿಗೆ ಸಮಂಜಸವೆಂಬ ಬಗ್ಗೆ ಸುಧೀರ್ಘ ಚಿಂತನೆ ನಡೆಸಬೇಕು.

ದಿನನಿತ್ಯ ಜೀವನದಲ್ಲಿ ಬಸವತತ್ವಗಳ ಆಚರಣೆಯಲ್ಲಿ ವಿಫಲವಾಗಿರುವ ಬಸವವಾದಿ ವೀರಶೈವರು ಹಾಗೂ ಮಠಾಧೀಶರುಗಳು ಬಸವಣ್ಣನವರ ಅನುಯಾಯಿಗಳಾಗಲು ಹೇಗೆ ಸಾಧ್ಯ? ದಲಿತರು-ಶೋಷಿತರು ಡಾ|| ಅಂಬೇಡ್ಕರ್ ಜಯಂತಿ ಸದಾ ಆಚರಿಸುತ್ತಾರೆಂದು ವೀರಶೈವರೂ ಸಹ ಬಸವಜಯಂತಿ ಆಚರಣೆ ಮಾಡುವುದು ಬಸವತತ್ವಗಳ ಆಚರಣೆಯಲ್ಲಿ ವಿಫಲವಾಗಿರುವ ಹಿನ್ನಲೆಯಲ್ಲಿ ಬಸವತತ್ವ ಬಡವಾಗಿದೆ. ಕಾಲಕ್ರಮೇಣ ನಶಿಸಿಹೋಗುವುದನ್ನು ವೀರಶೈವರು ಖಚಿತಪಡಿಸಿಕೊಳ್ಳಬೇಕು.

ಬಸವಣ್ಣ ಹುಟ್ಟಿದ ನಾಡು ಮತ್ತು ವೀರಶೈವ ಧರ್ಮ ಸುಭದ್ರವಾಗಿ ಉಳಿಯಬೇಕಾದರೆ ವೀರಶೈವ ಮಠಗಳ ಪಾತ್ರ ಗುರುತರವಾದುದು. ದಲಿತರು- ಶೋಷಿತರು ಮತ್ತು ದಲಿತ ಸಂಘ ಸಂಸ್ಥೆಗಳು ಅಂಬೇಡ್ಕರ್ ಆದರ್ಶ ಮತ್ತು ಸಂವಿಧಾನ ದತ್ತ ಹಕ್ಕು ಬಾಧ್ಯತೆಗಳನ್ನು ಅನುಷ್ಠಾನಗೊಳಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಒತ್ತಾಯಿಸಿ 80ಕ್ಕೂ ಹೆಚ್ಚು ದಲಿತ ಚಳುವಳಿಯನ್ನು ನಡೆಸಿವೆ.

ಆದರೆ ಸದಾ ಬಸವ ಜಯಂತಿ ಆಚರಣೆ ಮಾಡಲು ಮುಂದಾಗಿರುವ ವೀರಶೈವ ಮಠಗಳು ಮತ್ತು ಸಂಘ ಸಂಸ್ಥೆಗಳು ಬಸವತತ್ವಗಳ ಅನಿಷ್ಠಾನಕ್ಕೆ ಎಷ್ಟು ಚಳುವಳಿ ಮಾಡಿದೆ ಎಂಬ ಬಗ್ಗೆ ಅಂಕಿಅಂಶಗಳನ್ನು ನೀಡಬೇಕು ಮತ್ತು ಬಸವತತ್ವ ಬಡವಾಗಿ ಕಾಲ ಕ್ರಮೇಣನಶಿಸಿ ಹೋಗುವುದನ್ನು ತಡೆಗಟ್ಟಲು ಬಸವಣ್ಣನವರು ಹಾಕಿಕೊಟ್ಟಿರುವ ಕಾರ್ಯಕ್ರಮಗಳನ್ನು ಇನ್ನಾದರೂ ಹಮ್ಮಿಕೊಳ್ಳಬೇಕು. ಇಂದಿನ ವೀರಶೈವ ಮಠಾಧೀಶರುಗಳು ಜಾತಿಮಠಗಳನ್ನು ಕಟ್ಟುವ ಮೂಲಕ ಬಸವಣ್ಣನತತ್ವ ಆದರ್ಶಗಳಿಗೆ ಮಸಿ ಬಳಿಯುವ ಕೆಲಸವನ್ನು ಯಾರೂ ಮಾಡಬಾರದು.

ಎ. ಮಾದಯ್ಯ, ಮೈಸೂರು

ಸಂವೇದನೆಯ 'ಸಂವಾದ'

'ಸಂವಾದ' ಪತ್ರಿಕೆ ಚೆನ್ನಾಗಿ ಮೂಡಿ ಬರುತ್ತಿದೆ. ಕನ್ನಡ ಪತ್ರಿಕಾ ಮಾಧ್ಯಮದಲ್ಲಿ ಇದಕ್ಕೆ ಒಂದು ಮುಖ್ಯ ಮಹತ್ವವಿದೆ, ಇದಕ್ಕೆ ಆ ಮಹತ್ವ ಬಂದಿರುವುದು ಇದರಲ್ಲಿನ 'ಸಂವೇದನೆಯ ಸಂವಾದಶೀಲ' ಗುಣದಿಂದಾಗಿ. ಅದರಲ್ಲೂ ಈಗ ಕರ್ನಾಟಕದ ಜನಸಮೂಹದಲ್ಲಿ ಸಂಕ್ಷೋಭೆ ಬೆಳೆಯುತ್ತಿದ್ದರೂ ಇಲ್ಲಿನ ರಾಜಕೀಯ-ಸಾಮಾಜಿಕ ರಂಗದಲ್ಲಿ ಒಂದು ರೀತಿಯ ಶೂನ್ಯತೆ ಆವರಿಸಿರುವುದು ನಮ್ಮೆಲ್ಲರ ಒಂದು ಕಳವಳಕಾರಿ ವಿಷಯವೇ ಆಗಿದೆ.

ಆದರೆ ಇದು ಹೀಗೆ ನಿಲ್ಲುವುದಿಲ್ಲ. ಸಂಕ್ಷೋಭೆಯ ಪರಿಣಾಮವಾಗಿ ಸಮಾಜ ಮಥಿಸುತ್ತಲೇ ಇದೆ. ಆದರೆ ರಾಜಕೀಯ-ಸಾಮಾಜಿಕ ರಂಗದಲ್ಲಿ ಹೊಸದೊಂದು ಭರವಸೆ ಬಲವಾಗಿ ಕಾಣುತ್ತಿಲ್ಲ ಅಷ್ಟೇ, ಅದೂ ಕೂಡ ಮುಂದಿನ ದಿನಗಳಲ್ಲಿ ಕಾಣಲೇ ಬೇಕು. ಆದರೆ ಈ ನಡುವಿನ ಅವಧಿಯಲ್ಲಿನ ಸಾಮಾಜಿಕ-ರಾಜಕೀಯ ಮಥನದ ಬೌದ್ಧಿಕ ವಲಯದ ಒಂದು ಪ್ರತಿನಿಧಿಯೇ ಈ 'ಸಂವಾದ' ಮಾಸಪತ್ರಿಕೆ. ಆದ್ದರಿಂದಲೇ ಇದಕ್ಕೆ 'ಸಂವಾದ'ವಾಗಿಯೂ ಮಹತ್ವವಿದೆ.

ತಮ್ಮ ಪತ್ರಿಕೆಯ ಮಾರ್ಚ್‌ತಿಂಗಳ ಸಂಚಿಕೆಯಲ್ಲಿ 'ಗೂಡೊಳಗಣ ಹಾಡು' ಎಂಬ ಕವನವೊಂದು ಪ್ರಕಟವಾಗಿದೆ. ಆ ಕವನವು ಈ ಸಂಕ್ಷೋಭ ಪರಿಸ್ಥಿತಿಯಲ್ಲಿ ಬೆಳೆಯುತ್ತಿರುವ ಒಂದು ಆಲೋಚನೆ ಕುರಿತಾದ್ದೇ ಆಗಿದೆ. ಅದರಲ್ಲಿರುವ ತೀವ್ರ ವ್ಯಂಗ್ಯಾತ್ಮಕ ನಕಾರಾತ್ಮಕ ದೃಷ್ಟಿಯು ಕರ್ನಾಟಕದ ಈ ಸಂದರ್ಭದ ಸಂವೇದನಾಶೀಲತೆಗೆ ತೀವ್ರ ಆಘಾತ ಕಾರಿಯಾದದ್ದು ಎಂಬುದು ನನ್ನ ಅಭಿಪ್ರಾಯ.

'ಸಂವಾದ' ಅಭಿಪ್ರಾಯಗಳು, ಪ್ರಬಂಧಗಳು, ಪತ್ರಗಳು, ಲೇಖನಗಳ ಮೂಲಕ ಮಾತ್ರವಲ್ಲ. ಸಾಹಿತ್ಯದ ವಿವಿಧ ಪ್ರಕಾರಗಳ ಮೂಲಕವೂ-ಅದರಲ್ಲೂ ಕವನದ ಮೂಲಕವೂ ನಡೆಯುವುದು ಸಹಜ ಮತ್ತು ನಡೆಯಬೇಕಾಗಿದೆ ಅಲ್ಲವೇ? 'ಸಂವಾದ' ನಿಜವಾದ 'ಸಂವೇದನಾ ಸಂವಾದ' ವಾಗುವುದು ಮತ್ತು ಪ್ರತಿಕ್ರಿಯೆಯಲ್ಲಿಯೂ ಉತ್ತಮ ಸಾಹಿತ್ಯ ಮತ್ತು ಪ್ರಾರಗಳು ಹೊರಬರಲಿರುವವು ಅಲ್ಲವೇ?

ಸುನಿಲ್,
ಹೆಬ್ರಿ, ದ.ಕ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ಹೊಸ ಪುಸ್ತಕ

ಮತಾಂತರ
ಸಂ : ಚಸರಾ/ಡಾ. ಲಕ್ಷ್ಮೀಪತಿ ಸಿ.ಜಿ.
ಬೆಲೆ : ರೂ. ೧೦೦/-

ಮತಾಂತರ ಪ್ರಕರಣಗಳ ಬಗ್ಗೆ, ಕೆಲವು ಸಾಹಿತಿಗಳು ಅದು ಕ್ರಿಶ್ಚಿಯನ್-ಮುಸ್ಲಿಂ ಧರ್ಮಗಳ ಪ್ರತಿನಿಧಿಗಳಿಂದ ನಡೆಯುತ್ತಿರುವ ದೇಶದ್ರೋಹಿ ಕೃತ್ಯವೆಂಬಂತೆ ಹುಯಿಲೆಬ್ಬಿಸುತ್ತಿರುವ ಕಾರಣವೇನು? ಹುಸಿ ಭೀತಿ ಬಿತ್ತುವ ಮೂಲಕ ಜನರ ನಡುವೆ ಕೋಮುವಾದವನ್ನು ಹರಡಿ, ಅಲ್ಪ ಸಂಖ್ಯಾತ ಧರ್ಮಕ್ಕೆ ಸೇರಿದವರನ್ನು ಸಮಾಜ ಅವಿಶ್ವಾಸದಿಂದ ಕಾಣುವಂತೆ ಮಾಡಬಯಸುತ್ತಿರುವುದರ ಹಿಂದಿನ ರಾಜಕಾರಣವೇನು ಎಂಬಂತಹ ಹಲವು ವಿಷಯಗಳು ಈ ಕೃತಿಯಲ್ಲಿ ತಲಸ್ಪರ್ಶಿಯಾಗಿ ಪರಿಶೀಲನೆಗೊಂಡಿವೆ.

ಪ್ರಕಾಶಕರು: ಸಂಚಲನ
ಬೆಂಗಳೂರು-೫೬೦ ೦೬೨





ಹಾಲತೊರಗೆ
ಲೇ: ಮಹೇಶ್ ತಿಪ್ಪಶೆಟ್ಟಿ
ಬೆಲೆ: ರೂ. ೧೦೦/-

ವಿವಿಧ ಸಂದರ್ಭಗಳಲ್ಲಿ ಬರೆದ ಇಪ್ಪತ್ತೊಂದು ಲೇಖನಗಳು ಈ ಕೃತಿಯಲ್ಲಿವೆ. ವೈಚಾರಿಕತೆ ಮತ್ತು ಅಂತರ್‌ಶಿಸ್ತಿನಲ್ಲಿ ಬರೆಯಲ್ಪಟ್ಟಿರುವ ಈ ಲೇಖನಗಳಲ್ಲಿ ಸಾಮಾಜಿಕ ಚಿಂತನೆಯ ಒಳನೋಟ ಎದ್ದು ಕಾಣುತ್ತದೆ. ವಿಷಯಗಳನ್ನು ಚರ್ವಿತ ಚರ್ವಣಗೊಳಿಸದೆ ಹೇಳಬೇಕಾದ್ದನ್ನು ನೇರವಾಗಿ ಹಾಗೂ ಗಟ್ಟಿಯಾಗಿ ಹೇಳುವ ಲೇಖಕರ ಶೈಲಿ ಮತ್ತು ನಿರೂಪಣಾ ಕ್ರಮ ಆಕರ್ಷಕವಾಗಿವೆ. ಕೃತಿಗಳ ಗುಣ-ದೋಷಗಳನ್ನು ವಿಶ್ಲೇಷಿಸುವುದರಲ್ಲಿ ಯಾವುದೇ ಪೂರ್ವಾಗ್ರಹಗಳಿಗೂ ಈಡಾಗದೆ ವಸ್ತುನಿಷ್ಠವಾಗಿ ವಿಮರ್ಶೆ ಮಾಡುತ್ತಾರೆ. ಹಾಗಾಗಿ ಇಲ್ಲಿನ ಬರಹಗಳಿಗೆ ಗಟ್ಟಿತನ, ಮೌಲಿಕತೆ, ಪ್ರಾಮಾಣಿಕತೆ ಮತ್ತು ಪ್ರಸ್ತುತತೆ ಪ್ರಾಪ್ತವಾಗಿದೆ.

ಪ್ರಕಾಶಕರು: ದಾಳಿಂಬೆ ಪ್ರಕಾಶನ,
ಹುನಗುಂದ-೫೮೭೧೧೮



ಮುಸ್ಲಿಮರ ತಲ್ಲಣ
ಅನು: ಮಂಗ್ಳೂರ ವಿಜಯ
ಬೆಲೆ: ರೂ.250/-

ಹೆಸರೇ ಹೇಳುವಂತೆ ಇದು ಮುಸ್ಲಿಂ ಜನಾಂಗದ ಅಮತರಂಗದ ಕಥನ. ದ್ವೇಷ-ಹಿಂಸೆಗಳ ಈ ಸಮೂಹ ಸನ್ನಿಯ ನಿವಾರಣೆಗೆ 'ಅನ್ಯ ಸಮುದಾಯಗಳ' ಕುರಿತು ಅರಿವು ಮೂಡಿಸುವುದರ ಹೊರತಾಗಿ ಬೇರೆ ಯಾವ ಔಷಧಿಯೂ ಇಲ್ಲ. ಈ ನಾಡಿನ ಕ್ರೈಸ್ತರು, ದಲಿತರು, ಮಹಿಳೆಯರು, ಕೂಲಿ ಕಾರ್ಮಿಕರು, ಬುಡಕಟ್ಟು ಜನರು ಮತ್ತು ಸಮಾಜದ ಮುಖ್ಯಧಾರೆಯ ಹೊರಗೆ ಇದ್ದು 'ಅನ್ಯ'ರಾಗಿರುವ ಎಲ್ಲಾ ಸಮುದಾಯಗಳ ಬಗೆಗೂ ಇಂಥ ಕೃತಿಗಳು ಬರಬೇಕಿದೆ. ಪ್ರಬುದ್ಧ ಅನುವಾದ ಇದರ ಹೆಗ್ಗಳಿಕೆ.

ಪ್ರಕಾಶಕರು: ಸಂಬುದ್ಧ ಪ್ರಕಾಶನ
ಬೆಂಗಳೂರು

ನಿಲ
ಲೇ : ಬಂಜಗೆರೆ ಜಯಪ್ರಕಾಶ
ಬೆಲೆ : ರೂ. ೧೨೦/-

ವಿವಿಧ ಸಂದರ್ಭಗಳಲ್ಲಿ ಬರೆದ ಹಲವು ಲೇಖನಗಳ ಸಂಗ್ರಹವೇ ಈ ಕೃತಿ. ಇಲ್ಲಿಯ ಎಲ್ಲಾ ಲೇಖನಗಳು, ಆಸಕ್ತ ಹಿತಗಳ ಪೂರ್ವಾಗ್ರಹ ಪೀಡಿತ ಆಲೋಚನೆಗಳನ್ನು ಪ್ರಶ್ನಿಸುತ್ತಲೇ ಮುಂದುವರಿಯುತ್ತವೆ. ಹೊಸ ಹೊಸ ಸಂವೇದನೆಗಳತ್ತ ಹಾಗೂ ಹೊಸ ಹೊಸ ವಿಚಾರಗಳತ್ತ ಕೈ ಬೀಸಿವೆ. ಮನುಷ್ಯ ಸಂಬಂಧಗಳನ್ನು ನಿಜದ ವಿಸ್ತರಣೆಗೆ ಒಳಪಡಿಸಿ ಬರೆದಿರುವ ಲೇಖನಗಳಿವು. ಲೇಖಕರ ನಿಲುವು, ನಂಬಿಕೆಗಳು, ಹಾಗೂ ಅವರು ನಂಬಿದ ಸಿದ್ಧಾಂತಗಳು ಸಮಾವೇಶಗೊಂಡುವುದರ ಫಲವೇ ಈ ಪುಸ್ತಕ.

ಪ್ರಕಾಶಕರು: ಹೊನ್ನಾರು ಪ್ರಕಾಶನ,
ತಿಪಟೂರು



ಪೂರ್ವೇತಿಹಾಸ
ಲೇ: ಇರ್ಫಾನ್ ಹಬೀಬ್
ಅನು: ಪ್ರಧೀಪ್ ಬೆಳಗಲ್
ಬೆಲೆ: ರೂ. 80/-

"ಪೂರ್ವೇತಿಹಾಸ" ಕೃತಿಯು ಕನ್ನಡದ ಬೌದ್ಧಿಕ ಪ್ರಪಂಚಕ್ಕೆ ಒಂದು ಹೊಸ ಸೇರ್ಪಡೆ. ಇತ್ತೀಚಿನ ಸಂಶೋಧನೆಯಾಧರಿತ ಇರ್ಫಾನ್ ಹಬೀಬ್ ಅವರ "ಪೂರ್ವೇತಿಹಾಸ" ಕೃತಿಯು "ಆಲಿಘರ್ ಹಿಸ್ಟೋರಿಯನ್ಸ್ ಸೊಸೈಟಿ"ಯ ಸಹಕಾರದಿಂದ ಪ್ರಕಟಿಸುತ್ತಿರುವ "ಪೀಪಲ್ಸ್ ಹಿಸ್ಟರಿ ಆಫ್ ಇಂಡಿಯಾ" ಎನ್ನುವ ಪುಸ್ತಕ ಮಾಲೆಯ ಮೊದಲನೆಯ ಕನ್ನಡ ಆವೃತ್ತಿಯಾಗಿದೆ. ಮಾನವ ವಿಕಾಸ, ಅವನ ಪರಿಕರ ಸಮೂಹ, ವ್ಯವಸಾಯದ ಉಗಮ-ಅದರ ವ್ಯಾಪ್ತಿಗಳಿಗೆ ಸಂಬಂಧಿಸಿದ ಅಧ್ಯಯನದ ಪರಿಚಯವನ್ನು ಕೃತಿಯು ಮಾಡಿಕೊಡುತ್ತದೆ.

ಪ್ರಕಾಶಕರು: ಕ್ರಿಯಾ ಪ್ರಕಾಶನ,

ಪರಿಸರ ಸ್ನೇಹಿಕೃಷಿ ಕ್ಯೂಬಾ ಮಾದರಿ
ಲೇ : ಜೈಕುಮಾರ್
ಬೆಲೆ : ರೂ. ೨೦/-

ಕೃಷಿಯನ್ನು ಸಣ್ಣ ಪ್ರಮಾಣದ ಉದ್ದಿಮೆಯಂತೆ ಪರಿಗಣಿಸಿ, ಬಹಳ ಪರಿಣಾಮಕಾರಿಯಾಗಿ ಅಳವಡಿಸಿ ಕೊಂಡಿರುವ ಕ್ಯೂಬಾದ ಹೊಸ ಮಾದರಿ ಕೃಷಿಪದ್ಧತಿಯು ಆಹಾರ ಸ್ವಾವಲಂಬನೆ ಸಾಧಿಸುವ ದಿಟ್ಟ ಹೋರಾಟದಲ್ಲಿ ಸಮಾಜದ ಎಲ್ಲ ರಂಗಗಳನ್ನು ಒಗ್ಗೂಡಿಸಿದೆ. ಸುಸ್ಥಿರ ಕೃಷಿಯನ್ನು ಮಾಡಲು ಸಾಧ್ಯವೇ ಎಂದು ಪ್ರಶ್ನೆ ಹಾಕುವ ಬದಲು, ಅದನ್ನು ಯಾವ ರೀತಿ ಅತ್ಯುತ್ತಮವಾಗಿ ಅನುಷ್ಠಾನಗೊಳಿಸಬಹುದೆಂದು ಮಾದರಿ ಕೆಲಸ ಮಾಡಿರುವ ಕ್ಯೂಬಾ ಆಹಾರ ಉತ್ಪಾದನೆಯ ವೈಚಾರಿಕ ರೂಪವನ್ನು ನಮ್ಮೆಲ್ಲರ ಮುಂದಿಟ್ಟಿದೆ.

ಪ್ರಕಾಶಕರು: ಕ್ರಿಯಾ ಪ್ರಕಾಶನ,

ಸಂಪಾದಕೀಯ

ಅಂತರಂಗ



ಸರ್ಕಾರ ನಿರ್ಲಜ್ಜ, ಮುಖ್ಯಮಂತ್ರಿ ಭಂಡ!

ಲೋಕಾಯುಕ್ತ ಸಂತೋಷ್ ಹೆಗ್ಡೆ ಅವರು ಕೊನೆಗೂ ರಾಜೀನಾಮೆ ನೀಡಿದ್ದಾರೆ. ಹೆಗ್ಡೆ ಅವರ ರಾಜೀನಾಮೆಯಿಂದ ಇಡೀ ಕರ್ನಾಟಕದ ಜನ ಕಣ್ಣೀರು ಹಾಕುತ್ತಿದ್ದರೆ, ಆಳುವ ಬಿಜೆಪಿ ಸರ್ಕಾರ ಕೊಡಗಟ್ಟಲೆ ಹಾಲು ಕುಡಿದು ಗಹಗಹಿಸಿ ನಗುತ್ತಿದೆ.!

ಹೆಗ್ಡೆ ಅವರು ರಾಜೀನಾಮೆ ನೀಡಿದ ದಿನ, ಮುಖ್ಯಮಂತ್ರಿಯವರ ಆಪ್ತವಲಯದಲ್ಲಿ ಗುರುತಿಸಿಕೊಂಡಿರುವ ನನ್ನ ಹಳೆಯ ಮಿತ್ರರೊಬ್ಬರು ಅತ್ಯಂತ ಸಂತೋಷದಲ್ಲಿದ್ದರು. ಸಂತೋಷಕ್ಕೆ ಕಾರಣವೇನೆಂದು ಕೇಳಿದೆ. 'ಯಡಿಯೂರಪ್ಪನವರಿಗೆ ಇದ್ದ ಅಡ್ಡಿ ಆತಂಕಗಳೆಲ್ಲ ಒಂದೊಂದಾಗಿ ತಮ್ಮಷ್ಟಕ್ಕೆ ತಾವೇ ಕರಗಿಹೋಗುತ್ತಿವೆ. ಸಂತೋಷ್ ಹೆಗ್ಡೆ ರಾಜೀನಾಮೆಯಿಂದಾಗಿ ಯಡ್ಡಿ ಅವರಿಗಿದ್ದ ಬಹುದೊಡ್ಡ ಅಪಾಯ ತಪ್ಪಿದಂತಾಗಿದೆ' ಎಂದು ಹೆಮ್ಮೆಯಿಂದ ಬೀಗಿದರು. 'ಇದು ಭಂಡತನದ ಪರಮಾವದಿ' ಎಂದು ತಿರುಗೇಟು ನೀಡಿದೆ. 'ನಿಮಗೆ ರಾಜಕೀಯ ಗೊತ್ತಿಲ್ಲ' ಎಂದು ಅವರು ಮಾತು ಬದಲಿಸಿದರು.

ಅಂತೂ ಬಿಜೆಪಿ ಪಾಲಿಗೆ ಹೆಗ್ಡೆ ರಾಜೀನಾಮೆಯಿಂದಾಗಿ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗಿದೆ!

ಬಿಜೆಪಿ ಸರ್ಕಾರ ಈಗ ಕಳ್ಳರ ಸಂತೆಯಂತಾಗಿದೆ. ಗಣಿಕಳ್ಳರು, ಭೂಗಳ್ಳರು, ಅತ್ಯಾಚಾರಿಗಳು, ಲಂಚಕೋರರು, ಕಳ್ಳ ಸಾಗಾಣಿದಾರರು, ವಂಚಕರು ಬಿಜೆಪಿಯಲ್ಲಿ ತುಂಬಿಹೋಗಿದ್ದಾರೆ. ಅವರು ಕೇವಲ ಕಾರ್ಯಕರ್ತರ ಮಟ್ಟದಲ್ಲಿಲ್ಲ. ಶಾಸಕರು, ಮಂತ್ರಿಗಳಾಗಿದ್ದಾರೆ. ರೆಡ್ಡಿ, ರಾಮುಲು, ರೇಣುಕಾಚಾರ್ಯ, ಹಾಲಪ್ಪ, ಸಂಪಂಗಿ ಹೀಗೆ ಕುಖ್ಯಾತರ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಯಡಿಯೂರಪ್ಪ ಇವರಿಗೆಲ್ಲ ಬಾಸ್! ಹಾಗಾಗಿಯೇ ಅವರು ಅತ್ತೂ-ಕರೆದು ರಂಪ ಮಾಡುತ್ತಿದ್ದಾರೆ. 'ನನ್ನನ್ನು ನಂಬಿ ನಂಬಿ' ಅಂತ ತೆಲಗಿಯ ಛಾಪಾ ಕಾಗದದ ಮೇಲೆ ಪದೇ ಪದೇ ತಮ್ಮದೇ ರಕ್ತದಲ್ಲಿ ಬರೆದು ಕೊಡುವ ಮಾತಾಡುತ್ತಿದ್ದಾರೆ!

ಹಿಂದೆ ಗುಂಡೂರಾವ್ ಅಂತ ಮುಖ್ಯಮಂತ್ರಿಯೊಬ್ಬರಿದ್ದರು. ಅವರ ವಿರುದ್ಧ ಇಡೀ ಕರ್ನಾಟಕವೇ ತಿರುಗಿಬಿದ್ದಿತ್ತು. ಮರಿ ಹಿಟ್ಲರ್ ನಂತಾಡುತ್ತಿದ್ದ ಗುಂಡೂದಾದ ಪತ್ರಕರ್ತರನ್ನೆಲ್ಲ ಅರಬ್ಬಿ ಸಮುದ್ರಕ್ಕೆ ಎಸೆಯಿರಿ ಅಂತ ತಮ್ಮ ಕಾರ್ಯಕರ್ತರಿಗೆ ಹುಕುಂ ನೀಡಿದ್ದರು. ಪಾಪ ಯಡಿಯೂರಪ್ಪ ಅಷ್ಟು ಕೆಟ್ಟವರಲ್ಲ. ಅವರು ಬಳ್ಳಾರಿ-ಚಿತ್ರದುರ್ಗ ಜಿಲ್ಲೆಯ ಮಣ್ಣನ್ನು ಮಾತ್ರ ಅರಬ್ಬಿ ಸಮುದ್ರದ ಮೂಲಕ ಕಳ್ಳ ಸಾಗಣೆಮಾಡಿ ಹೊರದೇಶಗಳಿಗೆ ಸಾಗಿಸಿ ಅಂತ ತಮ್ಮ ಗ್ಯಾಂಗಿಗೆ ಹುಕುಂ ನೀಡಿದ್ದಾರೆ. ಇಂಥ ಕೆಲಸಕ್ಕೆ ಸಹಕರಿಸದ ಪ್ರಾಮಾಣಿಕ ಅಧಿಕಾರಿಗಳನೆಲ್ಲ ಮನೆಗೆ ಕಳುಹಿಸಿ, ಲೋಕಾಯುಕ್ತರ ಬಲೆಗೆ ಬಿದ್ದ ಭಾರಿ ಕುಳಗಳನ್ನು ಮಾತ್ರ ಆಯಕಟ್ಟಿನ ಜಾಗಕ್ಕೆ ತಂದು ಕೂರಿಸುತ್ತಿದ್ದಾರೆ. ಎಂಥ ತ್ಯಾಗ! ಬಲಿದಾನ!! ಭಾರತಾಂಬೆ ಧನ್ಯಳು!!!

ಅತ್ಯಂತ ನೋವಿನ ಸಂಗತಿ ಎಂದರೆ ಇಂಥವರ ಬಗ್ಗೆ ಮತ್ತೆ ಮತ್ತೆ ಬರೆಯಬೇಕಾಗಿ ಬಂದಿರುವುದು. ಬಿಜೆಪಿ ಸರ್ಕಾರ ಕರ್ನಾಟಕದ ಜನರ ಉತ್ಸಾಹದ ಆಯ್ಕೆಯೇನೂ ಆಗಿರಲಿಲ್ಲ. ಕಾಂಗ್ರೆಸ್-ಜೆಡಿಎಸ್ ಪಕ್ಷಗಳ ಸ್ವಾರ್ಥ ರಾಜಕಾರಣ ಬಿಜೆಪಿಯನ್ನು ಅಧಿಕಾರದ ಗದ್ದುಗೆಗೆ ತಂದು ನಿಲ್ಲಿಸಿತ್ತು. ಆಡಳಿತ ಚುಕ್ಕಾಣಿ ಹಿಡಿಯುವವರೆಗೂ ಬಿಜೆಪಿ ಆಡುತ್ತಿದ್ದ ಮಾತುಗಳೇನು? ಕೊಡುತ್ತಿದ್ದ ಆಶ್ವಾಸನೆಗಳೇನು? ಅವರ ದೇಶ ಭಕ್ತಿ, ಧರ್ಮ ಶ್ರದ್ಧೆಗೆ ಯಾರಾದರೂ ಎದುರಾಡಲು ಸಾಧ್ಯವಿತ್ತೆ? ರಾಮ ರಾಜ್ಯದ ಕನಸುಗಳಿಗೆ ಸರಿಗಟ್ಟಲು ಆಗುತ್ತಿತ್ತೆ?

ಆದರೆ ಆಗಿದ್ದೇನು? ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಜನರ ಬದುಕು ಮೂರಾಬಟ್ಟೆಯಾಗಿದೆ. ರಾಜ್ಯದಲ್ಲಿ ಹಿಂದೆಂದೂ ನಡೆಯದಷ್ಟು ಅದ್ವಾನಗಳು ನಡೆಯುತ್ತಿವೆ. ಹಾವೇರಿ ಗೋಲಿಬಾರ್‌ನಿಂದ ಆರಂಭವಾದ ಬಿಜೆಪಿ ಅದ್ವಾನಗಳು ಈಗಿನ ಲೋಕಾಯುಕ್ತರ ರಾಜೀನಾಮೆವರೆಗೆ ಬಂದು ಮುಟ್ಟಿದೆ. 'ಮಾತೃ ದೇವೋ ಭವ' ಎನ್ನುವ ಬಿಜೆಪಿ ಮಹಿಳೆಯರನ್ನು ನಡೆಸಿಕೊಳ್ಳುತ್ತಿರುವ ರೀತಿಯಂತೂ ಶಿಲಾಯುಗದ ನೆನಪನ್ನು ಮರು ಕಳಿಸುವಂತೆ ಮಾಡುತ್ತಿದೆ. ಪದ್ಮಪ್ರಿಯಾ ಕೊಲೆ, ನರ್ಸ್ ಜಯಲಕ್ಷ್ಮಿ ಪ್ರಕರಣ, ಹಾಲಪ್ಪ ಲೈಂಗಿಕ ಹಗರಣ ಇವೆಲ್ಲ ಬಿಜೆಪಿಯ ಬರ್ಭರತೆಗೆ ಸಾಕ್ಷಿಯಾಗಿವೆ.

ಸಾರ್ವಜನಿಕ ಜೀವನದಲ್ಲಿ ನೈತಿಕತೆಗೆ ಚಿಕ್ಕಾಸಿನ ಬೆಲೆಯೂ ಇಲ್ಲದಂತೆ ಬಿಜೆಪಿ ಮಾಡಿಬಿಟ್ಟಿದೆ. ಭ್ರಷ್ಟಾಚಾರವಂತೂ ಆಡಳಿತದ ಸರ್ವಾಂಗವನ್ನು ಆವರಿಸಿಬಿಟ್ಟಿದೆ. ಪರವಾನಗಿ ಹೊಂದಿದ ಸುಲಿಗೆಕೋರರಂತೆ ಸರ್ಕಾರಿ ನೌಕರರು ಮಂತ್ರಿ-ಶಾಸಕರು ವರ್ತಿಸುತ್ತಿದ್ದಾರೆ. ನಾಗರಿಕ ಸೌಲಭ್ಯಗಳಿಲ್ಲದೆ ಜನರು ನರಳುತ್ತಿದ್ದರೆ, ಕಮೀಷನ್ ಏಜೆಂಟರುಗಳಂತೆ ಮಂತ್ರಿ-ಶಾಸಕರು ಅಭಿವೃದ್ಧಿಯ ಮಾತುಗಳನ್ನು ಆಡುತ್ತಿದ್ದಾರೆ.

ಇಂಥ ಹತಾಶ ಸ್ಥಿತಿಯಲ್ಲಿ ಜನ ಸಾಮಾನ್ಯರ ಆಶಾಕಿರಣದಂತಿದ್ದ ಲೋಕಾಯುಕ್ತರು ರಾಜೀನಾಮೆ ನೀಡಿ ಮತ್ತೊಂದು ಆಘಾತ ನೀಡಿದ್ದಾರೆ.

ಸಂವಿಧಾನ ದತ್ತವಾಗಿ ನ್ಯಾಯ, ನಿಷ್ಠೆ, ಪ್ರಾಮಾಣಿಕತೆ ಮತ್ತು ದಕ್ಷ ಸೇವೆಯನ್ನು ಜನತೆಗೆ ನೀಡಬೇಕಾದ ಸರ್ಕಾರವನ್ನು ಸದಾಕಾಯುವ ಎಚ್ಚರದಲ್ಲಿಡುವ, ತಪ್ಪಿದಲ್ಲಿ ದಂಡಿಸುವ ಮಹಾ ಸಂಸ್ಥೆ ಲೋಕಾಯುಕ್ತ. ಅದೇರೀತಿ ಮಾನವ ಹಕ್ಕುಗಳನ್ನು ಕಾಪಾಡಲು ಮಾನವ ಹಕ್ಕುಗಳ ಆಯೋಗ, ಹಿಂದುಳಿದ ವರ್ಗಗಳ ಹಿತ ಕಾಯಲು ಹಿಂದುಳಿದ ವರ್ಗಗಳ ಆಯೋಗ ಇವುಗಳೆಲ್ಲ ಸಂವಿಧಾನಾತ್ಮಕವಾಗಿ ರಚಿತವಾದವು. ಅವುಗಳಿಗೆ ಪೂರ್ಣ ಸಹಕಾರ ನೀಡಿ, ಸಮಾಜ ಕಲ್ಯಾಣಕ್ಕೆ, ಮಾನವ ಹಕ್ಕುಗಳ ರಕ್ಷಣೆಗೆ, ನ್ಯಾಯ ಸಮ್ಮತ ದಕ್ಷ ಆಡಳಿಕ್ಕೆ ಅವಕಾಶ ಮಾಡಿಕೊಡಬೇಕಾದ್ದು ಸರ್ಕಾರದ ಜವಾಬ್ದಾರಿ. ಅದು ಸಂವಿಧಾನತ್ಮಕ ಕರ್ತವ್ಯ ಕೂಡ.

ಆದರೆ ಬಿಜೆಪಿ ಸರ್ಕಾರ ಅಧಿಕಾರದ ಗದ್ದುಗೆ ಏರಿದ ದಿನದಿಂದಲೂ ಈ ಸಂಸ್ಥೆಗಳನ್ನು ಕಡೆಗಣಿಸುತ್ತಲೇ ಬಂದಿದೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ಕೃತ್ಯಕ್ಕೆ ಕೈ ಹಾಕಿದೆ. ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರ ನೀಡುವುದಿರಲಿ, ಅವರ ಕೆಲಸಗಳಿಗೂ ಸರ್ಕಾರ ಅಡ್ಡಿಪಡಿಸುತ್ತಿದೆ. ಲೋಕಾಯುಕ್ತ ಹಿಡಿದ ಭ್ರಷ್ಟ ಅಧಿಕಾರಿಗಳಿಗೆ ಉನ್ನತ ಸ್ಥಾನಗಳನ್ನು ನೀಡಿ ಲೋಕಾಯುಕ್ತ ಸಂಸ್ಥೆಯ ಮೂಲ ಕಲ್ಪನೆಗೇ ಮಸಿ ಬಳಿಯುತ್ತಿದೆ.

ಮಾನವ ಹಕ್ಕುಗಳ ಆಯೋಗದ್ದೂ ಇದೇ ಸ್ಥಿತಿ. ಅಲ್ಲಿನ ಸಿಬ್ಬಂದಿಗೆ ಕುಳಿತುಕೊಳ್ಳುವ ಕುರ್ಚಿಗೂ ಗತಿ ಇಲ್ಲ! ಹಿಂದುಳಿದ ವರ್ಗಗಳ ಆಯೋಗಕ್ಕೆ ಕಾರ್ಯ ನಿರ್ವಹಿಸಲು ಬಿಡುತ್ತಿಲ್ಲ. ಈಗಾಗಲೇ ಮಂಜುರಾಗಿರುವ ಜಾತಿ ಜನಗಣತಿಯನ್ನು ಆರಂಭಿಸಲಾಗದಂತೆ ದಿಗ್ಬಂಧನ ಹಾಕಲಾಗಿದೆ. ಸರ್ಕಾರ ಅನಾಗರಿಕವಾಗಿ ವರ್ತಿಸುತ್ತಿದೆ.

ಯಡಿಯೂರಪ್ಪನವರೇ, ಇದುವರೆಗೆ ಬಹಳಷ್ಟು ಜನ ಇಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದು, ಮೆರೆದು ಮಣ್ಣಾಗಿ ಹೋಗಿದ್ದಾರೆ. ಹುಂಬರಂತೆ ವರ್ತಿಸುವುದನ್ನು ನಿಲ್ಲಿಸಿ. ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಗೌರವಿಸಿ, ನಿಮಗಿಂತ, ನಿಮ್ಮ ಮುಖ್ಯಮಂತ್ರಿಗಿರಿಗಿಂತ ಸಂವಿಧಾನ ಮತ್ತು ದೇಶ ದೊಡ್ಡದು.

○ ಇಂದೂಧರ ಹೊನ್ನಾಪುರ

ಜಾತಿ ರಾಜಕಾರಣದ ಚರ್ಚೆ ಮತ್ತು ಮಾಯಾವತಿ ಎಂಬ ರಾಜಕಾರಣಿ

ಸಂಪಾದಕರೊಡನೆ ಸಂವಾದ

ಡಾ. ಕಿರಣ. ಎಂ ಗಾಜನೂರು

ಜಾತಿ ಮತ್ತು ರಾಜಕಾರಣದ ಸಂಬಂಧವನ್ನು ವಿವರಿಸುತ್ತಿರುವ ಬಹಳಷ್ಟು ಚಿಂತಕರು ಪ್ರಸ್ತುತ ಇಂದಿನ ಬಹುಜನ ಪ್ರೀಯವಾದ ಶಕ್ತಿ ರಾಜಕಾರಣವನ್ನು ಸಮಸ್ಯೆಯಾಗಿ ಭಾವಿಸುತ್ತಾರೆ. ಆದರೆ ನಿಜವಾದ ಅರ್ಥದಲ್ಲಿ ರಾಜಕಾರಣ ಎಂದರೇನು? ಎಂಬುದಕ್ಕೆ ಹಲವಾರು ವ್ಯಾಖ್ಯಾನಗಳಿವೆ. ಸರಳವಾಗಿ ಹೇಳುವುದಾದರೆ ಪ್ರಭುತ್ವದ ಹಾಗೂ ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳು ಎಂದು ವಿವರಿಸಿಕೊಳ್ಳ ಬಹುದು. ರಾಜಕಾರಣ ಎಂಬುದು ಪ್ರಭುತ್ವದ ಕಾರ್ಯಚಟುವಟಿಕೆ ಅದರಲ್ಲಿ ಪ್ರಜೆಗಳ ಪಾಲ್ಗೊಳ್ಳುವಿಕೆ ಮುಂತಾದವುಗಳ ಕುರಿತಂತೆ ತಿಳಿಸುವುದಾಗಿದೆ. ಆದರೆ ಜನಸಾಮನ್ಯರ ಸಾಮಾನ್ಯ ತಿಳುವಳಿಕೆಯಲ್ಲಿ ರಾಜಕೀಯ ಎಂದರೆ ಯಾವ ಮಾರ್ಗವನ್ನಾದರೂ ಹಿಡಿದು ಸಾರ್ವಜನಿಕ ಅಧಿಕಾರವನ್ನು ಪಡೆಯುವ ತಂತ್ರಗಾರಿಕೆ ಎನ್ನುವ ನೆಗ್‌ಟಿವ್ ಆದಂತಹ ಭಾವನೆ ಪ್ರಬಲವಾಗಿದೆ.

ಮಾನ್ಯ ಸಂಪಾದಕರೇ

ದಿನಾಂಕ 21 ರಂದು ಕರ್ನಾಟಕದ ಪ್ರಮುಖ ದಿನಪತ್ರಿಕೆಯಲ್ಲಿ ಪ್ರಕಟಗೊಂಡ ಏನು ಮಾಯವೋ? ಎಂಬ ಲೇಖನಕ್ಕೆ ಪ್ರತಿಕ್ರೀಯೇ ನೀಡಬಯಸುತ್ತೇನೆ. ಪ್ರಸ್ತುತ ಮೇಲಿನ ಲೇಖನದಲ್ಲಿ ಪ್ರಮುಖವಾಗಿ ಒಂದು ಅಂಶಗಳನ್ನು ಗುರುತಿಸಬಹುದಾಗಿದೆ.

ಜಾತಿ ಮತ್ತು ರಾಜಕಾರಣದ ಸಂಬಂಧವನ್ನು ವಿವರಿಸುತ್ತಿರುವ ಬಹಳಷ್ಟು ಚಿಂತಕರು ಪ್ರಸ್ತುತ ಇಂದಿನ ಬಹುಜನಪ್ರೀಯವಾದ ಶಕ್ತಿ ರಾಜಕಾರಣವನ್ನು ಸಮಸ್ಯೆಯಾಗಿ ಭಾವಿಸುತ್ತಾರೆ. ಆದರೆ ನಿಜವಾದ ಅರ್ಥದಲ್ಲಿ ರಾಜಕಾರಣ ಎಂದರೇನು? ಎಂಬುದಕ್ಕೆ ಹಲವಾರು ವ್ಯಾಖ್ಯಾನಗಳಿವೆ. ಸರಳವಾಗಿ ಹೇಳುವುದಾದರೆ ಪ್ರಭುತ್ವದ ಹಾಗೂ ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳು ಎಂದು ವಿವರಿಸಿಕೊಳ್ಳಬಹುದು. ಪ್ರಖ್ಯಾತ ರಾಜಕೀಯಶಾಸ್ತ್ರಜ್ಞ ಡೇವಿಡ್ ಈಸ್ಟನ್ ರಾಜಕೀಯವನ್ನು ಮೌಲ್ಯಗಳ ಅಧಿಕಾರಯುತ ವಿತರಣೆ ಎಂದು ವಿಶ್ಲೇಷಿಸಿದ್ದಾನೆ. ಅಂದರೆ ರಾಜಕಾರಣ ಎಂಬುದು ಪ್ರಭುತ್ವದ ಕಾರ್ಯಚಟುವಟಿಕೆ ಅದರಲ್ಲಿ ಪ್ರಜೆಗಳ ಪಾಲ್ಗೊಳ್ಳುವಿಕೆ ಮುಂತಾದವುಗಳ ಕುರಿತಂತೆ ತಿಳಿಸುವುದಾಗಿದೆ. ಆದರೆ ಜನಸಾಮನ್ಯರ ಸಾಮಾನ್ಯ ತಿಳುವಳಿಕೆಯಲ್ಲಿ ರಾಜಕೀಯ ಎಂದರೆ ಯಾವ ಮಾರ್ಗವನ್ನಾದರೂ ಹಿಡಿದು ಸಾರ್ವಜನಿಕ ಅಧಿಕಾರವನ್ನು ಪಡೆಯುವ ತಂತ್ರಗಾರಿಕೆ ಎನ್ನುವ ನೆಗ್‌ಟಿವ್ ಆದಂತಹ ಭಾವನೆ ಪ್ರಬಲವಾಗಿದೆ.

ಪ್ರಸ್ತುತ ಬಹುಪಾಲು ಚಿಂತರಕರು ಸಾಮಾನ್ಯ ಜನರ ಅರ್ಥದಲ್ಲಿನ ನೆಗ್‌ಟಿವ್ ಮಾದರಿಯ ರಾಜಕಾರಣವನ್ನೇ (Power Politics) ಸಮಸ್ಯೆಯನ್ನಾಗಿ ಗ್ರಹಿಸುತ್ತಾರೆ. ಮಾಯಾವತಿಯವರ ವರ್ತನೆಯ ಹಿಂದೆ ರಾಜಕೀಯದ ಕುರಿತ ಈ ಗ್ರಹಿಕೆಯೇ ಕೆಲಸ ಮಾಡಿದೆ. ಹಾಗಾದರೆ ಇದು ರಾಜಕಾರಣಿಗಳ ತಪ್ಪಾ ಖಂಡಿತ ಅಲ್ಲ! ಭಾರತದಲ್ಲಿನ ಜಾತಿ ಮತ್ತು ರಾಜಕಾರಣದ ಇತಿಹಾಸವನ್ನು ಸಂಕ್ಷಿಪ್ತವಾಗಿ ನೋಡಿದರೆ ಬಹುಪಾಲು ವಿದ್ವಾಂಸರು ಭಾರತ ಸಮಾಜದಲ್ಲಿ ಜಾತಿಯೇ ಕೇಂದ್ರ ಬಿಂದು ಎಂದು ವಿವರಿಸುತ್ತಾ ಪ್ರಜಾಸತ್ತಾತ್ಮಕ ರಾಜಕೀಯದ ಮೂಲ ತತ್ವವಾದ ರಾಜಕೀಯ ಸಮಾನತೆಗೆ ಜಾತಿ ವ್ಯವಸ್ಥೆ ಅಡ್ಡಿಯಾಗಿದೆ ಎಂದು ಪ್ರತಿಪಾದಿಸುತ್ತಾರೆ ಅಲ್ಲದೆ ಜಾತಿ ಆಧಾರಿತ ಸಾಮಾಜಿಕ ಅಸಮಾನತೆ ಭಾರತದಲ್ಲಿರುವುದರಿಂದ ರಾಜಕೀಯ – ಆರ್ಥಿಕ ಪ್ರಭುತ್ವಗಳು ಕನಸಾಗಿವೆ ಎಂದು ನಂಬುತ್ತಾರೆ.

ಅಲ್ಲದೇ ಪ್ರಜಾಪ್ರಭುತ್ವದ ಯಶಸ್ಸಿಗೆ ಜಾತಿ ಪ್ರಾಬಲ್ಯ ಕ್ಷೀಣಿಸ ಬೇಕಾಗಿರುವುದು ಅಗತ್ಯವಾಗಿದೆ ಎಂದು ವಿವರಿಸುತ್ತಾರೆ. ಅಲ್ಲದೇ ರಾಜಕೀಯ ಪಕ್ಷಗಳ ಪ್ರತಿಯೊಂದು ನಡೆಯು ಜಾತಿಯನ್ನು ಅವುಗಳ ನಡುವಿನ ಸಂಬಂಧವನ್ನು ಬಲಿಷ್ಠಗೊಳಿಸುತ್ತಿದೆ ಎಂದು ನಂಬುತ್ತಾರೆ. ದಲಿತ ಚಿಂತಕರು ಇನ್ನೂ ಮುಂದುವರಿದು ಜಾತಿ ಪ್ರಾಬಲ್ಯ ಕ್ಷೀಣಿಸಲು ದೊಡ್ಡ ಪ್ರಮಾಣದಲ್ಲಿ ಶೂದ್ರಾತಿಶೂದ್ರ ಜಾತಿಗಳು ಒಗ್ಗೂಡಬೇಕು ಎಂದು ಬಯಸುತ್ತಾರೆ. ಪ್ರಸ್ತುತ ರಾಜಕೀಯ ಸನ್ನಿವೇಶಕ್ಕೆ ಭಾರತದ ಜಾತಿವ್ಯವಸ್ಥೆಯನ್ನು ಮೂಲವಾಗಿಸುತ್ತಾ ಅದಕ್ಕೆ ಪರ್ಯಾಯವನ್ನು ಪ್ರಬಲ ದಲಿತ ರಾಜಕಾರಣದಲ್ಲಿ ಹುಡುಕುತ್ತಾರೆ. ಮುಂದುವರಿದು ಮಾಯಾವತಿಯಂತಹ ನಾಯಕಿಯನ್ನು ಈ ಒಟ್ಟು ಚಳುವಳಿಯ ಅಧಿನಾಯಕಿಯಾಗಿ ಕಲ್ಪಿಸಿಕೊಂಡು ಸಮರ್ಥಿಸಿಕೊಳ್ಳುತ್ತಾರೆ.

ಈ ಎಲ್ಲಾವಾದ/ಪ್ರಯತ್ನಗಳು ಬ್ರಾಹ್ಮಣ – ದಲಿತ ಎಂಬ ಭಿನ್ನಧೃವಗಳನ್ನು ಕಲ್ಪಿಸಿಕೊಂಡು ಹೆಣೆದ ಜಾತಿ ಸಮೀಕರಣದಿಂದ ಪ್ರಭಾವಿತವಾಗಿವೆ. ಇದರಲ್ಲಿ ಮಾಯಾವತಿಯ ಹಣದ ಹಾರದ ಕಥೆ ಒಂದು ಘಟನೆ ಮಾತ್ರ. ಆದರೆ ವಾಸ್ತವದಲ್ಲಿ ಇದು ರಾಜಕಾರಣವನ್ನು ಮೀರಿದ ಅಥವಾ ನಿರ್ದೇಶಿಸುತ್ತಿರುವ ಬೌದ್ಧಿಕಜ್ಞಾನದ ಸಮಸ್ಯೆಯಾಗಿ ಕಾಡುತ್ತದೆ. ಇದರ ಕುರಿತಂತೆ ಇದುವರೆಗೂ ಬಹಳಷ್ಟು ಜನ ಗಮನಹರಿಸಿಲ್ಲ ವಿವರವಾಗಿ ನೋಡುವುದಾದರೆ.

ಭಾರತದ ಸಂದರ್ಭದಲ್ಲಿ ಜಾತಿ ಮತ್ತು ರಾಜಕಾರಣವನ್ನು ವಿವರಿಸುತ್ತಿರುವ ಬಹುಪಾಲು ರಾಜಕೀಯ ಚಿಂತಕರು ಯುರೋಪಿಯನ್ನರಿಂದ ಗುರುತಿಸಲ್ಪಟ್ಟ ಜಾತಿ ವ್ಯವಸ್ಥೆಯ ಕುರಿತಾದ ಸಮಾಜ ಶಾಸ್ತ್ರೀಯ ವಿವರಣೆಗಳನ್ನು ಯಾವ ಪ್ರಶ್ನೆ ಅಥವಾ ಮರುವಿಮರ್ಶೆಗೆ ಒಳಪಡಿಸದೇ ಒಪ್ಪಿಕೊಂಡು ಸಾಂಪ್ರದಾಯಕ ಜಾತಿಯ ವಿಶ್ಲೇಷಣೆಗಳೊಂದಿಗೆ ಆಧುನಿಕ ರಾಜ್ಯವ್ಯವಸ್ಥೆಯ ಪರಿಕಲ್ಪನೆಯಾದ ರಾಜಕಾರಣವನ್ನು (Politics) ವಿವರಿಸುತ್ತಿರುವುದು ಕಂಡುಬರುತ್ತದೆ. ಇದರ ಅರ್ಥಪ್ರಸ್ತುತ ರಾಜಕಾರಣವನ್ನು ವಿವರಿಸುತ್ತಿರುವ ಚಿಂತಕರ ಮೇಲೆ ಜಾತಿ ಕುರಿತಾದ ಸಾಂಪ್ರದಾಯಕ ಸಮಾಜಶಾಸ್ತ್ರೀಯ ವಿವರಣೆಗಳು ಬಹುವಾಗಿ ಪ್ರಭಾವಿಸಿರುವುದು ಸ್ಪಷ್ಟವಾಗುತ್ತದೆ.

ಆದರೆ ಇತ್ತೀಚಿನ ಸಂಶೋಧನೆಗಳ ಪ್ರಕಾರ "ಭಾರತದ ಜಾತಿ ವ್ಯವಸ್ಥೆ" ಪಾಶ್ಚಾತ್ಯರು ತಮ್ಮ ಒಂದು ಸಾಂಸ್ಕೃತಿಕ ಹಿನ್ನಲೆಯಲ್ಲಿಯೇ ಪೌರಾತ್ಯರನ್ನು ನೋಡಿ

ದ್ದರಿಂದಲೇ ಹುಟ್ಟಿಕೊಂಡ ಒಂದು ಪಾಶ್ಚಾತ್ಯ ಕಲ್ಪಿತಪರಿಕಲ್ಪನೆಯಾಗಿದೆ. ಎಂಬ ಅಂಶ ಸ್ಪಷ್ಟವಾಗುತ್ತಿದೆ. ಈ ಸಂಶೋಧನೆಯ ಪ್ರಕಾರ ಭಾರತದ ಸಮಾಜದಲ್ಲಿ Caste ಅಥವಾ ಜಾತಿಯನ್ನು ಒಂದು ವ್ಯವಸ್ಥೆಯಾಗಿ ಗುರುತಿಸುವುದು ಅರ್ಥವಾಗದ ವಿಶ್ಲೇಷಣೆ (ad-hoc explanation). ಭಾರತದ ಸಮಾಜದಲ್ಲಿ ನಮಗೆಲ್ಲರಿಗೂ ತಿಳಿದಿರುವಂತೆ ಹಲವಾರು ಜಾತಿಗಳು ಅಸ್ತಿತ್ವದಲ್ಲಿವೆ.

ಅವುಗಳ ನಡುವೆ ತಾರ ತಮ್ಯ/ಶೋಷಣೆಗಳು ಇವೆ ಆದರೆ ಅವುಗಳನ್ನೆಲ್ಲ ಈಗಾಗಲೇ ನಾವು ಬೌದ್ಧಿಕ ವಾದಗಳಲ್ಲಿ ಗುರುತಿಸಿರುವಂತೆ ಒಂದು ವ್ಯವಸ್ಥೆಯ ಮಾದರಿಯಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಹಾಗೆ ನೋಡುವುದಾದರೆ ಜಾತಿಗಳ ಪರಸ್ಪರ ಸಂಬಂಧ ಅವುಗಳ ಆಚರಣೆಗಳನ್ನು ನಿರ್ದೇಶಿಸುವ ಸಂಪ್ರದಾಯಗಳ ಸ್ವರೂಪ, ಪಾಶ್ಚಾತ್ಯರು ನೀಡಿರುವ ಸೈದ್ಧಾಂತಿಕ ಚೌಕಟ್ಟಿನಲ್ಲಿ ವಿವರಿಸಿರುವುದಕ್ಕಿಂತ ಭಿನ್ನವಾಗಿವೆ. (ನನ್ನ ಪಿ.ಹೆಚ್.ಡಿ ಸಂಶೋಧನೆಯ ಪ್ರಕಾರ)

ಈ ಹಿನ್ನೆಲೆಯಲ್ಲಿ ಭಾರತದಲ್ಲಿನ ಜಾತಿಗಳು ಸಮಾಜದಲ್ಲಿ ಹೇಗೆ ಸಂಘಟನೆಗೊಂಡವು ಮತ್ತು ಹೇಗೆ ಜನರಿಂದ ಗುರುತಿಸಲ್ಪಡುತ್ತವೆ, ಎನ್ನುವುದರ ಕುರಿತ ಅಧ್ಯಯನವು ಇಂದಿನ ಅಗತ್ಯವಾಗಿದೆ. ಈ ರೀತಿಯ ಅಧ್ಯಯನಕ್ಕೆ ನಾವು ಜಾತಿಯನ್ನು ಭಿನ್ನ ದೃಷ್ಟಿಕೋನದಿಂದಲೇ ನೋಡಬೇಕಾಗುತ್ತದೆ. ಇಲ್ಲವಾದರೆ ಇನ್ನು 150 (ಹಿಂದಿನ 150 ವರ್ಷಗಳಂತೆ) ವರ್ಷಗಳಾದರು ನಾವು ದಲಿತ/ಬ್ರಾಹ್ಮಣ ಎಂಬ ಕಲ್ಪಿತ ಪರಿಕಲ್ಪನೆಗಳ ಕುರಿತಾದ ಚರ್ಚೆ/ಹೊರಾಟಗಳಲ್ಲಿಯೇ ಕಾಲ ಕಳೆಯಬೇಕಾಗುತ್ತದೆ.

ಹೊರತು ನಮ್ಮ ರಾಜಕೀಯ ವ್ಯವಸ್ಥೆಯನ್ನು ಗಟ್ಟಿಗೊಳಿಸಿಕೊಳ್ಳಲು ಸಾಧ್ಯವಿಲ್ಲ. ಅಲ್ಲದೆ ಮಾಯಾವತಿಯಂತಹವರು "ದಲಿತ/ಶೂದ್ರ" ಎಂಬ ಕಲ್ಪಿತ ಸಮುದಾಯದ ರಕ್ಷಕಳ ಅಥವಾ ಆ ಸಮುದಾಯಕ್ಕೆ ಆದ ಐತಿಹಾಸಿಕ ಹಿಂಸೆಗೆ ಪ್ರತಿಕಾರದ ಹೆಸರಿನಲ್ಲಿ ಮತ್ತೊಂದು ಹಣದ ಹಾರಕ್ಕೆ ಕೊರಲೊಡ್ಡಿ ಸಮರ್ಥಿಸಿಕೊಳ್ಳುತ್ತಾಳೆ. ಬ್ರಾಹ್ಮಣ ಅಥವಾ ಮೇಲ್ಜಾತಿ ಎಂಬ ಇನ್ನೊಂದು ಗುಂಪು ಮಾಧ್ಯಮಗಳ ಮೂಲಕ ಘಟನೆಯನ್ನು ಖಂಡಿಸುವ ಹೆಸರಿನಲ್ಲಿ ಮತಬ್ಯಾಂಕ್ ರಾಜಕಾರಣಕ್ಕೆ ಇಳಿಯುತ್ತವೆ.

ಇದ್ಯಾವುದು ಅರ್ಥವಾಗದ ಶೋಷಿತ ಜನ ಕೇವಲ ಈ ಘಟನೆಗಳ ಪ್ರೇಕ್ಷಕರಾಗುತ್ತಾರೆ. ಒಂದು ಅರ್ಥದಲ್ಲಿ ಇಂದು ನಾವು ನಮ್ಮ ಸಾಮಾಜಿಕ – ರಾಜಕೀಯ ಸಮಸ್ಯೆಗಳನ್ನು ಗ್ರಹಿಸಿರುವುದು ಮತ್ತು ವಿವರಿಸುತ್ತಿರುವುದು ಪಾಶ್ಚಾತ್ಯರು ಕೊಡ ಮಾಡಿದ ಸೈದ್ಧಾಂತಿಕ ಚೌಕಟ್ಟಿನಲ್ಲಿಯೇ? ಆದ್ದರಿಂದಲೇ ನಾವು ಇಂದು ನಮ್ಮ ಸಮಾಜದ ಸಮಸ್ಯೆಗಳನ್ನು ಅರಿಯಲು ಮತ್ತು ಪರಿಹಾರ ಕಂಡುಕೊಳ್ಳಲು ಸೋತ್ತಿದ್ದೇವೆ.

ನಮ್ಮ ಸಮಾಜ ವಿಜ್ಞಾನಗಳ ವಲಯದಲ್ಲಿ ಬಹು ದೊಡ್ಡ ಪರಿಕಲ್ಪನೆ ಮತ್ತು ಸಿದ್ಧಾಂತಗಳೆಂದು ಗುರುತಿಸಲ್ಪಡುತ್ತಿರುವ ಜಾತಿ ಮತ್ತು ರಾಜಕಾರಣದ ಚರ್ಚೆಇಂದಿಗೂ ಸಹ ಸಮಾಜ ಸಮಸ್ಯೆಗಳಿಗೆ ಪರಿಹಾರವಾಗದೆ ಕೇವಲ ಬೌದ್ಧಿಕ ಜಿಜ್ಞಾಸೆಯಾಗಿ ಮಾತ್ರ ಉಳಿದಿರುವುದು ಮಾತ್ರವಲ್ಲದೆ ಸಾರ್ವಜನಿಕ ಬದುಕಿನ ಚರ್ಚೆಗಳಲ್ಲಿ ಭಾಗಿಯಾಗಿಲ್ಲದಿರುವುದು ಇದಕ್ಕೆ ನಿರ್ದಶನ. ಜಾತಿ ಮತ್ತು ರಾಜಕಾರಣದ ಕುರಿತು ಸಂಶೋಧನೆಯಲ್ಲಿ ತೊಡಗಿರುವ ವಿದ್ವಾಂಸರು ಈ ಅಂಶವನ್ನು ಗುರುತಿಸಿ ವಿವರಿಸುವ ಜರೂರು ಇಂದಿದೆ. □

ಎತ್ತ ಸಾಗುತಿದೆ ಮಾಧ್ಯಮ

ಮಾನ್ಯ ಸಂಪಾದಕರೇ

ಭಾರತದಲ್ಲಿ ಮಾಧ್ಯಮ ಸರ್ವವ್ಯಾಪಿಯಾಗಿ ಬೆಳೆದಿದೆ. ಆಧುನಿಕ ತಂತ್ರಜ್ಞಾನದ ಬದಲಾವಣೆ ಮಾಧ್ಯಮ ಬೇಳವಣಿಗೆಗೆ ಸಹಾಯಕವಾಗಿದೆ. ಜೊತೆಗೆ ಮಾಧ್ಯಮಗಳ ಸ್ವರೂಪ ಕಾಲಕ್ಕೆ ತಕ್ಕಂತೆ ಬದಲಾವಣೆ ಯಾಗುತ್ತಿದೆ. ಈ ಬೇಳವಣಿಗೆಗೆ ರಾಜಕೀಯ, ಆರ್ಥಿಕ, ಸಾಮಾಜೀಕ, ಹಾಗೂ ಸಾಂಸ್ಕೃತಿಕ ರಂಗಗಳಲ್ಲಿನ ಅಭಿ ವೃದ್ಧಿ ಪ್ರಮುಖ ಕಾರಣವೆನ್ನಬಹುದು

ಸ್ವಾತಂತ್ರ್ಯ ನಂತರ ರಾಷ್ಟ್ರದ ಅಭಿವೃದ್ದಿಗಾಗಿ ತಮ್ಮನ್ನು ಸಮರ್ಪಿಸಿಕೊಂಡಿದ್ದ ಮಾಧ್ಯಮ ನಂತರದ ದಿನಗಳಲ್ಲಿ ಉದ್ಯಮವಾಗಿ ಬೆಳೆದಿದೆ. ಈಗ ಇದು ಪ್ರಭಾವಶಾಲಿಯಾಗಿ ಬೆಳೆದಿದೆಯಲ್ಲದೆ. ಇವುಗಳ ಮೇಲೆ ಜನರ ಅವಲಂಬನೆ ಹೆಚ್ಚಿದೆ. ಇದರಿಂದಾಗಿಯೇ ಏನೂ ತೋರಿಸಿದರು ನೋಡುತ್ತಾರೆ ಎಂಬ ತಪ್ಪುಕಲ್ಪನೆ ಇಂದು ಮಾಧ್ಯಮದಲ್ಲಿ ಇದ್ದಂತೆ ಕಂಡುಬರುತ್ತಿದೆ. ಮಾಹಿತಿ, ಮನೋರಂಜನೆ ಮತ್ತು ಶಿಕ್ಷಣ ಎಂಬ ಪಂಚ್‌ಲೈನ್ ಹಾಕಿಕೊಂಡು ಪ್ರಚಾರಕ್ಕೆ ಇಳಿದ ಮಾಧ್ಯಮಗಳು ಇಂದು ಈ ಗುಗಳತ್ತ ಎಷ್ಟು ವೈಜ್ಞಾನಿಕವಾಗಿ ವೈಚಾರಿಕತೆಯ ಆಧಾರದ ಮೇಲೆ ಮತ್ತು ಪ್ರಾಮಾಣಿಕವಾಗಿ ಮಾಹಿತಿ ನೀಡುತ್ತವೆ ಎಂಬುದು ವಿಮರ್ಶಿಸಬೇಕಾಗಿದೆ.

ವಿಜ್ಞಾನದಕೂಸಾದ ಮಾಧ್ಯಮ ಮೂಢನಂಬಿಕೆಯ ತಾಣವಾಗುತ್ತಿದೆಯೇ? ಎಂಬ ಮೂಲ ಪ್ರಶ್ನೆ ನಮ್ಮನ್ನು ಕಾಡುತ್ತಿದೆ. ಪ್ರಜಾಪ್ರಭುತ್ವದ ನಾಲ್ಕನೆ ಸ್ಥಂಭವಾದ ಮಾಧ್ಯಮಕ್ಕೆ ಸಾಮಾಜಿಕ ಜವಾಬ್ದಾರಿ ಇದೆಯೇ? ಇತ್ತೀಚಿನ ದಿನಗಳಲ್ಲಿ ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವುದು ಅವೈಜ್ಞಾನಿಕ ಮತ್ತು ಮೂಢನಂಬಿಕೆಗಳಿಗೆ ಉತ್ತೇಜನ ನೀಡುವಂತಹ ಕಾರ್ಯಕ್ರಮಗಳನ್ನು ವೈಭವಕರಿಸಿ ಪ್ರಸಾರ ಮಾಡುತ್ತಿರುವುದೆ ಇದಕ್ಕೆ ಕಾರಣವೆನ್ನಬಹುದು.

ಕಳೆದ ವರ್ಷದಲ್ಲಿ ಕರ್ನಾಟಕ ಆಂಧ್ರಪ್ರದೇಶದಲ್ಲಿ ಆದ ಪ್ರಕೃತಿ ವಿಕೋಪಗಳನ್ನು ಯಥಾವತ್ ವರದಿಮಾಡಿ ಕೈ ತೊಳೆದುಕೊಂಡವೇ ಹೊರತು ಯಾವ ಮಾಧ್ಯಮಗಳು ಕೂಡ ಈ ವಿಕೋಪ ಯಾಕೇ ಆಗುತ್ತಿದೆ? ಇದಕ್ಕೆ ಕಾರಣಗಳೇನು? ಇದನ್ನು ತಡೆಗಟ್ಟುವುದು ಹೇಗೆ? ಜಾಗತಿಕ ತಾಪಮಾನ ಸೃಷ್ಟಿಸುತ್ತಿರುವ ಬಹುರಾಷ್ಟ್ರಿಯ ಕಂಪನಿಗಳ ಒಡೆಯರಾದ ಬಂಡವಾಳಶಾಹಿಗಳ ಬಗ್ಗೆ ಸೊಲ್ಲೆತ್ತಲಿಲ್ಲ. ಏಕೆಂದರೆ ಇದಕ್ಕೆ ಪ್ರಮುಖ ಕಾರಣ ಮಾಧ್ಯಮಗಳು ಬಂಡವಾಳಶಾಹಿಗಳ ಕೈಗೊಂಬೆಯಾಗಿರುವುದೆ ಎಂದು ಹೇಳಲಾಗುತ್ತಿದೆ.

ಪ್ರಸಕ್ತ ವರ್ಷದ ಜನೇವರಿ 15 ರಂದು ಕಂಕಣ ಗ್ರಹಣ ಸಂಭವಿಸಿದಾಗ ದೃಶ್ಯ ಮಾಧ್ಯಮಗಳು ನೇರಪ್ರಸಾರ ಮಾಡಿದವು. ಒಂದು ವಾರವಿಡಿ ಗ್ರಹಣ ಕುರಿತು ಜ್ಯೋತಿಷಿಗಳ ಜೊತೆಗೆ ಮಾತುಕತೆ ನಡೆಸಿದವು. ಒಂದು ದೂರದರ್ಶನ ವಾಹಿನಿ ಖಗೋಳ ಶಾಸ್ತ್ರಜ್ಞನೊಬ್ಬನನ್ನು ಜೊತೆಗಿಟ್ಟು ಕೊಂಡಿತು. ಆದರೂ ಗ್ರಹಣದ ಸಂದರ್ಭದಲ್ಲಿ ಮಹಿಳೆಯರು ಯಾವುದೇ ಕೆಲಸ ಮಾಡಬಾರದು ಅದರಲ್ಲಿಯೂ ಗರ್ಭಿಣಿಯರಿಗಂತು ಸೂರ್ಯನ ಕಿರಣಗಳು ಸಹ ಬಿಳಬಾರದು ಎಂಬ ಮೂಢನಂಬಿಕೆಗೆ ಪ್ರತ್ಯಕ್ಷವಾಗಿ ಅಲ್ಲದೆ ಇದ್ದರು ಪರೋಕ್ಷವಾಗಿ ಜ್ಯೋತಿಷಿಗಳ ವಾದಕ್ಕೆ ಮಣೆ ಹಾಕಿತು.

ಕಳೆದ ವರ್ಷದ ಜುಲೈ ತಿಂಗಳಿನಲ್ಲಿ ನಡೆದ ಸೂರ್ಯಗ್ರಹಣ ಸಂದರ್ಭದಲ್ಲಿ ಗುಲಬರ್ಗ ನಗರದಲ್ಲಿ ವಿಕಲಾಂಗ ಮಕ್ಕಳನ್ನು ಮಣ್ಣಲ್ಲಿ ಹೂತಿದ್ದನ್ನು ದೃಶ್ಯ ಮಾಧ್ಯಮಗಳು ಭಯಾನಕವಾಗಿ ಬಿತ್ತರಿಸಿದವೇ ವಿನಃ ಕನಿಷ್ಠ ವೈಚಾರಿಕತೆ ಮೂಡಿಸಲಿಲ್ಲ.

ಸಾಮಾಜಿಕ ಬದಲಾವಣೆಗೆ ಉತ್ತಮ ಮಾಧ್ಯಮ ವಾಗಬಹುದಾಗಿದ್ದ ಸಿನಿಮಾ, ಭಾರತದಲ್ಲಿ ಒಂದು ಮನರಂಜನೆ ಮಾರ್ಗವಾಗಿಯೇ ಬೆಳೆಯುತ್ತಿದೆ. ಕೆಲವೆ ಕೆಲವು ಸಿದ್ದ ಸೂತ್ರಗಳ ಗಂಭೀರ ಚಿತ್ರಗಳು ಬಂದರು ಜನರನ್ನು ತಲುಪುವಲ್ಲಿ ಅವು ವಿಫಲವಾಗುತ್ತಿವೆ. ಇಂದಿಗೂ ಅತಿ ರಂಜಿತ ಎನಿಸುವ ಚಿತ್ರಗಳೇ ಜನಪ್ರಿಯವಾಗಿದ್ದು ಕಂಡು ಬರುತ್ತಿವೆ. ಹಾಗಾದರೆ ಸಿನಿಮಾ ತಯಾರಿಕೆಗೆ ಸಾಮಾಜಿಕ ಹೊಣೆಗಾರಿಕೆ ಅಪ್ರಸ್ತುತವೆ? ಮಾಧ್ಯಮ ಶೋತೃಗಳಿಗೆ ಒಂದು ಕಾರ್ಯಕ್ರಮ ಹಿಡಿಸಿದೆ ಎಂದ ಕೂಡಲೆ ಅವಾಸವಿಕವಾದುದನ್ನು ವೈಭವಿಕರಿಸಿ ಆ ಕಾರ್ಯಕ್ರಮಗಳನ್ನು ವಿಕ್ಷಕರ ಮೇಲೆ ಹೇರುವದು ಸರಿಯೇ? ಇದು ದೃಶ್ಯ ಮಾಧ್ಯಮದ ಒಂದು ಭಾಗವಾದರೆ ಮುದ್ರಣ ಮಾಧ್ಯಮದ ಮುಖವಾಡವೇ ಬೇರೆ.

ಸ್ಪರ್ಧೆಯ ಬರದಲ್ಲಿ ಮುದ್ರಣ ಮಾಧ್ಯಮಗಳು ಗುಣಮಟ್ಟ ಕಳೆದುಕೊಳ್ಳುತ್ತಿವೆ. ಪತ್ರಿಕೆಯಲ್ಲಿ ಸುದ್ದಿ ಪ್ರಸಾರವಾಗಬೇಕಾದರೆ ಜಾಹಿರಾತು ರೂಪದಲ್ಲಿ ಹಣಕ್ಕಾಗಿ ಸುದ್ದಿಗಳನ್ನು ಮಾರಾಟ ಮಾಡಲಾಗುತ್ತಿದೆ. ಕಳೆದ ಚುನಾವಣೆಯಲ್ಲಿ ಇದು ಸಾಬಿತಾಗಿದೆ. ಜಾಹಿರಾತು ನೀಡುವ ನೆಪದಲ್ಲಿ ಖಾಸು ಕೊಟ್ಟ ಬಾಸ್‌ಗಳು ತಮ್ಮ ಪರ ಸುದ್ದಿ ಬರೆಸುವದು ಇತ್ತಿಚಿಗೆ ಹೆಚ್ಚಾಗುತ್ತಿದೆ. ಮಾಧ್ಯಮಗಳ ಮೇಲೆ ನಂಬಿಕೆ ಇಟ್ಟ ಸಾಮಾನ್ಯ ನಾಗರಿಕನಿಗೂ ಸಂಶಯ ಪಡುವಂತೆ ಮಾಡಿದೆ.

ಸಮಾಜದ ವಿವಿಧ ಸ್ಥರದಲ್ಲಿ ನಡೆಯುವ ಭ್ರಷ್ಟಚಾರವನ್ನು ಬಯಲಿಗೆಳೆಯಬೇಕಾದ ಈ ಅಂಗ, ಭ್ರಷ್ಟಚಾರಕ್ಕೆ ಅಂಟಿಕೊಂಡರೆ ಬೇಲಿಯೆ ಎದ್ದು ಹೊಲ ಮೆಯ್ದಂತೆ ಆಗುವುದಿಲ್ಲವೆ? ಇಂತಹ ವಿವಾದಗಳು ನಮ್ಮ ಮಾಧ್ಯಮ ಹೊಣೆಗಾರಿಕೆಯನ್ನು ಬುಡಮೇಲು ಮಾಡುತ್ತವೆ. ಪತ್ರಕರ್ತರೆ ತಮ್ಮ ವೃತ್ತಿ ಗೌರವಕ್ಕೆ ಕಳಂಕ ಕಟ್ಟಿಕೊಂಡಿರುವಾಗ ಪ್ರಜಾಪ್ರಭುತ್ವದ ಇತರ ಅಂಗಗಳ ಕೊಳಕನ್ನುತೊಳೆಯಲು ಇವರಿಂದ ಸಾಧ್ಯವೇ ಎಂಬ ಪ್ರಶ್ನೆ ಸಾರ್ವಜನಿಕರದ್ದು.

ಮಾಧ್ಯಮದವರು ಎಂದರೆ ತೋಚಿದ್ದನ್ನು ಗಿಚಿಕೊಂಡು ಹೊಗುವರು ಎಂಬ ಸತ್ಯ ಹೆಚ್ಚಾಗುತ್ತಿದೆ. ಮಾಧ್ಯಮಕ್ಕೆ ಎದುರಾಗಿರುವ ಸಾಂಸ್ಥಿಕ ಭ್ರಷ್ಟಚಾರದ ಸಮಸ್ಯೆಯನ್ನು ಹೊಗಲಾಡಿಸಬೇಕಾಗಿದೆ ಮಾತ್ರವಲ್ಲದೆ ಕಳೆದುಕೊಂಡ ನಂಬಿಕೆ ಮನಃ ಪಡೆಯಬೇಕಾಗಿದೆ.

ಇಂದು ನಾಗರಿಕ ಸಮಾಜದಲ್ಲಿ ಮೌಲ್ಯಗಳ ಕುಸಿತ ಸಮಾಜ ಕಂಟಕವಾಗಿ ಪರಿಣಮಿಸಿವೆ. ಒಟ್ಟಾರೆ ಮಾಧ್ಯಮಗಳು ಕನಿಷ್ಠ ಮಟ್ಟದ ವೈಚಾರಿಕತೆಯನ್ನು ನಾಗರಿಕರಲ್ಲಿ ತುಂಬಲು ಪ್ರಯತ್ನಿಸುತ್ತಿಲ್ಲ. ಜನರ ದೌರ್ಬಲ್ಯವೆ ಬಂಡವಾಳ ಮಾಡಿಕೊಂಡು ಪರಸ್ಪರ ಸ್ವಾರ್ಥತೆಯಲ್ಲಿ ತೊಡಗಿವೆ. ಮೌಲ್ಯಗಳನ್ನು ಕಡೆಗಣಿಸಿ ಸಮಾಜದ ಸ್ವಾಸ್ಥವನ್ನು ಕೆಡಿಸುತ್ತಿರುವ ಇಂದಿನ ಮಾಧ್ಯಮಗಳಿಗೆ ಜನಪ್ರಿಯತೆಯ ಜೊತೆಗೆ ಹಣದ ಅಮಲೇರಿದೆಯಲ್ಲವೇ?

❍ ಎಸ್ ಮಾಲಗತ್ತಿ

ದಲಿತ ನೌಕರರೇ, ನಾಯಕರೇ ಚೆನ್ನಾಗಿದ್ದೀರಾ?

ಬಿ.ಆರ್. ಮೌರ್ಯ

ಶತಶತಮಾನಗಳಿಂದ ದಲಿತರನ್ನು ತುಳಿದು, ಕೇವಲ ದುಡಿಯಲು ಸೀಮೀತಗೊಳಿಸಿ, ಯಾವ ಆಸ್ತಿಯನ್ನು ಹೊಂದದಂತೆ ಮಾಡಿ, ಊರ ಹೊರಗಿಟ್ಟು, ವೇದ ಕೇಳಿದರೆ ಕಿವಿಗೆ ಕಾಯಿಸಿದ ಸೀಸ ಹಾಕಿ, ಕಲಿತರೆ ನಾಲಿಗೆ ಸೀಳುವುದಾಗಿ, ಮನನ ಮಾಡಿದರೆ ದೇಹ ಸೀಳುವುದಾಗಿ ಹೆದರಿಸುತ್ತ ನೀಚವಾದ ಮನುಸ್ಮೃತಿಯ ಆಧಾರದಲ್ಲಿ ಶೋಷಿಸುತ್ತಾ ಬಂದ ಮನುವಾದಿ ವರ್ಗ, ಬುದ್ಧನ ಧಮ್ಮಕ್ಕು ಬಗ್ಗದೆ, ಅದನ್ನೆ ಬಡಿದು ಬಾಯಿಗೆ ಹಾಕಿಕೊಂಡು, ಸುಧಾರಣವಾದಿಗಳ ಪಕ್ಕಕ್ಕೆತಳ್ಳಿ, ಅಶೋಕನ ಕಾಲದಲ್ಲಿ ತೆಪ್ಪಗಿದ್ದು, ಪುಶ್ಯನ ಅಪ್ಪಿಕೊಂಡು, ಬಸವಣ್ಣನನ್ನೆ ಒಂದು ಜಾತಿ ಮಾಡಿ, ಬ್ರಿಟಿಷರ ಕಾಲದಲ್ಲಿ ಬಣ್ಣ ಬಣ್ಣದ ಚಿಟ್ಟೆಗಳ ಆಟ ಆಡಿ, ಕ್ರಾಂತಿಕಾರಿಗಳಿಗೆ ಕಾಗೆ ಹಾರಿಸಿ, ಗಾಂಧೀಜಿ ಮುಂದೆ ಗೋಸುಂಬೆಯಾಟವಾಡಿ, ಕೊನೆಗೂ ಫುಲೆ, ಪೆರಿಯಾರ್,ನಾರಾಯಣಗುರು,ಶಾಹುಮಹಾರಾಜ್, ನಾಲ್ವಡಿಯವರಂತವರ ಕೈಯಲ್ಲಿ ಮೆತ್ತಗಾಗಿ, ಡಾ॥ ಬಿ.ಆರ್. ಅಂಬೇಡ್ಕರ್‌ರವರ ಪ್ರತ್ಯೇಕ ಮತದಾನದಿಂದ ಬಚಾವಾದರೂ ಅವರ ಮೀಸಲಾತಿಗೆ ತಲೆಬಾಗಿದ್ದು ಇತಿಹಾಸ ಮೀಸಲಾತಿಗೆ ಒಪ್ಪಿಕೊಳ್ಳಲು ಎಂತೆಂಥ ಘಟನೆಗಳು ನಡೆದಿದ್ದವು ಎಂಬುದು ನಮ್ಮ ಎಷ್ಟೋ ದಲಿತ ನೌಕರರಿಗೆ ಗೊತ್ತಿಲ್ಲ.

ಅದನ್ನೆಲ್ಲ ಹೇಳಲು ನನಗೆ ಇಲ್ಲಿ ಸಮಯವೂ ಇಲ್ಲ. ಸ್ವತಂತ್ರ ಭಾರತದಲ್ಲಿ ಅಂಬೇಡ್ಕರರು 1952ನೇ ಇಸವಿಯಲ್ಲಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಅವರ ವಿರುದ್ಧ ಎನ್. ಎಸ್. ಕಾಜ್ರೋಳ್ಕರ್ ಎಂಬ ಮನುವಾದಿಗಳ ಬೆಂಬಲಿತ ಅಸ್ಪೃಶ್ಯ ಸ್ಪರ್ಧಿಸಿದ್ದ. ಅಂಬೇಡ್ಕರರ ವಿರುದ್ಧ 14 ಸಾವಿರ ಮತಗಳ ಅಂತರದಲ್ಲಿ ಗೆದ್ದಿಯೂಬಿಟ್ಟ. ಈ ಗೆಲುವಿಗೆ ನಾವೆಲ್ಲಾ ವ್ಯಥೆ ಪಡುವುದು ಬೇಕಾಗಿಲ್ಲ. ವ್ಯಥೆಪಡಬೇಕಾದದ್ದು ನಾನು ಹೇಳುವ ಇನ್ನೊಂದು ವಿಷಯಕ್ಕೆ. ಅದೇ ನೆಂದರೆ ಈ ಚುನಾವಣೆಯಲ್ಲಿ ಕುಲಗೆಟ್ಟ ಮತಗಳು ಎಷ್ಟುಗೊತ್ತೇ?50ಸಾವಿರ!!! ಈ ಮತಗಳಲ್ಲಿ ದಲಿತರದೇ ಬಹುಪಾಲು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದರ ಅರ್ಥ 1952 ನೇ ಇಸವಿಯಲ್ಲೂ ದಲಿತರು ಎಷ್ಟೊಂದು ಮೂಡರಾಗಿದ್ದರು ಎಂದು. ಇನ್ನು ಶತಶತಮಾನಗಳ ಹಿಂದೆ ಹೇಗಿದ್ದಿರಬೇಕು ಊಹಿಸಿಕೊಳ್ಳಿ!!!

ಹೀಗೆ ಓಟ್‌ಹಾಕಲು ಸಹ ಅರಿಯದ ದಲಿತರಲ್ಲಿ ಇಂದು ಐ.ಎ.ಎಸ್, ಐ.ಪಿ.ಎಸ್ ಕೆ.ಎ.ಎಸ್ ವೈದ್ಯರು, ಇಂಜಿನಿಯರರು, ಶಿಕ್ಷಕರು, ವಿದ್ಯಾವಂತರು, ರಾಜಕೀಯ ನಾಯಕರುಗಳು ಮುಂತದವರು ಹೇಗೆ ಆದರು? ಶತಶತಮಾನದಿಂದಲು ಜೀತದಾಳಾಗಿಯೇ ಬದುಕಿದ್ದ ದಲಿತರು ಕೇವಲ 60ವರ್ಷಗಳಲ್ಲಿ ಈ ರೀತಿ ಸುದಾರಿ ಸಲು ಕಾರಣ? ಏನಾದರು ಪ್ರಜಾಪತಿಯ ಕಿವಿಯಿಂದ ಉತ್ಪತ್ತಿ ಯಾದರೆ? ಮನುವಾದಿಗಳನ್ನು ಕೇಳಿದರೆ ಹೀಗೆಯೇ ಹೇಳಿದರು ಹೇಳಿಯಾರು ಜೋಕೆ! ಈ ರೀತಿಯ ಕ್ರಾಂತಿಗೆ ಕಾರಣ ಬಾಬಾ ಸಾಹೇಬ್ ಅಂಬೇಡ್ಕರ್ ಎಂಬುದರಲ್ಲಿ ಎರಡು ಮಾತಿಲ್ಲ.

ನಾಯಿಗಿಂತ ಕೀಳಾಗಿ ಜೀವಿಸುತಿದ್ದ ಜನಾಂಗವನ್ನು ಮನುವಾದಿಗಳ ಪಕ್ಕ ಸಮಾನವಾಗಿ ಕೂರುವಂತೆ ಮಾಡಿದವರು ಈ ಭಾರತಪುತ್ರನೇ. ಮೀಸಲಾತಿ ಮತ್ತು ಬಾಬಾಸಾಹೇಬರ ರಾಜಕೀಯ ಹೋರಾಟದಿಂದ ಅದಾಗಲೇ ಕೆಲವು ದಲಿತರು ಸರ್ಕಾರಿ ನೌಕರರಾಗಿದ್ದರು, ವಿದ್ಯಾವಂತರಿದ್ದರು, ರಾಜಕೀಯ ನಾಯಕರುಗಳು ಆಗಿದ್ದರು. ಆದರೆ ತಮ್ಮ ಕೊನೆಯ ದಿನಗಳಲ್ಲಿ ಬಾಬಾಸಾಹೇಬರು "ನಾನು ನಂಬಿದ್ದ ನನ್ನ ದಲಿತ ನೌಕರರು, ವಿದ್ಯಾವಂತರು ನನಗೆ ಮೋಸ ಮಾಡಿದರು" ಎಂದು ಕಣ್ಣಳನ್ನು ತೇವವಾಗಿಸಿಕೊಂಡಿದ್ದು ಏಕೆ? ಬಾಬಾಸಾಹೇಬರು ಕಷ್ಟಪಟ್ಟು, ವೈಯಕ್ತಿಕ ಜೀವನವನ್ನು ಕಡೆಗಣಿಸಿ ಭರತಖಂಡದ ಇಡೀ ಶೋಷಿತವರ್ಗದ ಕ್ಷೇಮಕ್ಕೆ ಒದಗಿಸಿದ ಮೀಸಲಾತಿಯನ್ನು ಬಳಸಿಕೊಂಡ ದಲಿತರು ವಿದ್ಯಾಭ್ಯಾಸ ಮಾಡಿ, ನೌಕರಿಪಡೆದು, ತಮ್ಮ ಸಂಸಾರ, ಮಕ್ಕಳು, ತಮ್ಮ ಸೌಲಭ್ಯಗಳನ್ನು ಚೆನ್ನಾಗಿ ಮಾಡಿಕೊಳ್ಳುತಿದ್ದಾರಲ್ಲಾ? ಹೀಗಿದ್ದಾಗ ಅವರು ದುಃಖ ತಪ್ತರಾಗಲು ಕಾರಣವೇನು? ಅದಕ್ಕೆ ಅವರೇ ಹೇಳಿದ ಇನ್ನೊಂದು ಮಾತನ್ನು ಇಲ್ಲಿ ತಿಳಿಸುವುದು ಸೂಕ್ತ "ದಲಿತ ನೌಕರರು ಒಳ್ಳೆಯ ಜೀವನ ನಡೆಸುವುದರ ಜೊತೆಗೆ ಇತರ ದಲಿತರ ಏಳ್ಗೆಗಾಗಿ ತಮ್ಮ ಸಂಬಳದ ಶೇಕಡ 20 ರಷ್ಟು ಹಣವನ್ನು ಮೀಸಲಿಡಬೇಕು" ಎಂದಿದ್ದರು.

ಇದರ ಅರ್ಥ ಮೀಸಲಾತಿ ಕೊಡಿಸಿದ್ದು ದಲಿತರು ಮುಂದುವರೆದು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮೇಲ್ವರ್ಗದವರ ಸಮಾನರಾಗಲಿ ಎಂದೇ ಆದರೆ ಈ ಸರ್ಕಾರಗಳು ಮೀಸಲಾತಿಯನ್ನು ಸರಿಯಾಗಿ ಜಾರಿ ಮಾಡಿರುವರೆ? ಈಗಿನ ಒಳಮೀಸಲಾತಿ ಹೋರಾಟ ನಡೆದಿರುವುದನ್ನು ನೋಡಿದರೆ ಇದಕ್ಕೆ ಉತ್ತರ ಸಿಗುತ್ತದೆ. ಇದರ ಬಗ್ಗೆ ಮೂಂದೂಂದು ದಿನ ಮಾತಾಡೋಣ. ಸರ್ಕಾರಗಳ ಬೇಜವಾಬ್ದಾರಿಗಳನ್ನು ಮೊದಲೇ ಅರಿತಿದ್ದ

ಸ್ವತಂತ್ರ ಭಾರತದಲ್ಲಿ ಅಂಬೇಡ್ಕರರು ೧೯೫೨ ನೇ ಇಸವಿಯಲ್ಲಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಅವರ ವಿರುದ್ಧ ಎನ್. ಎಸ್. ಕಾಜ್ರೋಳ್ಕರ್ ಎಂಬ ಮನುವಾದಿಗಳ ಬೆಂಬಲಿತ ಅಸ್ಪೃಶ್ಯ ಸ್ಪರ್ಧಿಸಿದ್ದ. ಅಂಬೇಡ್ಕರರ ವಿರುದ್ಧ ೧೪ ಸಾವಿರ ಮತಗಳ ಅಂತರದಲ್ಲಿ ಗೆದ್ದಿಯೂ ಬಿಟ್ಟ. ಈ ಗೆಲುವಿಗೆ ನಾವೆಲ್ಲಾ ವ್ಯಥೆ ಪಡುವುದು ಬೇಕಾಗಿಲ್ಲ. ವ್ಯಥೆ ಪಡಬೇಕಾದದ್ದು ನಾನು ಹೇಳುವ ಇನ್ನೊಂದು ವಿಷಯಕ್ಕೆ. ಅದೇನೆಂದರೆ ಈ ಚುನಾವಣೆಯಲ್ಲಿ ಕುಲಗೆಟ್ಟ ಮತಗಳು ಎಷ್ಟು ಗೊತ್ತೇ? ೫೦ಸಾವಿರ!!! ಈ ಮತಗಳಲ್ಲಿ ದಲಿತರದೇ ಬಹುಪಾಲು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದರ ಅರ್ಥ ೧೯೫೨ ನೇ ಇಸವಿಯಲ್ಲೂ ದಲಿತರು ಎಷ್ಟೊಂದು ಮೂಡರಾಗಿದ್ದರು ಎಂದು. ಇನ್ನು ಶತಶತಮಾನಗಳ ಹಿಂದೆ ಹೇಗಿದ್ದಿರಬೇಕು ಊಹಿಸಿಕೊಳ್ಳಿ!!!

ಬಾಬಾಸಾಹೇಬರು ದಲಿತ ನೌಕರರು ತಮ್ಮ ಸಂಬಳದ ಶೇಕಡ 20ರಷ್ಟು ಹಣವನ್ನು ಇನ್ನೂ ಕೆಳ ಹಂತದಲ್ಲೇ ಉಳಿದಿರುವ ದಲಿತರ ಏಳ್ಗೆಗಾಗಿ ವಿನಿ ಯೋಗಿಸಿ ಎಂದು ತಿಳಿಸಿದ್ದರು. ಆದರೆ ಆಗಿನಿಂದ ಈಗಿ ನವರೆಗೂ ದಲಿತರು ಮಾಡುತ್ತಿರುವುದೇನು? ಗುರುತಿಸಿಕೊಳ್ಳಲು ಅಂಬೇಡ್ಕರ್ ಬೇಕು, ಶಾಲೆಗೆ ಸೇರಲು ಅಂಬೇಡ್ಕರ್ ಬೇಕು, ಕಾಲೇಜ್ ಸೇರಲು ಅಂಬೇಡ್ಕರ್ ಬೇಕು, ವಿದ್ಯಾಬ್ಯಾಸ ಮುಗಿಸಿ ಹೊರಬಿದ್ದಾಗ ಅಂಬೇಡ್ಕರ್ ಬೇಕು, ಮೇಲುವರ್ಗದವರು ಒದ್ದಾಗ ಅಂಬೇಡ್ಕರ್ ಬೇಕು, ಸೈಟು ಕೊಳ್ಳಲು ಅಂಬೇಡ್ಕರ್ ಬೇಕು, ಮನೆಕಟ್ಟಲು ಅಂಬೇಡ್ಕರ್ ಬೇಕು, ನಂತರ ಮಕ್ಕಳ ಜೀವನ ರೂಪಿಸಲು ಸಹ ಅಂಬೇಡ್ಕರ್ ಬೇಕು, ಆದರೆ ಸಂಪಾದನೆ ಮಾಡಿದ್ದನ್ನು ತಿನ್ನುವಾಗ, ಮಜಾ ಉಡಾಯಿಸುವಾಗ, ದಲಿತ ಮಹಿಳೆಯ ಬಟ್ಟೆ ಬಿಚ್ಚಿ ಬಡಿದಾಗ, ದಲಿತರ ಗುಡಿಸಲಿಗೆ ಬೆಂಕಿ ಹಾಕಿ ಜೀವಂತ ಸಮಾಧಿ ಮಾಡಿದಾಗ, ಬಾಬಾ ಸಾಹೇಬರ ಪ್ರತಿಮೆಗೆ ಅವಮಾನ ಮಾಡಿದಾಗ ಮಾತ್ರ ಅಂಬೇಡ್ಕರ್ ರವರ ನೆನಪಾಗದು ಅಲ್ಲವೇ? ಅಲ್ಪನಿಗೆ ಐಶ್ವರ್ಯ ಬಂದರೆ ಏನು ಮಾಡುತ್ತಾನೋ ಅದನ್ನೇ ನೀವು ಮಾಡಿದ್ದೀರಿ, ಮಾಡಿತ್ತಿದ್ದೀರಿ.

ದಲಿತರ ಏಳ್ಗೆಗಾಗಿ ಸರ್ವತ್ಯಾಗವನ್ನು ಮಾಡಿದ ಅಂಬೇಡ್ಕರರ ವಿರುದ್ಧವೇ ಎದೆಸೆಟೆದು ನಿಂತ ಆ ಕಾಜ್ರೋಳ್ಕರನಿಗೂ ನಿಮಗೂ ಏನು ವ್ಯತ್ಯಾಸ? ಆವನೇವಾಸಿ ಎದುರಿಗೇ ಮೋಸ ಮಾಡಿದ ಆದರೆ ನೀವು ಮಾಡಿದ್ದೆಲ್ಲವೂ ಬೆನ್ನ ಹಿಂದೆಯೇ. ಅನ್ನ ಹಾಕುವ ಮನೆಗೆ ಕನ್ನ ಹಾಕುವ ಬುದ್ಧಿ ನಿಮಗೆಲ್ಲಿಂದ ಬಂದಿತು? ಮದುವೆಯಾಗಿ ಮಕ್ಕಳಾದ ತಕ್ಷಣ ಅಂಬೇಡ್ಕರರು ಕೇವಲ ಉಪಯೋಗಿಸಿಕೊಳ್ಳುವ ವಸ್ತುವಾಗುತ್ತಾರಾ? ಅವರ ಜಾಗದಲ್ಲಿ ಎಲ್ಲಾ ಸಂಬಂಧಗಳು ಬಂದು ನಿಲ್ಲುತ್ತವೆಯಲ್ಲವೇ? ಮಗು ಸತ್ತಾಗ, ಹೆಂಡತಿ ಸತ್ತಾಗ ಅಯ್ಯೋ! ನನ್ನ ಹೆಂಡತಿಗೆ ಏನು ಸುಖ ಕೊಡಲಿಲ್ಲ ಇರುವ ಮಗನಿಗಾದರು ಮುಂದೆ ಏನಾದರು ಮಾಡೋಣ ಎಂದು ದಲಿತರ ಏಳ್ಗೆಯನ್ನು ಬದಿಗೊತ್ತಿ ಮನುವಾದಿಗಳ ಕೃಪೆಗೆ ಬಾಬಾಸಾಹೇಬರು ಪಾತ್ರರಾಗಬಹುದಿತ್ತಲ್ಲ? ಹಾಗೆ ಮಾಡಿದ್ದರೆ ಇಂದು ಏಕೆ ಮಗ ಮನುವಾದಿಗಳ ಜೊತೆ ಇರುತ್ತಿದ್ದ.

ತಂದೆ ಯಾರ ವಿರುದ್ಧ ಹೋರಾಡಿ ತಮ್ಮ ಜನತೆಗೆ ಸಮಾನತೆಯನ್ನು ಉಣಬಡಿಸಿದರೋ ಅಂತಹವರ ಜೊತೆಗೇ ಹೇಗೆ ಒಂದಾಗುತಿದ್ದ? ಕುಟುಂಬವನ್ನೇ ನಿರ್ಲಕ್ಷಿಸಿ, ಕಷ್ಟಗಳಿಗೆ ಜಗ್ಗದೆ, ಹಗಲಿರುಳು ಓದಿ, ಕಣ್ಗಳ ಮಂಜಾಗಿಸಿಕೊಂಡು, ಮದುಮೇಹಕ್ಕೆ ತುತ್ತಾಗಿದ್ದರೂ, ಕೂತು ಓದಿ ಓದಿ ಮಂಡಿನೋವು ಬರಿಸಿಕೊಂಡು, ಗಾಂಧೀಜಿಯ ವಿರುದ್ಧವೇ ಸಮರ ನಡೆಸಿದ್ದೂ ಈ ಪುರುಷಾರ್ತಕ್ಕಾ? "ನನ್ನ ಹೋರಾಟದ ರಥವನ್ನು ಸಾಧ್ಯವಾದರೆ ಮುಂದೆ ತಳ್ಳಿ, ಇಲ್ಲವಾದರೆ ಸುಮ್ಮನಿರಿ ಹಿಂದೆಮಾತ್ರ ಎಳೆಯಬೇಡಿ" ಎಂದಿದ್ದು ಇದಕ್ಕೆಂದೆ ತಿಳಿಯುತ್ತದೆ. ಬಾಬಾ ಸಾಹೇಬರು ಕೊನೆಗಾಲದಲ್ಲಿ ತನ್ನಜನಗಳ ಮೇಲೆ ನಂಬಿಕೆ ಕಳೆದುಕೊಂಡದ್ದು ಮೇಲಿನ ವಾಕ್ಯದಿಂದ ಸ್ಪಷ್ಟವಾಗುತ್ತದೆ.

"ಶಿಕ್ಷಣ, ಸಂಘಟನೆ, ಹೋರಾಟ ಎಂಬ ಮಂತ್ರವನ್ನು ಇಂದು ನಾವೆಲ್ಲ "ಶಿಕ್ಷಣ, ಸಂಸಾರ-ಸ್ವಾರ್ಥವಾಗಿ ಪರಿವರ್ತಿಸಿ ಕೊಂಡಿರುವುದು ನಿಜಕ್ಕೂ ನಾಚಿಕೆಗೇಡು. ದಲಿತರ ಕಣ್ಣೀರೊರೆಸಿದ ಆ ಮಹಾಮಾನವತಾವಾದಿಯ ಕಣ್ಣಲ್ಲೇ ನೀರಾಕಿಸಿ ಬಿಟ್ಟೆವು ನಾವು. ಇಂದಿನ ದಲಿತ ನೌಕರರು. ನಾಯಕರು, ವಿದ್ಯಾವಂತರಾದ ನಾವುಗಳು ಬಾಬಾ ಸಾಹೇಬರ ರಥವನ್ನ ನಿಂತಲ್ಲಿಯೆ ನಿಲ್ಲಲು ಬಿಟ್ಟಿದ್ದೇವೆ. ಇನ್ನೂ ಹೀಗೆಯೆ ಮುಂದುವರೆದರೆ ಮನುವಾದಿಗಳು ಖಂಡಿತವಾಗಿಯೂ ಹಿಂದಕ್ಕೆ ಎಳೆಯುವುದು ಶತಸಿದ್ಧ. ಈಗಾಗಲೇ ಆ ಲಕ್ಷಣಗಳು ಕಾಣುತ್ತಿವೆ.

ಬಡ್ತಿಯಲ್ಲಿ ಮೀಸಲಾತಿ ವಿಚಾರ ಅಲ್ಲೇ ನಿಂತಿದೆ. ಖಾಸಗಿಕರಣ ಮೀಸಲಾತಿಯನ್ನು ನುಂಗಿ ಹಾಕಿದೆ. ಸರ್ಕಾರಗಳು ದಲಿತರಿಗೆ ಮೀಸಲಿಟ್ಟಿದ್ದ ಹಣದಲ್ಲಿ ಅರ್ಧಖರ್ಚು ಮಾಡಿ ಇನ್ನರ್ಧವನ್ನು ಉಳಿಸಿಕೊಳ್ಳುತ್ತಿದ್ದಾರೆ.

ಬಡ್ತಿಯಲ್ಲಿ ಮೀಸಲಾತಿ ವಿಚಾರ ಅಲ್ಲೇ ನಿಂತಿದೆ. ಖಾಸಗಿಕರಣ ಮೀಸಲಾತಿಯನ್ನು ನುಂಗಿ ಹಾಕಿದೆ. ಸರ್ಕಾರಗಳು ದಲಿತರಿಗೆ ಮೀಸಲಿಟ್ಟಿದ್ದ ಹಣದಲ್ಲಿ ಅರ್ಧ ಖರ್ಚು ಮಾಡಿ ಇನ್ನರ್ಧವನ್ನು ಉಳಿಸಿಕೊಳ್ಳುತ್ತಿದ್ದಾರೆ. ಬ್ಯಾಕ್‌ಲಾಗ್ ಹುದ್ದೆಗಳು ದಿನೇ ದಿನೇ ಪಾತಾಳಕ್ಕೆ ಹೋಗುತ್ತಿವೆ. ಪ.ಜಾ, ಪ.ಪಂ, ಹಿಂದುಳಿದ ವರ್ಗಗಳ ಜಾತಿಪ್ರಮಾಣ ಪತ್ರಗಳನ್ನು ಮೇಲ್ವರ್ಗದವರು ಸುಲಭವಾಗಿ ಪಡೆದು ಶೈಕ್ಷಣಿಕ, ರಾಜಕೀಯ, ಆರ್ಥಿಕ ಸೌಲಭ್ಯಗಳನ್ನು ಪಡೆಯುತ್ತಾ ದಲಿತರನ್ನು ಒಳಮೀಸಲಾತಿಗೆ ಕಚ್ಚಾಡಲು ಬಿಟ್ಟಿದ್ದಾರೆ. ಮಹಿಳೆಯರು ಎಲ್ಲಿದ್ದರೋ ಅಲ್ಲೇ ಇದ್ದಾರೆ. ಬೌದ್ಧ ಧರ್ಮದಲ್ಲು ದೇವರು, ದೆವ್ವ, ಪೂಜೆ, ಪುರಸ್ಕಾರಗಳನ್ನು ತುರುಕಿದ್ದಾರೆ.

ಇಂತಹ ಹಲವಾರು ಸಮಸ್ಯೆಗಳು ದಲಿತರನ್ನು ಕಾಡುತ್ತಿರುವಾಗ ಇದರ ವಿರುದ್ಧವಾಗಿ ವಿದ್ಯಾವಂತರೂ, ನೌಕರರು, ನಾಯಕರು ಆದ ನೀವು ಏನು ಮಾಡಿದ್ದೀರಿ? ಅಂಬೇಡ್ಕರರ ರಥವನ್ನು ಎಲ್ಲಿಯ ತನಕ ತಂದಿದ್ದೀರಿ? ಎಲ್ಲಾ ಸೌಕರ್ಯಗಳನ್ನು ಅನುಭವಿಸಿ, ಅನುಭವಿಸುತ್ತಾ ಎಲೆಮರೆ ಕಾಯಿಗಳಾಗಿ ಜೀವಿಸುತ್ತಿದ್ದೀರಾ? ಇಲ್ಲವೇ ದಲಿತ ಕ್ರೈಸ್ತರೋ, ನವ ಬೌದ್ಧರೋ ಆಗಿ ನಮಗೂ ಹಿಂದೂ ದಲಿತರಿಗೂ ಸಂಬಂಧವಿಲ್ಲವೆಂದು ಜವಬ್ದಾರಿ ಕಳೆದುಕೊಂಡಿದ್ದೀರಾ? ದಯಮಾಡಿ ಈಗಲಾದರೂ ಹೊರಬನ್ನಿ ಹಿಂದುಳಿದಿರುವ ದಲಿತರನ್ನು ಜಾಗೃತಿಗೊಳಿಸಿರಿ, ಇಷ್ಟುದಿನ ದಲಿತ ನಾಯಕರು ಏನೇನು ಮಾಡಿದ್ದರೊ ಕೇಳಿ ಬನ್ನಿ.

ಈಗಾಗಲೇ ದಲಿತರಿಗೆ ಸಹಾಯ ಮಾಡುತ್ತಿರುವ ಕೆಲವು ನೌಕರರನ್ನು ಸಂಪರ್ಕಿಸಿ. ಅವರೊಂದಿಗೆ ಕೈಜೋಡಿಸಿ. ದಲಿತ ಯುಕರನ್ನು ಉದಾರವಾದಿ ಮನಸ್ಸುಗಳನ್ನು ಒಟ್ಟುಗೂಡಿಸಿ ದಲಿತರ ಮೇಲಿನ ಪ್ರತಿಯೊಂದು ದೌರ್ಜನ್ಯವನ್ನು ಪ್ರಶ್ನಿಸುವ ಮನಸ್ಸುಗಳನ್ನು ಸೃಷ್ಟಿಸಿ. ದಲಿತ ವಿದ್ಯಾರ್ಥಿಗಳಿಗೆ ಮಾದರಿಗಳಾಗಿ ಬನ್ನಿ. ಈ ಮನುವಾದಿಗಳಿಗೆ ಭಾರತ ದೇಶ ಮುಂದುವರೆವುದು ಇಡೀ ಭಾರತೀಯರು ಮುಂದುವರೆದಾಗಲೇ ಎಂಬ ಮಾತು ತಿಳಿದಿದ್ದರು ಸ್ವಾರ್ಥವನ್ನು ಬಿಡಲಾಗುತ್ತಿಲ್ಲ. ಆದರೆ ನಮ್ಮ ಬಾಬಾಸಾಹೇಬರು ಸ್ವಾರ್ಥವನ್ನು ಗೆಲ್ಲುವುದನ್ನು ಸ್ವತಃ ತೋರಿಸಿಕೊಟ್ಟಿದ್ದಾರೆ. ಆದ ಕಾರಣ ಬನ್ನಿ, ದಲಿತ ವಿದ್ಯಾವಂತ ನೌಕರರೇ ನಮ್ಮ ಸಂಸಾರವನ್ನು ಮೂಲೆಗುಂಪು ಮಾಡದೆ ಹಿಂದೆ ನಾವುಗಳು ಹೇಗೆ ಜೀವಿಸುತ್ತಿದ್ದೆವೋ ಹಾಗೆಯೇ ಜೀವಿಸುತ್ತಿರುವ ನಮ್ಮ ಬಂಧುಗಳನ್ನು ಕೈಹಿಡಿದು ಮೇಲಕ್ಕೆತ್ತಿ ನಮ್ಮಂತೆಯೆ ಮಾಡೋಣ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜಾನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೧
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ಹುಟ್ಟಲಿರುವ ಹೆಣ್ಣು ಮಗುವಿಗೆ 'ಪದ್ಮಪ್ರಿಯಾ' ಎಂದೇ ಹೆಸರಿಟ್ಟು...

ಹೊಸ ಅಂಕಣ

ಜ್ಯೋತಿ ಗುರುಪ್ರಸಾದ್

ಯಾರಿಗಾದರೂ ಈಗ ಹೆಣ್ಣು ಮಗು ಜನಿಸಿ ಅದರ ಹೆಸರು ಏನಿಡಬೇಕೆಂದು ಕೇಳಿದರೆ ನಾನಂತೂ 'ಪದ್ಮಪ್ರಿಯ' ಎಂದು ಇಡಿ ಎಂದು ಸೂಚಿಸಬೇಕನಿಸುತ್ತದೆ. 'ಅಹಲ್ಯಾ-ತಾರಾ-ಸೀತಾ-ದ್ರೌಪದಿ-ಮಂಡೋದರಿ' ಎಂಬ ಪಂಚ ಪತಿವ್ರತೆಯರ ಹೆಸರುಗಳಂತೆ ನನಗೀಗ 'ಪದ್ಮ ಪ್ರಿಯ' ಹೆಸರು ಕೂಡ ಅಚ್ಚಳಿಯದಂತೆ ಜನರ ಮನಸ್ಸಿನಲ್ಲಿ ಅದರಲ್ಲೂ ಹೆಣ್ಣು ಮಕ್ಕಳ ಮನಸ್ಸಿನ ಪರಂಪರೆಯಲ್ಲಿ ಉಳಿಯಲೇಬೇಕಾದ ಹೆಸರು ಅನಿಸುತ್ತಿದೆ. ಇದಕ್ಕೆ ಕಾರಣ ಹೇಳುವ ಮೊದಲು ಈ 'ಪದ್ಮಪ್ರಿಯ' ಪದಕ್ಕಿರುವ ನಮ್ಮ ಕಕ್ಷೆಗೆ ಬರುವ ಇನ್ನೆರಡು ಆಯಾಮಗಳನ್ನು ನೆನಪಿಸಿಕೊಳ್ಳುವುದು ಒಳ್ಳೆಯದು.

1. ಶ್ರೀ ವಿಷ್ಣುವಿನ ಹೆಂಡತಿ ಲಕ್ಷ್ಮಿಗೆ ಇರುವ ಅನೇಕ ಮುದ್ದಾದ ಹೆಸರುಗಳಲ್ಲಿ ಪದ್ಮಿನಿ, ಪದ್ಮಪ್ರಿಯ, ಪದ್ಮ ಹಸ್ತೇ.... ಎಂಬ ಹೆಸರುಗಳೂ ಸೇರಿಕೊಂಡಿವೆ. ಆಹಾ! ಎಲ್ಲಾ ನಮ್ಮ ರಾಷ್ಟ್ರೀಯ ಹೂವು ಎಂದು ಲಾಂಛನ ಪಡೆದು ಕೊಂಡಿರುವ 'ಪದ್ಮ' ಕ್ಕೆ ಸಂಬಂಧಿಸಿದ ಹೆಸರುಗಳೇ! ಎಂಥ ಗೌರವ? ಏನು ಕಥೆ?! ನಮಗೆಷ್ಟವಾದ ವಿಷಯಗಳನ್ನು ನಮ್ಮ ಇಷ್ಟ ದೈವಗಳೊಡನೆ ಸೇರಿಸಿ ಕಲ್ಪಿಸಿ ಸುಖಿಸುವ ಪುರಾಣ ಕಾವ್ಯಗಳ ತಳಹದಿ ಇರುವ ಸಂಪ್ರದಾಯದ ನಾಡು ನಮ್ಮದು. ಇರಲಿ.

2. ಎರಡನೆಯದಾಗಿ ಪದ್ಮಪ್ರಿಯ ಎಂಬ ಅಂದವಾದ ತಮಿಳು ನಟಿ ಹಲವು ವರ್ಷಗಳ ಹಿಂದೆ ಕನ್ನಡಕ್ಕೂ ಬಂದು ನಟಿಸಿ ಜನಪ್ರಿಯಳಾಗಿ ಡಾ. ರಾಜಕುಮಾರರಿಂದ ಹಿಡಿದು ಅನಂತ್‌ನಾಗ್‌ರ ವರೆಗೆ ನಾಯಕರುಗಳ ನಾಯಕಿ ಯಾಗಿ ನಟಿಸಿ ಯಶಸ್ವಿಯಾಗಿ ಸುಖದ ದಿನಗಳನ್ನು ಕಳೆಯುತ್ತಾ ಯಶಸ್ವಿಜೀವನವನ್ನು ತನ್ನದಾಗಿಸಿಕೊಳ್ಳಬೇಕೆಂಬ ಕನಸಿನ ಪಯಣದ ನಡುವೆಯೇ ರಸ್ತೆ ಅಪಘಾತಕ್ಕೆ ಸಿಕ್ಕಿ ಅಲ್ಪಾಯುಷಿಯಾಗಿ ಸತ್ತುಹೋದಳು. ಅವಳು ನಾಯಕಿಯಾಗಿ ನಟಿಸಿದ ಕನ್ನಡ ಕಾದಂಬರಿ ಆಧಾರಿತ 'ಬಾಡದ ಹೂ' ಚಲನ ಚಿತ್ರ ನನ್ನ ಮೆಚ್ಚಿನದ್ದು.

ಈಗ ನಾನು ಹೇಳುಲು ಹೊರಟಿರುವುದು ಈ ಮೇಲಿನ ಎರಡು 'ಪದ್ಮಪ್ರಿಯ' ಎಂಬ ಆಯಾಮಗಳ ಬಗೆಗೂ ಅಲ್ಲದ ಮೂರನೇ ಆಯಾಮದ ಬಗ್ಗೆ. ಆಕೆಯೇ ಎರಡು ವರ್ಷಗಳ ಹಿಂದೆ ಎಲ್ಲೋ ಡೆಲ್ಲಿಯಲ್ಲಿ ನಿಗೂಢವಾದ ಅನಾಮಿಕ ಫ್ಲಾಟೊಂದರಲ್ಲಿ ನಿಗೂಢವಾಗಿ- ಕ್ರೂರವಾಗಿ ಅಲ್ಪಾಯುಷಿಯಾಗಿ ಸಾವನ್ನಪ್ಪಿದ ಉಡುಪಿಯ ಶಾಸಕರ ಹೆಂಡತಿ ಪದ್ಮ ಪ್ರಿಯ. ಎರಡು ಪುಟ್ಟ ಮಕ್ಕಳ ತಾಯಿಯಾಗಿ ಸುಂದರ ತರುಣಿಯಾಗಿಯೇ ಇದ್ದ ಪದ್ಮಪ್ರಿಯ. ಅವಳ ಸಾವು ರಸ್ತೆಯ ಅಪಘಾತದಂತೆ ಯಾರ ಕಣ್ಣಿಗೂ- ಮುಖ್ಯವಾಗಿ ಸಾಮಾನ್ಯರ ಕಣ್ಣಿಗೆ ಕಾಣ

ಜ್ಯೋತಿ ಗುರುಪ್ರಸಾದ್

1965, ಜುಲೈ 16ರಲ್ಲಿ ಮೈಸೂರು ಜಿಲ್ಲೆಯ ಟಿ. ನರಸೀಪುರದಲ್ಲಿ ಜನನ. ಈಗ ಕಾರ್ಕಳದಲ್ಲಿ ವಾಸ. ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ.ಎ. ಪದವಿ ಹಾಗೂ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಿಂದ ಇಂಗ್ಲಿಷ್ ಎಂ.ಎ. ಪದವಿ. ಹಲವು ಕಾಲೇಜುಗಳಲ್ಲಿ ಕನ್ನಡ ಹಾಗೂ ಇಂಗ್ಲಿಷ್ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸಿರುವ ಅನುಭವ. ಚುಕ್ಕಿ (2003) ಸಂಕಲನ ವಿಶಿಷ್ಟ ಸಂಕಲನವೆಂಬ ಹೆಗ್ಗಳಿಕೆಗೆ ಪಾತ್ರವಾಗಿ ಸಹೃದಯರ ಹಾಗೂ ವಿಮರ್ಶಕರ ಮೆಚ್ಚಿಗೆಗೆ ಪಾತ್ರವಾಗಿದೆ. ಋಜುವಾತು ಪ್ರಕಾಶನದಿಂದ ಬೆಳಕು ಕಂಡ 'ಚುಕ್ಕಿ' ಸಂಕಲನದ ಹಸ್ತಪ್ರತಿಗೆ ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ಪ್ರತಿಷ್ಠಿತ ಕಡೆಂಗೋಡ್ಲು ಕಾವ್ಯ ಪ್ರಶಸ್ತಿ ಲಭಿಸಿದೆ. 'ಚುಕ್ಕಿ' ಸಂಕಲನಕ್ಕೆ ಗುಲ್ಬರ್ಗಾದ 'ಅಮ್ಮ' ಪ್ರಶಸ್ತಿ ಹಾಸನದ 'ಲೇಖಕಿ' ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಸಂದಿವೆ. ತುಮಕೂರಿನಿಂದ ಪ್ರಕಟಗೊಳ್ಳುತ್ತಿರುವ ಮಹಿಳೆಯರೇ ನಡೆಸಿಕೊಂಡು ಬರುತ್ತಿರುವ ಕೈ ಬರಹ ಮಾಸಪತ್ರಿಕೆ "ಶೈನಾ"ಗೆ ಐದು ವರ್ಷಗಳಿಂದ 'ಕಣ್ಣ ಭಾಷೆ' ಎಂಬ ಅಂಕಣ ಬರೆಯುತ್ತಿದ್ದಾರೆ. 'ವಾರ್ತಾಭಾರತಿ' ದೈನಿಕದಲ್ಲಿ 'ಜೋಲಿ ಲಾಲಿ' ಅಂಕಣದ ಅಂಕಣಗಾರ್ತಿ

ಎರಡನೆಯ ಕವನ ಸಂಕಲನ 'ಮಾಯಾಪೆಟ್ಟಿಗೆ' ಬೆಂಗೂರಿನ ಅಧ್ಯಯನ ಮಂಡಲದಿಂದ ಪ್ರಕಟಗೊಂಡು ಸಹೃದಯರಿಗೆ ತಲುಪುವಲ್ಲಿ ಯಶಸ್ವಿಯಾಗಿದೆ. ಮತ್ತೊಂದು ಗದ್ಯ ಸಂಕಲನ 'ಪ್ರೀತಿ ಮತ್ತು ಪ್ರೀತಿ ಮಾತ್ರ' ಮೈಸೂರಿನ 'ವಿಸ್ಮಯ' ಪ್ರಕಾಶನದಿಂದ ಬಿಡುಗಡೆಯಾಗಿದೆ. ಸೂಕ್ಷ್ಮ ಸಂವೇದನೆಯ ಮೂಲಕ ಪದ್ಯ-ಗದ್ಯ ಎರಡು ಪ್ರಕಾರಗಳಲ್ಲೂ ಛಾಪು ಮೂಡಿಸಿರುವ ಲೇಖಕಿ ಜ್ಯೋತಿ.

ಪದ್ಮಪ್ರಿಯಾಳಿಗೆ ನ್ಯಾಯ ಸಿಗಬೇಕು. ಅದಕ್ಕಾಗಿ ಹುಟ್ಟಲಿರುವ ಹೆಣ್ಣು ಮಗುವಿಗೆ 'ಪದ್ಮಪ್ರಿಯಾ' ಎಂದೇ ಹೆಸರಿಟ್ಟು ಪದ್ಮ ಪ್ರಿಯಾಳ ಕಥೆಯನ್ನು ಆ ಮಗುವಿಗೆ ಹೇಳಿ ಆ ಮಗುವನ್ನು ಗಂಡನಿಂದ ಯಾವುದೇ ವಿಧದಲ್ಲೂ ಶೋಷಿತಳಾಗದಂತೆ ನೋಡಿಕೊಳ್ಳಬೇಕು.

ಲಿಲ್ಲ. 'ಆತ್ಮಹತ್ಯೆ –ವಿಶಪ್ರಾಶನ– ಕೊಲೆ' ಎಂಬ ವಿವಿಧ ವದಂತಿಗಳೊಡನೆಯೇ ಅಸು ನೀಗಿದ ಅವಳ ಕಟ್ಟ ಕಡೆಯ ನಿಟ್ಟುಸಿರಿನ ಸದ್ದು ಯಾರ ಕಿವಿಗೂ ಕೇಳಿಸಲಿಲ್ಲ. ಡೆಲ್ಲಿಯಿಂದ ಉಡುಪಿಗೆ ಜೋಪಾನವಾಗಿ ಕಾನೂನು ರಕ್ಷೆಯೊಡನೆ ವಾಪಸ್ ಬರುತ್ತಾಳೆ–ಸ್ವತಂತ್ರ ಜೀವನದ ರೂವಾರಿಯಾಗುತ್ತಾಳೆ ಎಂದು ಅವಳನ್ನು ಬಲ್ಲ ಉಡುಪಿಯ ಸುತ್ತ ಮುತ್ತಲಿನ ಜನ ಕಾದಿದ್ದೇ ಬಂತು. ಗೃಹ ಸಚಿವರ ಎಲ್ಲ ಆಶ್ವಾಸನೆ ಗಳೂ ಪೊಳ್ಳಾದವು, ಅನುಕೂಲ ಸಿಂಧು ಮಾತುಗಳಾಗಿ ಮಾತ್ರ ಉಳಿದವು. ಆಶಾವಾದಿಗಳ ಎದೆಯೊಡೆಯುವಂತೆ ಪದ್ಮಪ್ರಿಯಾಳ ಸಾವಿನ ಸುದ್ದಿ ಬಂತು. ಅದೂ 'ಆತ್ಮಹತ್ಯೆ' ಎಂಬ ಕಳಂಕದೊಡನೆ, ಅವಳನ್ನು ನೇರ ನೋಡಿ ಬಲ್ಲವಳು ನಾನಲ್ಲದಿದ್ದರೂ ಪೇಪರ್‌ಗಳಲ್ಲಿ–ಟಿ.ವಿ.ಯಲ್ಲಿ ಶಾಸಕರ ಹೆಂಡತಿಯಾಗಿ ಕಾಣಿಸಿಕೊಳ್ಳುವ ಅವಳ ಚಲನ ವಲನಗಳನ್ನು ನಾನು ಗಮನಿಸುತ್ತಿದ್ದರಿಂದ ಅವಳು ನನಗೆ ಗೊತ್ತಿದ್ದಳು.

ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ಓದಿ ಪದವೀಧರೆಯಾಗಿದ್ದ ಸುಶಿಕ್ಷಿತ–ಲಕ್ಷಣವಾದ ಹೆಣ್ಣುಮಗಳೇ ಪದ್ಮಪ್ರಿಯ. ಜೊತೆಯಾಗಿ ಧೈರ್ಯವಂತೆಯಾಗಿಯೂ ಇದ್ದವಳು ಎಂಬುದು ಕಾಲೇಜಿಗೆ ಸಂಬಂಧಪಟ್ಟ ಹಿರಿಯರಿಂದ ಕೇಳಿಬರುವ ಮಾತು. ಇಂಥ ಪದ್ಮಪ್ರಿಯಾಳನ್ನು ಸ್ವಜಾತಿಯ ರಘುಪತಿ ಭಟ್ಟರು–ರಾಜಕಾರಣದ ಗದ್ದುಗೆಯೇರಿದ್ದ ರಘುಪತಿ ಭಟ್ಟರು ವಿವಾಹವಾಗಿದ್ದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಸ್ವ ಜಾತಿ ಎಂದೆನಷ್ಟೆ ಇದು ಪದ್ಮಪ್ರಿಯಾಳ ಮನೋಭೂಮಿಕೆಯನ್ನು ಅರಿಯುವ ಸಂಬಂಧದ 'ಸ್ವ ಜಾತಿ' ಯಾಗಲಿಲ್ಲ. ಬರೀ ಕಮ್ಯೂನಲ್ ಆಗಿ ಮಾತ್ರ ಉಳಿಯುವ ಜಾತಿ ದೃಷ್ಟಿಕೋನವಾಯಿತು. ಬೇರೆ ಮತಿ ಬೇರೆ ಮತ, ಮಂಕುತಿಮ್ಮ ಎನ್ನುತ್ತಾರೆ ಡಿ.ವಿ.ಜಿ. ಯವರು, ಹಾಗೆ.

ಪದ್ಮಪ್ರಿಯಾಳ ಒಳಗುದಿ ಯಾರಿಗೂ ಹೊರಗಿನ ಪ್ರಪಂಚಕ್ಕೆ ಕಾಣಲೇ ಇಲ್ಲ. ಅವಳಿಗೂ ಒಂದು ಮನಸ್ಸಿದೆ. ಅದರ ಬೇಕು ಬೇಡಗಳೇನು? ಅದು ನೆಮ್ಮದಿಯಾಗಿ ಸ್ವತಂತ್ರವಾಗಿದೆಯೇ? ಊಹೂಂ. ಈ ಪ್ರಶ್ನೆಗೆ ಉತ್ತರ ಸಿಗಲೇ ಇಲ್ಲ. ಸಿಕ್ಕಿದ್ದರೆ ಪದ್ಮಪ್ರೀಯಾಳ ಸಾವು ಹೀಗೆ ಅನಾಥವಾಗಿ– ಅಸಹಜವಾಗಿ ಸಂಭವಿಸುತ್ತಿರಲಿಲ್ಲ. ಅವಳಿಗೆ 'ವಿಚ್ಛೇದನ' ಎಂಬ ಸ್ವಾತಂತ್ರ್ಯ ಸಿಕ್ಕಿ ತನ್ನ ಜೀವನವನ್ನು ಸ್ವತಃ ರೂಪಿಸಿಕೊಳ್ಳುವ ಶಕ್ತಿ ಸಿಕ್ಕಿರುತ್ತಿತ್ತು.

ಶಾಸಕರು ಮರು ಚುನಾವಣೆಯಲ್ಲೂ ಶಾಸಕರಾಗೇ ಉಳಿಯಲೆಂಬ ಅಭಿಲಾಷೆಯೊಂದಿಗೆ ಪದ್ಮಪ್ರಿಯ ಅವರ ಪರ ಪ್ರಚಾರ ನಡೆಸುತ್ತಾ ತನ್ನ ಒಳಗುದಿಯನ್ನೆಲ್ಲಾ ಒಳಗೇ ಇಟ್ಟುಕೊಂಡು ಅವರ ಜೊತೆಯಾಗೇ ಇದ್ದದ್ದು ನಮಗೆಲ್ಲಾ ಗೊತ್ತಿದೆ. ಚುನಾವಣೆಯ ನಂತರ ಫಲಿತಾಂಶ ಬರುವುದರೊಳಗೆ ಪದ್ಮಪ್ರಿಯಾ ಜೀವನಕ್ಕೆ ಇಂಥದ್ದೊಂದು ಧಿಡೀರ್ ದುರಂತ ತಿರುವು! ಆಡಳಿತದ ಪಕ್ಷದ ಸಂಪೂರ್ಣ ನೆರವು –ಜನರ ಅಜ್ಞಾನದ ಕನಿಕರದ ನೆರವು ರಘುಪತಿ ಭಟ್ಟರನ್ನು ಮತ್ತೆ ಶಾಸಕ ಸ್ಥಾನಕ್ಕೆ ಏರಿಸಿತು. ಜೊತೆಗೆ ಪದ್ಮಪ್ರಿಯಾಳ ಹಾರೈಕೆಯೂ ಇತ್ತಲ್ಲ!

ಆದರೆ ಈ ಶಾಸಕರು ಹೊರಡಿಸಿದ ಶಾಸನ ಮಾತ್ರ ಯಾವ ಹೆಣ್ಣು ಮಗಳಿಗೂ ಇಂಥ ದುಸ್ಥಿಯನ್ನು ತರಕೂಡದ್ದು ಎಂಬ ಜಾಗೃತಿಗೆ ಒಡ್ಡುತ್ತದೆ. ತನ್ನ ಸ್ಥಾನವನ್ನು ಭದ್ರ ಪಡಿಸಿಕೊಳ್ಳಲ್ಲು ನಂಬಿದ ಹೆಂಡತಿಯನ್ನು ಅಭದ್ರತೆಗೆ ತಳ್ಳಿ ಆ ಅಭದ್ರತೆಯನ್ನೇ ಬಂಡವಾಳ ಮಾಡಿ ಕೊಳ್ಳುವ ಅವಕಾಶವಾದಿತನ ಇಂದು ಪದ್ಮಪ್ರಿಯಾ ಎಂಬ ದಿಟ್ಟ ಮಹಿಳೆಯೊಬ್ಬಳನ್ನು ಅವಳು ತನ್ನದೇ ಕಾರಣಕ್ಕಾಗಿ ಮನೆ ಬಿಟ್ಟು ಹೋದಮೇಲೆ ಮತ್ತೊಮ್ಮೆ ಅವಳು ನಮ್ಮ ಕಣ್ಮುಂದೆ ಬರಲಾರದಂತೆ ಆಹುತಿ ತೆಗೆದುಕೊಂಡು ಬಿಟ್ಟಿತು. ಅವಳಿಗೆ ಪ್ರಿಯಕರ ನಿದ್ದನಾ? ಇಲ್ಲವಾ? ಅದೆಲ್ಲಾ ಸೆಕೆಂಡರಿ.

ಅದೂಂದು ವೇಳೆ ನಿಜವೇ ಆಗಿದ್ದರೆ ಮಾನವಂತ ಶಾಸಕರು ಆಕೆಯನ್ನು ಕಾನೂನು ಪ್ರಕಾರವೂ ಮನೆಯಿಂದ ಗೌರವದಿಂದ ಹೊರಗೆ ಕಳುಹಿಸಿ ಅವಳು ಒಲ್ಲದ ಜೀವನದಿಂದ ಅವಳನ್ನು ಬಿಡುಗಡೆಗೊಳಿಸಬಹುದಿತ್ತು. ಆದರೆ ಪದ್ಮಪ್ರಿಯ ಅನಗತ್ಯವಾಗಿ ಜೀವವನ್ನೇ ತೊರೆಯುವಂಥ ಶಿಕ್ಷೆಗೆ ಒಳಗಾಗಿ ಪಾಪದವಳಾಗಿಬಿಟ್ಟಳು. ಜೀವಿಸುವ ಇನ್ನೊಂದು ಚಾನ್ಸ್ ಅವಳಿಗೆ ಸಿಗದಂತೆ ಅವಳ ಸುತ್ತ ಎಲ್ಲ ಪಿತೂರಿಯೂ ದೆಹಲಿಯ ಲೆವೆಲ್‌ನಲ್ಲಿ ನಡೆದು ಹೋಯಿತು. ಈಗಲೂ ಅವಳ ಸಾವಿನ ನಿಗೂಢ ಪ್ರಕರಣ ಸಿ.ಬಿ.ಐ. ತನಿಖೆಗೆ ಒಳಗಾಗಿ ಸೂಕ್ತ ವಿಚಾರಣೆಯ ನ್ಯಾಯ ದೊರೆಯದೇ ಇರುವುದರಿಂದ ಸಾಯಲು ಒಲ್ಲದ –ಹೊಸಜೀವನದ ಆಸೆ ಹೊತ್ತಿದ್ದ ಪದ್ಮಪ್ರಿಯಾ ಶೋಷಿತಳಾಗಿ ಬಲವಂತವಾಗಿ ಸಾಯಲುಪಟ್ಟಳು ಎಂದೇ ಘೋಶಿಸಬೇಕಾಗಿದೆ.

ಇದು ಸುಳ್ಳು ಎನ್ನುವುದಾದರೆ ನಿಜ ಯಾವುದು? ಎನ್ನುವುದನ್ನು ಮಾನ್ಯ ಶಾಸಕರು–ಸಚಿವರು ಎಲ್ಲರೂ ಪದ್ಮಪ್ರಿಯಾ ಸಾವಿನ ಪ್ರಕರಣವನ್ನು ನ್ಯಾಯ ಸಮ್ಮತವಾಗಿ ಬಿಚ್ಚಿಡಲಿ. ಪದ್ಮಪ್ರಿಯಾಳಿಗೆ ಸಂಭವಿಸಿದಂಥ ಈ ಶೋಷಣೆ ಮತ್ತೊಮ್ಮೆ ಯಾವ ಹೆಣ್ಣುಮಗಳಿಗೂ ಸಂಭವಿಸದಂತೆ ಹೆಣ್ಣು ಮಕ್ಕಳೆಲ್ಲಾ ಎಚ್ಚೆತ್ತುಕೊಳ್ಳಲಿ. ಪದ್ಮಪ್ರಿಯಾಳಂಥ ಸುಶಿಕ್ಷಿತ ಹೆಣ್ಣಿಗೇ–ಎಂ.ಎಲ್.ಎ. ಹೆಂಡತಿಗೇ ಇಂಥ ಪಾಡಾಗುವುದಾದರೆ ಇನ್ನು ಸಮಾಜದ ಕೆಳವರ್ಗದ ಶಿಕ್ಷಣವಿಲ್ಲದ ಹೆಣ್ಣುಮಕ್ಕಳ ಪಾಡು ದೇವರಿಗೇ ಪ್ರೀತಿ. ಅದಕ್ಕೆ 'ಪದ್ಮಪ್ರಿಯಾ' ಪ್ರಕರಣವೆಂದರೆ ಮಹಿಳೆಗೆ ಎಂಥ ಶಿಕ್ಷಣ ಬೇಕು? ಯಾವಾಗ ಅವಳು ಸ್ವತಂತ್ರಳು? ಎಂದು ಚಿಂತಿಸುವ ಪ್ರಕರಣ ಎಂದು ಎಲ್ಲ ಶೋಷಿತ ಮಹಿಳೆಯರ ಪರವಾಗಿ ಸಾಂಕೇತಕವಾಗಿ ನನಗನಿಸುತ್ತದೆ ಹಾಗೂ ಮತ್ತೆ ನಮಗೆ 'ಪದ್ಮಪ್ರಿಯಾ ಎಂಬ ಹೆಣ್ಣುಮಗಳು' ತನ್ನ ಸ್ವತಂತ್ರ ವ್ಯಕ್ತಿತ್ವದಿಂದ –ಮಕ್ಕಳ ತಾಯಿಯಾಗಿ ನೆಮ್ಮದಿಯಿಂದ ಕೌಟುಂಬಿಕ ಜೀವನವನ್ನು ನಡೆಸುವ ಖುಷಿಯಲ್ಲಿ ಸಿಗಬೇಕಾಗಿದೆ.

ಬಹುಷಃ ಸಾಯುವ ಕೊನೆಯ ನಿಮಿಷದಲ್ಲೂ ಅವಳ ಆತ್ಮ ಶೋಷಣೆಯ ಅವಮಾನದ ಬೆಂಕಿಯಲ್ಲೇ ಸುಡುತ್ತ ಒದ್ದಾಡುತ್ತಿತ್ತೇನೋ ಎಂಬಂತೆ ಭಾಸವಾಗುತ್ತಿದೆ. ಸತ್ಯ ಹೊರಗೆ ಬರಲೇಬೇಕು. ಪದ್ಮಪ್ರಿಯಾಳಿಗೆ ನ್ಯಾಯ ಸಿಗಬೇಕು. ಅದಕ್ಕಾಗಿ ನಾವು ಪದ್ಮಪ್ರಿಯಾಳನ್ನು ಮರೆತು ಹೋಗದೆ ಹುಟ್ಟಲಿರುವ ಹೆಣ್ಣು ಮಗುವಿಗೆ 'ಪದ್ಮಪ್ರಿಯಾ'ಎಂದೇ ಹೆಸರಿಟ್ಟು ಪದ್ಮಪ್ರಿಯಾಳ ಕಥೆಯನ್ನು ಆ ಮಗುವಿಗೆ ಹೇಳಿ ಆ ಮಗುವನ್ನು ಗಂಡನಿಂದ ಯಾವುದೇ ವಿಧದಲ್ಲೂ ಶೋಷಿತಳಾಗದಂತೆ ಸುಶಿಕ್ಷಿತಳಾಗುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಹೆಣ್ಣು ಮಗುವಿನ ನೆಮ್ಮದಿಯ ಜೀವನ ಕೇವಲ ಭ್ರಮೆಯಾಗಿಯೇ ಉಳಿಯುತ್ತದೆ.

ಅವಳ ನೆಮ್ಮದಿಯೆಂದರೆ ಬರೀ ಶಾಲಾ–ಕಾಲೇಜುಗಳ ಓದಲ್ಲ: ಆ ಓದನ್ನು ಜೀವನಕ್ಕೂ ಅಳವಡಿಸಿಕೊಂಡು ಕೆಟ್ಟ ಗಂಡನನ್ನು ಧಿಕ್ಕರಿಸಿ ಅಥವಾ ದಾರಿಗೆ ತಂದು ಜೀವನ್ಮುಖಿಯಾಗಿ ಹೇಗೆ ಸ್ವತಂತ್ರವಾಗಿ ಬಾಳಬಹುದೆಂಬ ರಹಸ್ಯ. □

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಾಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨–೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದ ವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ನವಕರ್ನಾಟಕದ ನಾಡಪ್ರಭುಗಳು: ಮಿತ್ತಲ್, ಪೋಸ್ಕೋ......

ಶಿವಸುಂದರ್

ಜಾಗತಿಕ ಹೂಡಿಕೆದಾರರ ಸಮಾವೇಶ ಅತ್ಯಂಯ ಯಶಸ್ವಿಯಾಗಿ ಮುಕ್ತಾಯವಾಗಿ ಕರ್ನಾಟಕಕ್ಕೆ ನಾಲಕ್ಕೂವರೆ ಲಕ್ಷ ಕೋಟಿ ರೂಪಾಯಿ ಬಂಡವಾಳ ಹರಿದು ಬರುತ್ತದೆಂದೂ, 8.5 ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗುತ್ತದೆಂದೂ ಬಿಜೆಪಿ ಸರ್ಕಾರ ಕೊಚ್ಚಿಕೊಳ್ಳುತ್ತಿದೆ. ಸರ್ಕಾರದ ಈ "ಬಂಡ್ವಾಳವಿಲ್ಲದ ಬಡಾಯಿ"ಯನ್ನು ಕಿಂಚಿತ್ತೂ ವಿಮರ್ಶಿಸದ ಮಾಧ್ಯಮಗಳು ಸರ್ಕಾರ ಹೇಳಿದ್ದಕ್ಕೆ ತಮ್ಮದೂ ಒಂದಷ್ಟು ಉತ್ಪ್ರೇಕ್ಷೆಯನ್ನು ಸೇರಿಸಿ ಕರ್ನಾಟಕದಲ್ಲಿ ಬರಲಿರುವ ದಿನಗಳಲ್ಲಿ ಸ್ವರ್ಗವೇ ಧರೆಗೆ ಇಳಿದು ಬರುತ್ತದೆಂಬ ಮಾಯಾ ಮರೀಚಿಕೆಯನ್ನು ತೋರಿಸುತ್ತಿದ್ದಾರೆ.

ಹೀಗೆ ಸರ್ಕಾರ ಮತ್ತು ಮಾಧ್ಯಮಗಳು ಜೊತೆಗೂಡಿ ನಡೆಸಿರುವ "ಜುಗಲ್‌ಬಂದಿ"ಯಲ್ಲಿ ಸತ್ಯ ಅನಾಥವಾಗುತ್ತಿದೆ. ಸರ್ಕಾರದ ವರಸೆಗಳನ್ನು ನೇರ ಮತ್ತು ದಿಟ್ಟವಾಗಿ ಬಯಲುಗೊಳಿಸಬೇಕಾದ ಮಾಧ್ಯಮಗಳು ಎಷ್ಟರ ಮಟ್ಟಿಗೆ ತಮ್ಮ ವೃತ್ತಿ ನಿಷ್ಠೆಯನ್ನು ಮಾರಿಕೊಂಡಿದ್ದರೆಂದರೆ ಒಂದು ಸಂದರ್ಶನದಲ್ಲಿ ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿಯವರು ಈ ನಾಲ್ಕೂವರೆ ಕೋಟಿಗಳಲ್ಲಿ ಶೇ. 50ರಷ್ಟು ಮಾತ್ರ ವಾಸ್ತವವಾಗಿ ಹರಿದುಬರಬಹುದು ಎಂದು ಹೇಳುತ್ತಿದ್ದರೂ ಒಪ್ಪಿಕೊಳ್ಳಲು ಮಾಧ್ಯಮ "ರಂಗ" ಸಿದ್ಧವಿರಲಿಲ್ಲ! ಏಕೆಂದರೆ ಸರ್ಕಾರವು ಅಂದಾಜು 50 ಕೋಟಿ ರೂಗಳಷ್ಟು ಹಣವನ್ನು ಕೇವಲ ಮಾಧ್ಯಮಗಳ ಜಾಹೀರಾತಿಗೆ ಎತ್ತಿಟ್ಟಿತ್ತು. (ಮೊದಲು ಇದನ್ನು ಕೇವಲ 22 ಕೋಟಿ ಎಂದು ಹೇಳಲಾಗಿತ್ತು!).

ಈಗ ಜಾಗತಿಕ ಹೂಡಿಕೆದಾರರ ಸಮಾವೇಶ ಎಬ್ಬಿಸಿದ ಬಿರುಗಾಳಿ ತಣ್ಣಗಾಗಿದೆ. ಈಗಲಾದರೂ ಈ ಜಾಗತಿಕ ಹೂಡಿಕೆದಾರರ ಸಮಾವೇಶದಿಂದ ಕರ್ನಾಟಕದ ಜನತೆಗಾದ ಲಾಭವೆಷ್ಟು? ಆಗಿರುವ ಮತ್ತು ಆಗಲಿರುವ ನಷ್ಟವೆಷ್ಟು ಎಂಬ ಲೆಕ್ಕಾಚಾರ ಹಾಕಬೇಕಲ್ಲವೇ?

ವಾಸ್ತವವಾಗಿ ಹೂಡಿಕೆದಾರದ ಸಮ್ಮೇಳನದಿಂದ ಕರ್ನಾಟಕದ ಜನತೆಗೆ ಅಪಾರ ಲಾಭವಾಗುತ್ತದೆ ಎಂದು ಜನರನ್ನು ನಂಬಿಸಲು ಸರ್ಕಾರ ಮುಂದಿಡುತ್ತಿರುವ ವಾದ ಅದು 8.5 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುತ್ತದೆ ಎಂಬುದೇ ಆಗಿದೆ. ಈ ಸಮಾವೇಶ ಮುಗಿದ ದಿನ ಸರ್ಕಾರ ಹೇಳಿದ್ದು 4 ಲಕ್ಷ ಉದ್ಯೋಗಗಳು ಸೃಷ್ಟಿಯಾಗುತ್ತವೆ ಎಂದು. ಆದರೆ ರಾತ್ರೋರಾತ್ರಿ ಅದನ್ನು 8.5 ಲಕ್ಷಕ್ಕೇ ಏರಿಸಿದ್ದರ ಹಿಂದೆ ನಡೆದ ಇಂದ್ರಜಾಲವೆಲ್ಲಾ ಸಂಖ್ಯಾಗಾರುಡಿಯೇ ಹೊರತು ಮತ್ತೇನಲ್ಲ! ಸರ್ಕಾರದ ಎರಡನೇವಾದ ಇದರಿಂದ ರಾಜ್ಯದ ಅಭಿವೃದ್ಧಿಯಾಗುತ್ತದೆ ಎಂಬುದು. ಈ ಎರಡುವಾದದ ಬಗೆ ಇದೇ ಅಂಕಣದಲ್ಲಿ ಸಮಾವೇಶದ ಮುಂಚೆ ಕೂಲಂಕಷ ವಿಶ್ಲೇಷಣೆ ಮಾಡಿದ್ದದ್ದು ಓದುಗರಿಗೆ ನೆನಪಿರಬಹುದು! ಈಗ ಸಮಾವೇಶ ಮುಗಿದು ಸಮಾವೇಶದ ಸಾಧನೆಗಳ ಬಗ್ಗೆ ಸರ್ಕಾರ ನೀಡಿರುವ ಅಂಕಿಅಂಶ ಎದುರಿಗಿರುವುದರಿಂದ ಕರ್ನಾಟಕದ ಜನತೆಗೆ ಸಿಕ್ಕಿದ್ದೇನು–ಬಿಜೆಪಿ ಸರ್ಕಾರ ಹಾಗೂ ಹೂಡಿಕೆದಾರರೆಂಬ ರಣಹದ್ದುಗಳು ಮುಕ್ಕಿದ್ದೇನು ಎಂಬುದನ್ನೂ ನೋಡೋಣ!

ಸರ್ಕಾರ ಅಂತಿಮವಾಗಿ ಬಿಡುಗಡೆ ಮಾಡಿರುವ ಅಂಕಿ ಅಂಶಗಳ ಪ್ರಕಾರ ಒಟ್ಟು 350ಕ್ಕೂ ಹೆಚ್ಚು ಯೋಜನೆಗಳಿಂದ 4.5 ಲಕ್ಷ ಕೋಟಿರೂ ಬಂಡವಾಳ ಹರಿದು ಬರಲಿದೆ. ಅದರಲ್ಲಿ ಬೆಂಗಳೂರು ಗ್ರಾಮಾಂತರ ಭಾಗಕ್ಕೆ ಶೇ.33ಕ್ಕಿಂತಲೂ ಹೆಚ್ಚು, ಎಂದರೆ 102 ಯೋಜನೆಗಳು ಜಾರಿಗೆ ಬರಲಿವೆ. ಇನ್ನುಳಿದದ್ದರಲ್ಲಿ ಪ್ರಧಾನ ಪಾಲು ಬಳ್ಳಾರಿ ವಲಯಕ್ಕೆ ಹೋಗಲಿದೆ. ಬಳ್ಳಾರಿ ವಲಯದಲ್ಲಿ ನಡೆಯಲಿರುವುದು ಏನು – ಇದರಿಂದ ಕರ್ನಾಟಕದ ಜನ ಪಡೆದುಕೊಳ್ಳುವುದು – ಕಳೆದುಕೊಳ್ಳುವುದು ಏನು ಎಂಬುದನ್ನು ನಂತರ ವಿಶ್ಲೇಷಿಸೋಣ. ಈ ಸದ್ಯಕ್ಕೆ ಬಳ್ಳಾರಿ ಹಾಗೂ ಬೆಂಗಳೂರು ಬಿಟ್ಟರೆ ಬೇರೆಲ್ಲೂ ಹೇಳಿಕೊಳ್ಳುವಂಥ ಬಂಡವಾಳ ಹರಿವಿನ ಭರವಸೆಗಳು ಬಂದಿಲ್ಲ ಎನ್ನುವುದು ವಾಸ್ತವ. ಹೀಗಾಗಿ ಬಿಜೆಪಿ ಸರ್ಕಾರ ಪ್ರಾದೇಶಿಕ ಅಸಮತೋಲನವನ್ನು ಕಡಿಮೆ ಮಾಡುವರೀತಿಯಲ್ಲಿ ಹೂಡಿಕೆ ದಾರರ ಮನಒಲಿಸಿದೆ ಎಂಬುದು ಸತ್ಯಕ್ಕೆ ಅತ್ಯಂತ ದೂರವಾದ ಮಾತು!

ಇನ್ನು ಉದ್ಯೋಗ ಸೃಷ್ಟಿಯ ವಿಷಯಕ್ಕೆ ಬರುವುದಾದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹೂಡಿಕೆಯಾಗಲಿರುವ ಬಂಡವಾಳದಿಂದ 2,41, 290 ಉದ್ಯೋಗಗಳು ಸೃಷ್ಟಿಯಾಗುತ್ತವೆಂದೂ

ಸರ್ಕಾರ ಅಂತಿಮವಾಗಿ ಬಿಡುಗಡೆ ಮಾಡಿರುವ ಅಂಕಿ ಅಂಶಗಳ ಪ್ರಕಾರ ಒಟ್ಟು ೩೫೦ಕ್ಕೂ ಹೆಚ್ಚು ಯೋಜನೆಗಳಿಂದ ೪.೫ ಲಕ್ಷ ಕೋಟಿರೂ ಬಂಡವಾಳ ಹರಿದು ಬರಲಿದೆ. ಅದರಲ್ಲಿ ಬೆಂಗಳೂರು ಗ್ರಾಮಾಂತರ ಭಾಗಕ್ಕೆ ಶೇ.೩೩ಕ್ಕಿಂತಲೂ ಹೆಚ್ಚು, ಎಂದರೆ ೧೦೨ ಯೋಜನೆಗಳು ಜಾರಿಗೆ ಬರಲಿವೆ. ಇನ್ನುಳಿದದ್ದರಲ್ಲಿ ಪ್ರಧಾನ ಪಾಲು ಬಳ್ಳಾರಿ ವಲಯಕ್ಕೆ ಹೋಗಲಿದೆ. ಬಳ್ಳಾರಿ ವಲಯದಲ್ಲಿ ನಡೆಯಲಿರುವುದು ಏನು - ಇದರಿಂದ ಕರ್ನಾಟಕದ ಜನ ಪಡೆದುಕೊಳ್ಳುವುದು - ಕಳೆದುಕೊಳ್ಳುವುದು ಏನು ಎಂಬುದನ್ನು ನಂತರ ವಿಶ್ಲೇಷಿಸೋಣ. ಈ ಸದ್ಯಕ್ಕೆ ಬಳ್ಳಾರಿ ಹಾಗೂ ಬೆಂಗಳೂರು ಬಿಟ್ಟರೆ ಬೇರೆಲ್ಲೂ ಹೇಳಿಕೊಳ್ಳುವಂಥ ಬಂಡವಾಳ ಹರಿವಿನ ಭರವಸೆಗಳು ಬಂದಿಲ್ಲ.

ಮತ್ತು ಬಳ್ಳಾರಿಯಲ್ಲಿ ಹೂಡಿಕೆಯಾಗಲಿರುವ 1,67, 387 ಕೋಟಿ ಬಂಡವಾಳ ಹೂಡಿಕೆಯಿಂದ 98,856 ಉದ್ಯೋಗಗಳು ಸೃಷ್ಟಿಯಾಗುತ್ತವೆಂದೂ ಹೇಳಲಾಗಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಹೂಡಿಕೆಯಾಗಲಿರುವ 7882.74ಕೋಟಿ ಬಂಡವಾಳದಿಂದ 1,00,028 ಉದ್ಯೋಗಗಳು ಸೃಷ್ಟಿಯಾಗಲಿವೆ ಯೆಂದು ಹೇಳಲಾಗುತ್ತಿದೆ. ಹೀಗೆ ಸರ್ಕಾರದ ಲೆಕ್ಕಾಚಾರದ ಪ್ರಕಾರವೇ ಒಟ್ಟಾರೆ ಉದ್ಯೋಗಗಳ ಸಂಖ್ಯೆ 4.5 ಲಕ್ಷವನ್ನುದಾಟುವುದಿಲ್ಲ. ಇನ್ನು ಇದು 8.5ಲಕ್ಷವಾಗುವ ಬಗೆ ಹೇಗೆಂಬುದನ್ನು ಆ"ನಿರಾಣಿ"ಯೇ ಹೇಳಬೇಕು.

ಇರಲಿ ಈ ನಾಲಕ್ಕೂವರೆ ಲಕ್ಷ ಉದ್ಯೋಗವೆಂಬುದಾದರೂ ಎಷ್ಟು ನಿಜ? ಮೊದಲನೆಯದಾಗಿ ಮೇಲಿನ ಅಂಕಿಅಂಶಗಳ ಪ್ರಕಾರವೇ ಇದರಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ಬೆಂಗಳೂರು ನಗರ ಮತ್ತು ಗ್ರಾಮಾಂತರ ವಲಯದಲ್ಲಿ ಸೃಷ್ಟಿಯಾಗಬೇಕು. ಈ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಯಾಗುವುದು ಗಾರ್ಮೆಂಟ್, ಲೆದರ್, ಇನ್ನಿತರ ಮಾನವ ಶ್ರಮವನ್ನು ಹೆಚ್ಚಿಗೆ ಬೇಡುವ ವಲಯಗಳಲ್ಲಿ. ಆದರೆ ಈ ವಲಯದಲ್ಲಿ ಸರ್ಕಾರದ ಪ್ರಕಾರವೇ ಯಾವ ಬಗೆಯ ಹೂಡಿಕೆಗಳು ಬರುತ್ತಿವೆ? ದೇವನಹಳ್ಳಿಯ ಬಳಿ ಒಂದು ಲಕ್ಷ ಕೋಟಿ ಹೂಡಿಕೆಯಲ್ಲಿ ಐಟಿ ವಲಯ ಮತ್ತು ಏರೋನ್ಯಾಟಿಕ್ ವಲಯದರಲ್ಲೂ ಈಗಾಗಲೇ ಕರ್ನಾಟಕದಲ್ಲಿ ಅಂದರೆ ಬೆಂಗಳೂರಿನಲ್ಲಿ ಬೀಡು ಬಿಟ್ಟಿರುವ ಇನ್‌ಫೋಸಿಸ್, ವಿಪ್ರೋ, ಐಬಿಎಂ ಇನ್ನಿತರ ಸಾಫ್ಟ್ ವೇರ್ ದೈತ್ಯರೇ ಈ ಹೂಡಿಕೆದಾರರ ಸಮಾವೇಶ ಕೊಡುತ್ತಿರುವ ಸೌಲಭ್ಯವನ್ನು ಬಳಸಿಕೊಂಡು ತಮ್ಮ ಕಾರ್ಯಾಚರಣೆ ವಿಸ್ತರಿಸುತ್ತಿದ್ದಾರೆ.

ಆದರೆ ಇವು ಎಷ್ಟು ಉದ್ಯೋಗಗಳನ್ನು ಸೃಷ್ಟಿಸಬಹುದು? 1991ರಿಂದ ಈವರೆಗೆ ಬೆಂಗಳೂರಿನಲ್ಲಿ 2 ಲಕ್ಷ ಕೋಟಿಗೂ ಹೆಚ್ಚಿನ ಬಂಡವಾಳ ಹೂಡಿಕೆ ಮಾಡಿರುವ 200ಕ್ಕೂ ಹೆಚ್ಚು ದೇಶೀಯ ಮತ್ತು ವಿದೇಶೀಯ ಸಾಫ್ಟ್ ವೇರ್ ಕಂಪನಿಗಳು ಕಳೆದ ಇಪ್ಪತ್ತು ವರ್ಷದಲ್ಲಿ ಬೆಂಗಳೂರಿನಲ್ಲಿ 2ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿವೆ ಯಷ್ಟೆ. ಈಗ ಭಾರತದಲ್ಲೂ ಹೆಚ್ಚುತ್ತೀರುವ ಸಂಬಳ-ಸಾರಿಗೆ ವೆಚ್ಚಗಳಿಂದ ಇನ್‌ಫೋಸಿಸ್ ನಾರಾಯಣಮೂರ್ತಿ ಯಂಥ "ಕನ್ನಡಿಗ" ಉದ್ಯಮಿಯೂ ತನ್ನ ಪ್ರಧಾನ ಉತ್ಪಾದನಾ ಕ್ಷೇತ್ರವನ್ನು ಭಾರತಕ್ಕಿಂತ ಕಡಿಮೆ ಕೂಲಿಗೆ ಸಾಫ್ಟ್ ವೇರಿಗರು ಸಿಗುವ ಚೀನಾ - ವಿಯೆಟ್ನಾಮ್‌ಗಳಿಗೆ, ಕೀನ್ಯಾ.ದ. ಆಫ್ರಿಕಾ ದಂಥ ದೇಶಗಳಿಗೆ ವಲಸೆ ಹೋಗಲು ಯೋಚಿಸುತ್ತಿವೆ. ಇನ್ನು ಈಗಲೂ ಬೆಂಗಳೂರಿನ ಸಾಫ್ಟ್ ವೇರ್ ಕಂಪನಿಗಳಲ್ಲಿ ಕನ್ನಡಿಗರ ಪ್ರಮಾಣ ಶೇ.10ರಷ್ಟೂ ಇಲ್ಲ.

ಇದಲ್ಲದೆ ಬೆಂಗಳೂರಿನ ಹೃದಯಭಾಗದಲ್ಲಿರುವ ವೆಟರ್ನರಿ ಕಾಲೇಜು, ಜಿಕೆವಿಕೆಯಂಥ ಪ್ರದೇಶಗಳಲ್ಲಿ ಸರ್ಕಾರಿ ಜಮೀನನ್ನು ಕಬಳಿಸಿ ಫೈವ್‌ಸ್ಟಾರ್ ಹೋಟೆಲ್ ಕಟ್ಟುವ ದಲ್ಲಾಳಿ ಯೋಜನೆಗೂ ಸರ್ಕಾರ ಸಹಿಹಾಕಿದೆ. ಇದರಿಂದ ಪ್ರೈಮ್ ಏರಿಯಾದಲ್ಲಿರುವ ಸಾವಿರಾರು ಕೋಟಿ ಬೆಲೆಬಾಳುವ ಭೂಮಿ ದುಗ್ಗಾಣಿ ಬೆಲೆಗೆ ವಿದೇಶಿ ಮತ್ತು ರೆಡ್ಡಿ ಕಂಪನಿಗಳಿಗೆ ಪರಭಾರೆಯಾಗುತ್ತದೆಯೇ ವಿನಃ ಕನ್ನಡಿಗರಿಗೇನೂ ಕೆಲಸ ಸಿಗುವುದಿಲ್ಲ. ಹೀಗಾಗಿ ಬೆಂಗಳೂರಿನ ಸುತ್ತಮುತ್ತಲೂ ಆಗುತ್ತಿರುವ ಹೂಡಿಕೆಯಿಂದ 3 ಲಕ್ಷ ಉದ್ಯೋಗಗಳು ಸೃಷ್ಟಿಯಾಗುತ್ತದೆ ಎಂಬುದು ಶುದ್ಧ ಬೊಗಳೆಯೇ ವಿನಃ ಬೇರೇನೂ ಅಲ್ಲ. (ಯಡಿಯೂರಪ್ಪನ ಕ್ಯಾಬಿನೆಟ್ಟಿನಲ್ಲಿರುವ ಎಲ್ಲಾ ಮಂತ್ರಿಗಳೂ ಬೊಗಳೆ ಪ್ರವೀಣರೇ. ಮೊನ್ನೆ ಮಂತ್ರಿ ಕಟ್ಟಾ ನಾಯಿಡು ಬಿಡದಿ ಸಮೀಪ ಗ್ಯಾಸ್ ಆಧಾರಿತ ವಿದ್ಯುತ್ ಸ್ಥಾವರದಿಂದ 20 ಲಕ್ಷ ಉದ್ಯೋಗ ಸೃಷ್ಟಿಯಾಗುತ್ತದೆ ಎಂದು ಹೇಳಿದ್ದರು! ಅದಕ್ಕೂ ಮೂರು ದಿನಗಳ ಹಿಂದೆ ಮತ್ಯಾವುದೋ ಯೋಜನೆಯ ಪ್ರಸ್ತಾಪ ಮಾಡುತ್ತಾ ಮುಂದಿನ ಎರಡು ವರ್ಷಗಳಲ್ಲಿ 50 ಲಕ್ಷ ಉದ್ಯೋಗ ಸೃಷ್ಟಿಯಾಗುತ್ತದೆ ಎಂದು ಹೇಳಿದ್ದರು. ಹೀಗೆ ಈವರೆಗೆ ಕಟ್ಟಾ ಅವರೇ 5 ಕೋಟಿಗೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿ ಮಾಡಿಬಿಟ್ಟಿದ್ದಾರೆ!)

ಬಳ್ಳಾರಿಯಲ್ಲಿ 60 ಲಕ್ಷ ಟನ್‌ಸ್ಟೀಲ್ ಸಾಮರ್ಥ್ಯದ ಘಟಕವನ್ನು ಸ್ಥಾಪಿಸುತ್ತಿರುವ ಮಿತ್ತಲ್ ಕಂಪನಿ 2006ರಲ್ಲಿ ಆರ್ಸೆಲಾರ್ ಎಂಬ ಮತ್ತೊಂದು ದೈತ್ಯ ಕಂಪನಿಯನ್ನು ತನ್ನಲ್ಲಿ ವಿಲೀನಗೊಳಿಸಿ ಕೊಂಡ ನಂತರ ವಿಶ್ವದ ನಂ.1 ಸ್ಟೀಲ್ ಉದ್ಯಮಿಯಾಗಿದೆ. 2009ರಲ್ಲಿ ವಿಶ್ವದ ಸ್ಟೀಲ್ ಉತ್ಪಾದನೆ 130ಕೋಟಿ ಬಿಲಿಯನ್ ಟನ್ನಿನಷ್ಟಿದ್ದರೆ ಅದರಲ್ಲಿ ಅರ್ಸೆಲಾರ್ ಮಿತ್ತಲ್‌ನಪಾಲು ಶೇ.10ರಷ್ಟು, ಅಂದರೆ 13ಕೋಟಿ ಟನ್ನಿನಷ್ಟು! ಅದರ ವಾರ್ಷಿಕ ಆದಾಯ 105 ಬಿಲಿಯನ್ ಡಾಲರ್‌ಗಳು. ಅಂದರೆ 4,20,000 ಕೋಟಿ ರೂಪಾಯಿಗಳು. ಕರ್ನಾಟಕದ ವಾರ್ಷಿಕ ಬಜೆಟ್ಟು 60,0000 ಕೋಟಿ ಎಂಬುದನ್ನು ನೆನಪಿಸಿಕೊಂಡರೆ ಈ ಕಂಪನಿಗಳ ಮುಂದೆ ಯಡಿಯೂರಪ್ಪ ಏಕೆ ಹಲ್ಲುಗಿಂಜು ಕೊಂಡು ಮೊಣಕಾಲೂರಿ ನಿಲ್ಲುತ್ತಾರೆ.

ಇನ್ನು ಬಳ್ಳಾರಿ ವಲಯದಲ್ಲಿ ಹೂಡಿಕೆಯಾಗಲಿರುವ ಬಂಡವಾಳ ಮತ್ತು ಉದ್ಯೋಗ ಸೃಷ್ಟಿಯ ಕಥೆ. ವಾಸ್ತವವಾಗಿ ಈ ಹೂಡಿಕೆದಾರರ ಸಮ್ಮೇಳನ ವಾಸ್ತವದಲ್ಲಿ ಕಬ್ಬಿಣ ಮತ್ತು ಉಕ್ಕಿನ ಉದ್ದಿಮೆಗಳ ಸಮ್ಮೇಳನವೇ ಆಗಿತ್ತು. ಹೂಡಿಕೆದಾರರ ಸಮ್ಮೇಳನಕ್ಕಿಂತ ಮೊದಲಿನಿಂದಲೂ ವಿಶ್ವದ ಸ್ಟೀಲ್ ಉದ್ಯಮದ ದೈತ್ಯರಾದ ಲಕ್ಷ್ಮಿ ಮಿತ್ತಲ್, ಪೊಸ್ಕೋ, ಟಾಟಾಗಳು ಬಳ್ಳಾರಿ ವಲಯದಲ್ಲಿ ಹೂಡಿಕೆ ಮಾಡಲು ಉತ್ಸುಕರಾಗಿದ್ದಾರೆ. ವಿಶ್ವದ ನಂ.1 ಸ್ಟೀಲ್ ಉದ್ಯಮಿಯಾದ ಲಕ್ಷ್ಮಿ ಮಿತ್ತಲ್ ಬಳ್ಳಾರಿಯ ತುಂಗಭದ್ರ ಡ್ಯಾಂಸಮೀಪದಲ್ಲಿರುವ ಕುಡತಿನಿಯ ಬಳಿ 40,000 ಕೋಟಿಗೂ ಹೆಚ್ಚು ಬಂಡವಾಳ ಹೂಡಿಕೆ ಮಾಡಿ 6 ಮಿಲಿಯನ್(60 ಲಕ್ಷ)ಟನ್ ಸ್ಟೀಲ್ ಉತ್ಪಾದನೆ ಮಾಡುವ ಘಟಕಸ್ಥಾಪನೆ ಮಾಡುವುದು ಹೆಚ್ಚುಕಡಿಮೆ ಸಾಕಾರವಾಗಲಿದೆ. ಅದೇರೀತಿಯಕೊರಿಯಾದ ಪೋಸ್ಕೋ ಕಂಪನಿ ಇದೇ ಬಳ್ಳಾರಿ ವಲಯದಲ್ಲಿ 35,000 ಕೋಟಿ ರೂ ಹೂಡಿಕೆ ಮಾಡಿ 6 ಮಿಲಿಯನ್ ಟನ್ನಿನಷ್ಟು ಸಾಮರ್ಥ್ಯ ವಿರುವ ಘಟಕ ಸ್ಥಾಪನೆ ಮಾಡುವ ಪ್ರಸ್ತಾವನೆಗೆ ಸರ್ಕಾರ ಸಹಿ ಹಾಕಿದೆ. ಪೊಸ್ಕೋ ಕಂಪನಿಗೆ ಕರ್ನಾಟಕದಲ್ಲಿ ಹೂಡಿಕೆ ಮಾಡಬೇಕೆಂದರೆ ತನಗೆ ಪ್ರತ್ಯೇಕವಾದ ಅದಿರು ಗಣಿಯನ್ನು ಬಿಟ್ಟುಕೊಡಬೇಕೆಂದೂ ಸಹ ಶರತ್ತು ಹಾಕಿದೆ. ಸರ್ಕಾರ ಈ ಬೇಡಿಕೆಗೆ ಪೂರಕವಾಗಿ ಪ್ರತಿಕ್ರಿಯಿಸಿದ್ದು ಕೇಂದ್ರದೊಡನೆ ಲಾಬಿ ಮಾಡಿ ಕೊಡಿಸಿಕೊಡುವುದಾಗಿ ಭರವಸೆ ನೀಡಿದೆ. ಹಾಗೆಯೇ ಪೊಸ್ಕೋ ಮತ್ತು ಮಿತ್ತಲ್ ಎರಡೂ ಕಂಪನಿಗಳಿಗೆ ತುಂಗಭದ್ರಾ ಡ್ಯಾಂನಿಂದ ತಲಾ ಪ್ರತಿದಿನ 40 ಮಿಲಿಯನ್ ಗ್ಯಾಲನ್ ನೀರನ್ನು (ಎಂದರೆ ಹೆಚ್ಚೂ ಕಡಿಮೆ ತುಂಗಭದ್ರಾ ಡ್ಯಾಮಿನ ಶೇ.10ರಷ್ಟು) ಕೊಡುವುದಾಗಿಯೂ ಆಶ್ವಾಸನೆ ನೀಡಿದೆ. ಹೀಗಾಗಿ ಹೂಡಿಕೆದಾರರ ಸಮ್ಮೇಳನದಿಂದ ಏನಾಗಲೀ, ಆಗದಿರಲ್ಲಿ ಬಳ್ಳಾರಿಯು ವಿಶ್ವದ ಸ್ಟೀಲ್ ಕಂಪನಿಯ ಲೂಟಿ ಭೂಪಟದಲ್ಲಿ ಸ್ಥಾನವನ್ನು ಪಡೆದುಕೊಳ್ಳುತ್ತಿರುವುದಂತೂ ಸತ್ಯ.

ಹೀಗಾಗಿ ಹೂಡಿಕೆದಾರರ ಸಮ್ಮೇಳನದ ನಿಜವಾದ ಅರ್ಥವನ್ನು ಗ್ರಹಿಸಬೇಕೆಂದರೆ ವಿಶ್ವದ ಸ್ಟೀಲ್ ಉದ್ಯಮವನ್ನು, ಮಿತ್ತಲ್‌ನಂಥ ಉದ್ಯಮಿಗಳು ಅದರಲ್ಲಿ ಎದುರಿಸುತ್ತಿರುವ ಬಿಕ್ಕಟ್ಟನ್ನು ಮತ್ತು ಅದರಿಂದ ಪಾರಾಗಲು\ ಅವರು ಬಳ್ಳಾರಿಯನ್ನು ಆಯ್ಕೆ ಮಾಡಿಕೊಂಡಿರುವ ಕಾರಣವನ್ನೂ ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಇವೆಲ್ಲವನ್ನು ಅರ್ಥಮಾಡಿಕೊಳ್ಳುವ ಮೊದಲು ಈ ಉದ್ಯಮಿಗಳ ಗಾತ್ರ ಮತ್ತು ಶಕ್ತಿಯನ್ನೂ ಹಾಗೂ ಅವುಗಳ ಉದ್ಯೋಗ ಸೃಷ್ಟಿಮಾಡುವ ಸಾಮರ್ಥ್ಯವನ್ನು ಒಂದಷ್ಟು ಅರ್ಥಮಾಡಿಕೊಳ್ಳುವುದು ಅಗತ್ಯ!

ಬಳ್ಳಾರಿಯಲ್ಲಿ 60 ಲಕ್ಷ ಟನ್ ಸ್ಟೀಲ್ ಸಾಮರ್ಥ್ಯದ ಘಟಕವನ್ನು ಸ್ಥಾಪಿಸುತ್ತಿರುವ ಮಿತ್ತಲ್ ಕಂಪನಿ 2006ರಲ್ಲಿ ಆರ್ಸೆಲಾರ್ ಎಂಬ ಮತ್ತೊಂದು ದೈತ್ಯ ಕಂಪನಿಯನ್ನು ತನ್ನಲ್ಲಿ ವಿಲೀನಗೊಳಿಸಿಕೊಂಡ ನಂತರ ವಿಶ್ವದ ನಂ.1 ಸ್ಟೀಲ್ ಉದ್ಯಮಿಯಾಗಿದೆ. 2009ರಲ್ಲಿ ವಿಶ್ವದ ಸ್ಟೀಲ್ ಉತ್ಪಾದನೆ 130ಕೋಟಿ ಬಿಲಿಯನ್ ಟನ್ನಿನಷ್ಟಿದ್ದರೆ ಅದರಲ್ಲಿ ಅರ್ಸೆಲಾರ್ ಮಿತ್ತಲ್‌ನಪಾಲು ಶೇ.10ರಷ್ಟು, ಅಂದರೆ 13ಕೋಟಿ ಟನ್ನಿನಷ್ಟು! ಅದರ ವಾರ್ಷಿಕ ಆದಾಯ 105 ಮಿಲಿಯನ್ ಡಾಲರ್‌ಗಳು. ಅಂದರೆ 4,20,000 ಕೋಟಿ ರೂಪಾಯಿಗಳು. ಕರ್ನಾಟಕದ ವಾರ್ಷಿಕ ಬಜೆಟ್ಟು 60,0000 ಕೋಟಿ ಎಂಬುದನ್ನು ನೆನಪಿಸಿಕೊಂಡರೆ ಈ ಕಂಪನಿಗಳ ಮುಂದೆ ಯಡಿಯೂರಪ್ಪ ಏಕೆ ಹಲ್ಲುಗಿಂಜು ಕೊಂಡು ಮೊಣಕಾಲೂರಿ ನಿಲ್ಲುತ್ತಾರೆ ಎಂಬುದು ಅರ್ಥವಾಗುತ್ತದೆ. ಅದೇ ರೀತಿ ಪೊಸ್ಕೋ ಸಹ ಮೂರನೇ ಅತಿ ದೊಡ್ಡ ಸ್ಟೀಲ್ ಕಂಪನಿಯಾಗಿದ್ದು ಆರು ಕೋಟಿ ಟನ್ನಿನಷ್ಟು ಸ್ಟೀಲ್ ಉತ್ಪಾದನೆ ಮಾಡುತ್ತದೆ. ಅದರ ವಾರ್ಷಿಕ ಆದಾಯವೂ 2 ಲಕ್ಷ ಕೋಟಿ ರೂಪಾಯಿಗಳು. ಇದು ಈ ಕಂಪನಿಗಳ ಗಾತ್ರ.

ಕರ್ನಾಟಕದ ವಾರ್ಷಿಕ ಬಜೆಟ್ಟಿನ ಹತ್ತು ಪಟ್ಟು ಸಾಮರ್ಥ್ಯವುಳ್ಳ ಈ ಕಂಪನಿಗಳು ಎಷ್ಟು ಉದ್ಯೋಗಗಳನ್ನು ಈವರೆಗೆ ಸೃಷ್ಟಿಸಿವೆ. ಆರ್ಸೆಲಾರ್ ಮಿತ್ತಲ್ ಕಂಪನಿ 60 ದೇಶಗಳಲ್ಲಿ ಕಾರ್ಯನಿರ್ವಹಿಸುತ್ತದೆ. 13 ಕೋಟಿ ಟನ್ ಸ್ಟೀಲ್ ಉತ್ಪಾದನೆಗೆ 60 ದೇಶಗಳಲ್ಲಿ ಅದು ನೇಮಕ ಮಾಡಿಕೊಂಡಿರುವ ಉದ್ಯೋಗಿಗಳ ಸಂಖ್ಯೆ ಕೇವಲ 2,81,000! ಪೋಸ್ಕೋ ಕಂಪನಿಯು ಒರಿಸ್ಸಾದಲ್ಲಿಯೂ ಇದೇ ರೀತಿಯಲ್ಲಿ ಸ್ಟೀಲ್ ಉದ್ಯಮದಲ್ಲಿ 30,000 ಕೋಟಿ ಹೂಡಿಕೆಯನ್ನು ಮಾಡುತ್ತಿದೆ. ಭಾರತ ಸರ್ಕಾರದ ಸಂಸ್ಥೆಯಾದ NCAER ನ ಅಂದಾಜಿನ ಪ್ರಕಾರವೇ 12 ಮಿಲಿ

ಯನ್ ಟನ್ನಿನಷ್ಟು ಸ್ಟೀಲ್ ಉತ್ಪಾದನೆಗೆ ಮತ್ತು ವರ್ಷಕ್ಕೆ 35-40 ಮಿಲಿಯನ್ ಟನ್ನಿನಷ್ಟು ಅದಿರು ಉತ್ಪಾದನೆಗೆ ಒಟ್ಟಾರೆಯಾಗಿ 18,000 ಉದ್ಯೋಗಗಳನ್ನು ಮಾತ್ರ ಸೃಷ್ಟಿ ಸುತ್ತದೆ. ಆದರೆ ಇದರ ಬಗ್ಗೆ ಒರಿಸ್ಸಾದಲ್ಲಿ ನಡೆದಿರುವ ಮತ್ತೊಂದು ಅಕೆಡೆಮಿಕ್ ಅಧ್ಯಯನ ಈ ವಾದವೂ ಅರ್ಧ ಸತ್ಯವೆಂದು ಪ್ರತಿಪಾದನೆ ಮಾಡುತ್ತದೆ. ಏಕೆಂದರೆ ಪೋಸ್ಕೋ ಕಂಪನಿಯ ಮೂಲದೇಶವಾದ. ಕೋರಿಯಾದಲ್ಲಿ 28 ಮಿಲಿಯನ್ ಟನ್‌ಸ್ಟೀಲ್ ಉತ್ಪಾದನೆಗೆ ಅದು ಕೇವಲ 10,000 ಉದ್ಯೋಗಿಗಳನ್ನು ಮಾತ್ರ ನಿಯೋಜಿಸಿ ಕೊಂಡಿದೆ. 28 ಮಿಲಿಯನ್2 ಟನ್ ಸ್ಟೀಲ್ ಉತ್ಪಾದನೆಗೆ 10,000 ಉದ್ಯೋಗಿಗಳು ಸಾಕಾಗುವುದಾದರೆ 6 ಮಿಲಿ ಯನ್ ಟನ್ ಸ್ಟೀಲ್ ಉತ್ಪಾದನೆಗೆ ಬೇಕಿರುವುದು ಅದರ ಕಾಲು ಭಾಗ ಕಾರ್ಮಿಕರಷ್ಟೆ. ಅಂದರೆ 2,500 ಉದ್ಯೋಗಿ ಗಳು ಮಾತ್ರ. ಹೀಗಾಗಿ ಪೋಸ್ಕೋ ಮತ್ತು ಮಿತ್ತಲ್ ಎರಡೂ ಕಂಪನಿಗಳು ಒಟ್ಟಾಗಿ 12 ಮಿಲಿಯನ್ ಟನ್ನಿನಷ್ಟು ಸ್ಟೀಲ್ ಉತ್ಪಾದನೆಯನ್ನು ಮಾಡಿದರೂ ಸೃಷ್ಟಿಸುವುದು ಹೆಚ್ಚೆಂದರೆ 5,000 ನೇರ ಉದ್ಯೋಗಗಳನ್ನು ಮಾತ್ರ! ಬಿಜೆಪಿ ಸರ್ಕಾರ ಕೊಚ್ಚಿಕೊಳ್ಳುತ್ತಿರುವಂತೆ ಒಂದು ಲಕ್ಷ ಉದ್ಯೋಗವನ್ನು ಅದು ಸೃಷ್ಟಿಸಲು ಸಾಧ್ಯವೇ ಇಲ್ಲ.

ಒಂದು ಲಕ್ಷ ಉದ್ಯೋಗವಿರಲಿ, 50,000 ಉದ್ಯೋಗಗಳು ಸೃಷ್ಟಿಯಾಗಬೇಕೆಂದರೂ ಹೊಸದಾಗಿ ಅಲ್ಲಿ ಗಣಿಗಾರಿಕೆಗೆ ಈ ಕಂಪನಿಗಳಿಗೆ ಪರವಾನಗಿ ಕೊಡ ಬೇಕಷ್ಟೆ. ಪೋಸ್ಕೋ ಮತ್ತು ಮಿತ್ತಲ್ ಜೊತೆ ಆ ಬಗೆಯ ಒಳ ಒಪ್ಪಂದಗಳೂ ಆಗಿವೆಯೆಂಬ ಸ್ಪಷ್ಟ ಮಾಹಿತಿ ಇದೆ. ಪೋಸ್ಕೋ ಕಂಪನಿಯಂತೂ ತಾನು ಸ್ಟೀಲ್‌ಕಂಪನಿ ಹಾಕ ಬೇಕೆಂದರೆ ಭಾರತ ಸರ್ಕಾರ ತನಗೆ ವರ್ಷಕ್ಕೆ 35 ಮಿಲಿ ಯನ್ ಟನ್ ಕಬ್ಬಿಣದ ಅದಿರನ್ನು ರಫ್ತು ಮಾಡಲು ಗಣಿ ಗಾರಿಕೆ ಪರವಾನಗಿ ಕೊಡಬೇಕೆಂದು ಸ್ಪಷ್ಟವಾಗಿ ತಾಕೀತು ಮಾಡಿವೆ. ಅದಕ್ಕೆ ಸರ್ಕಾರವೂ ಒಪ್ಪಿಕೊಂಡ ಮೇಲೆ ಅದು ಹೂಡಿಕೆದಾರರ ಸಮ್ಮೇಳನದಲ್ಲಿ ಭಾಗವಹಿಸಿದ್ದು!

ಅದೇನೇ ಇದ್ದರೂ ಬಳ್ಳಾರಿ ವಲಯದಲ್ಲಿ ಹೂಡ ಲಾಗುವ 1.5 ಲಕ್ಷ ಕೋಟಿ ಹೂಡಿಕೆ ಸೃಷ್ಟಿಸುವುದು ಒಂದು ಲಕ್ಷ ಉದ್ಯೋಗವಲ್ಲ. ಬದಲಿಗೆ ಕೇವಲ10,000 ಉದ್ಯೋ ಗಗಳು, ಅಬ್ಬಬ್ಬಾ ಎಂದರೆ 20,000 ಉದ್ಯೊಗಗಳು!

ಇದರ ಬದಲಿಗೆ ಕರ್ನಾಟಕ ಜನತೆ ಕಳೆದುಕೊಳ್ಳು ತ್ತಿರುವುದೇನು? ಹತ್ತು ಕರ್ನಾಟಕವನ್ನೇ ಕಬಳಿಸುವಷ್ಟು ಶಕ್ತಿ ಹೊಂದಿರುವ ಈ ಕಂಪನಿಗಳು ಬಳ್ಳಾರಿಯತ್ತ ಕಣ್ಣು ಹಾಕಿರುವುದೇಕೆ?

ಇದನ್ನು ಅರ್ಥಮಾಡಿಕೊಳ್ಳಲು ಇಂದು ವಿಶ್ವ ಸ್ಟೀಲ್ ಉದ್ಯಮ ಎದುರಿಸುತ್ತಿರುವ ಬಿಕ್ಕಟ್ಟನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ವಿಶ್ವದಲ್ಲಿ ಸ್ಟೀಲ್ ಉದ್ಯಮ ಹಲವಾರು ಏಳುಬೀಳು ಗಳನ್ನುಕಾಣುತ್ತಾ ಇಂದು ಪ್ರಪಂಚದ ಬಹುಲಾಭದಾಯಕ ಉದ್ಯಮಗಳಲ್ಲಿ ಒಂದಾಗಿ ಬೆಳೆದಿದೆ. 1950-1990ರ ತನಕ ವಿಶ್ವಾದ್ಯಂತ ಸ್ಟೀಲ್ ಉದ್ಯಮವು ಪ್ರಧಾನವಾಗಿ ಸಾರ್ವ ಜನಿಕ ಕ್ಷೇತ್ರದಲ್ಲೇ ಇರುತ್ತಿತ್ತು. ಆದರೆ 1991ರ ನಂತರದಲ್ಲಿ ಅದು ಪ್ರಧಾನವಾಗಿ ಖಾಸಗಿ ಕ್ಷೇತ್ರದ ಒಡೆತನಕ್ಕೆ ಬಂದಿದೆ. ಇದಕ್ಕೆ ಪ್ರಧಾನ ಕಾರಣ ಜಾಗತೀಕರಣ ಮತ್ತು ಉದಾರೀ ಕರಣ ನೀತಿಗಳೇ ಕಾರಣ. ಭಾರತದಂತೆ ವಿಶ್ವಾದ್ಯಂತ ಸಾರ್ವಜನಿಕ ಕ್ಷೇತ್ರದಲ್ಲಿದ್ದ ಸ್ಟೀಲ್ ಉದ್ಯಮಗಳು ಖಾಸಗಿ ಕರಣಗೊಂಡವು. ಈ ಅವಧಿಯಲ್ಲೇ ಅಡ್ರೆಸ್‌ಗಿಲ್ಲದ ಹಲ ವಾರು ಖಾಸಗಿ ಕಂಪನಿಗಳು ವಿಶ್ವದ ಅತಿ ಶ್ರೀಮಂತ ಕಂಪನಿಗಳಾಗಿ ಬೆಳೆದು ಜನತೆಯನ್ನು ಮತ್ತು ಪರಿಸರವನ್ನು ಹಾಳು ಮಾಡಿದವು. ಇಂದು ಚೀನಾವನ್ನು ಹೊರತು ಪಡಿಸಿದರೆ ಶೇ.90ರಷ್ಟು ಸ್ಟೀಲ್ ಉತ್ಪಾದನೆ ನಡೆಯುತ್ತಿರು ವುದು ಖಾಸಗಿ ಕ್ಷೇತ್ರದಲ್ಲೇ ಉದಾಹರಣೆಗೆ 1993ರಲ್ಲಿ ಮಿತ್ತಲ್ ಉತ್ಪಾದಿಸುತ್ತಿದ್ದದ್ದು ಕೇವಲ 1.3 ಕೋಟಿ ಟನ್ ಸ್ಟೀಲನ್ನು. ಇಂದು ಅದು 13 ಕೋಟಿ ಟನ್ ಉತ್ಪಾದಿಸು ತ್ತಿದೆ. ಇದು ಒಟ್ಟಾರೆ ವಿಶ್ವ ಸ್ಟೀಲ್ ಉತ್ಪಾದನೆಯ ಶೇ.10ರಷ್ಟು!!

ಯಾವುದೇ ದೇಶವನ್ನು ಕಟ್ಟಬೇಕೆಂದರೆ ಸ್ಟೀಲ್ ಉತ್ಪಾದನೆ ಅತ್ಯವಶ್ಯ. ಇಂದು ಪ್ರಪಂಚದಲ್ಲಿ ಪ್ರತಿ ಮನು ಷ್ಯನ ತಲಾವಾರು ಸ್ಟೀಲ್ ಬಳಕೆ ಸರಾಸರಿ 150ಕೆಜಿ ಯಷ್ಟು! ಆದರೆ ಭಾರತದಲ್ಲಿ ಸ್ಟೀಲ್‌ನ ತಲಾವಾರು ಬಳಕೆ ಕೇವಲ 35 ಕೆಜಿಯಷ್ಟು! ಚೀನಾದಲ್ಲಿ 250 ಕೆಜಿಯಷ್ಟು, ಹೀಗಾಗಿ ಭಾರತದಂಥ ಅಭಿವೃದ್ಧಿಶೀಲ ದೇಶಗಳಲ್ಲಿ ಸ್ಟೀಲ್ ಬಳಕೆಯ ಪ್ರಮಾಣವನ್ನು ಹೆಚ್ಚಿಸುವ ಸಾಧ್ಯತೆ ಅತಿಹೆಚ್ಚು! ಹೀಗಾಗಿಯೇ ಪ್ರಪಂಚದ ಎಲ್ಲಾ ಸ್ಟೀಲ್ ಉದ್ಯಮಗಳೂ ಏಷಿಯಾ ದೇಶಗಳನ್ನೇ ಗುರಿಯಾಗಿರಿಸಿಕೊಂಡಿದೆ. ಇಂದು ಅಮೆರಿಕ ಮತ್ತು ಯೂರೋಪ್ ದೇಶಗಳಲ್ಲಿ ಸ್ಟೀಲ್ ಬಳಕೆ ಹೆಚ್ಚೂ ಕಡಿಮೆ ಸ್ಯಾಚುರೇಷನ್ ಹಂತವನ್ನು ಮುಟ್ಟಿರುವುದರಿಂದಲೇ ಮಿತ್ತಲ್, ಪೋಸ್ಕೋ ಎಲ್ಲಾ ಭಾರತ, ಚೀನಾ, ವಿಯೆಟ್ನಾಮ್, ಮಾಜಿ ಸೋವಿಯತ್ ದೇಶಗಳತ್ತ ಹೂಡಿಕೆ ಮಾಡುತ್ತಿವೆ.

ಆದರೆ ಸ್ಟೀಲ್ ಕಂಪನಿಗಳ ಲಾಭದಾಯಕತೆಗೆ ಅತಿದೊಡ್ಡ ಹೊಡೆತ ನೀಡಿದ್ದು 2008ರಲ್ಲಿ ಪ್ರಾರಂಭವಾದ ಹಣಕಾಸು ಬಿಕ್ಕಟ್ಟು. ಆದರೆ ಪ್ರಪಂಚದ ಎಲ್ಲಾ ದೇಶಗಳು ಈ ಕಂಪನಿಗಳನ್ನು ಉಳಿಸಲು ಜನರ ತೆರಿಗೆಯನ್ನು ಬಳಸಿ ಕೊಂಡಂತೆ ಮಿತ್ತಲ್. ಪೋಸ್ಕೊ ಕಂಪನಿಗಳೂ ಸಹ ಫ್ರಾನ್ಸ್, ಲಕ್ಸಂಬರ್ಗ್, ಇಂಗ್ಲೆಂಡ್ ಹಾಗೂ ಭಾರತಗಳ ಸರ್ಕಾರಗಳಿಂದ ಹಲವಾರು ರಿಯಾಯತಿಗಳನ್ನೂ ಮತ್ತು ಪುಕ್ಕಟೆ ಬಂಡವಾಳ ಸೌಲಭ್ಯವನ್ನು ಪಡೆದುಕೊಂಡವು.

ಒಂದು ಲಕ್ಷ ಉದ್ಯೋಗವಿರಲಿ, 50,000 ಉದ್ಯೋಗಗಳು ಸೃಷ್ಟಿಯಾಗ ಬೇಕೆಂದರೂ ಹೊಸದಾಗಿ ಅಲ್ಲಿ ಗಣಿಗಾ ರಿಕೆಗೆ ಈ ಕಂಪನಿಗಳಿಗೆ ಪರವಾನಗಿ ಕೊಡ ಬೇಕಷ್ಟೆ. ಪೋಸ್ಕೋ ಮತ್ತು ಮಿತ್ತಲ್ ಜೊತೆ ಆ ಬಗೆಯ ಒಳ ಒಪ್ಪಂದಗಳೂ ಆಗಿವೆಯೆಂಬ ಸ್ಪಷ್ಟ ಮಾಹಿತಿ ಇದೆ. ಪೋಸ್ಕೋ ಕಂಪನಿ ಯಂತೂ ತಾನು ಸ್ಟೀಲ್‌ಕಂಪನಿ ಹಾಕ ಬೇಕೆಂದರೆ ಭಾರತ ಸರ್ಕಾರ ತನಗೆ ವರ್ಷಕ್ಕೆ 35 ಮಿಲಿಯನ್ ಟನ್ ಕಬ್ಬಿಣ ದ ಅದಿರನ್ನು ರಫ್ತು ಮಾಡಲು ಗಣಿ ಗಾರಿಕೆ ಪರವಾನಗಿ ಕೊಡಬೇಕೆಂದು ಸ್ಪಷ್ಟವಾಗಿ ತಾಕೀತು ಮಾಡಿವೆ. ಅದಕ್ಕೆ ಸರ್ಕಾರವೂ ಒಪ್ಪಿಕೊಂಡ ಮೇಲೆ ಅದು ಹೂಡಿಕೆದಾರರ ಸಮ್ಮೇಳನದಲ್ಲಿ ಭಾಗವಹಿಸಿದ್ದು!

ಹೀಗೆ ಸರ್ಕಾರಗಳ ದಲ್ಲಾಳಿ ನೀತಿಯಿಂದಾಗಿಯೇ ಮರುಜೀವ ಪಡೆದುಕೊಂಡ ಸ್ಟೀಲ್ ಕಂಪನಿಗಳು 2009 ರಲ್ಲಿ ಮತ್ತೊಂದು ಬಿಕಟ್ಟನ್ನು ಎದುರಿಸಿದವು. ಅದೇ ಅದಿರು ಸರಬರಾಜಿನ ಬಿಕ್ಕಟ್ಟು. ಸ್ಟೀಲ್ ಉತ್ಪಾದಿಸಲು ಪ್ರಮುಖವಾಗಿ ಬೇಕಿರುವುದು ಕಬ್ಬಿಣ ಅದಿರು. ಇಂದು ಸ್ಟೀಲ್ ಉದ್ಯಮಕ್ಕಿಂತ ಹೆಚ್ಚು ಕಬ್ಬಿಣದ ಅದಿರು ಉದ್ಯಮ ಕೆಲವೇ ಕೆಲವು ಕಂಪನಿಗಳ ಒಡೆತನದಲ್ಲಿವೆ. ಇಡೀ ಪ್ರಪಂಚದ ಅದಿರು ಸರಬರಾಜು ಒಡೆತನ ವೇಲ್, ಬಿಹೆಚ್‌ಪಿ ಬಿಲಿಟನ್ ಮತ್ತು ರಿಯೋ ಟಿಂಟೋ ಕಂಪನಿಗಳ ಹಿಡಿತದಲ್ಲಿದೆ. ಈವರೆಗೆ ಇವು ವರ್ಷಕ್ಕೊಮ್ಮೆ ತಮ್ಮದಿರು ದರವನ್ನು ಪುನರ್ ವಿಮರ್ಷಿಸುತ್ತಿದ್ದವು. ಆದರೆ ಇದೇ ಜನವರಿಯಲ್ಲಿ ಅವು ಪರಸ್ಪರ ಮಾತಾಡಿಕೊಂಡು ಏಕಾಏಕಿ ಮೂರು ತಿಂಗಳಿಗೊಮ್ಮೆ ದರದ ಪರಿಷ್ಕರಣೆ ಮಾಡುವ ನೀತಿಯನ್ನು ಪ್ರಕಟಿಸಿದವು. ಇದರಿಂದ ಕಬ್ಬಿಣದ ಅದಿರಿಬ ಸರಬ್ರಾಜು ಎವ್ವ ಏಕಾಏಕಿ ಶೇ.90ರಷ್ಟು ಹೆಚ್ಚಾಯಿತು. 2009ರಲ್ಲಿ ಒಂದು ಟನ್ ಅದಿರಿಗೆ ಕೇವಲ 50 ಡಾಲರ್ ಇದ್ದದ್ದು 2009ರ ಅಂತ್ಯದ ವೇಳೆಗೆ ಟನ್ನಿಗೆ 120 (4,800ರೂ.) ಡಾಲರ್‌ಗಳಿಗೇರಿತು. ಇದರಿಂದ ಸ್ಟೀಲ್ ಕಂಪನಿಗಳ ಲಾಭದ ದರದಮೇಲೂ ಪೆಟ್ಟುಬಿದ್ದಿತು. ಇದ ರಿಂದ ಶಾಶ್ವತವಾಗಿ ಹೊರಬರುವ ಸಲುವಾಗಿಯೇ ಮಿತ್ತಲ್ ಪೋಸ್ಕೊದಂಥ ಕಂಪನಿಗಳು ಲಾಭವನ್ನು ಹೆಚ್ಚು ಮಾಡಿಕೊಳ್ಳ ಬೇಕೆಂದರೆ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲೇ ಬೇಕಿತ್ತು. ಅದರ ಸಲುವಾಗಿಯೇ ಅಗ್ಗದ ದರ ದಲ್ಲಿ ಅದಿರು, ನೀರು, ವಿದ್ಯುತ್ತನ್ನು ಪೂರೈಸುವ - ಕಡಿಮೆ ಬಡ್ಡಿದರದಲ್ಲಿ ಬಂಡವಾಳ ನೀಡುವ - ಖಚಿತ ಮಾರು ಕಟ್ಟೆಯೂ ಸಿಗುವ ದೇಶಗಳನ್ನು ಅರಸುತ್ತಾ ಹೊರಟವು.

ಇದಕ್ಕೆ ದಾರಿಯಲ್ಲಿ ಎದುರಾದದ್ದು ಯಡಿಯೂರಪ್ಪ ಈಗ ಈ ದಲ್ಲಾಳಿ ಮುಖ್ಯಮಂತ್ರಿ ಅಗ್ಗದ ದರದಲ್ಲಿ ಬಂಡ ವಾಳ. ದಿನಕ್ಕೆ 40 ಮಿಲಿಯನ್ನು ಗ್ಯಾಲನ್ ತುಂಗಭದ್ರಾ ನೀರು, 10, 000 ಎಕರೆಗೂ ಹೆಚ್ಚು ಜಮೀನು ಮತ್ತು ಪ್ರತ್ಯೇಕ ಗಣಿ ಎಲ್ಲವನ್ನು ಖಾತರಿ ಪಡಿಸಿ ಪೋಸ್ಕೊ ಹಾಗೂ ಮಿತ್ತಲ್ ಅನ್ನು ಕರ್ನಾಟಕ್ಕಕ್ಕೆ ಕರೆತಂದಿದ್ದಾರೆ. ಇವುಗಳು ವಿಶೇಷ ಆರ್ಥಿಕ ವಲಯದಲ್ಲಿ ತಲೆ ಎತ್ತು ವುದರಿಂದ ಇದರಿಂದ ನಾಡಿಗೆ ತೆರಿಗೆ ಲಾಭವೂ ಆಗುವುದಿಲ್ಲ. 10,000 ಎಕರೆ ಉಳುವ ಯೋಗ್ಯ ಭೂಮಿ ರೈತರಿಂದ ಕಸಿಯಲಾಗುವುದರಿಂದ ಅದನ್ನೇ ಆಧರಿಸಿ ಬದುಕುತ್ತಿರುವ ಲಕ್ಷಕ್ಕೂ ಹೆಚ್ಚು ರೈತರು ಬೀದಿಪಾಲಾಗು ತ್ತಾರೆ. ಇದರ ಜೊತೆಗೆ ರೈತರಿಗೆ ದೊರಕಬೇಕಿದ್ದ ಡ್ಯಾಂ ನೀರು ಈ ಕಂಪನಿಗಳ ಪಾಲಾಗಿ ತುಂಗಭದ್ರಾ ನೀರನ್ನೇ ಆಧರಿಸಿ ಬದುಕುತ್ತಿರುವ 10 ಲಕ್ಷಕ್ಕೂ ಹೆಚ್ಚು ರೈತರ ಬದುಕು ಆತ್ಮಹತ್ಯೆಗೆ ಹತ್ತಿರವಾಗುತ್ತದೆ. ವಿದ್ಯುತ್ತಿನದ್ದೂ ಇದೇ ಕಥೆ.

ಜನರ ಬದುಕು ಏನೇ ಆಗಲಿ ಇದರಿಂದ ಕರ್ನಾಟ ಕಕ್ಕಂತೂ ಅಭಿವೃದ್ಧಿಶೀಲವೆಂಬ ಪಟ್ಟ, ಯಡಿಯೂರಪ್ಪಗೆ ಯಶಸ್ವೀ ಮುಖ್ಯಮಂತ್ರಿಯೆಂಬ ಹೆಸರೂ ದಕ್ಕುತ್ತದೆ. ನವ ನಾಜೂಕಯ್ಯಗಳಾದ ಯಡಿಯೂರಪ್ಪಗಳು ಮಿತ್ತಲ್ ಮತ್ತು ಪೋಸ್ಕೊಗಳಿಗೆ ನವನಾಡಪ್ರಭುಗಳ ಪಟ್ಟ ಕಟ್ಟುತ್ತಾರೆ. ಇದೆಲ್ಲಾ ಆದ ಮೇಲೆ ಕನ್ನಡಿಗರಿಗೆ ಸ್ವರ್ಗಕ್ಕೆ ಮೂರೇ ಗೇಣಲ್ಲವೇ? □

ಎಡ್ಗರ್ ಥರ್ಸ್ಟನ್‌ನ ಮೇರು ಕೃತಿಗೆ ನೂರು ವರ್ಷ

ಮ.ಶ್ರೀ. ಮುರಳಿ ಕೃಷ್ಣ

ಭಾರತ ವೈವಿಧ್ಯಗಳ ಅಗರ ಇಲ್ಲಿ ಶತಮಾನಗಳಿಂದ ಬಹುಷ್ಯ ನೆಲೆಗೊಂಡಿದೆ. ನಮ್ಮ ರಾಷ್ಟ್ರದ ಭೂಪ್ರದೇಶ ವಿಶಾಲ, ಅದರ ಜೊತೆ ತಳುಕುಹಾಕಿಕೊಂಡಿದೆ ಅನೇಕತೆ, ಆದುದರಿಂದ ಅನೇಕರು ಭಾರತವನ್ನು 'ಉಪಖಂಡ' ಎಂದೇ ಗುರುತಿಸುತ್ತಾರೆ. ಇಲ್ಲಿ ವಿವಿಧ ಧರ್ಮಗಳಿವೆ,ಜಾತಿಗಳು,ಉಪಜಾತಿಗಳು,ಬುಡಕಟ್ಟುಗಳ ಸಂಖ್ಯೆಯು ಅಪಾರ ನಮ್ಮದು ಸಾಂಸ್ಕೃತಿಕವಾಗಿಯೂ ಸಂಪನ್ನರಾಷ್ಟ್ರ, ಮಾನವಶಾಸ್ತ್ರಜ್ಞನಿಗೆ ನಮ್ಮ ಜಾತಿವ್ಯವಸ್ಥೆಯ ಅಧ್ಯಯನ ವಿಸ್ಮಯದ ವಿಷಯ. ಮಾನವಶಾಸ್ತ್ರದಲ್ಲಿ ಜನಾಂಗಶಾಸ್ತ್ರ (ethnography) ಒಂದು ವಿಭಾಗ ಈ ಶಾಸ್ತ್ರದಲ್ಲಿ ಬ್ರಿಟಿಷ್ ಅಧಿಕಾರಿ ಎಡ್ಗರ್ ತರ್ಸ್ಟನ್ ಪಾರಂಗ ತನಾಗಿದ್ದ, ಅವನಿಗೆ ಸಂಗ್ರಹಾಲಯಶಾಸ್ತ್ರದಲ್ಲೂ ಪರಿಣಿತಿಯಿತ್ತು.

ಆತ 1885ರಲ್ಲಿ ಮದರಾಸಿನ ಸರ್ಕಾರಿ ಸಂಗ್ರಹಾಲಯದ ಸೂಪರಿನ್‌ಟೆಂಡೆಂಡಾಗಿ ನಿಯೋಜಿತನಾದ, ಆ ಕಾಲಘಟ್ಟದಲ್ಲಿ ಬ್ರಿಟಿಷ್ ಸರ್ಕಾರ ಭಾರತದ ಜಾತಿಗಳು ಮತ್ತು ಬುಡಕಟ್ಟುಗಳ ಕ್ರೋಡೀಕರಣ (codificatiu)ಕುರಿತು ಒಂದು ಯೋಜನೆಯನ್ನು ರೂಪಿಸುವ ಉತ್ಸುಕತೆಯನ್ನು ಹೊಂದಿತ್ತು. ಅದಕ್ಕೆ 'ಪೀಪಲ್ ಆಫ್ ಇಂಡಿಯಾ' ಎಂಬ ಹೆಸರನ್ನು ನೀಡಲಾಗಿತ್ತು. 1901ರಲ್ಲಿ ತರ್ಸ್ಟನ್ ಈ ಯೋಜನೆಯಲ್ಲಿ ಒಬ್ಬ ಅಧಿಕಾರಿಯಾಗಿ ನೇಮಕಗೊಂಡ. 1906ರಲ್ಲಿ ದಕ್ಷಿಣ ಭಾರತದ ಜಾತಿಗಳು ಮತ್ತು ಬುಡಕಟ್ಟುಗಳ ಕುರಿತು ಸುಮಾರು 40 ಛಾಯಾಚಿತ್ರಗಳಿದ್ದ ಜನಾಂಗಶಾಸ್ತ್ರದ ಟಿಪ್ಪಣಿಗಳನ್ನು ಪ್ರಕಟಿಸಿದ, ಛಾಯಾಗ್ರಹಣದ ಬಹುಪಾಲು ಕೆಲಸವನ್ನು ನಿರ್ವಹಿಸಿದ್ದು ಆತನ ಸಹಾಯಕರಾಗಿದ್ದ ಕೆ. ರಂಗಾಚಾರಿ ನಂತರ 1909ರಲ್ಲಿ ತರ್ಸ್ ಟನ್‌ನ ಏಳು ಸಂಪುಟಗಳ ಮೇರು ಕೃತಿ ಕ್ಯಾಸ್ಟ್ರ ಆಂಡ್ ಟ್ರೈಬ್ಸ್ ಆಫ್ ಸೌತ್ ಇಂಡಿಯಾ ಪ್ರಕಟವಾಯಿತು. ಅದರಲ್ಲಿ ಆತ ಕೈಗೊಂಡ ಸರ್ವೇ ಕ್ಷಣಗಳ, ಜನರ ಆಚಾರ–ವಿಚಾರಗಳು, ಗುಣಲಕ್ಷಣಗಳು ಇತ್ಯಾದಿಗಳಿದ್ದವು. ಸುಮಾರು 1,50,000 ಚದುರ ಮೈಲಿ ಪ್ರದೇಶದಲ್ಲಿ ವಾಸವಾಗಿದ್ದ ಸುಮಾರು 40 ಮಿಲಿಯ ಜನರು 300 ಜಾತಿಗಳು ಮತ್ತು ಬುಡಕಟ್ಟುಗಳ ವಿವರಗಳಿದ್ದವು. 120 ಛಾಯಾಚಿತ್ರಗಳೂ ಇದ್ದವು.

1885ರಲ್ಲಿ ಮದರಾಸಿನ ಸರ್ಕಾರಿ ಸಂಗ್ರಹಾಲಯದ ಸೂಪರಿನ್ ಟೆಂಡೆಂಡಾಗಿ ನಿಯೋಜಿತನಾದ, ಆ ಕಾಲಘಟ್ಟದಲ್ಲಿ ಬ್ರಿಟಿಷ್ ಸರ್ಕಾರ ಭಾರತದ ಜಾತಿಗಳು ಮತ್ತು ಬುಡಕಟ್ಟುಗಳ ಕ್ರೋಡೀಕರಣ (codificatiu)ಕುರಿತು ಒಂದು ಯೋಜನೆಯನ್ನು ರೂಪಿಸುವ ಉತ್ಸುಕತೆಯನ್ನು ಹೊಂದಿತ್ತು. ಅದಕ್ಕೆ 'ಪೀಪಲ್ ಆಫ್ ಇಂಡಿಯಾ' ಎಂಬ ಹೆಸರನ್ನು ನೀಡಲಾಗಿತ್ತು. 1901 ರಲ್ಲಿ ತರ್ಸ್ಟನ್ ಈ ಯೋಜನೆಯಲ್ಲಿ ಒಬ್ಬ ಅಧಿಕಾರಿಯಾಗಿ ನೇಮಕಗೊಂಡ. 1906ರಲ್ಲಿ ದಕ್ಷಿಣ ಭಾರತದ ಜಾತಿಗಳು ಮತ್ತು ಬುಡಕಟ್ಟುಗಳ ಕುರಿತು ಸುಮಾರು 40 ಛಾಯಾಚಿತ್ರಗಳಿದ್ದ ಜನಾಂಗಶಾಸ್ತ್ರದ ಟಿಪ್ಪಣಿಗಳನ್ನು ಪ್ರಕಟಿಸಿದ, ಛಾಯಾಗ್ರಹಣದ ಬಹುಪಾಲು ಕೆಲಸವನ್ನು ನಿರ್ವಹಿಸಿದ್ದು ಆತನ ಸಹಾಯಕರಾಗಿದ್ದ ಕೆ. ರಂಗಾಚಾರಿ ನಂತರ 1909ರಲ್ಲಿ ತರ್ಸ್ ಟನ್‌ನ ಏಳು ಸಂಪುಟಗಳ ಮೇರು ಕೃತಿ ಕ್ಯಾಸ್ಟ್ರ ಆಂಡ್ ಟ್ರೈಬ್ಸ್ ಆಫ್ ಸೌತ್ ಇಂಡಿಯಾ ಪ್ರಕಟವಾಯಿತು.

'ನೇಚರ್' ಪತ್ರಿಕೆ ತನ್ನ ಸೆಪ್ಟಂಬರ್ 1910ರ ಸಂಚಿಕೆಯಲ್ಲಿ ಈ ಕೃತಿಯನ್ನು ವಿಮರ್ಶಿಸುತ್ತ "ಇದೊಂದು ಚಿರಸ್ಥಾಯಿ ಕೃತಿ ದಕ್ಷಿಣ ಭಾರತದ ಬುಡಕಟ್ಟು ಜೀವನದ ವೈವಿಧ್ಯಮಯ ಘಟ್ಟಗಳು ಜನರ ಸಂಪ್ರದಾಯಗಳು ಮತ್ತು ಪರಂಪರೆಗಳು ಇದರಲ್ಲಿ ದಾಖಲಿಸಲಾಗಿದೆ. ಇಲ್ಲಿರುವ ಕೆಲವು ವಿಷಯಗಳನ್ನು ಮುಂದೆ ಬರಬಹುದಾದ ಸಂಶೋಧನೆಗಳು ಪ್ರನವ್ಯಾಖ್ಯಾನಿಸಬಹುದು. ಆದ್ಯಾಕೊ ಇದು ಹೊರಾಂಗಣ ಸಂಶೋಧನೆಯ ಒಂದು ಉತ್ತಮ ಮಾದರಿಯಾಗಿ, ಮಾಹಿತಿಗಳ ಗಣಿಯಾಗಿ ಉಳಿಯುತ್ತದೆ" ಎಂದು ಅಭಿಪ್ರಾಯಪಟ್ಟಿತು. ಈ ಕೃತಿಯನ್ನು ಅಧ್ಯಯನ ಮಾಡಿದಾಗ, ನೂರು ವರ್ಷಗಳ ಹಿಂದೆ ಇದ್ದ ದಕ್ಷಿಣ ಭಾರತದ ಜಾತಿಗಳು ಬುಡಕಟ್ಟುಗಳ ಜೀವನಶೈಲಿಗಳು ಮತ್ತು ಕಲಾಂತರದಲ್ಲಿ ತಲೆದೋರಿದ ಪಲ್ಲಟಗಳ ದಟ್ಟ ಚಿತ್ರಣ ಸಿಗುತ್ತದೆ.

ಬ್ರಿಟಿಷರ 'ಪೀಪಲ್ ಆಫ್ ಇಂಡಿಯಾ' ಯೋಜನೆಗೆ ಪ್ರೇರಕ ಶಕ್ತಿಯಾಗಿದ್ದು 1891ರಲ್ಲಿ ಪ್ರಕಟವಾದ ಸರ್ ಹರ್ಬರ್ಟ್ ರಿಸ್ಲೆನ ಕೃತಿ– 'ಕ್ಯಾಸ್ಟ್ರ ಆಂಡ್ ಟ್ರೈಬ್ಸ್ ಆಫ್ ಬೆಂಗಾಲ್' ಈ ಬೃಹತ್ ಯೋಜನೆಯಡಿ ಭಾರತದ ಎಲ್ಲ ಜಾತಿಗಳು ಮತ್ತು ಬುಡಕಟ್ಟುಗಳ ವಿವರಗಳು ದಾಖಲುಗೊಂಡವು. ಈ ಪಟ್ಟಿಯಲ್ಲಿ 1909ರಲ್ಲಿ ಪ್ರಕಟವಾದ ಎಲ್.ಕೆ. ಅನಂತರಕೃಷ್ಣ ಐಯ್ಯರ್ 'ಕೊಚ್ಚಿನ್ ಕ್ಯಾಸ್ಟ್ಸ್ ಆಂಡ್ ಟ್ರೈಬ್ರ್', 1931 ರಲ್ಲಿ ಬೆಳಕು ಕಂಡ ಹೆಚ್.ವಿ ನಂಜುಡಯ್ಯರವರ "ಮೈಸೂರು ಕ್ಯಾಸ್ಟ್ಸ್ ಆಂಡ್ ಟ್ರೈಬ್ಸ್' ರಾಬಟ್ ರಸ್ಸೆಲ್ ಮತ್ತು ಹೀರಾಲಾಲಾರ "ಟ್ರೈಬ್ಸ್ ಆಂಡ್ ಕ್ಯಾಸ್ಟ್ಸ್ ಆಫ್ ಸೆಂಟ್ರಲ್ ಪ್ರಾವಿನ್ಸ್ (1916), ಹೋರೇಸ್ ರೋಸ್‌ರ" 'ಟ್ರೈಬ್ಸ್ ಆಂಡ್ ಕೈಸ್ಟ್ಸ್ ಆಫ್ ಪಂಜಾಬ್ ಮತ್ತು ನಾರ್ಥ್–ವೆಸ್ಟ್ ಫ್ರಾಂಟಿಯರ್ ಪ್ರಾವಿನ್ಸ್ (1919) ಮತ್ತು ಆರಿ ಈಥೋವನರ ಟ್ರೈಬ್ಸ್ ಆಂಡ್ ಕ್ಯಾಸ್ಟ್ಸ್ ಆಫ್ ಬಾಂಬೆ' (1922) ಸೇರ್ಪಡೆಯಾಗಿವೆ.

ಆದರೆ ಇಂತಹ ಕೃತಿಗಳ ಬಗೆಗೆ ಅಪಸ್ವರಗಳೂ ಎದ್ದಿವೆ. ಇದೇ ರೀತಿಯ ಪ್ರತಿಕ್ರಿಯೆಗಳು ಜನಗಣತಿಗಳ ಬಗೆಯೂ ವ್ಯಕ್ತವಾಗಿರುವುದನ್ನು ಗಮನಿಸಬಹುದು. ಇವು ಬ್ರಿಟಿಷ್ ಕಾಲದಲ್ಲಿ ಜಾತಿ– ಆಧಾರಿತ ಕಂದರಗಳಿಗೆ ಎಡೆ ಮಾಡಿಕೊಟ್ಟವು ಎಂಬುದು ಕೆಲವರ ಆಕ್ಷೇಪಣೆ ವಸಾಹತುಶಾಹಿ ನೀತಿಗಳಿಂದ ಮತ್ತು ಗಣ್ಯರಿಂದಲೇ ಜಾತಿ ಒಂದು ಪ್ರಮುಖ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿತು ಎಂಬ ವಾದವನ್ನು ಕೆಲವು ವಿಶೇಷಜ್ಞರು ಮಂಡಿಸುತ್ತಾರೆ. ಜಾತಿ ಎಂಬುದು ಕಾಲ್ಪನಿಕ ಪರಿಕಲ್ಪನೆ ಅದು ವಸಾಹತುಶಾಹಿ ಶೈಕ್ಷಣಿಕ ಸಂವಾದಗಳ ಉತ್ಪನ್ನ ಆ ಕಾಲದಲ್ಲಿ ಜರುಗುತ್ತಿದ್ದ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳ ಕ್ರಿಯಾ ಶಕ್ತಿಯನ್ನು ಕಡೆಗಣಿಸಲು ಜಾತಿಯ ಬಗೆಗೆ ಹೆಚ್ಚು ಒತ್ತನ್ನು ನೀಡಲಾಯಿತು ಎಂಬುದು ಇನ್ನು ಕೆಲವರ ನಿಲುವು, ಆದರೆ ನಮ್ಮ ಸಮಾಜದಲ್ಲಿ, ಅದರಲ್ಲೂ ಮುಖ್ಯವಾಗಿ ಹಿಂದೂ ಸಮಾಜದಲ್ಲಿ ಜಾತಿಯ ಪಾತ್ರ ಪ್ರಧಾನ, ಸಾಮಾಜಿಕ ಚಲನಶಕ್ತಿಗೆ (dynauicr)ಸಂಬಂಧಿಸಿದಂತೆ ಅದರ ಪಾತ್ರವನ್ನು ಕಡೆಗಣಿಸುವಂತಿಲ್ಲ. ಈ ಪ್ರಕ್ರಿಯೆಯಲ್ಲಿ ಶ್ರೇಣೀಕರಣ, ಸಂಘರ್ಷ ಮತ್ತು ಸ್ಪರ್ಧೆಗಳು ಮೇಳೈಸುತ್ತವೆ. ಬ್ರಿಟಿಷ್‌ರ ಕಾಲದಿಂದಲೂ ಇದು ರಾಜಕೀಯ ರಂಗದಲ್ಲಿ ಹಾಸುಹೊಕ್ಕಾಗಿದೆ ಆದುದರಿಂದ ಎಡ್ಗರ್ ತರ್ಸ್‌ಸ್ಟನ್ ರಂಥವರ ಕೃತಿಗಳು ಭಾರತದ ಮಾನವತಾಶಾಸ್ತ್ರಕ್ಕೆ ಸಂಬಂಧಿಸಿದ ವಿವಿಧ ಆಯಾಮಗಳನ್ನು ಪ್ರತಿಫಲಿಸುತ್ತವೆ ಅಷ್ಟೆ. ಈ ನಿಟ್ಟಿನಲ್ಲಿ ನಮ್ಮ ರಾಷ್ಟದಲ್ಲಿರುವ ಅನೇಕ ವಿಘಟನೆಗಳಿಗೆ ತರ್ಸ್‌ಟನ್ ಅಥವಾ ರಿಸ್ಲೆ ಅವರನ್ನು ಹೊಣೆಗಾರರನ್ನಾಗಿ ಮಾಡುವುದು ಸಾಧ್ಯವೆ? ಭಾರತದ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿ ವಲಯದಲ್ಲಿ ಜಾತಿ ಒಂದು ಅವಿಭಾಜ್ಯ ಅಂಗವಾಗಿ ಹೋಗಿದೆ ಎಂದರೆ ಅತಿಶಯೋಕ್ತಿಯಾಗುವುದಿಲ್ಲ. ರಿಸ್ಲೆ "ಎಲ್ಲಿಯವರೆಗೆ ಜಾತಿಯ ಅಧಿಪತ್ಯ ಇರುತ್ತದೆಯೋ, ಅಲ್ಲಿಯವರೆಗೂ ಸಮಾಜದ ಎಲ್ಲ ವರ್ಗಗಳ ನಡುವೆ ಐಕಮತ್ಯವನ್ನು ಬೆಸೆಯುವುದು ಪ್ರಯಾಸಕರ ಪ್ರಕ್ರಿಯೆಯೇ ಸರಿ. ಈಜಾತಿ ವ್ಯವಸ್ಥೆ ಭಾರತದ ರಾಷ್ಟ್ರೀಯತೆಯ ಬೆಳವಣಿಗೆಗೆ ಒಂದು ದೊಡ್ಡ ಸವಾಲಾಗಿ ಪರಿಣಮಿಸುತ್ತದೆ" ಎಂದು ಆ ಕಾಲದಲ್ಲಿ ಬರೆದದ್ದು ವರ್ತಮಾನಕ್ಕೆ ಹಿಡಿದ ಕೈಗನ್ನಡಿಯಾಗಿಲ್ಲವೆ? ಜನಸಂಖ್ಯಾಶಾಸ್ತ್ರಕ್ಕೆ ಸಂಬಂಧಿಸಿದಂತೆ ಮಾತ್ರವಲ್ಲದೆ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಶ್ಲೇಷಣೆಗೂ ತರ್ಸ್‌ಟನ್‌ರಂಥವರು ಜನಗಣತಿಯ ಬಗೆಗೆ ಮಾಡಿದ ಕೆಲಸಗಳು ಅಪೂರ್ವ ಕೊಡುಗೆಗಳನ್ನು ನೀಡಿವೆ, ಎಂಬುದನ್ನು ಭಾರತದ ಶ್ರೇಷ್ಠ ಸಮಾಜಶಾಸ್ತ್ರಜ್ಞರಲ್ಲಿ ಒಬ್ಬರಾಗಿದ್ದ ದಿವಂಗತ ಎಂ. ಎನ್ ಶ್ರೀನಿವಾಸ್ ದಾಖಲಿಸಿದ್ದಾರೆ. □

ಇಸಮ್‌ಗಳನ್ನು ನುಂಗುತ್ತಿರುವ ತ್ರಿಕರಣಗಳು

ಮಲ್ಲಿಕಾರ್ಜುನ ಗುಮ್ಮಗೋಳ

ಜಾಗತೀಕರಣ, ಉದಾರೀಕರಣ, ಹಾಗೂ ಖಾಸಗೀಕರಣ ಎಂಬ ತ್ರಿಕರಣಗಳು ಜಗತ್ತಿನ ಎಲ್ಲೆಡೆಗೂ ತನ್ನ ಕಬಂಧ ಬಾಹುಗಳನ್ನು ಚಾಚುತ್ತಿವೆ. ಮತ್ತೆ ಸಾಮ್ರಾಜ್ಯಶಾಹಿತ್ವ ಬಹುರೂಪಿ ಮುಖವಾಡಗಳನ್ನು ಹಾಕಿಕೊಂಡು ಸುಲಿಗೆಗೆ ನಿಂತಿದೆ. ಈ ದಾಹಕ್ಕೆ ಕಮುನಿಸಮ್, ಮಾರ್ಕ್ಸಿಸಂ ಮತ್ತು ಸೋಸಿಯಲಿಸಮ್ ನಂತಹ ಇಸಮ್‌ಗಳು ತಮ್ಮ ಪ್ರಯೋಜಕತೆಯನ್ನು ಕಳೆದುಕೊಳ್ಳುತ್ತಿವೆ. ಅವು ಕೇವಲ ಬೌದ್ಧಿಕ ವಲಯದ ಪ್ರಯೋಗಾತ್ಮಕ ವಿಷಯಗಳಾಗಿ ಮಾತ್ರ ಉಳಿದುಕೊಳ್ಳುತ್ತಿವೆ.

ಸಂಪತ್ತಿನ ಸಮಾನ ಹಂಚಿಕೆ, ಉತ್ಪಾದನೆ ಮತ್ತು ವಿತರಣೆಯ ಮೇಲೆ ಸಾಮೂಹಿಕ ಒಡೆತನದ ತತ್ವವನ್ನು ಹೊಂದಿದ ಕಮ್ಯುನಿಸ್ಟ್ ಸಿದ್ಧಾಂತವು ತನ್ನ ಅಸ್ಥಿತ್ವವನ್ನು ಕಳೆದುಕೊಳ್ಳುತ್ತಿದೆ. ಸಮಾಜದಲ್ಲಿ ಬಂಡವಾಳಶಾಹಿಗಳು ಮತ್ತು ಕಾರ್ಮಿಕರು ಎಂಬ ಕೇವಲ ಎರಡೇ ಎರಡು ವರ್ಗಗಳು ಮಾತ್ರ ಇವೆ. ಬಂಡವಾಳಶಾಹಿ ನಾಶವಾಗಬೇಕು, ಶೋಷಣೆ ಮುಕ್ತ ಸಮಾಜ ನಿರ್ಮಾಣವಾಗಲು ಶ್ರಮಿಕ ವರ್ಗದ ಕೈಯೀಗೆ ಆಳ್ವಿಕೆ ಬರಬೇಕು ಎಂದು ಪ್ರತಿಪಾದಿಸಿದ ಶ್ರಮಿಕ ವರ್ಗದಲ್ಲಿಯೇ ಜಾತಿ ವರ್ಗಗಳು ಹುಟ್ಟಿಕೊಂಡಿವೆ. ಕಮ್ಯುನಿಸ್ಟ್ ಆಳ್ವಿಕೆಯಿರುವ ಪ್ರದೇಶಗಳಲ್ಲೇ ಜಾತಿರಾಜಕಾರಣ ತಾಂಡವವಾಡುತ್ತಿದೆ.

1950ರ ದಶಕದಲ್ಲಿ ಕಮ್ಯುನಿಸ್ಟ್ ಪಕ್ಷಕ್ಕೆ ಬುನಾದಿಯಾಗಿದ್ದ ಶೂದ್ರರು ಇಂದು ಚುನಾವಣೆಯಲ್ಲಿ ಧನಿಕರ ಎದುರು ನಿಂತು ಗೆಲ್ಲಲಾಗದೆ ಕುರ್ಚಿ-ಪೆಂಡಾಲು ಹಾಕುವ, ಬ್ಯಾನರ್-ಬಂಟಿಂಗ್‌ಗಳನ್ನು ಕಟ್ಟುವ ಕಾರ್ಯಕರ್ತರಾಗಿ ಮಾತ್ರ ಉಳಿದುಬಿಟ್ಟರು. ಅಧಿಕಾರವನ್ನು ತನ್ನ ಕೈಯಲ್ಲಿ ಇಟ್ಟುಕೊಂಡಿರುವ ವೈದಿಕಶಾಹಿಯು ಸಾಮ್ರಾಜ್ಯಶಾಹಿಯಷ್ಟೇ ಕ್ರೂರವಾಗುತ್ತಿದೆ. ದೇಶದಲ್ಲಿ ಅಧಿಕಾರ ನಡೆಸುತ್ತಿರುವ, ಸಡೆಸಿರುವ ಕಮ್ಯುನಿಸ್ಟರು ಸಹ ಬಂಡವಾಳಶಾಹಿಗಳಾಗಿ ರೂಪಗೊಂಡಿದ್ದಾರೆ.

ಹೀಗಾಗಿ ಬಂಡವಾಳಶಾಹಿ ಬಹುರಾಷ್ಟ್ರೀಯ ಕಂಪನಿಗಳ ವಿಸ್ತರಣಾ ನೀತಿಗೆ ಪ್ರತಿಬಂಧನೆಯನ್ನು ಹಾಕುವ ಸಲುವಾಗಿ ಹುಟ್ಟಿಕೊಂಡ ಸಮತಾವಾದವು, ಅತ್ತ ಪ್ರಜಾಪ್ರಭುತ್ವವೂ ಅಲ್ಲದ ಇತ್ತ ಕಮ್ಯುನಿಸ್ಟ್‌ವೂ ಅಲ್ಲದ ಪ್ರಜಾಸತ್ತಾತ್ಮಕ ಸಮಾಜವಾದ ಎಂಬ ರೂಪಾಂತರಕ್ಕೆ ಬಂದು ನಿಂತಿದೆ.

ಇತ್ತ ತಮ್ಮ ಹಿತಸಾಧನೆ ಯಾವ ಸರಕಾರಗಳಿಂದಲೂ ಸಾಧ್ಯವಿಲ್ಲ ಎಂಬ ಭಾವನೆಯಿಂದ ಸಮಾಜದ ಒಂದು ವರ್ಗ ಸಶಸ್ತ್ರ ಕ್ರಾಂತಿಯಿಂದ ಸಾಮಾಜಿಕ ಶಾಂತಿಗೆ ತೀವ್ರವಾದ ಧಕ್ಕೆಯನ್ನು ಉಂಟುಮಾಡುತ್ತಿದೆ. ಈ ನಕ್ಸಲ್ ಪಿಡುಗನ್ನು ಕೇವಲ ಬಂದೂಕಿನ ನಳಿಕೆಯಿಂದ ನಿಗ್ರಹಿಸಲು ಸಾಧ್ಯವೇ ? ಖಂಡಿತ ಸಾಧ್ಯವಿಲ್ಲ. ಅದಕ್ಕೆ ಪರ್ಯಾಯ ಮಾರ್ಗಗಳನ್ನು ಹುಡುಕ ಬೇಕಾಗಿದೆ. ಮೂಲಭೂತ ಕಾರಣಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.

ತ್ರಿಕರಣ(ಎಲ್.ಪಿ.ಜಿ) ನೀತಿಯಿಂದಾಗಿ ಸಾರ್ವಜನಿಕ ಉದ್ಯಮಗಳ ಮೇಲಿನ ಸರಕಾರಿ ಸ್ವಾಮ್ಯತ್ವವು ಗಣನೀಯವಾಗಿ ಕಡಿಮೆಯಾಗುತ್ತಿದೆ. ಮತ್ತೊಂದೆಡೆ ಕಮ್ಯುನಿಸ್ಟ್ ರಷ್ಯಾದ ವಿಘಟನೆಯೊಂದಿಗೆ ಅಂತಾರಾಷ್ಟ್ರೀಯ ರಾಜಕೀಯ ಮತ್ತು ಆರ್ಥಿಕ ಸಿದ್ಧಾಂತಗಳು ಹೊಸರೂಪವನ್ನು ಪಡೆದುಕೊಳ್ಳುತ್ತಿವೆ. ಅಮೆರಿಕ ಪ್ರಣೀತ ಬಂಡವಾಳಶಾಹಿತತ್ವವು ಜಗತ್ತಿನ ಇತರ ಭಾಗದಲ್ಲಿರುವ ಕಮ್ಯುನಿಸ್ಟ್ ಆಳ್ವಿಕೆಯನ್ನು ಕೊನೆಗೊಳಿಸಿ ಪ್ರಜಾಪ್ರಭುತ್ವವಾದಿ ಸರಕಾರಗಳನ್ನು ಸ್ಥಾಪಿಸುವಲ್ಲಿ ತೆರೆಮರೆಯ ಕಸರತ್ತು ಮಾಡುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯು ಬಂಡವಾಳಶಾಹಿಗಳ ಸ್ವರ್ಗ ಎಂಬುದೇ ಇದಕ್ಕೆಲ್ಲ ಮೂಲ ಕಾರಣ.

ನೇರ ಜಿದ್ದಾ ಜಿದ್ದಿಗೆ ನಿಂತ ಅಮೆರಿಕ ನ್ಯಾಟೋ ಎಂಬ ಮಿಲಿಟರಿ ಒಕ್ಕೂಟವನ್ನು ಕಟ್ಟಿಕೊಂಡು ಸಮತಾವಾದ ಮತ್ತು ಸಮಾಜವಾದ ಸಿದ್ಧಾಂತಗಳನ್ನು ಅಂತ್ಯಗೊಳಿಸಲು ಯತ್ನಿಸುತ್ತಿದೆ. 'ಇದು ಪ್ರಜಾಸತ್ತಾತ್ಮಕ ತತ್ವಗಳಾದ ಕಾರ್ಮಿಕ – ನಾಗರಿಕ ಹಕ್ಕುಗಳನ್ನು ದಮನ ಮಾಡುತ್ತಿದೆ' ಎಂದು, ದೆಹಲಿಯಲ್ಲಿ ನಡೆದ 11 ನೇ ಅಂತಾರಾಷ್ಟ್ರೀಯ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಸಮ್ಮೇಳನ ಆರೋಪಿಸಿದ್ದವು.

ಬಂಡವಾಳಶಾಹಿಗಳ ಆರ್ಥಿಕ ಏಕಸ್ವಾಮ್ಯತೆ ಯಿಂದಾಗಿಯೇ

ಸಮಾಜದಲ್ಲಿ ಬಂಡವಾಳಶಾಹಿಗಳು ಮತ್ತು ಕಾರ್ಮಿಕರು ಎಂಬ ಕೇವಲ ಎರಡೇ ಎರಡು ವರ್ಗಗಳು ಮಾತ್ರ ಇವೆ. ಬಂಡವಾಳಶಾಹಿ ನಾಶವಾಗಬೇಕು, ಶೋಷಣೆ ಮುಕ್ತ ಸಮಾಜ ನಿರ್ಮಾಣವಾಗಲು ಶ್ರಮಿಕ ವರ್ಗದ ಕೈಯೀಗೆ ಆಳ್ವಿಕೆ ಬರಬೇಕು ಎಂದು ಪ್ರತಿಪಾದಿಸಿದ ಶ್ರಮಿಕ ವರ್ಗದಲ್ಲಿಯೇ ಜಾತಿ ವರ್ಗಗಳು ಹುಟ್ಟಿ ಕೊಂಡಿವೆ. ಕಮ್ಯುನಿಸ್ಟ್ ಆಳ್ವಿಕೆಯಿರುವ ಪ್ರದೇಶಗಳಲ್ಲೇ ಜಾತಿರಾಜಕಾರಣ ತಾಂಡವವಾಡುತ್ತಿದೆ. ೧೯೫೦ರ ದಶಕದಲ್ಲಿ ಕಮ್ಯುನಿಸ್ಟ್ ಪಕ್ಷಕ್ಕೆ ಬುನಾದಿಯಾಗಿದ್ದ ಶೂದ್ರರು ಇಂದು ಚುನಾವಣೆಯಲ್ಲಿ ಧನಿಕರ ಎದುರು ನಿಂತು ಗೆಲ್ಲಲಾಗದೆ ಕುರ್ಚಿ-ಪೆಂಡಾಲು ಹಾಕುವ, ಬ್ಯಾನರ್-ಬಂಟಿಂಗ್‌ಗಳನ್ನು ಕಟ್ಟುವ ಕಾರ್ಯಕರ್ತರಾಗಿ ಮಾತ್ರ ಉಳಿದುಬಿಟ್ಟರು.



ಇಂದು ಜಾಗತಿಕ ಆರ್ಥಿಕ ಹಿಂಜರಿತ ಉಂಟಾಗಿದೆ ಎಂದು, ಅದು ಆರೋಪಿಸಿದೆ. ಈ ಆರೋ ಪದಲ್ಲಿ ಸತ್ಯಾಂಶವಿಲ್ಲವೆಂದು ಹೇಳಲಾಗದು. ಆದಾಗ್ಯೂ ಸಹ ಮಿಶ್ರ ಆರ್ಥಿಕ ನೀತಿಯನ್ನು ಹೊಂದಿದ ಭಾರತದ ಮೇಲೆ ಅದರ ಪರಿಣಾಮ ಅಷ್ಟಾಗಿ ಕಾಣಿಸುತ್ತಿಲ್ಲ. ದೇಶ ಖಾಸಗೀಕರಣ ನೀತಿಯನ್ನು ಒಪ್ಪಿಕೊಂಡರೂ ಸಹ ಹಲವಾರು ಮಹತ್ವದ ಉದ್ಯಮಗಳು ಸರಕಾರದ ಸ್ವಾಮ್ಯತ್ವದಲ್ಲಿ ಇರುವದರಿಂದ ದೇಶದ ಆರ್ಥಿಕ ಸ್ಥಿತಿಗತಿಯಲ್ಲಿ ಅಷ್ಟೇನು ಏರುಪೇರು ಕಂಡುಬರುತ್ತಿಲ್ಲ. ಈ ಆರ್ಥಿಕ ಸುಭದ್ರತೆಗೆ ಪ್ರಧಾನಿ ಮನಮೋಹನ್‌ಸಿಂಗ್ ಅವರ ಆರ್ಥಿಕ ನೀತಿಯು ಒಂದಡೆ ಕಾರಣವಾದರೆ, ಇನ್ನೊಂದೆಡೆ ಅವರ ಸರಕಾರ 'ದಲ್ಲಿ ಭಾಗಿದಾರರಾಗಿದ್ದ ಕಮ್ಯುನಿಸ್ಟ್ ಪಕ್ಷದ ಸಿದ್ಧಾಂತ ಮತ್ತು ಒತ್ತಡವು ಸಹ ಕಾರಣವಾಗಿತ್ತುಂಬ ಅಂಶವನ್ನು ಪ್ರಾಂಜಲಮನಸಿನಿಂದ ಒಪ್ಪಿಕೊಳ್ಳಬೇಕಾಗು ತ್ತದೆ.

ಆಹಾರ ಧಾನ್ಯ, ಇಂಧನ ಮುಂತಾದ ದಿನ ಬಳಕೆಯ ವಸ್ತುಗಳ ಬೆಲೆ ಏರಿಕೆಯನ್ನು ತಡೆಗಟ್ಟುವಲ್ಲಿ ಹಾಗೂ ಅಮೇರಿಕ ಯೊಂದಿಗಿನ ಪರಮಾಣು ಒಪ್ಪಂದ ನೀತಿಯನ್ನು ತಡೆಹಿಡಿಯುವಲ್ಲಿ ಕಮ್ಯುನಿಸ್ಟ್ ಪಕ್ಷಗಳ ಪಾತ್ರ ಬಹುಮುಖ್ಯವಾಗಿತ್ತು. ಇಂದಿನ ಜಾಗತಿಕ ಆರ್ಥಿಕ ಹಿಂಜರಿತದಿಂದಾಗಿಯೇ ಅಗತ್ಯ ವಸ್ತುಗಳ ಬೆಲೆಯು ಜನಸಾಮಾನ್ಯರ ಕೈಗೆಟುಕದಂತೆ ಗಗನಮುಖಿಯಾಗಿದೆ. ಇನ್ನೊಂದೆಡೆ ಆರ್ಥಿಕ ಹಿಂಜರಿತದ ಹೊಡೆತವನ್ನು ತಾಳದ ಬಹುರಾಷ್ಟ್ರೀಯ ಉದ್ಯಮಗಳು ತನ್ನ ಕಾರ್ಮಿಕರ ಸಂಖ್ಯೆಯನ್ನು ಗಣನೀಯವಾಗಿ ಕಡಿತಗೊಳಿಸುತ್ತಿವೆ. ಅಲ್ಲದೆ ಬಾಹ್ಯಗುತ್ತಿಗೆ ವ್ಯವಹಾರವನ್ನು ಸಹ ಸ್ಥಗಿತಗೊಳಿಸುತ್ತಿವೆ. ಇದರಿಂದ ಭಾರತದ ಐ.ಟಿ. ಉದ್ಯೋಗಿಗಳು ಸಹ ಕೆಲಸವನ್ನು ಕಳೆದುಕೊಳ್ಳುವಂತಾಗಿದೆ.

ಕಮ್ಯುನಿಸ್ಟರು ಹೇಳುವ ಹಾಗೆ ಉದ್ಯಮ ವ್ಯವಹಾರವನ್ನು ಮುಕ್ತಗೊಳಿಸದೆ ಸರಕಾರದ ಸ್ವಾಮ್ಯದಲ್ಲಿ ಇಟ್ಟುಕೊಂಡಿದ್ದೇ ಆದರೆ ದೇಶ ಈ ಮಟ್ಟಿನ ಆರ್ಥಿಕ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ. ಕೆಳ ಹಾಗೂ ಮಧ್ಯಮ ವರ್ಗದ ಜನ, ಮೇಲ್ವರ್ಗದ ಜನರು ಅನುಭವಿಸುವ ಜೀವನ ಮಟ್ಟವನ್ನು ಹೊಂದುವುದು ಸಾಧ್ಯವಾಗುತ್ತಿರಲಿಲ್ಲ. ರೋಗಗ್ರಸ್ಥವಾಗಿದ್ದ ನಮ್ಮ ಕೈಗಾರಿಕೆಗಳು ಮೈಕೊಡವಿಕೊಂಡು ಎದ್ದು ನಿಲ್ಲುತ್ತಿರಲಿಲ್ಲ. ಆಮದು ಮಾಡಿಕೊಳ್ಳುವಷ್ಟೇ, ರಫ್ತು ಕ್ಷೇತ್ರದಲ್ಲಿ ನಮ್ಮ ಕೈಗಾರಿಕೆಗಳು ಪ್ರಾಬಲ್ಯವನ್ನು ಸಾಧಿಸುತ್ತಿವೆ. ಎಲ್ಲಾ ಕ್ಷೇತ್ರದಲ್ಲಿ ಸರಕಾರದ ಸ್ವಾಮ್ಯತ್ವವು ಏಕ ಪಕ್ಷೀಯ ಆಡಳಿತವನ್ನು ತರುತ್ತದೆ. ಇದರಿಂದ ವ್ಯಕ್ತಿ ಸ್ವಾತಂತ್ರ್ಯ ಮತ್ತು ಮುಕ್ತ ಅವಕಾಶಗಳು ಹತ್ತಿಕ್ಕಲ್ಪಡುತ್ತವೆ. ಸಾರ್ವಜನಿಕ ಮುಕ್ತ ಸ್ಪರ್ಧೆ ಇಲ್ಲದೆ ಅಭಿವೃದ್ಧಿ ಕುಂಟಿತಗೊಳ್ಳುತ್ತದೆ. ಕೇಂದ್ರೀಕರಣದ ನೀತಿಯಿಂದಾಗಿ 'ರೆಡ್ ಟೇಪಿಸಂ' ಆಡಳಿತದಲ್ಲಿ ತಲೆದೋರುತ್ತದೆ.

ಇನ್ನೊಂದೆಡೆ ಉದ್ಯಮಗಳ ಬೆಳವಣಿಗೆಯಿಂದ ಬಂಡವಾಳಶಾಹಿಗಳು, ಕೋಟಿವೀರರು ಸೃಷ್ಟಿಯಾಗುತ್ತಿದ್ದಾರೆ. ಆದರೆ ದುಡಿಯುವ ವರ್ಗ ಅತ್ಯಂತ ದಯನೀಯ ಸ್ಥಿತಿಯಲ್ಲಿ ಬದುಕು ಸಾಗಿಸುತ್ತಿದೆ. ಕೃಷಿ, ಗೃಹ ಮತ್ತು ಗುಡಿ ಕೈಗಾರಿಕಾ ಕ್ಷೇತ್ರಗಳಂತೂ ಸಬ್ಸಿಡಿ ಮತ್ತು ಬೆಂಬಲ ಬೆಲೆಯನ್ನು ನೆಚ್ಚಿಕೊಂಡು ಉಸಿರಾಡುತ್ತಿದೆ. ರೈತರ ಉತ್ಪನ್ನಗಳಿಗೆ ಏಕರೂಪ ಮತ್ತು ನಿಗದಿತದರ ನಿರ್ಧರಣೆ ಯಾಗುತ್ತಿಲ್ಲ.

ಆಹಾರ ಧಾನ್ಯ, ಇಂಧನ ಮುಂತಾದ ದಿನ ಬಳಕೆಯ ವಸ್ತುಗಳ ಬೆಲೆ ಏರಿಕೆಯನ್ನು ತಡೆಗಟ್ಟುವಲ್ಲಿ ಹಾಗೂ ಅಮೇರಿಕಯೊಂದಿಗಿನ ಪರಮಾಣು ಒಪ್ಪಂದ ನೀತಿಯನ್ನು ತಡೆಹಿಡಿಯುವಲ್ಲಿ ಕಮ್ಯುನಿಸ್ಟ್ ಪಕ್ಷಗಳ ಪಾತ್ರ ಬಹುಮುಖ್ಯವಾಗಿತ್ತು. ಇಂದಿನ ಜಾಗತಿಕ ಆರ್ಥಿಕ ಹಿಂಜರಿತದಿಂದಾಗಿಯೇ ಅಗತ್ಯ ವಸ್ತುಗಳ ಬೆಲೆಯು ಜನಸಾಮಾನ್ಯರ ಕೈಗೆಟುಕದಂತೆ ಗಗನಮುಖಿಯಾಗಿದೆ. ಇನ್ನೊಂದೆಡೆ ಆರ್ಥಿಕ ಹಿಂಜರಿತದ ಹೊಡೆತವನ್ನು ತಾಳದ ಬಹುರಾಷ್ಟ್ರೀಯ ಉದ್ಯಮಗಳು ತನ್ನ ಕಾರ್ಮಿಕರ ಸಂಖ್ಯೆಯನ್ನು ಗಣನೀಯವಾಗಿ ಕಡಿತಗೊಳಿಸುತ್ತಿವೆ.

ಸ್ವಾತಂತ್ರ್ಯ ನಂತರದಿಂದ ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಸತತವಾಗಿ ಆಡಳಿತ ನಡೆಸುತ್ತಿರುವ ಕಮ್ಯುನಿಸ್ಟರು ಈ ನಿಟ್ಟಿನಲ್ಲಿ ಯಾವ ಪ್ರಗತಿ ಮಾಡಿದ್ದಾರೆ? ದೇಶದ ಆಂತರಿಕ ವಿಷಯದಲ್ಲಿ ಅಮೇರಿಕದ ಹಸ್ತಕ್ಷೇಪವು ಭದ್ರತೆಗೆ ಧಕ್ಕೆ ತರುತ್ತದೆ. ಎಂದು ಭಾವಿಸುವ ಕಮ್ಯುನಿಸ್ಟರು, ಮಾವೋವಾದಿಗಳು ಹಾಗೂ ನಕ್ಸಲವಾದಿಗಳು ಮಾಡುತ್ತಿರುವ ಮಾರಣ ಹೋಮಗಳ ಬಗ್ಗೆ ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟರ 'ರೆಡ್ ಆರ್ಮಿ' ನಡೆಸುವ ಚುನಾವಣಾ ಅಕ್ರಮಗಳು ಇಂದು ಗೌಪ್ಯವಾಗಿಯೇನು ಉಳಿದಿಲ್ಲ. ಮಾವೋಗಳಿಗೆ, ನಕ್ಸಲರಿಗೆ ಬಾಹ್ಯ ಶಕ್ತಿಗಳಿಂದಲೇ ಶಸ್ತ್ರಾಸ್ತ್ರಗಳು ಸರಬರಾಜಾಗುತ್ತಿರುವ ಬಗ್ಗೆ ಅವರು ಏನು ಹೇಳುತ್ತಾರೆ? ಪುರೂಜಾಯಾದಲ್ಲಿ ಶಸ್ತ್ರಾಸ್ತ್ರಗಳು ಎಲ್ಲಿಂದ ಬಂದು ಬಿದ್ದವು?

ಕಾರ್ಮಿಕ ಸಬಲೀಕರಣದ ಬಗ್ಗೆ ಮಾತನಾಡುವ ಕಮ್ಯುನಿಸ್ಟ್ ಸರಕಾರಗಳು ಸ್ವಾತಂತ್ರ್ಯ ಸಿಕ್ಕು 60 ವರ್ಷಗಳಾದರೂ ಕಾರ್ಮಿಕರನ್ನು ಕೊಳಗೇರಿಗಳಿಂದ ಆಚೆ ತರಲು ಏಕೆ ಆಗುತ್ತಿಲ್ಲ? ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಮಾತನಾಡುವ ಕಮ್ಯುನಿಸ್ಟರು ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮಣೆ ಹಾಕುತ್ತಿರುವುದು ದ್ವಂದ್ವ ನೀತಿಯನ್ನು ತೋರಿಸುತ್ತದೆ. ಇದರಿಂದ ಭಾರತದಲ್ಲಿ ಸಮತಾವಾದ ಚಿಂತನೆ ಶಿಥಿಲವಾಗುತ್ತಿದೆ ಎಂಬ ಭಾವನೆ ಮೂಡುತ್ತಿದೆ. ಇದಕ್ಕೆ ಪೂರಕ ಎಂಬಂತೆ ಇತ್ತೀಚೆಗೆ ನಡೆದ ಉಪ ಚುನಾವಣೆಗಳಲ್ಲಿ ಕಮ್ಯುನಿಸ್ಟರ ಪ್ರಭಾವ ಕಡಿಮೆಯಾಗುತ್ತಿರುವುದನ್ನು ಗಮನಿಸಬಹುದು.

ಆರ್ಥಿಕ ಅಭಿವೃದ್ಧಿಯ ಆಸೆಗೆ ಒಳಗಾದ ಮೂರನೇ ಜಗತ್ತಿನ ರಾಷ್ಟ್ರಗಳು ಅನಿವಾರ್ಯವಾಗಿ ಪಾಶ್ಚಾತ್ಯ ರಾಜಕೀಯ ಸಿದ್ಧಾಂತವನ್ನು ತಮ್ಮದಾಗಿಸಿಕೊಳ್ಳುತ್ತಿವೆ. ಅಂತರಾಷ್ಟ್ರೀಯ ರಾಜಕೀಯವು ಸ್ವದೇಶಿ ಆಳ್ವಿಕೆಯ ಮೇಲೆ ಪ್ರಭಾವ ಬೀರುತ್ತಿರುವುದರಿಂದ ಸೈದ್ಧಾಂತಿಕ ಪಲ್ಲಟನ ಜಗತ್ತಿನಾದ್ಯಂತ ಕಂಡುಬರುತ್ತಿದೆ. ಇದನ್ನು ಒಂದು ರೀತಿಯ ಸೈದ್ಧಾಂತಿಕ ಶೂನ್ಯತೆ ಎಂದು ಕರೆಯಬಹುದು. ಸೋವಿಯತ್ ವಿಘಟನೆಯಿಂದ ಹೊರಬಂದ ರಾಷ್ಟ್ರಗಳು ಬಂಡವಾಳಶಾಹಿ ಸಮತಾವಾದವನ್ನು ಅಪ್ಪಿಕೊಂಡಿವೆ. ಈ ಬೆಳವಣಿಗೆಯೇ ಇಂದು ಭಾರತದ ಕಮ್ಯುನಿಸ್ಟ್ ಸಿದ್ಧಾಂತವು ಪಲ್ಲಟನೆಗೆ ಒಳಗಾಗುವಂತಹ ಪ್ರಭಾವವನ್ನು ಬೀರುತ್ತಿದೆ ಎಂದು ಅನಿಸುತ್ತಿದೆ.

ಭಾರತದ ಸಂಸದೀಯ ಪದ್ಧತಿ ಪ್ರಜಾಪ್ರಭುತ್ವವು ಸೈದ್ಧಾಂತಿಕವಾಗಿ ನಡೆದುಕೊಂಡು ಬರುತ್ತಿದೆ. ಕಾರ್ಯಾತ್ಮಕವಾಗಿ ಅದು ಯಶಸ್ವಿಯಾಗುತ್ತಿಲ್ಲ ಎಂಬುದು ಇಂದಿನ ಚುನಾವಣೆಗಳು ನಡೆಯುವ ರೀತಿಯನ್ನು ನೋಡಿದರೆ ಹಾಗೂ ಗೆದ್ದ ಅಭ್ಯರ್ಥಿ ಪಡೆದ ಮತಗಳನ್ನು ಅವಲೋಕಿಸಿದರೆ ವೇದ್ಯವಾಗುತ್ತದೆ. 'ಸಂಸದೀಯ ಪ್ರಜಾಪ್ರಭುತ್ವವು ವಂಶಾಡಳಿತಕ್ಕೆ ದಾರಿಮಾಡಿ ಕೊಡುತ್ತದೆ'. ಎಂದು ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರರು ಹೇಳಿದ ಮಾತು ಇಂದು ನಿಜವಾಗುತ್ತಿದೆ. ಇದಕ್ಕೆ ಮೂಲ ಕಾರಣ ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ಅಧಿಕಾರ ಜನಸಾಮಾನ್ಯರ ಕೈಯಿಗೆ ಬರದೆ ಅದು ಜಮೀನ್ದಾರರು ಹಾಗೂ ಬಂಡವಾಳಶಾಹಿಗಳ ಕೈಯಿಗೆ ಬಂದಿರುವುದೇ ಆಗಿದೆ.

ಭಾರತದ ಪ್ರಧಾನ ವೃತ್ತಿಯಾದ ಕೃಷಿಯ ಕುರಿತು ಹಾಗೂ ಅದಕ್ಕೆ ಪೂರಕವಾದ ಗೃಹ ಮತ್ತು ಗುಡಿ ಕೈಗಾರಿಕೆಗಳ ಬಗ್ಗೆ ದಿವ್ಯ ನಿರ್ಲಕ್ಷ್ಯವನ್ನು ಇಂದಿನ ಸರಕಾರಗಳು ತಾಳುತ್ತಿವೆ. ರಾಷ್ಟ್ರೀಯ ಆದಾಯವನ್ನು ದಿಢೀರನೆ ಹೆಚ್ಚಿಸಿಕೊಳ್ಳುವ ಸಲುವಾಗಿ ವಿಶೇಷ ಆರ್ಥಿಕ ವಲಯ (ಎಸ್.ಇ.ಜಡ್)ಗಳ ಹೆಸರಿನಲ್ಲಿ ಬಂಡವಾಳ ಶಾಹಿಗಳಿಗೆ ಮಣೆ ಹಾಕಿ ಕೃಷಿ ಕ್ಷೇತ್ರವನ್ನು ಬಲಿಕೊಡಲಾಗುತ್ತಿದೆ. ಗ್ರಾಮ ಸ್ವರಾಜ್ಯದ ಕನಸು ಕಂಡ ಮಹಾತ್ಮಾ ಗಾಂಧೀಜಿ ಕಣ್ಮರೆಯಾಗುತ್ತಿದ್ದಂತೆ ಅವರ ಶಿಷ್ಯ ಜವಾಹರಲಾಲ್ ನೆಹರೂ ಗ್ರಾಮೀಣ ಆರ್ಥಿಕತೆಯನ್ನು ನಿರ್ಲಕ್ಷಿಸಿ ಕೈಗಾರಿಕೀಕರಣವನ್ನು ಜಾರಿಗೆ ತಂದರು. ಅಲ್ಲಿಂದಲೇ ಸುರುವಾದ ಬಂಡವಾಳವಾದ ಉದಾರ ಪ್ರಜಾಪ್ರಭುತ್ವದ ಹೆಸರಿನಲ್ಲಿ ಆರ್ಥಿಕ ಅಸಮಾನತೆಯನ್ನು ಹುಟ್ಟು ಹಾಕಿದೆ.

ದೇಶದಲ್ಲಿ ಕೋಟ್ಯಾಧಿಪತಿಗಳ ಸಂಖ್ಯೆ ಹೆಚ್ಚಾಗುತ್ತಿದೆ, ಆದರೆ ಅದಕ್ಕಿಂತ ಸಾವಿರಾರು ಪಟ್ಟು ಬಡವರ ಮತ್ತು ನಿರುದ್ಯೋಗಿಗಳ ಸಂಖ್ಯೆ ಬೆಳೆಯುತ್ತಲೇ ಇದೆ. ನಮ್ಮನ್ನು ಪ್ರತಿನಿಧಿಸುವ 545 ಜನ ಸಂಸದರಲ್ಲಿ 340 ಜನ ಕೋಟ್ಯಾಧಿಪತಿಗಳು. ಅವರು ಬಹುವಾಗಿ ಬಂಡವಾಳಶಾಹಿಗಳೇ. ಒಂದರ್ಥದಲ್ಲಿ ಶ್ರೀಮಂತರಿಂದ ಆಳಲ್ಪಡುವ ಬಡವರಿಂದ ಕೂಡಿದ ಶ್ರೀಮಂತ ದೇಶ ನಮ್ಮದು. ಒಂದೆಡೆ ಸಂಪತ್ತಿನ ವೈಭೋಗ ಮತ್ತೊಂದೆಡೆ ಬಡತನದ ಆರ್ತನಾದ. ಈ ಅಸಮಾನತೆಯನ್ನು ತೊಲಗಿಸುವ ಶಕ್ತಿ ಪ್ರಜಾಪ್ರಭುತ್ವಕ್ಕೆ ಇಲ್ಲದೆ ಇರುವುದು ಅದರ ವೈಫಲ್ಯವನ್ನು ತೋರಿಸುತ್ತದೆ.

ಹೀಗಾಗಿ ಪ್ರಜಾಪ್ರಭುತ್ವಕ್ಕೆ ಪರ್ಯಾಯವಾಗಿ ಸಮತಾವಾದ ಅಸ್ತಿತ್ವಕ್ಕೆ ಬರಬೇಕೆಂಬ ಚಿಂತನೆ ಒಂದು ಕಾಲದಲ್ಲಿ ನಡೆದಿತ್ತು. ದುರದುರ್ಷ್ಟವೆಂದರೆ ಅದು ಆರಂಭಾವಾದಷ್ಟೇ ಬೇಗಕಣ್ಮರೆಯಾಯಿತು. ಆದರೆ ಇಂತಹಯಾವುದೇ ಪಲ್ಲಟನಗಳಿಗೆ ಆಸ್ಪದವಾಗಬಾರದೆಂಬ ಉದ್ದೇಶದಿಂದ ಸಂವಿಧಾನ ನಿರ್ಮಾಪಕರು ಆಳುವವರಿಗೆ ನೀತಿ ನಿರ್ದೇಶನಗಳ ರೂಪದಲ್ಲಿ ಸಮಾಜವಾದಿ ಪ್ರಜಾಸತ್ತಾತ್ಮಕ ತತ್ವಗಳನ್ನು ಸಂವಿಧಾನದಲ್ಲಿ ಅಳವಡಿಸಿದರು. ನಂತರ 1976 ರಲ್ಲಿ ಸಂವಿಧಾನಕ್ಕೆ 42ನೇ ತಿದ್ದುಪಡಿ ಮಾಡಿ ಭಾರತವನ್ನು 'ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯ' ಎಂದು ಘೋಷಿಸಿತು. ಆದರೆ ಅದು ಎಷ್ಟು ಆಚರಣೆಗೆ ಬಂದಿದೆ ?

(21ನೇ ಪುಟಕ್ಕೆ)

ಭೂಪಾಲ್ ದುರಂತದ ತೀರ್ಪು ಏನೆಲ್ಲ ಹೇಳುತ್ತಿದೆ?

ಡಿ.ಎಸ್. ನಾಗಭೂಷಣ್

ಭೂಪಾಲ್ ನಗರದ ಬಹುಪಾಲು ಮಣ್ಣು ಮತ್ತು ನೀರನ್ನು ಮಲಿನಗೊಳಿಸಿರುವ ದುರಂತದ ಅಪರಾಧಿಗಳಿಗೆ ನೀಡಲಾಗಿರುವ ಶಿಕ್ಷೆ ಒಂದು ಸಣ್ಣ ರಸ್ತೆ ಅಪಘಾತ ಮಾಡಿ ಒಂದಿಬ್ಬರ ಸಾವಿಗೆ ಕಾರಣನಾಗಿರಬಹುದಾದವನಿಗೆ ನೀಡಲಾಗುವ ಶಿಕ್ಷೆಗೂ ಸಮವಿಲ್ಲದಾಂಗಿದೆ... ಜೊತೆಗೆ ಇವರೆಲ್ಲರಿಗೆ ಕೇವಲ ೨೫ ಸಾವಿರ ರೂಪಾಯಿಗಳ ಜಾಮೀನಿನ ಮೇಲೆ ತಕ್ಷಣದ ಬಿಡುಗಡೆಯ ಸೌಲಭ್ಯ ಬೇರೆ ಒದಗಿಸಲಾಗಿದೆ! ಯಾರನ್ನೂ ಕೊಲ್ಲದೆ, ಯಾರಿಗೂ ತೊಂದರೆ ಕೊಡದೆ, ಪರಸ್ಪರ ಒಪ್ಪಿಗೆಯಿಂದ ತನ್ನ ಖಾಸಗಿ ಕೋಣೆಯಲ್ಲಿ ಲೈಂಗಿಕ ಚಟುವಟಿಕೆ ನಡೆಸಿದನೆಂದು ಹೇಳಲಾದ ಸ್ವಾಮಿಯೊಬ್ಬನಿಗೆ ತಿಂಗಳುಗಟ್ಟಲೆ ಜಾಮೀನು ಕೊಡದಷ್ಟು ಕಟ್ಟುನಿಟ್ಟಾಗಿ ಕಾರ್ಯ ನಿರ್ವಹಿಸುವ ನಮ್ಮ ನ್ಯಾಯಾಂಗ, ಸಾವಿರಾರು ಜನರ ಮರಣಕ್ಕೆ ಕಾರಣರಾದ ಈ ಘೋರ ಅಪರಾಧಿಗಳಿಗೆ ಮಾತ್ರ ತಕ್ಷಣ ಜಾಮೀನು ನೀಡುತ್ತದೆ.

1984ರಲ್ಲಿ ಭೂಪಾಲ್‌ನಲ್ಲಿ ಸಂಭವಿಸಿದ ವಿಷಾನಿಲ ದುರಂತ ಕುರಿತ ನ್ಯಾಯಾಲಯದ ತೀರ್ಪು ಕಳೆದ ಜೂನ್‌ಏಳರಂದು ಹೊರ ಬಿದ್ದಿದೆ. ಒಟ್ಟು ಸುಮಾರು 25ಸಾವಿರ ಜನರ ಸಾವಿಗೆ ಕಾರಣವಾದ ಮತ್ತು ಇನ್ನೂ ಐದು ಲಕ್ಷ ಜನರನ್ನು ವಿವಿಧ ರೀತಿಯಲ್ಲಿ ವಿಕಲಾಂಗರನ್ನಾಗಿ ಮಾಡಿ ಅವರ ಬಾಳಿಗೆ ಕಂಟಕವಾದ ಈ ದುರಂತದ ಅಪರಾಧಿಗಳೆಂದು ಎಂಟು ಜನರನ್ನು ಗುರುತಿಸಲಾಗಿದೆ. ಆಕಸ್ಮಿಕವಾಗಿ ಈ ವಿಷಾನಿಲ ಹೊರಬಿಟ್ಟ ಕಾರ್ಖಾನೆಯ ಈ ಎಂಟು ಜನ ಮಾಜಿ ಆಡಳಿತಗಾರರಿಗೆ 2 ವರ್ಷಗಳ ಸೆರೆಮನೆ ವಾಸದ ಶಿಕ್ಷೆ ಮತ್ತು ತಲಾ ಒಂದು ಲಕ್ಷ ರೂಪಾಯಿ ದಂಡ ವಿಧಿಸಲಾಗಿದೆ! ಇವರಲ್ಲಿ ಆಗ ಕಾರ್ಖಾನೆಯನ್ನು ನಡೆಸುತ್ತಿದ್ದ *ಯೂನಿಯನ್ ಕಾರ್ಬೈಡ್* ಕಾರ್ಪೊರೇಷನ್‌ನ ಅಧ್ಯಕ್ಷ ಮತ್ತು ಮೂಲ ಆರೋಪ ಪಟ್ಟಿಯ ಮೊದಲ ಅಪರಾಧಿ ಅಮೆರಿಕಾದ ವಾರೆನ್ ಆಂಡರ್ಸನ್‌ನ ಹೆಸರು ಸೇರಿರುವುದಿರಲಿ, ಆತನ ಹೆಸರೂ ತೀರ್ಪಿನಲ್ಲಿ ಪ್ರಸ್ತಾಪಿತವಾಗಿಲ್ಲ ಎಂಬುದು ಇಲ್ಲಿ ಗಮನಾರ್ಹ! ಇಂತಹ ತೀರ್ಪು ನೀಡಲು ನಮ್ಮ ನ್ಯಾಯಾಲಯಕ್ಕೆ 23 ವರ್ಷಗಳೇ ಬೇಕಾಗಿವೆ, ಅದೂ ಈ 23 ವರ್ಷಗಳಲ್ಲಿ 19ಜನ ನ್ಯಾಯಾಧೀಶರುಗಳು ಬದಲಾದ ಮೇಲೆ!

ಈ ತೀರ್ಪು, ಇದು ಯಾವ ದುರಂತಕ್ಕೆ ಸಂಬಂಧಿಸಿದುದೋ ಆ ದುರಂತಕ್ಕಿಂತ ದೊಡ್ಡ ದುರಂತವಾಗಿದೆಯೆಂದು ಈಗ ರಾಷ್ಟ್ರಾದ್ಯಂತ ಬಿಸಿ ಬಿಸಿ ಚರ್ಚೆಯಾಗುತ್ತಿದೆ. ಈ ದುರಂತದ ಬಗ್ಗೆ ನ್ಯಾಯಾಲಯದಲ್ಲಿ ಆರೋಪ ಪಟ್ಟಿ ಸಲ್ಲಿಸಿದಾಗ, ಇಂತಹ ಭೀಕರ ದುರಂತದ ಬಗ್ಗೆ ಮುನ್ಸೂಚನೆ ಇದ್ದರೂ–ಇದೇ ಸಂಸ್ಥೆಯ ಅಮೆರಿಕಾದ ಪರೀಕ್ಷಣಾ ಸಮಿತಿಯ ವರದಿ ಮತ್ತು ಪತ್ರಿಕೆಗಳ ತನಿಖಾ ವರದಿಗಳ ಮಧ್ಯೆಯೂ–ಮಿತವ್ಯಯದ ನೆಪದಲ್ಲಿ ಏನೂ ಕ್ರಮ ಕೈಗೊಳ್ಳದೇ ಹೋದ ಅಧ್ಯಕ್ಷ ಆಂಡರ್ಸನ್‌ನ ಮೇಲೆ ಬಂಧನದ ವಾರೆಂಟ್ ಇದ್ದರೂ, ಆತ ಅದನ್ನು ತಪ್ಪಿಸಿಕೊಂಡು ಬಾಡಿಗೆ ವಿಮಾನವೊಂದರಲ್ಲಿ ಅಮೆರಿಕಾಕ್ಕೆ ಪರಾರಿಯಾದಾಗ; ಸಂತ್ರಸ್ತರಿಗೆ ಕೇಂದ್ರ ಸರ್ಕಾರವೇ ಅಂದಾಜು ಮಾಡಿದ್ದ 330 ಕೋಟಿ ಡಾಲರ್‌ಗಳ ಪರಿಹಾರ ಮೊತ್ತವನ್ನು ಸರ್ವೋಚ್ಚ ನ್ಯಾಯಾಲಯದ ಮೇಲ್ವಿಚಾರಣೆಯಲ್ಲೇ ಅದನ್ನು 47 ಕೋಟಿ ಡಾಲರ್‌ಗಳಿಗೆ ಪರಿಷ್ಕರಿಸಿದಾಗ; ಹಾಗೂ ಇದೇ ಸರ್ವೋಚ್ಚ ನ್ಯಾಯಾಲಯವು ಆರೋಪ ಪಟ್ಟಿಯನ್ನು ಆರೋಪಿಗಳಿಗೆ ಅನುಕೂಲವಾಗುವಂತೆ, ಅವರ ಮೇಲೆ ಹೂಡಲಾಗಿದ್ದ ಶಿಕ್ಷಾರ್ಹ ಸಾಮೂಹಿಕ ಹತ್ಯೆಯ ಆರೋಪಗಳನ್ನು ಅಪರಾಧನೀಯ ನಿರ್ಲಕ್ಷ್ಯದ ಅರೋಪಗಳಿಗೆ ಬದಲಾಯಿಸಿದಾಗ; ಇಂತಹುದೇ ವ್ಯಾಪಕ ಮತ್ತು ತೀವ್ರ ಚರ್ಚೆಗಳು ನಡೆದಿದ್ದವು. ಹಾಗೇ ಕೆಲವೇ ದಿನಗಳಲ್ಲಿ ಅವು ಇತರ ಸುದ್ದಿಗಳ ಮರೆಯಲ್ಲಿ ಹಿನ್ನೆಲೆಗೆ ಸರಿದು ಹೋದವು. ಅದರೆ ವಿಷಾನಿಲ ದುರಂತಕ್ಕೆ ಸಿಕ್ಕಿ ಬದುಕು ಕಳೆದುಕೊಂಡ ಲಕ್ಷಾಂತರ ಜನರ ಪಾಡು, ಅವರಲ್ಲಿ ಕೆಲವರಿಗಷ್ಟೇ ದೊರೆತ ಅಷ್ಟಿಷ್ಟು ಪರಿಹಾರದ ಮೊತ್ತ ಅವರ ಔಷಧಿ ಖರ್ಚಿಗೇ ಸಾಲದೆ, ಹಾಗೇ ನರಕ ಸದೃಶವಾಗಿ ಮುಂದುವರೆದಿದೆ.

ಆದರೆ 25ಸಾವಿರ ಜನರ ಹಿಂಸಾತ್ಮಕ ಮರಣಕ್ಕೆ ಕಾರಣವಾದ, ಸುಮಾರು ಐದು ಲಕ್ಷ ಜನರ ಬದುಕಿಗೆ ಕಂಟಕವಾದ ಮತ್ತು ಈಗಲೂ ಭೂಪಾಲ್ ನಗರದ ಬಹುಪಾಲು ಮಣ್ಣು ಮತ್ತು ನೀರನ್ನು ಮಲಿನಗೊಳಿಸಿರುವ ದುರಂತದ ಅಪರಾಧಿಗಳಿಗೆ ನೀಡಲಾಗಿರುವ ಶಿಕ್ಷೆ ಒಂದು ಸಣ್ಣ ರಸ್ತೆ ಅಪಘಾತ ಮಾಡಿ ಒಂದಿಬ್ಬರ ಸಾವಿಗೆ ಕಾರಣನಾಗಿರಬಹುದಾದವನಿಗೆ ನೀಡಲಾಗುವ ಶಿಕ್ಷೆಗೂ ಸಮವಿಲ್ಲದಾಗಿದೆ... ಜೊತೆಗೆ ಇವರೆಲ್ಲರಿಗೆ ಕೇವಲ 25 ಸಾವಿರ ರೂಪಾಯಿಗಳ ಜಾಮೀನಿನ ಮೇಲೆ ತಕ್ಷಣದ ಬಿಡುಗಡೆಯ ಸೌಲಭ್ಯ ಬೇರೆ ಒದಗಿಸಲಾಗಿದೆ! ಯಾರನ್ನೂ ಕೊಲ್ಲದೆ, ಯಾರಿಗೂ ತೊಂದರೆ ಕೊಡದೆ, ಪರಸ್ಪರ ಒಪ್ಪಿಗೆಯಿಂದ ತನ್ನ ಖಾಸಗಿ ಕೋಣೆಯಲ್ಲಿ ಲೈಂಗಿಕ ಚಟುವಟಿಕೆ ನಡೆಸಿದನೆಂದು ಹೇಳಲಾದ ಸ್ವಾಮಿಯೊಬ್ಬನಿಗೆ ತಿಂಗಳುಗಟ್ಟಲೆ ಜಾಮೀನು ಕೊಡದಷ್ಟು ಕಟ್ಟುನಿಟ್ಟಾಗಿ ಕಾರ್ಯ ನಿರ್ವಹಿಸುವ ನಮ್ಮ ನ್ಯಾಯಾಂಗ, ಸಾವಿರಾರು ಜನರ ಮರಣಕ್ಕೆ ಕಾರಣರಾದ ಈ ಘೋರ ಅಪರಾಧಿಗಳಿಗೆ ಮಾತ್ರ ತಕ್ಷಣ ಜಾಮೀನು ನೀಡುತ್ತದೆ. ಏಕೆ? ಇವರೆಲ್ಲ ರಾಷ್ಟ್ರವನ್ನು ಬೃಹತ್ ಜಾಗತಿಕ ಶಕ್ತಿಯನ್ನಾಗಿ ಮಾಡಬಲ್ಲ ಕೈಗಾರಿಕೋದ್ಯಮದ ಅತಿ ಪ್ರತಿಷ್ಠಿತ ವ್ಯಕ್ತಿಗಳೆಂದೇ?



ಭೂಪಾಲ್ ವಿಷಾನಿಲ ದುರಂತದ ಈ ತೀರ್ಪಿನವರೆಗಿನ ಇಡೀ ಪ್ರಕರಣ, ಭಾರತೀಯ ಸಮಾಜ ಎಲ್ಲ ನೆಲೆಗಳಲ್ಲಿ ತಲುಪಿರುವ ದುಃಸ್ಥಿತಿಗೆ ಕನ್ನಡಿ ಹಿಡಿಯುವಂತಿದೆ. ನಮ್ಮ ಸಂವಿಧಾನದ ಪ್ರಕಾರ ಪ್ರಜೆಗಳ ಹಿತರಕ್ಷಣೆಗಾಗಿ ಇರುವ ಕಾರ್ಯಾಂಗ,ಶಾಸಕಾಂಗ

ಮತ್ತು ನ್ಯಾಯಾಂಗ- ಈ ಮೂರೂ, ಪ್ರಜೆಗಳೊಂದಿಗೆ ಸಂಬಂಧವನ್ನೂ, ಸಂವೇದನೆಯನ್ನೂ ನಿರ್ಣಾಯಕ ರೀತಿಯಲ್ಲಿ ಕಳೆದುಕೊಂಡಿರುವ ದುರಂತ ಚಿತ್ರ ಇಲ್ಲಿ ಎದುರಾಗುತ್ತದೆ. ಈ ಬಗ್ಗೆ ಮೊನ್ನೆ ನಮ್ಮ ಕೇಂದ್ರ ಕಾನೂನು ಮಂತ್ರಿ ವೀರಪ್ಪ ಮೊಯ್ಲಿಯವರು ಖಾಸಗಿ ಟಿವಿ ವಾಹಿನಿಯೊಂದರಲ್ಲಿ ಹೇಳಿದ್ದನ್ನು ಗಮನಿಸಬೇಕು. ನ್ಯಾಯಕ್ಕಾಗಿ ನಡೆದ 26ವರ್ಷಗಳ ಈ ನಿಷ್ಫಲ ಹೋರಾಟಕ್ಕೆ ಯಾರೊಬ್ಬರನ್ನೂ ಜವಾಬ್ದಾರರನ್ನಾಗಿ ಮಾಡಲಾಗದಂತೆ! ಎಲ್ಲವನ್ನೂ ಸಮಗ್ರವಾಗಿ ನೋಡಬೇಕಂತೆ. ಅಂದರೆ ಇದೊಂದು ಸಮಗ್ರ ವೈಫಲ್ಯ. ಹಾಗಾಗಿ ಈಗ ವ್ಯವಸ್ಥೆಯ ಸಮಗ್ರ ಬದಲಾವಣೆ ಅಗತ್ಯವಿದೆ ಎಂಬುದು ನಮ್ಮ ಕಾನೂನು ಮಂತ್ರಿಯವರ ಅಂಬೋಣ.

ಆದರೆ ಇದಕ್ಕಿಂತ ಸುಲಭದ ಮತ್ತು ಪಲಾಯನವಾದಿಯಾದ ಮಾತು ಮತ್ತೊಂದಿರಲಾರದು. ಏಕೆಂದರೆ, ಈ ಸಮಗ್ರ ವೈಫಲ್ಯದ ಜವಾಬ್ದಾರಿಯನ್ನು ಯಾರು ಹೊರಬೇಕು ಎಂಬುದನ್ನು ಕಾನೂನು ಮಂತ್ರಿಯವರು ಹೇಳಿಲ್ಲ! ಯಾರೊಬ್ಬರೂ ಇದಕ್ಕೆ ಅವರ ಪ್ರಕಾರ ಬಿಡಿ ಬಿಡಿಯಾಗಿ ಜವಾಬ್ದಾರರಲ್ಲವಾದ್ದರಿಂದ, ಯಾರೊಬ್ಬರೂ ಬಿಡಿ ಬಿಡಿಯಾಗಿ ಇದರ ರಿಪೇರಿಗೆ ಕೈ ಹಾಕಲಾಗದು ಕೂಡ. ಹಾಗಾದರೆ ಸಮಗ್ರ ರಿಪೇರಿ ಮಾಡುವವವರಾದರೂ ಯಾರು? ಈ ಪ್ರಶ್ನೆ ಕೇಳಿಕೊಂಡಾಗ ಈ ಸಮಗ್ರ ವೈಫಲ್ಯದ ಮಾತು ಎಂತಹ ಅಮೂರ್ತ ಅಸಂಬದ್ಧ ಮಾತು ಎಂಬುದು ಗೊತ್ತಾಗುತ್ತದೆ. ಇಂತಹ ಮಾತುಗಳನ್ನಾಡುತ್ತಲೇ ನಾವು ಭಾರತವೆಂಬ ದೇಶವನ್ನು ಯಾರೂ ಹೇಳಲಾಗಲೀ ಕೇಳಲಾಗಲೀ ಇರದ ಒಂದು ಅಮೂರ್ತ ಅಸಂಬದ್ಧವನ್ನಾಗಿ ಮಾಡಿ ಕೂರಿಸಿ ಈ ಸ್ಥಿತಿಗೆ ತಂದಿಟ್ಟಿದ್ದೇವೆ.

ಇದು ನಮ್ಮ ಕಾನೂನು ಮಂತ್ರಿಯವರಿಗೆ ಆದಷ್ಟು ಬೇಗ ಅರಿವಾದರೆ ಒಳ್ಳೆಯದು. ಏಕೆಂದರೆ, ದುರಂತಕ್ಕೆ ಕಾರಣವಾದ ಸಂಸ್ಥೆಗೆ, ಪ್ರಕರಣ ಇಡಿಯಾಗಿ ವಿಚಾರಣೆಗೊಳಪಟ್ಟು ಸತ್ಯ ಹೊರಬೀಳುವ ಬಹು ಮುನ್ನವೇ ಮತ್ತೆ ಇನ್ನೊಂದು ಕಂಪನಿಯ ಆಡಳಿತದಡಿ ಕಾರ್ಯಾರಂಭ ಮಾಡಲು ಸರ್ಕಾರ ಅನುಮತಿ ನೀಡಿದೆ. ಅದೂ ನಿಷೇಧಿತ ಕೀಟನಾಶಕಗಳ ಉತ್ಪಾದನೆಗಾಗಿ! ಇದಕ್ಕಾಗಿ, ಅಮೆರಿಕಾಕ್ಕೇ ಸೇರಿದ ಈ ಹೊಸ ಆಡಳಿತ ಸಂಸ್ಥೆ-ಡೋ ಕೆಮಿಕಲ್ಸ್- ನಮ್ಮ ಕೇಂದ್ರ ಕೃಷಿ ಸಚಿವಾಲಯಕ್ಕೆ ಲಕ್ಷಾಂತರ ರೂಪಾಯಿಗಳ ಲಂಚ ನೀಡಿ, ನಮ್ಮ ಸರ್ಕಾರದಿಂದಲ್ಲ;ಅಮೆರಿಕಾ ಸರ್ಕಾರದಿಂದ ದಂಡದ ಶಿಕ್ಷೆಗೆ ಒಳಗಾಗಿದೆ! ನಮ್ಮ ಸಿ.ಬಿ.ಐ., ಸಮಸ್ಯೆಯ ಸಮಗ್ರ ಪರಿಹಾರಕ್ಕಾಗಿಯೋ ಏನೋ, ಇನ್ನೂ ಸಮಗ್ರ ತನಿಖೆ ನಡೆಸುತ್ತಲೇ ಇದೆ...

ಇಲ್ಲಿ ಹಲವು ಮುಖ್ಯ ಪ್ರಶ್ನೆಗಳಿವೆ: 1984ರಲ್ಲಿ ನಡೆದ ಈ ದುರಂತದ ಬಗ್ಗೆ ಆರೋಪ ಪತ್ರ ಸಲ್ಲಿಸಲು ಮೂರು ವರ್ಷಗಳು ಏಕೆ ಬೇಕಾಯಿತು? ಸರ್ವೋಚ್ಚ ನ್ಯಾಯಾಲಯ ಆರೋಪ ಪಟ್ಟಿಯನ್ನು ಪರಿಷ್ಕರಿಸಿ, ಆರೋಪಿಗಳಿಗೆ ಕಡಿಮೆ ಶಿಕ್ಷೆಯಾಗುವಂತೆ ನೋಡಿಕೊಂಡ ಮತ್ತು ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸುವಲ್ಲಿ ಮಧ್ಯಸ್ಥಿಕೆ ವಹಿಸಬೇಕಾಗಿ ಬಂದ ಸಂದರ್ಭವಾದರೂ ಎಂತಹುದು? ಇದರ ಹಿಂದೆ ಯಾವ ಒತ್ತಡಗಳಿದ್ದವು? ಇನ್ನು ಬಂಧಿಸಲ್ಪಟ್ಟಿದ್ದ ಆಂಡರ್ಸನನ್ನನ್ನು ಏಕೆ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು? ಆನಂತರ ಆತ ಎಲ್ಲರ ಕಣ್ತಪ್ಪಿಸಿ ಅಮೆರಿಕಾಕ್ಕೆ ಪಲಾಯನ ಮಾಡಿದ್ದಾದರೂ ಹೇಗೆ? ಈತನ ಪಲಾಯನಕ್ಕೆ ಸರ್ಕಾರದ-ವಿದೇಶಾಂಗ

ಭೋಪಾಲ್ ವಿಷಾನಿಲ ದುರಂತದ ಈ ತೀರ್ಪಿನವರೆಗಿನ ಇಡೀ ಪ್ರಕರಣ, ಭಾರತೀಯ ಸಮಾಜ ಎಲ್ಲ ನೆಲೆಗಳಲ್ಲಿ ತಲುಪಿರುವ ದುಃಸ್ಥಿತಿಗೆ ಕನ್ನಡಿ ಹಿಡಿಯುವಂತಿದೆ. ನಮ್ಮ ಸಂವಿಧಾನದ ಪ್ರಕಾರ ಪ್ರಜೆಗಳ ಹಿತರಕ್ಷಣೆಗಾಗಿ ಇರುವ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ- ಈ ಮೂರೂ, ಪ್ರಜೆಗಳೊಂದಿಗೆ ಸಂಬಂಧವನ್ನೂ, ಸಂವೇದನೆಯನ್ನೂ ನಿರ್ಣಾಯಕ ರೀತಿಯಲ್ಲಿ ಕಳೆದುಕೊಂಡಿರುವ ದುರಂತ ಚಿತ್ರ ಇಲ್ಲಿ ಎದುರಾಗುತ್ತದೆ. ಈ ಬಗ್ಗೆ ಮೊನ್ನೆ ನಮ್ಮ ಕೇಂದ್ರ ಕಾನೂನು ಮಂತ್ರಿ ವೀರಪ್ಪ ಮೊಯ್ಲಿಯವರು ಖಾಸಗಿ ಟಿವಿ ವಾಹಿನಿ ಯೊಂದರಲ್ಲಿ ಹೇಳಿದ್ದನ್ನು ಗಮನಿಸಬೇಕು. ನ್ಯಾಯಕ್ಕಾಗಿ ನಡೆದ 26ವರ್ಷಗಳ ಈ ನಿಷ್ಫಲ ಹೋರಾಟಕ್ಕೆ ಯಾರೊಬ್ಬರನ್ನೂ ಜವಾಬ್ದಾರರನ್ನಾಗಿ ಮಾಡಲಾಗದಂತೆ! ಎಲ್ಲವನ್ನೂ ಸಮಗ್ರವಾಗಿ ನೋಡಬೇಕಂತೆ.

ಖಾತೆಯ-ಬೆಂಬಲವಿತ್ತು ಎಂದು ಈ ಪ್ರಕರಣದ ವಿಚಾರಣೆ ನಡೆಸಿದ ಸಿ.ಬಿ.ಐ. ಅಧಿಕಾರಿಯೇ ಹೇಳುತ್ತಿರುವರಲ್ಲ? (ಈತ ಹೀಗೆ ಹೇಳುತ್ತಿರುವುದು ನಿವೃತ್ತಿಯ ನಂತರ ಎನ್ನುವುದು ಬೇರೆ ಮಾತು!)ಆಂಡರ್ಸನ್ ಭಾರತಕ್ಕೆ ಬಂದುದೇ ಭಾರತದಲ್ಲಿ ತನಗೆ ಏನೂ ತೊಂದರೆಯಾಗದೆ ಸುರಕ್ಷಿತವಾಗಿ ಅಮೆರಿಕಾಕಕ್ಕೆ ಕಳಿಸಕೊಡಲಾಗುವುದೆಂಬ ಭಾರತ ಸರ್ಕಾರದ ಆಶ್ವಾಸನೆಯ ಮೇಲೆ ಎಂದು ಅಂದು ಭಾರದಲ್ಲಿನ ಅಮೆರಿಕಾದ ದೂತಾವಾಸದಲ್ಲಿ ಭದ್ರತಾ ಅಧಿಕಾರಿಯೊಬ್ಬರು ಹೇಳುತ್ತಿದ್ದಾರಲ್ಲಾ? ಆಂಡರ್ಸನ್ನನ್ನು ತನಿಖೆಗಾಗಿ ವಾಪಸ್ ಕರೆಸಬಹುದಾಗಿದೆ ಎಂದು ಈಗ ಹೇಳುವ ಕಾನೂನು ಮಂತ್ರಿಯವರು ತಮ್ಮ ಸಚಿವಾಲಯ ಈ ವಿಷಯದಲ್ಲಿ ಈವರೆಗೆ ಏನು ಮಾಡುತ್ತಿತ್ತು ಎಂಬುದನ್ನೇಕೆ ಹೇಳುವುದಿಲ್ಲ? ಅಮೆರಿಕಾದ ಬಹುರಾಷ್ಟ್ರೀಯ ಕಂಪನಿಯ ಅಧಿಕಾರಿಗಳು ಭಾರತದ ನ್ಯಾಯಾಲಯಗಳ ವ್ಯಾಪ್ತಿಗೆ ಒಳಪಡುವುದಿಲ್ಲವೆಂಬ ಅಮೆರಿಕಾದ ವಾದವನ್ನು ಒಪ್ಪಿಕೊಂಡಂತೆ ತೋರುವ ನಮ್ಮ ಸರ್ಕಾರ, ಆ ಕಂಪನಿಗಳು ಇಲ್ಲಿ ಬಂದು ಕಾರ್ಯ ನಿರ್ವಹಿಸಲಾದರೂ ಏಕೆ ಅವಕಾಶ ಮಾಡಿಕೊಡುತ್ತಿದೆ?

ಇವು ಯಾವುದೇ ಪಕ್ಷದ ಸರ್ಕಾರವನ್ನು ದೂರಲು ಕೇಳಲಾಗುವ ಪ್ರಶ್ನೆಗಳಲ್ಲ. ಏಕೆಂದರೆ ಈ 26 ವರ್ಷಗಳಲ್ಲಿ ದುರಂತ ಸಂಭವಿಸಿದ ಮಧ್ಯ ಪ್ರದೇಶದಲ್ಲಿ – ಕೇಂದ್ರದಲ್ಲಿ ವಿವಿಧ ಪಕ್ಷಗಳ ಸರ್ಕಾರಗಳು ಬಂದು ಹೋಗಿವೆ. ಆದರೆ ಈ ಎಲ್ಲ ಸರ್ಕಾರಗಳಡಿಯಲ್ಲೂ ನಮ್ಮ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳು ತಮಗೂ, ಅನಾಥವಾದ ಸಾವಿರಾರು ಕುಟುಂಬಗಳಿಗೂ ಮತ್ತು ವಿವಿಧ ರೋಗ-ರುಜಿನಗಳಿಗೆ ತುತ್ತಾಗಿ ನರಳುತ್ತಿರುವ ಲಕ್ಷಾಂತರ ಸಂತ್ರಸ್ತರಿಗೂ ಸಂಬಂಧವೇ ಇಲ್ಲದಂತೆ, ಎಲ್ಲವನ್ನೂ ಬರೀ ಕಾಗದ-ಪತ್ರಗಳ ವ್ಯವಹಾರದಂತೆ 26 ವರ್ಷಗಳ ಕಾಲ ಎಳೆದುಕೊಂಡು ಬಂದಿವೆ ಎಂದರೆ ಏನು ಹೇಳುವುದು? ಇದರ ಹಿಂದೆ ಇರುವ ಮನೋಭಾವವಾದರೂ ಎಂತಹುದು? ಇವರೆಲ್ಲ ಸೇರಿ ಈ ಮೂಲಕ ರಕ್ಷಿಸುತ್ತಿರುವ ಹಿತಾಸಕ್ತಿಗಳಾದರೂ ಯಾವುವು? ಇವು ಸಾಮಾನ್ಯ ಪ್ರಜಾ ಸಮುದಾಯದ ಹೊರಗಿವೆ ಎಂಬುದೇ ಇದರರ್ಥವಲ್ಲವೆ? ಇದು ಮತ್ತೆ, ನಮ್ಮ ಸಂವಿಧಾನದ ಆಶಯಗಳು ಇಲ್ಲಿ ಹೆಚ್ಚೂ ಕಡಿಮೆ ಕುಸಿದು ಬಿದ್ದಿದೆ ಎಂಬುದರ ಸೂಚನೆಯೇ ಅಲ್ಲವೆ? ಇದರರ್ಥ ಮತ್ತೆ ನಾವು ಒಂದು ಗಣರಾಜ್ಯವಾಗಿ, ರಾಷ್ಟ್ರವಾಗಿ ಬಾಳುವ ಅರ್ಹತೆಯನ್ನೇ, ಸಾಮರ್ಥ್ಯವನ್ನೇ-ಅಂದರೆ ಪರಸ್ಪರ ಭಾವ ಸಂಬಂಧವನ್ನೇ- ಕಳೆದುಕೊಳ್ಳತೊಡಗಿದ್ದೇವೆ ಎಂದಲ್ಲವೆ?

ಇನ್ನು ಈ ಹಿತಾಸಕ್ತಿಗಳಿಂದ ಅಪಾರ ಲಾಭವಿರುವುದರಿಂದಲೇ ಅಲ್ಲವೆ, ಇವರು-ಸರ್ಕಾರಿ ನೌಕರರು, ಪೋಲೀಸರು ಅಧಿಕಾರಿಗಳು, ರಾಜಕಾರಣಿಗಳು, ಉದ್ಯಮಿಗಳು ಮತ್ತು ನ್ಯಾಯಾಂಗ-ಇಷ್ಟು ಧೈರ್ಯವಾಗಿ ಸಂವೈಧಾನಿಕ ಬದ್ಧತೆಗಳನ್ನು ಲೆಕ್ಕಿಸದೆ ಹೀಗೆ ಸಂವೇದನಾಹೀನವಾಗಿ ವರ್ತಿಸುತ್ತಿರುವುದು? ಈ ದುರಂತದಲ್ಲಿ ಸಾವನ್ನಪ್ಪಿದ ಒಂದು ಮನುಷ್ಯ ಮುಖವನ್ನಾದರೂ, ಅದರ ಚಿತ್ರವನ್ನಾದರೂ ಇವರು ಒಮ್ಮೆ ಜೀವವುಳ್ಳ ಮನುಷ್ಯರಾಗಿ ದಿಟ್ಟಿಸಿ ನೋಡಲು ಸಾಧ್ಯವಾಗಿದ್ದರೆ ಇವರಾರೂ ಹೀಗೆ ವರ್ತಿಸುತ್ತಿರಲಿಲ್ಲ. ಇವರೆಲ್ಲ ಮನುಷ್ಯತ್ವ ಕಳೆದುಕೊಂಡು ಕಬ್ಬಿಣವಾಗಿ ಹೋಗಿದ್ದಾರೆ. ಇವರ ಆತ್ಮದೊಳಕ್ಕೆ ಕಬ್ಬಿಣ ಸೇರಿಕೊಂಡುಬಿಟ್ಟಿದೆ. ಹಾಗಾಗಿಯೇ ಇವರೆಲ್ಲ ಸೇರಿ ಒಂದು ಲೋಹದ ಯಂತ್ರದಂತೆ ಕೆಲಸ ಮಾಡುತ್ತಾ 26 ವರ್ಷಗಳ ನಂತರ ಈ ರಾಕ್ಷಸ ದುರಂತಕ್ಕೆ ಕಾರಣರಾದವರಿಗೆ 2 ವರ್ಷಗಳ ಸೆರೆಮನೆವಾಸದ ಶಿಕ್ಷೆ ಎಂಬ ಉತ್ಪನ್ನವನ್ನು ಹೊರಹಾಕಿದ್ದಾರೆ. ಈ ಯಂತ್ರದೊಂದಿಗೆ ಈ 60 ವರ್ಷಗಳಲ್ಲಿ ಹೇಗೋ ಏಗುತ್ತಾ ಹೋಗುವುದನ್ನು ಕಲಿತಿರುವ ನಾವೂ ಕಬ್ಬಿಣವಾಗಿ ಹೋಗಿ, ಇಂತಹ ತೀರ್ಪುಗಳನ್ನು ಚರ್ಚಿಸಿ ಚರ್ಚಿಸಿ ಆಯಾಸದಿಂದ ಸುಮ್ಮನಾಗುವ ಖಂಡನೆಗೆ ಒಳಗಾಗಿದ್ದೇವೆ.

ಈ ತೀರ್ಪಿನ ಬಗ್ಗೆ ಈ ಎಲ್ಲ ಚರ್ಚೆ-ಗದ್ದಲ-ಹಾಹಾಕಾರ ಕೊನೆಗೆ ನಿರರ್ಥಕವಾಗಿ ಹೋಗುವುದೆಂದು ಆತಂಕವೇಕೆ ಉಂಟಾಗುತ್ತಿದೆಯೆಂದರೆ, ಈ ಇಡೀ ಪ್ರಕರಣದಿಂದ ಯಾರೂ ಏನೂ ಕಲಿಯಲು ಸಿದ್ಧರಿಲ್ಲದಿರುವುದರಿಂದ. ಯೂನಿಯನ್ ಕಾರ್ಬೈಡ್ ಈಗ ತನ್ನ ಆಸ್ತಿಯನ್ನು ಪರಭಾರೆಗೊಳಪಡಿಸಿರುವ ಮತ್ತೊಂದು ಕಂಪನಿಯ ಹೆಸರಲ್ಲಿ ಅಪಮಾರ್ಗ ಹಿಡಿದು ನಿಷೇಧಿತ ಕೀಟನಾಶಕಗಳನ್ನು ತಯಾರಿಸಲು ಅವಕಾಶ ಮಾಡಿಕೊಟ್ಟಿರುವರಾದರೂ ಯಾರು, ಏಕೆ? ಯೂನಿಯನ್ ಕಾರ್ಬೈಡ್‌ನ ಆಸ್ತಿಗಳ ವಾರಸುದಾರನಾಗಲು ಅವಕಾಶ ಮಾಡಿಕೊಟ್ಟ ನಮ್ಮ ಸರ್ಕಾರ ಈ ಡೋ ಕೆಮಿಕಲ್ಸ್ ಕಂಪನಿಯ ಮೇಲೆ ವಿಷಾನಿಲದಿಂದ ಮಲಿನಗೊಂಡಿರುವ ಭೋಪಾಲದ ನೆಲ-ನೀರುಗಳನ್ನು ಸ್ವಚ್ಛಗೊಳಿಸುವ ಜವಾಬ್ದಾರಿಯನ್ನೇಕೆ ಹೊರಿಸಲು ನಿರಾಕರಿಸಿತು? ಈ ದುರಂತ ನಡೆದ ಇಪ್ಪತ್ತೈದು ವರ್ಷಗಳಲ್ಲಿ ಆಡಳಿತ ನಡೆಸಿರುವ ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ಸರ್ಕಾರಗಳೆರಡರ ಸದಸ್ಯರೂ ಡೋ ಕೆಮಿಕಲ್ಸ್ ಪರವಕಾಲತ್ತು ವಹಿಸರುವ ನೇರ ದಾಖಲೆಗಳು

ಇವೆಯಲ್ಲ? ಇದರ ಜೊತೆಗೆ, ಜೀವ ರಸಾಯನಿಕಗಳ ಕೈಗಾರಿಕೆಗಳ ಅನಾಹುತಗಳಿಗೆ ಸಂಬಂಧಿಸಿದಂತೆ, ಪರಿಹಾರದ ಜವಾಬ್ದಾರಿಯನ್ನು ಕೈಗಾರಿಕೆಗಳ ಮೇಲೆ ಹೊರಿಸದಂತೆ ಸ್ವತಃ ಪ್ರಧಾನ ಮಂತ್ರಿ ಕಾರ್ಯಾಲಯ ಒತ್ತಡ ಹೇರುತ್ತಿದೆ ಎಂದು ಈಗ ಪರಿಸರವಾದಿ ಸಂಸ್ಥೆಗಳು ಬಹಿರಂಗವಾಗಿ ಆಪಾದಿಸುತ್ತಿವೆ. ಇದು ನಿಜವೇ? ಹಾಗೇ, ಅಮೆರಿಕಾದೊಡನೆಯ ನಾಗರಿಕ ಪರಮಾಣು ಒಪ್ಪಂದದನ್ವಯ, ಪರಮಾಣು ಅನಾಹುತಗಳಿಗೆ ಪರಿಹಾರದ ಜವಾಬ್ದಾರಿಗೆ ಒಂದು ಮಿತಿ ಹಾಕಬೇಕು ಎಂಬ ಅಮೆರಿಕಾದ ಒತ್ತಡಕ್ಕೆ ಸರ್ಕಾರ ಮಣಿದಿರುವಂತೆ ತೋರುತ್ತಿದೆ. ಆದರೆ ಈಗ ಭೂಪಾಲ್ ದುರಂತದ ತೀರ್ಪಿನ ನಂತರ ಎದ್ದಿರುವ ಹಾಹಾಕಾರದ ಹಿನ್ನೆಲೆಯಲ್ಲಿ ಈ ಬಗ್ಗೆ ಪುನರಾಲೋಚನೆ ಸಾಧ್ಯ ಎನ್ನತೊಡಗಿದೆ.

ಆದರೆ ಈ ಹಾಹಾಕಾರ ನಿಂತೊಡನೆ ಏನಾಗುವುದೆಂದು ಯಾರು ಬಲ್ಲರು? ಏಕೆಂದರೆ, ಆಳುವ ವರ್ಗ ಮತ್ತು ಆಳಿಸಿಕೊಳ್ಳುವ ವರ್ಗ ತಮ್ಮದೇ ಹಿತಾಸಕ್ತಿಗಳ ಎರಕಗಳಲ್ಲಿ ಸಿಕ್ಕಿಕೊಂಡು ಇಲ್ಲಿ ಒಂದಕ್ಕೊಂದು ಸಂಬಂಧವಿಲ್ಲದಂತೆ ಎರಡು ಭಿನ್ನ ಘಟಕಗಳಾಗಿ ಒಡೆದುಹೋಗಿವೆ. ಹಾಗೆ ನೋಡಿದರೆ, ಕಳೆದ ಆರು ವರ್ಷಗಳಿಂದ ಈ ದೇಶದ ಪ್ರಧಾನ ಮಂತ್ರಿಯಾಗಿರುವವರು ಈ ದೇಶದ ಜನತೆಯಿಂದ ನೇರವಾಗಿ ಆಯ್ಕೆಯಾದವರೇ ಅಲ್ಲವಲ್ಲ! ಅಷ್ಟೇ ಅಲ್ಲ, ಇವರು ರಾಜಕಾರಣವನ್ನು ಪ್ರವೇಶಿಸಿದ್ದೇ, ತಾವು ದೆಹಲಿಯ ನಿವಾಸಿಯಾಗಿದ್ದರೂ ಗೌಹಾತಿಯ ನಿವಾಸಿ ಎಂದು ದಾಖಲೆ ಸೃಷ್ಟಿಸಿ-ಅಂದರೆ ಸಂವಿಧಾನದ ಕಣ್ಣಿಗೆ ಮಣ್ಣೆರಚಿ-ಅಸ್ಸಾಂನಿಂದ ರಾಜ್ಯಸಭೆಗೆ ಆಯ್ಕೆಯಾಗುವ ಮೂಲಕ! ಇದು ನಂತರ ಇತರರಿಗೆ ಮೇಲ್ಪಂಕ್ತಿಯಾಯಿತಷ್ಟೆ!

ಇದೆಲ್ಲವೂ ಅಭಿವೃದ್ಧಿ ರಾಜಕಾರಣದ ಕುರುಡಿನಿಂದ ಹುಟ್ಟಿದ ವಿಕ್ಷಿಪ್ತ ರಾಜಕಾರಣದ ಫಲವೇ ಆಗಿದೆ. ನಾವು ಎಲ್ಲ ರೀತಿಯ ಕೈಗಾರಿಕೆಗಳನ್ನು ಸ್ಥಾಪಿಸಿ, ಎಲ್ಲ ರೀತಿಯ ಉತ್ಪನ್ನಗಳನ್ನು ತಯಾರಿಸಿ ಮಾರುಕಟ್ಟೆಯ ತುಂಬಾ ತುಂಬಿದರೆ ನಮ್ಮದು ಸಮೃದ್ಧ-ಸುಭಿಕ್ಷ ದೇಶವೆನಿಸಿಕೊಳ್ಳುತ್ತದೆ; ಆಗ ನಾವು ಜಾಗತಿಕ ಶಕ್ತಿ ಎನಿಸಿ, ಜಗತ್ತು ನಮ್ಮ ಮಾತು ಕೇಳತೊಡಗುತ್ತದೆ ಎಂಬ ಭ್ರಮೆಯ ಪರಿಣಾಮವಿದು. ಆದರೆ ಈ ಪ್ರಕ್ರಿಯೆ ಇಷ್ಟು ಸರಳವೇ, ಸುಲಭವೇ ಮತ್ತು ಇದು ಒಂದಲ್ಲ ಒಂದು ದಿನ ತನ್ನ ಗುರಿ ಮುಟ್ಟುವಂತಹುದೇ? ಮುಟ್ಟುವುದಾದರೆ, ಅದು ಆ ಹೊತ್ತಿಗೆ ರಾಷ್ಟ್ರ ಜೀವನದಲ್ಲಿ ಏನೆಲ್ಲ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ-ಪಾರಿಸರಿಕ ಅನಾಹುತಗಳನ್ನು ಉಂಟು ಮಾಡಬಲ್ಲುದು ಎಂಬ ಆಳದ ಮತ್ತು ಸಂಕೀರ್ಣ ಪ್ರಶ್ನೆಯ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದ ಯಾಂತ್ರಿಕ ಆಲೋಚನಾ ಕ್ರಮದ ಫಲವಿದು. ಹಾಗಾಗಿಯೇ ಪ್ರಭುತ್ವದ ಎಲ್ಲ ಅಂಗಗಳೂ ಈ ಮಹಾ ಮಾನವ ದುರಂತವನ್ನು ಕೇವಲ ಒಂದು ಕೈಗಾರಿಕಾ ಆಕಸ್ಮಿಕವೆಂದು ಭಾವಿಸಿ ವ್ಯವಸ್ಥೆಯ ಭಾಗವಾಗಿ ಮಾತ್ರ-ಅಂದರೆ ಇದೊಂದು ಬಡವರಿಗೆ ಅಷ್ಟೋ ಇಷ್ಟೋ ಪರಿಹಾರ ಹಂಚುವ ಇನ್ನೊಂದು ಸರ್ಕಾರಿ ಕಾರ್ಯಕ್ರಮವೆಂಬಂತೆ-ಕ್ರಿಯಾಶೀಲವಾದವು. ಇನ್ನು ನಮ್ಮ ಕೈಗಾರಿಕೋದ್ಯಮದ ಮಹಾ ಅಮಾತ್ಯರು ಇದಕ್ಕೂ ತಮಗೂ ಏನೂ ಸಂಬಂಧವಿಲ್ಲದಂತೆ; ಸಂತ್ರಸ್ತರಿಗೆ ಮೂರು ಕಾಸಿನ ಪರಿಹಾರವಿರಲಿ, ಒಂದು ಸಾಂತ್ವನದ ಮಾತನ್ನೂ ಆಡಲಾಗದಷ್ಟು ದೂರವುಳಿದಿದ್ದಾರೆ ಎಂದರೆ ಈ ವ್ಯವಸ್ಥೆ ಹೇಗೆ ಎರಡಾಗಿ ಒಡೆದುಹೋಗಿರ

ಬಹುದು! ಈ ದುರಂತದ ಬಗ್ಗೆ ಅಂದಾಜು ಮಾಡಲು ದುರಂತದ ಮಾರನೆಯ ದಿನ ಭೂಪಾಲ್‌ಗೆ ಭೇಟಿನೀಡಿದ್ದ ಆಗಿನ ವೈಜ್ಞಾನಿಕ - ಕೈಗಾರಿಕಾ ಸಂಶೋಧನಾ ಮಂಡಳಿ (CSIR)ಯ ಅಧ್ಯಕ್ಷ ವರದರಾಜನ್, 'ದೇಶದ ಕೈಗಾರಿಕಾ ಪ್ರಗತಿಯ ಹಾದಿಯಲ್ಲಿ ಇಂತಹ ದುರಂತಗಳು ಸಾಮಾನ್ಯ. ಇವುಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ಮುಂದುವರೆದಲ್ಲಿ ಮಾತ್ರ ದೇಶ ಪ್ರಗತಿಯ ಹಾದಿಯಲ್ಲಿ ದೃಢ ಹೆಜ್ಜೆ ಇಡಬಲ್ಲುದು' ಎಂದನೆಂದರೆ ನಾವು ಎಂತಹ ಭಯಂಕರ ರಾಕ್ಷಸ ವ್ಯವಸ್ಥೆಯನ್ನು ಕಟ್ಟಿ ಕೊಂಡಿದ್ದೇವೆ ಎಂಬುದರ ಒಂದು ಅಂದಾಜಾದರೂ ಸಿಗಬಹುದು!

ಅಭಿವೃದ್ಧಿ ರಾಜಕಾರಣದ ಕುರುಡಿನಿಂದ ಹುಟ್ಟಿದ ವಿಕ್ಷಿಪ್ತ ರಾಜಕಾರಣದ ಫಲವೇ ಆಗಿದೆ. ನಾವು ಎಲ್ಲ ರೀತಿಯ ಕೈಗಾರಿಕೆಗಳನ್ನು ಸ್ಥಾಪಿಸಿ, ಎಲ್ಲ ರೀತಿಯ ಉತ್ಪನ್ನಗಳನ್ನು ತಯಾರಿಸಿ ಮಾರುಕಟ್ಟೆಯ ತುಂಬಾ ತುಂಬಿದರೆ ನಮ್ಮದು ಸಮೃದ್ಧ-ಸುಭಿಕ್ಷ ದೇಶವೆನಿಸಿಕೊಳ್ಳುತ್ತದೆ; ಆಗ ನಾವು ಜಾಗತಿಕ ಶಕ್ತಿ ಎನಿಸಿ, ಜಗತ್ತು ನಮ್ಮ ಮಾತು ಕೇಳತೊಡಗುತ್ತದೆ ಎಂಬ ಭ್ರಮೆಯ ಪರಿಣಾಮವಿದು. ಆದರೆ ಈ ಪ್ರಕ್ರಿಯೆ ಇಷ್ಟು ಸರಳವೇ, ಸುಲಭವೇ ಮತ್ತು ಇದು ಒಂದಲ್ಲ ಒಂದು ದಿನ ತನ್ನ ಗುರಿ ಮುಟ್ಟುವಂತಹುದೇ? ಮುಟ್ಟುವುದಾದರೆ, ಅದು ಆ ಹೊತ್ತಿಗೆ ರಾಷ್ಟ್ರ ಜೀವನದಲ್ಲಿ ಏನೆಲ್ಲ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ-ಪಾರಿಸರಿಕ ಅನಾಹುತಗಳನ್ನು ಉಂಟು ಮಾಡಬಲ್ಲುದು ಎಂಬ ಆಳದ ಮತ್ತು ಸಂಕೀರ್ಣ ಪ್ರಶ್ನೆಯ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದ ಯಾಂತ್ರಿಕ ಆಲೋಚನಾ ಕ್ರಮದ ಫಲವಿದು.

ಹಾಗಾಗಿಯೇ ಈ ಭೂಪಾಲ್ ವಿಷಾನಿಲ ದುರಂತ ಕುರಿತ ತೀರ್ಪಿನ ಸಮಯದಲ್ಲೇ ಮೆಕ್ಸಿಕೋ ಖಾರಿಯಲ್ಲಿ ಬ್ರಿಟಿಷ್ ಪೆಟ್ರೋಲಿಯಂ ಕಂಪನಿಯ ತೈಲ ವೇದಿಕೆ ಸ್ಫೋಟಗೊಂಡು ಉಂಟಾಗಿರುವ ಬೃಹತ್ ಪ್ರಮಾಣದ ಸಾಗರ ಜೀವ ಸಂತತಿ ನಾಶ ಮತ್ತು ಭೀಕರ ಜಲ ಮಾಲಿನ್ಯ ನಮ್ಮನ್ನು ಕಿಂಚಿತ್ತೂ ಕಂಗೆಡಿಸದು.(ಹಾಗೇ ಇದರಿಂದ ಹೌಹಾರಿರುವ ಅಮೆರಿಕಾದ ಅಧ್ಯಕ್ಷ ಒಬಾಮಾ ಯಾವ ನ್ಯಾಯಾಲಯದ ಮಧ್ಯಪ್ರವೇಶವೂ ಇಲ್ಲದೆ, ಕೇವಲ ನೈತಿಕ ಜವಾಬ್ದಾರಿಯ ಆಧಾರದ ಮೇಲೆ ತಕ್ಷಣವೇ ಹೇಗೆ ಆ ಕಂಪನಿಯಿಂದ ಬೃಹತ್ ಪ್ರಮಾಣದ ಪರಿಹಾರ ಮೊತ್ತವನ್ನು ಕಕ್ಕಿಸತೊಡಗಿದ್ದಾನೆ ಎಂಬುದನ್ನು ಸುಮ್ಮನೆ ಮೆಚ್ಚುಗೆಯಿಂದ ನೋಡಬಲ್ಲೆವು.) ಇದೆಲ್ಲ ಯಾವುದರ ಸೂಚನೆ, ಎಂತಹ ಸಮಾಜದ, ಪ್ರಪಂಚದ, ಸೃಷ್ಟಿಗೆ ನಾಂದಿ ಎಂಬ ಆಲೋಚನೆಯೇ ಈಗ ನಮ್ಮ ಬಳಿ ಸುಳಿಯದು... ಎಷ್ಟಾದರೂ, ನಮ್ಮೆಲ್ಲರ ಆತ್ಮ ಕಬ್ಬಿಣವಾಗಿಬಿಟ್ಟಿದೆಯಲ್ಲವೇ?

ಇಂತಹ ಪರಿಸ್ಥಿತಿಯಲ್ಲೇ, ಹಗಲೂ ರಾತ್ರಿ, ರೈತ ರೈತ ಎಂದು ಬೊಬ್ಬಿರಿಯುವ ಪಕ್ಷವೊಂದು ಇಂದು ರಾಜ್ಯಸಭೆಗೆ ತನ್ನ ಪ್ರತಿನಿಧಿಯಾಗಿ ರೈತ ಬದುಕಿಗೆ ಸಂಬಂಧವೇ ಇಲ್ಲದ (ಪಕ್ಷದ ಜೇಬಿಗೂ ತನ್ನ ಶಾಸಕರ ಜೇಬಿಗೂ ಸಾಕಷ್ಟು ಹಣ ತುಂಬಲ್ಲ)ಧನಿಕ ಹೆಂಡದುದ್ಯಮಿಯೊಬ್ಬನನ್ನು ಕಳಿಸಲು ನಿರ್ಧರಿಸಿರುವುದಾಗಿ ಬಹಿರಂಗವಾಗಿ ಘೋಷಿಸುವ ಧೈರ್ಯ ಮಾಡುವುದು. ರೈತನ ಹೆಸರಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದ ಸರ್ಕಾರ ರೈತನ ಮೂಗಿಗೆ ಅಭಿವೃದ್ಧಿಯ ತುಪ್ಪ ಹಚ್ಚಿ ಕೃಷಿ ಸಮಾಜದ ಅಡಿಗಲ್ಲುಗಳನ್ನೇ ಅಲ್ಲಾಡಿಸಿ ಉಳ್ಳವರ ಪ್ರತ್ಯೇಕಿತ ಸಮಾಜವೊಂದನ್ನು ಸ್ಥಾಪಿಸಲು ಹವಣಿಸುತ್ತಿರುವ ಉದ್ಯಮಿಗಳಿಗೆ ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ರತ್ನಗಂಬಳಿ ಹಾಸಲು ಸಂಭ್ರಮದೊಂದಿಗೆ ಸಿದ್ಧವಾಗುವುದು. ಇದೆಲ್ಲದರ ಮಧ್ಯೆ ಈ ದೇಶವನ್ನು ಬಹುಕಾಲ ಆಳಿದ ನಮ್ಮ ಅತಿ ಪುರಾತನ ಪಕ್ಷವೊಂದು ಪಿಂಜರಾ ಪೋಲು ಸ್ಥಿತಿ ತಲುಪಿ, ಒಂದು ಸಣ್ಣ ಪ್ರವಾಹ ಸಂತ್ರಸ್ತರ ನಿಧಿಯನ್ನು ಅಗತ್ಯ ಘನತೆಯೊಂದಿಗೆ ನಿರ್ವಹಿಸುವ ದಕ್ಷತೆ'ಯನ್ನೇ ಕಳೆದುಕೊಂಡು ಸಾರ್ವಜನಿಕ ನಗೆಪಾಟಲಿಗೆ ಈಡಾಗಿರುವುದನ್ನು ಬೇರೆ ನಾವು ನೋಡಬೇಕಾಗಿದೆ!

ನಿಜವಾಗಿಯೂ ಯಾರಾದರೂ ಹತಾಶರಾಗುವಂತಹ ಪರಿಸ್ಥಿತಿಯೇ ಇದು.

* * * * * * *

ಈ ದುರಂತ ಕುರಿತ ತೀರ್ಪು ಹೊರಬಿದ್ದ ನಂತರ ಮಾಧ್ಯಮಗಳು ಎಬ್ಬಿಸಿದ ಹಾಹಾಕಾರ (ಮಾಧ್ಯಮಗಳಾದರೂ ಈವರೆಗೆ-ಪ್ರತಿ ವರ್ಷ ಭೂಪಾಲ್ ದುರಂತ ದಿನವನ್ನು ವಿಶೇಷ ವರದಿಗಳ ಮೂಲಕ ಸ್ಪರ್ಧಾತ್ಮಕವಾಗಿ ಆಚರಿಸುವುದರ ಹೊರತಾಗಿ-ಏನು ಮಾಡುತ್ತಿದ್ದವೋ?) ಮತ್ತು ಇಡೀ ಪ್ರಕರಣದ ನಿರ್ವಹಣೆಯಲ್ಲಿ ವಿವಿಧ ಸರ್ಕಾರಗಳು ಅಂದಿನಿಂದ ಇಂದಿನವರೆಗೆ ತೋರುತ್ತಿರುವ ಜನವಿರೋಧಿಯಾದ ಬೇಜವಾಬ್ದಾರಿತನಗಳು ಒಂದೊಂದಾಗಿ ಬಯಲಾಗುತ್ತಾ, ಅವೆಲ್ಲ ಒಟ್ಟಾಗಿ ಇಂದಿನ ಸರ್ಕಾರದ

ಬುಡಕ್ಕೇ ಬರತೊಡಗಿದಾಗ, ಸರ್ಕಾರ ಹಾಹಾಕಾರದ ತೀವ್ರತೆಯನ್ನು ಕಡಿಮೆಗೊಳಿಸಲು ಸಮಸ್ಯೆಯ ಪರಿಹಾರಕ್ಕೆಂದು ಸಚಿವ ಸಮಿತಿಯೊಂದನ್ನು ರಚಿಸಿದೆ. ಅದು ಹೊಸ ಪರಿಹಾರ ಸೂತ್ರವೊಂದನ್ನು ರೂಪಿಸಿ ಸಂತ್ರಸ್ತರಿಗೆ ಸಹಾನುಭೂತಿ ತೋರಿಸಲು ಹೊರಟಿದೆ. ಆದರೆ ಕಳೆದ ಇಪ್ಪತ್ತೈದು ವರ್ಷಗಳ ಉದಾಸೀನ್ಯದಿಂದಾಗಿ ಸಂತ್ರಸ್ತರ ಪಟ್ಟಿಯ ಗೊಂದಲವೇ ಇನ್ನೂ ಇತ್ಯರ್ಥವಾಗದಿರುವಾಗ ಹೊಸ ಪರಿಹಾರವನ್ನು ಹೇಗೆ ವಿತರಿಸಲಾಗುವುದೋ ತಿಳಿಯದು! ಹಾಗೇ, ವಿಷಾನಿಲದಿಂದ ಮಲಿನಗೊಂಡು ಇಪ್ಪತ್ತೈದು ವರ್ಷಗಳಿಂದ ಹಾಗೇ ಬಿದ್ದಿರುವ ಭೂಪಾಲ್‌ನ ನೆಲ-ಜಲಗಳನ್ನು 300 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸ್ವಚ್ಛೀಕರಿಸಲು ಹೊರಟಿದೆ. ಇದೆಲ್ಲವೂ ಶ್ರೀಸಾಮಾನ್ಯನ ಹಣದಿಂದ! ಯೂನಿಯನ್ ಕಾರ್ಬೈಡ್ ಅಥವಾ ಡೋ ಕೆಮಿಕಲ್ಸ್‌ನಿಂದ ಹಣ ವಸೂಲು ಮಾಡುವ ಪ್ರಯತ್ನದ ಪ್ರಸ್ತಾಪವೇ ಇಲ್ಲ. ಇದೆಲ್ಲ ಆಮೇಲಂತೆ!

ಇನ್ನು ಆರೋಪ ಪಟ್ಟಿಯನ್ನು ಆಪಾದಿತರಿಗೆ ಅನುಕೂಲವಾಗುವಂತೆ ಪರಿಷ್ಕರಿಸಿದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಈಗ ಪ್ರಶ್ನಿಸಲಿದೆಯಂತೆ ಮತ್ತು ಕೈಗಾರಿಕಾ ದುರಂತಗಳಿಗೆ ನಿಖರ ಜವಾಬ್ದಾರಿಯನ್ನು ನಿಗದಿಪಡಿಸುವ ಮತ್ತು ಹೆಚ್ಚಿನ ಪರಿಹಾರಕ್ಕೆ ಅವಕಾಶ ಮಾಡಿಕೊಡುವ ಕಾನೂನು ರಚಿಸಲಿದೆಯಂತೆ! ಎಲ್ಲಕ್ಕಿಂತ ಮುಖ್ಯವಾಗಿ, ಈಗಾಗಲೇ ಸಾವಿನ ಅಂಚಿನಲ್ಲಿರುವ ಆಂಡರ್ಸನ್ನನನ್ನು ಇಲ್ಲಿಗೆ ಕರೆಸಿ ಮತ್ತೆ ವಿಚಾರಣೆಗೊಳಿಪಡಿಸುವ ಪ್ರಯತ್ನ ಮಾಡಲಿದೆಯಂತೆ! ಅಪರಾಧಿಯನ್ನು ಗೌರವಾನ್ವಿತ ಅತಿಥಿಯಂತೆ ಸದ್ದಿಲ್ಲದೆ(ಅಂದರೆ ಯಾವುದೇ ಇಲಾಖೆಯಲ್ಲಿ ದಾಖಲೆಯೇ ಇಲ್ಲದಂತೆ) ಸುರಕ್ಷಿತವಾಗಿ ಸ್ವದೇಶಕ್ಕೆ ಕಳಿಸಿಕೊಟ್ಟ ವ್ಯವಸ್ಥೆ ಒಂದು ಕ್ಷಮೆ ಅಥವಾ ಒಂದು ಕನಿಷ್ಠ ಪಶ್ಚಾತ್ತಾಪದ ಮಾತಿಲ್ಲದೆ ಈ ಮಾತನ್ನಾಡಿದಾಗ ನಾವು ಈ ಮಾತನ್ನು ಅದರ ಮುಖಬೆಲೆಯಲ್ಲೇ ನಂಬಬೇಕೆ? ತೀರ್ಪು ಬರುವವರೆಗೆ ಎಲ್ಲಕ್ಕೂ ಕಣ್ಣು ಮುಚ್ಚಿಕೊಂಡಿದ್ದ ವ್ಯವಸ್ಥೆ ಇದ್ದಕ್ಕಿದ್ದಂತೆ ಯಾರನ್ನೆಲ್ಲ ರಕ್ಷಿಸಲು ಈ ಎಲ್ಲ ಹೊಸ ನಾಟಕ ಹೂಡಿದೆ? ವ್ಯವಸ್ಥೆ ತನ್ನ ಮಾನ ಮುಚ್ಚಿಕೊಳ್ಳಲು ಮತ್ತು ತನ್ನ ಲೂಟಿಯನ್ನು ಮುಂದುವರೆಸಲಷ್ಟೆ ಈ ಎಲ್ಲ ಬೂಟಾಟಿಕೆಯಲ್ಲವೇ? ಪ್ರಸಕ್ತ ವ್ಯವಸ್ಥೆಯ ಮುಖ್ಯಸ್ಥರಾಗಿರುವ ಪ್ರಧಾನ ಮಂತ್ರಿ ಏಕೆ ಈ ಬಗ್ಗೆ ಒಂದು ಮಾತನ್ನೂ ಆಡಿಲ್ಲ? ನವ ಕೈಗಾರಿಕಾ ಸಾಮ್ರಾಜ್ಯಶಾಹಿಯ ದೊಡ್ಡ ವಕ್ತಾರರಾಗಿರುವ ಅವರು ಹೇಗೆ ಇಪ್ಪತ್ತೈದು ವರ್ಷಗಳ ಈ ದೊಡ್ಡ ವಂಚನೆಯನ್ನು ರಾಜಕೀಯವಾಗಿ ವಿವರಿಸಬಲ್ಲರು?

ಇಲ್ಲ, ಈ ವ್ಯವಸ್ಥೆಯ ಅಡಿಗಲ್ಲುಗಳನ್ನು ಅಲ್ಲಾಡಿಸದ ಹೊರತು, ವ್ಯವಸ್ಥೆಗೆ ಹೊಸ ರೂಪ ಕೊಡದ ಹೊರತು ಇದಾವುದೂ ನಿಲ್ಲದು. ಇದಕ್ಕಾಗಿ ನಾನು ಸಮಾನ ಮನಸ್ಕ ಗೆಳೆಯರ ನಡುವೆ ಸುಮ್ಮನೆ ಚರ್ಚೆಗಾಗಿ ಎರಡು ಸಲಹೆಗಳನ್ನು ನೀಡಬಯಸುವೆ. ಒಂದು: ಕೈಗಾರೀಕೀಕರಣ ಇನ್ನು ಸಾಕು ಎಂಬ ಆಂದೋಲನವನ್ನು ಸಣ್ಣ ಪ್ರಮಾಣದಲ್ಲಿ ಅಥವಾ ಸ್ಥಳೀಯ ಮಟ್ಟದಲ್ಲಿ ಆರಂಭಿಸುವುದು. ಎರಡು: ವಿವಿಧ ಮಟ್ಟಗಳ ಚುನಾವಣೆಗಳಿಗೆ ನಿಲ್ಲಲು ವಿವಿಧ ಮಟ್ಟದ ಗರಿಷ್ಠ ಆದಾಯ ಮಿತಿಗಳನ್ನು ವಿಧಿಸುವಂತೆ ಚುನಾವಣಾ ಕಾನೂನು ಬದಲಾವಣೆಗೆ ಒತ್ತಾಯಿಸುವುದು. ಏಕೆಂದರೆ, ಬಡವರ(ಪ್ರತಿನಿಧಿಗಳಲ್ಲ) ಸರ್ಕಾರವೊಂದೇ-ಅದೆಷ್ಟೇ ರೂಕ್ಷವಾದರೂ-ಇವೊತ್ತಿಗೆ ಪರ್ಯಾಯವೇನೋ... ತಿಳಿಯದು! □

ಇಸಮ್‌ಗಳನ್ನು ನುಂಗುತ್ತಿರುವ ತ್ರಿಕರಣಗಳು

(17ನೇ ಪುಟದಿಂದ)

ಜಾತಿ ಕೇವಲ ಸಾಮಾಜಿಕ ಸಮಸ್ಯೆಯಲ್ಲ ಅದು ಆರ್ಥಿಕ ಮತ್ತು ರಾಜಕೀಯ ಸಮಸ್ಯೆಯಾಗಿದೆ. ಮೇಲ್ಮಟ್ಟ ದಿಂದ ಅದನ್ನು ನಾಶಪಡಿಸಲು ಸಾದ್ಯವಿಲ್ಲ.

ಸಮಾಜವಾದಿ ಸಿದ್ಧಾಂತವು 1920ರ ದಶಕದಲ್ಲಿ ಭಾರತದಲ್ಲಿ ಕಾಣಿಸಿಕೊಂಡಿತು. 1970-80ರ ದಶಕದಲ್ಲಿ ಅದು ಕೃಷಿಕ ಆಳ್ವಿಕೆ, ಜಾತಿವಿನಾಶ, ವಿಕೇಂದ್ರಿಕೃತ ಯೋಜನೆಗಳು ಹಾಗೂ ಆರ್ಥಿಕ ಪುನಾರಚನೆ ಹೋರಾಟದಿಂದಾಗಿ ಹೆಚ್ಚು ಪ್ರಚಾರಕ್ಕೆ ಬಂದಿತು. ಆಚಾರ್ಯ ನರೇಂದ್ರ ದೇವ, ಜಯಪ್ರಕಾಶ ನಾರಾಯಣ - ಲೋಹಿಯಾರಂತವರು ಅದನ್ನು ಬೇರುಮಟ್ಟದಿಂದ ಬಲಪಡಿಸಲು ಹೋರಾಟ ಮಾಡಿದರು. ಆದರೆ ಸಮಾಜವಾದವನ್ನು ತಮ್ಮ ಪಕ್ಷದ ಪ್ರಣಾಳಿಕೆ ಮತ್ತು ಹೆಸರನ್ನಾಗಿಸಿಕೊಂಡ ರಾಜಕೀಯ ಪಕ್ಷಗಳು ಅಧಿಕಾರದಲ್ಲಿದ್ದರೂ ಸಹ ತಾತ್ವಿಕವಾಗಿ ಸಿದ್ಧಾಂತದಿಂದ ವಿಮುಖಗೊಂಡವು.

ಜಾತಿ ಕೇವಲ ಸಾಮಾಜಿಕ ಸಮಸ್ಯೆಯಲ್ಲ ಅದು ಆರ್ಥಿಕ ಮತ್ತು ರಾಜಕೀಯ ಸಮಸ್ಯೆಯಾಗಿದೆ. ಮೇಲ್ಮಟ್ಟದಿಂದ ಅದನ್ನು ನಾಶಪಡಿಸಲು ಸಾದ್ಯವಿಲ್ಲ, ಬುನಾದಿ ಮಟ್ಟದಿಂದ ಅದನ್ನು ಕಿತ್ತು ಹಾಕಬೇಕಾಗಿದೆ. ದಲಿತ ಮತ್ತು ಬಂಡಾಯ ಚಳುವಳಿಗಳು ಅದಕ್ಕೆ ಹೆಚ್ಚು ಬಲವನ್ನು ತಂದು ಕೊಟ್ಟವು. ಆದರೆ ಈ ಚಳುವಳಿಯ ಕಾವು ಬಹಳ ದಿನ ಉಳಿಯಲಿಲ್ಲ. ಬುದ್ಧಿಜೀವಿಗಳು ಎನ್ನಿಸಿಕೊಂಡವರು ಕ್ರಮೇಣ ದೂರ ಸರಿಯತೊಡಗಿದರು. ಪರಿಷತ್ತು-ಪ್ರಾಧಿಕಾರಗಳಿಗೆ ಬಲಿಯಾದರು, ಪ್ರಶಸ್ತಿ - ಪುರಸ್ಕಾರಗಳಿಗೆ ಮಾರುಹೋದರು, ಅಧಿಕಾರ-ಹುದ್ದೆಗಳನ್ನು ಪಡೆದು ವಿಶ್ವವಿದ್ಯಾಲಯದ ಕೋಣೆಗಳಲ್ಲಿ ಕರಗಿಹೋದರು, ಅಳಿದುಳಿದವರು ಬಂಡವಾಳಶಾಹಿಯ ಒಡಲೊಳಗೆ ಗುಮಾಸ್ತರಾಗಿ ಕಳೆದು ಹೋದರು. 'ಕಡ್ಗವಾಗಲಿ ಕಾವ್ಯ' ಎಂಬ ಧ್ವನಿ ಕಾಲಗರ್ಭದಲ್ಲಿ ಲೀನವಾಯಿತು. ನಿಜ, ಒಂದು ಕಾಲದಲ್ಲಿ ಪ್ರಸ್ತುತವಾಗುವ ಸಿದ್ಧಾಂತಗಳು ಮತ್ತೊಂದು ಕಾಲದಲ್ಲಿ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತವೆ. ಆದರೆ ಉದ್ದೇಶಿತ ಗುರಿಯನ್ನು ಮುಟ್ಟದೆ ಹೋದರೆ ಅದು ಕೇವಲ ಅವಕಾಶವಾದಿ ತನವಾಗುತ್ತದೆ.

ಹೀಗಾಗಿ ಇಂದು ಸಿದ್ಧಾಂತಗಳು ಕೇವಲ ಅಧಿಕಾರ ಹಿಡಿಯುವ ಅವಕಾಶವಾದಿ ತಂತ್ರಗಳಾಗಿ ಮಾತ್ರ ಉಳಿದಿವೆ. ಅಧಿಕಾರ ಕೈಗೆ ಸಿಕ್ಕ ನಂತರ ನಾವೆಲ್ಲ ಭಾರತಿಯರು ಒಂದು. ನಮ್ಮ ದೃಷ್ಟಿಕೋನದಲ್ಲಿ ಯಾವುದೇ ವ್ಯತ್ಯಾಸವಿಲ್ಲ ಎಂಬುದನ್ನು ಎಡಪಂಥೀಯ, ಬಲಪಂಥೀಯ ಹಾಗೂ ಮಧ್ಯಮ ಪಂಥೀಯಪಕ್ಷಗಳು ತೋರಿಸಿಕೊಟ್ಟಿವೆ. ಹೀಗಾಗಿ ಯಾವ ಪಕ್ಷ ಯಾವ ಸಿದ್ಧಾಂತವನ್ನು ಪಾಲಿಸುತ್ತಿದೆ, ಎಂಬುದು ತಿಳಿಯದಂತ ವಾತವರಣ ಸಮಕಾಲಿನ ರಾಜಕೀಯ ಸನ್ನಿವೇಶದಲ್ಲಿ ಸೃಷ್ಟಯಾಗಿದೆ. ಇದನ್ನೇ ನಾವು ಸೈದ್ಧಾಂತಿಕ ಶಿಥಿಲೀಕರಣ ಎಂದು ಕರೆಯುತೇವೆ. □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಠಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಅಂತರಜಾತಿ ವಿವಾಹಗಳು ಬೇಕೇ?

ಡಾ.ಸಿ.ಜಿ.ಲಕ್ಷ್ಮೀಪತಿ

> **೧೮ನೇ ಶತಮಾನದಿಂದಲೂ ಭಾರತದ ದಲಿತ ಮತ್ತು ಹಿಂದುಳಿದ, ಕೆಲವೊಮ್ಮೆ ಬ್ರಾಹ್ಮಣೇತರ ಪ್ರಬಲ ಜಾತಿಗೆ ಸೇರಿದ ನಾಯಕರು, ಅಪರೂಪಕ್ಕೆ ಅಲ್ಲೊಬ್ಬ ಇಲ್ಲೊಬ್ಬ ಬ್ರಾಹ್ಮಣವಾದಿಯಲ್ಲದ, ಬ್ರಾಹ್ಮಣಜಾತಿಯ ವ್ಯಕ್ತಿಗಳೂ ಸಹ ಜಾತಿಯ ಆಚರಣೆಯನ್ನು ಖಂಡಿಸಿದ್ದಾರೆ. ಜಾತಿ ನಿರ್ಮೂಲನೆಗೆ ಕರೆ ನೀಡಿದ್ದಾರೆ. ಬಾಬಾ ಸಾಹೇಬ ಡಾ. ಅಂಬೇಡ್ಕರರು ಸಹ ಜಾತಿ ನಿರ್ಮೂಲನೆಗೆ ವಿಶೇಷ ಒತ್ತು ನೀಡಿದರು. 'ಜಾತಿ ನಿರ್ಮೂಲನೆ' ಎಂಬುದೇ ಬಹಳ 'ಟ್ರಿಕ್ಕಿ' ಪ್ರಶ್ನೆಯಾಗಿದೆ. ನಮ್ಮ ಜೀವತಾವಧಿಯಲ್ಲಿ ಜಾತಿ ರಹಿತ ಸಮಾಜವನ್ನು ನೋಡಲು ಸಾಧ್ಯವೇ ಎಂಬ ಪ್ರಶ್ನೆಗೆ 'ಹೌದು' ಎಂದು ಸುಲಭವಾಗಿ ಯಾರೂ ಉತ್ತರಿಸಲಾರರು. ಆದರೂ 'ಜಾತಿ ನಿರ್ಮೂಲನೆಗೆ' ಅಥವಾ 'ಜಾತಿ ಪದ್ಧತಿ'ಯಿಂದ ವಿಮೋಚನೆಗೆ ಹಲವಾರು ಕಾರ್ಯಕ್ರಮಗಳನ್ನು ಸೂಚಿಸಲಾಗುತ್ತದೆ.**

ವೈಚಾರಿಕವಾಗಿ ಆಲೋಚಿಸುವ ವ್ಯಕ್ತಿಯೊಬ್ಬನಿಗೆ ಕೆಲವು ಮುಜುಗರದ ಪ್ರಶ್ನೆಗಳಿರುತ್ತವೆ. ಸಾವಿರಾರು ಜಾತಿಗಳು, ವಿವಿಧ ವರ್ಗಗಳು, ಧರ್ಮಗಳು ಮತ್ತು ಸಂಸ್ಕೃತಿಯಿಂದ ಸುತ್ತುವರೆದಿರುವ ಭಾರತೀಯನಿಗೆ ಮೇಲ್ನೋಟಕ್ಕೆ ಎಲ್ಲರೂ ಪರಿಭಾವಿಸುವ ವೈಚಾರಿಕತೆಯ ಚೌಕಟ್ಟಿನೊಳಗೆ ಯೋಚಿಸುವುದು ಕಷ್ಟ ಸಾಧ್ಯವೇ.

ತರ್ಕ, ಕಾರ್ಯಕಾರಣ ಸಂಬಂಧ, ವಿಜ್ಞಾನದ ಅಧಿಕೃತತೆ, ಆಧ್ಯಾತ್ಮಕ ಊಹಾಪೋಹಗಳ ತಿರಸ್ಕಾರ, ಅನುಭವಜನ್ಯ ಜ್ಞಾನ, ಜ್ಞಾನದ ವಿಶ್ಲೇಷಣೆಯನ್ನೇ ತಳಹದಿಯನ್ನಾಗಿಟ್ಟು ಕೊಂಡಿರುವ ವೈಚಾರಿಕತೆಯ ವಿವರಣೆ ಭಾರತದ ಸಾಮಾಜಿಕ ಪರಿಸ್ಥಿತಿಗಳಿಗೆ ಅನುಗುಣವಾಗಿ ಬದಲಾಗುತ್ತಿರುತ್ತದೆ.

ನಮಗೆ ಆಧುನಿಕ ವೈಚಾರಿಕತೆಯು ಬ್ರಿಟಿಷರ ಮೂಲಕ ಬಿಡುಗಡೆಯ ಬೆಳಕಾಗಿ ಬಂತು. ವೈಜ್ಞಾನಿಕ ಮನೋಭಾವ ಮತ್ತು ಆಧುನಿಕ ವೈಚಾರಿಕತೆ ನಮ್ಮನ್ನು ಜ್ಞಾನ ಮೀಮಾಂಸೆಯ ವಲಯವನ್ನು ವಿಸ್ತರಿಸಿ ಬೌದ್ಧಿಕ ಮತ್ತು ಮಾನಸಿಕ ದಾಸ್ಯದಿಂದ ಬಿಡುಗಡೆಗೊಳಿಸಿದವು. ಆದರೆ ವೈಚಾರಿಕತೆಯು ತಾತ್ವಿಕ ದರ್ಶನವಾಗಿ ವಿಕಾಸಗೊಳ್ಳಬೇಕಾದಷ್ಟು ಪ್ರಮಾಣದಲ್ಲಿ ವಿಕಾಸಗೊಳ್ಳಲಿಲ್ಲವೆನಿಸುತ್ತದೆ. ಅಥವಾ ಜಾತಿ-ಸಂಸ್ಕೃತಿಯ ಪ್ರಶ್ನೆಗಳ ಸಂದರ್ಭದಲ್ಲಿ ಹುಟ್ಟಿ ಬರಬಹುದಾದ ಬಿಕ್ಕಟ್ಟುಗಳನ್ನು ಪರಿಹರಿಸಿಕೊಳ್ಳುವ ಮಟ್ಟಕ್ಕೆ ನಾವು ವೈಚಾರಿಕತೆಯನ್ನು ರೂಪಿಸಲಾರದೇ ಹೋಗಿದ್ದೇವೆಯೇ? ಎಂಬ ಪ್ರಶ್ನೆ ಮೇಲಿಂದ ಮೇಲೆ ಕಾಡುತ್ತದೆ. ಈ ಪ್ರಶ್ನೆಯನ್ನು ಸದ್ಯದ ಅನೇಕ ಸಾಮಾಜಿಕ-ಸಾಂಸ್ಕೃತಿಕ ಪ್ರಶ್ನೆಗಳಿಗೆ ಅನ್ವಯಿಸಬಹುದಾದರೂ ಅದನ್ನು ಕೇವಲ ಅಂತರ ಜಾತಿಯ ವಿವಾಹಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳೋಣ.

18ನೇ ಶತಮಾನದಿಂದಲೂ ಭಾರತದ ದಲಿತ ಮತ್ತು ಹಿಂದುಳಿದ, ಕೆಲವೊಮ್ಮೆ ಬ್ರಾಹ್ಮಣೇತರ ಪ್ರಬಲ ಜಾತಿಗೆ ಸೇರಿದ ನಾಯಕರು, ಅಪರೂಪಕ್ಕೆ ಅಲ್ಲೊಬ್ಬ ಇಲ್ಲೊಬ್ಬ ಬ್ರಾಹ್ಮಣವಾದಿಯಲ್ಲದ, ಬ್ರಾಹ್ಮಣ ಜಾತಿಯ ವ್ಯಕ್ತಿಗಳೂ ಸಹಜಾತಿಯ ಆಚರಣೆಯನ್ನು ಖಂಡಿಸಿದ್ದಾರೆ. ಜಾತಿ ನಿರ್ಮೂಲನೆಗೆ ಕರೆನೀಡಿದ್ದಾರೆ. ಬಾಬಾ ಸಾಹೇಬ ಡಾ. ಅಂಬೇಡ್ಕರರು ಸಹ ಜಾತಿ ನಿರ್ಮೂಲನೆಗೆ ವಿಶೇಷ ಒತ್ತು ನೀಡಿದರು. 'ಜಾತಿ ನಿರ್ಮೂಲನೆ' ಎಂಬುದೇ ಬಹಳ 'ಟ್ರಿಕ್ಕಿ' ಪ್ರಶ್ನೆಯಾಗಿದೆ. ನಮ್ಮ ಜೀವತಾವಧಿಯಲ್ಲಿ ಜಾತಿರಹಿತ ಸಮಾಜವನ್ನು ನೋಡಲು ಸಾಧ್ಯವೇ ಎಂಬ ಪ್ರಶ್ನೆಗೆ 'ಹೌದು' ಎಂದು ಸುಲಭವಾಗಿ ಯಾರೂ ಉತ್ತರಿಸಲಾರರು.

ಆದರೂ 'ಜಾತಿ ನಿರ್ಮೂಲನೆಗೆ' ಅಥವಾ 'ಜಾತಿ ಪದ್ಧತಿ'ಯಿಂದ ವಿಮೋಚನೆಗೆ ಹಲವಾರು ಕಾರ್ಯಕ್ರಮಗಳನ್ನು ಸೂಚಿಸಲಾಗುತ್ತದೆ. ಮತಾಂತರ, ವೈಚಾರಿಕತೆ, ಸಂವಿಧಾನಬದ್ಧ ಕಾರ್ಯಕ್ರಮಗಳು, ಅಂತರಜಾತಿಯ ವಿವಾಹ ಇತ್ಯಾದಿ. ಈ ಲೇಖನದ ಮಿತಿಯಲ್ಲಿ ಜಾತಿಯ ವಿಮೋಚನೆಗೆ ಸಂಬಂಧಿಸಿದ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲು ಹೋಗುವುದಿಲ್ಲ. ಬದಲಾಗಿ ಕೇವಲ ಅಂತರ ಜಾತಿಯ, ಅಂತರಧರ್ಮೀಯ ವಿವಾಹಗಳಿಗೂ ಜಾತಿ ವಿಮೋಚನೆಗೂ ಇರುವ ಸಂಬಂಧವನ್ನು ವಿಶ್ಲೇಷಿಸಲು ಪ್ರಯತ್ನಿಸುತ್ತೇನೆ.

ಭಾರತದ ಸಾಮಾಜಿಕ ಚರಿತ್ರೆಯುದ್ಧಕ್ಕೂ ವರ್ಣಸಂಕರವನ್ನು ವಿರೋಧಿಸಿರುವುದು ಕಂಡುಬರುತ್ತದೆ. ಮನುಸ್ಮೃತಿಯಲ್ಲೂ ಸೂಕ್ಷ್ಮವಾಗಿ ವಿವಿಧ ವರ್ಣಗಳ ನಡುವಿನ ವಿವಾಹವನ್ನು ವಿರೋಧಿಸಲಾಗಿದೆ. ವರ್ಣ ವ್ಯವಸ್ಥೆ ಯಾವ ರೂಪದಲ್ಲಿ ಹೇಗೆ ಅಸ್ತಿತ್ವದಲ್ಲಿತ್ತು ಎಂಬುದು ಚರ್ಚಾಸ್ಪದ ವಿಚಾರವಾಗಿರುವುದರಿಂದ ಸದ್ಯ ಅದನ್ನು ಪಕ್ಕಕ್ಕಿಡುವ.

ಭಾರತದಲ್ಲಿ ಅಂತರಜಾತಿ ವಿವಾಹ ಎಂಬುದು ಈಗ ಮಾತ್ರ ಕಂಡುಬರುತ್ತಿಲ್ಲ. ಎಲ್ಲಾ ಕಾಲದಲ್ಲಿಯೂ ಕಾಣಿಸಿ ಕೊಂಡಿದೆ. ಆದರೆ 19ನೇ ಶತಮಾನದ ಮಧ್ಯಭಾಗದಿಂದ 20ನೇ ಶತಮಾನದ ಆರಂಭದವರೆಗೆ ಅಂತರಜಾತಿ ವಿವಾಹವು ಜಾತಿ ವಿಮೋಚನೆಯ ಒಂದು ಪರಿಹಾರ ಮಾರ್ಗವಾಗಿ ಗೋಚರಿಸಲಾರಂಭಿಸಿತು. ಅದಕ್ಕೆ ಅನೇಕ ರಾಜಕೀಯ,ಸಾಮಾಜಿಕ, ಸಾಂಸ್ಕೃತಿಕ ಕಾರಣಗಳಿರಬಹುದಾದರೂ

ಅದನ್ನು ಬೇರೊಂದುಕಡೆ ಚರ್ಚಿಸಬಹುದು.

ಅಂತರಜಾತಿಯ, ಅಂತರ ಧರ್ಮೀಯ ವಿವಾಹಗಳು ನಿಜವಾಗಿಯೂ ಜಾತಿ ವಿಮೋಚನೆಯ ಸಾಧನವೇ? ಅದು ವಿವಿಧ ಜಾತಿಗಳ ನಡುವೆ ಸೌಹಾರ್ದತೆಯನ್ನು ತರಬಲ್ಲದೇ ಎಂಬುದೇ ನಮ್ಮ ಮುಂದಿರುವ ಪ್ರಶ್ನೆ.

ಈ ಪ್ರಶ್ನೆಗೆ ಉತ್ತರ ಹುಡುಕುವ ಸಲುವಾಗಿ 'ಅಂತರಜಾತಿಯ' ಎಂಬ ಒಂದು ಮಾದರಿಯನ್ನು ಪರೀಕ್ಷಿಸಿಕೊಳ್ಳೋಣ. ಅಂತರಜಾತಿಯ ವಿವಾಹವೆಂಬುದು ಬಹುತೇಕ ಸಂದರ್ಭಗಳಲ್ಲಿ (ಎಲ್ಲ ಸಂದರ್ಭಗಳಿಗೂ ಅನ್ವಯಿಸುವುದಿಲ್ಲ) ಪ್ರೇಮವೆಂಬ ಮೂಲಧಾತುವಿನೊಂದಿಗೆ ಆರಂಭವಾಗಿದೆ. ಪ್ರೇಮವನ್ನು ಯಾರು ಏನೇ ಆದರ್ಶ ಸ್ಥಿತಿ ಎಂದು ಬಗೆದರೂ ಕಾಲ, ಸಾಮಾಜಿಕ-ಆರ್ಥಿಕ ಪರಿಸ್ಥಿತಿಯಿಂದುಂಟಾಗುವ ಸಂಪರ್ಕ, ವಿಭಿನ್ನ ಬಗೆಯ ಸಾಂಸ್ಕೃತಿಕ ಸಂದರ್ಭಗಳಿಗೆ ಹೊರತಾಗಿರುವುದಿಲ್ಲ. ಆದುದರಿಂದಲೇ ಪ್ರೇಮವೆಂಬುದು 'ಪ್ರೀತಿ,' 'ಆದರ್ಶ' ಇತ್ಯಾದಿಗಳ ಆಧಾರದ ಮೇಲೆ ಕಟ್ಟಲ್ಪಟ್ಟ 'ದುರ್ಬಲ ಪರಿಕಲ್ಪನೆ'. ಈ ದುರ್ಬಲ ತಳಪಾಯದ ಆಧಾರದ ಮೇಲೆ ಕಟ್ಟಲ್ಪಟ್ಟಿದ್ದೇ 'ಅಂತರಜಾತಿಯಾ-ಅಂತರಧರ್ಮೀಯ ವಿವಾಹ'. ಹಾಗೆಂದ ಮಾತ್ರಕ್ಕೆ ಬೇರೆ ರೀತಿಯಲ್ಲಿ ಅಂತರಜಾತಿಯ ವಿವಾಹಗಳು ಏರ್ಪಡುವುದಿಲ್ಲ ಎಂದಲ್ಲ.

ಅಂತರಜಾತಿಯ ವಿವಾಹಗಳು ಎಲ್ಲಿ, ಯಾವ ಪ್ರಮಾಣದಲ್ಲಿ ಏರ್ಪಡುತ್ತವೆ ಎಂಬುದಕ್ಕೆ ಖಚಿತ ಲೆಕ್ಕಾಚಾರವಿಲ್ಲ. ಆದರೆ ಈ ಲೇಖನದಲ್ಲಿ ಪರಿಗಣನೆಗೆ ತೆಗೆದುಕೊಂಡಿರುವುದು ಮಾತ್ರ ಮೊದಲನೇ ಪೀಳಿಗೆಯ, ಕೃಷಿ ಹಿನ್ನಲೆಯಿಂದ ಬಂದು ನಗರದಲ್ಲಿ/ಪಟ್ಟಣಗಳಲ್ಲಿ ಸರ್ಕಾರಿ, ಅರೆ ಸರ್ಕಾರಿ ಕೆಲಸ ಹೊಂದಿದ ಕೆಳಜಾತಿ – ಸಾಮಾನ್ಯವಾಗಿ ಎಸ್‌ಟಿ, ಎಸ್‌ಸಿ ಮತ್ತು ಒಬಿಸಿ ಗುಂಪುಗಳಿಗೆ ಸೇರಿದ ಯುವಕರು ಮತ್ತು ಮೇಲಿನ ಗುಂಪುಗಳಿಗಿಂತ ಉನ್ನತ ಸ್ಥರದಲ್ಲಿರುವ ಜಾತಿಯ ಯುವತಿಯರು.

ಭಾರತದಂತಹ ಬೃಹತ್ ರಾಷ್ಟ್ರದಲ್ಲಿ ಅಂತರಜಾತಿಯ-ಧರ್ಮೀಯ ವಿವಾಹಗಳ ಎಲ್ಲಾ ಸಾಧ್ಯತೆಗಳನ್ನು ಕುರಿತು ಚರ್ಚಿಸಲು ಹೋಗುವುದಿಲ್ಲ. ಸಾಮಾನ್ಯವಾಗಿ ಮೇಲೆ ಹೇಳಿದ ಗುಂಪುಗಳಿಗೆ ಮಾತ್ರ ಈ ಬರಹವು ಫೋಕಸ್ ಆಗಿದೆ. ಈ ಗುಂಪುಗಳ ನಡುವೆ ನಡೆದಿರುವ ಅಂತರಜಾತಿಯ ವಿವಾಹದ ಸುತ್ತಮುತ್ತ ನಡೆದಿರುವ ವಿದ್ಯಮಾನಗಳನ್ನು ನೋಡಬಹುದು.

ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರಿ ಹಾಸ್ಟೆಲ್‌ಗಳಲ್ಲಿ ಶಿಕ್ಷಣ ಪಡೆದ ಎಸ್‌ಸಿ ಎಸ್‌ಟಿ-ಹಿಂದುಳಿದ ಗುಂಪುಗಳಿಗೆ ಸೇರಿದ ಯುವಕರು ಪಟ್ಟಣ ಪ್ರದೇಶದ ಕಾಲೇಜುಗಳಿಗೆ ಸೇರುತ್ತಾರೆ. ಪಟ್ಟಣ ಪ್ರದೇಶಗಳು ಇವರಿಗೆ ಒಂದು ಬಗೆ ಮಾನಸಿಕ ಹಾಗೂ ಬೌದ್ಧಿಕ ದಾಸ್ಯದಿಂದ ಸಾಪೇಕ್ಷವಾಗಿ ವಿಮೋಚನೆ ಒದಗಿಸುತ್ತದೆ. ಹೊಸ ತಿಳುವಳಿಕೆ, ತಮ್ಮದೆ ಜಾತಿಗಳ ಬುದ್ಧಿಜೀವಿಗಳು, ಕೆಲವೊಮ್ಮೆ ಇತರ ಸಂಘಟನೆಗಳ ಪ್ರಭಾವಕ್ಕೆ ಒಳಗಾಗುತ್ತಾರೆ.

ಜಾತಿಯು ಈ ಸಮಾಜದ ಅನಿಷ್ಟವೆಂದೂ, ಅದನ್ನು ತೊಡೆದುಹಾಕದೇ ನಮ್ಮ ಸಾಮಾಜಿಕ ಚಲನೆ, ವಿಮೋಚನೆ ಸಾಧ್ಯವಿಲ್ಲವೆಂಬ ಪ್ರಜ್ಞಾಪೂರ್ವಕವಾದ ಅಥವಾ ಅಪ್ರಜ್ಞಾಪೂರ್ವಕವಾದ ನಿಲುವಿಗೆ ತಳ್ಳಲ್ಪಡುತ್ತಾರೆ. ಈ ಬಗೆಯ ತಿಳುವಳಿಕೆಯು ಅವರಲ್ಲಿ ಒಂದು ಬಗೆಯ ವಿಶಿಷ್ಟ ಚೈತನ್ಯವನ್ನು ಹೊಸ ಹುರುಪನ್ನು ತಂದೊಡ್ಡುತ್ತದೆ. ಕೆಲವೊಮ್ಮೆ ಕ್ರಿಯಾಶೀಲ ಶಕ್ತಿಯಾಗಿ ಪರಿವರ್ತಿತವಾಗುವ ಹುರುಪು ಶೈಕ್ಷಣಿಕ ವಲಯಗಳಲ್ಲಿ ಅವರನ್ನು

ಅಂತರಜಾತಿಯ ವಿವಾಹಗಳು ಎಲ್ಲಿ, ಯಾವ ಪ್ರಮಾಣದಲ್ಲಿ ಏರ್ಪಡುತ್ತವೆ ಎಂಬುದಕ್ಕೆ ಖಚಿತ ಲೆಕ್ಕಾಚಾರವಿಲ್ಲ. ಆದರೆ ಈ ಲೇಖನದಲ್ಲಿ ಪರಿಗಣನೆಗೆ ತೆಗೆದು ಕೊಂಡಿರುವುದು ಮಾತ್ರ ಮೊದಲನೇ ಪೀಳಿಗೆಯ, ಕೃಷಿ ಹಿನ್ನಲೆಯಿಂದ ಬಂದು ನಗರದಲ್ಲಿ/ ಪಟ್ಟಣಗಳಲ್ಲಿ ಸರ್ಕಾರಿ, ಅರೆ ಸರ್ಕಾರಿ ಕೆಲಸ ಹೊಂದಿದ ಕೆಳಜಾತಿ – ಸಾಮಾನ್ಯವಾಗಿ ಎಸ್‌ಟಿ, ಎಸ್‌ಸಿ ಮತ್ತು ಒಬಿಸಿ ಗುಂಪುಗಳಿಗೆ ಸೇರಿದ ಯುವಕರು ಮತ್ತು ಮೇಲಿನ ಗುಂಪುಗಳಿಗಿಂತ ಉನ್ನತ ಸ್ಥರದಲ್ಲಿರುವ ಜಾತಿಯ ಯುವತಿಯರು.

ಮುಂಚೂಣಿಗೆ ತಂದು ನಿಲ್ಲಿಸುತ್ತದೆ. ತಮ್ಮದೇ ಜೊತೆಗಾರರ ಮನಗೆಲ್ಲುವ, ಜಾತಿ ಕೀಳರಿಮೆ ಮತ್ತು ಗ್ರಾಮೀಣ ಮುಗ್ಧತೆಯನ್ನು ಕಳೆದುಕೊಂಡೆವೆಂಬ ಪ್ರಜ್ಞೆಯು ಆತ್ಮವಿಶ್ವಸವಾಗಿ ಮಾರ್ಪಾಡಾಗುತ್ತದೆ.

ಈ ಸಂದರ್ಭದಲ್ಲಿ ತಮ್ಮ ಗ್ರಾಮದಲ್ಲಿರುವ ಆಚರಣೆಗಳು, ಹಟ್ಟಿಯಲ್ಲಿನ ಸ್ನೇಹಗಳು, ತಮ್ಮದೇ ಜನ ಅದೆಲ್ಲಕ್ಕಿಂತ ಹೆಚ್ಚಾಗಿ ತಮ್ಮನ್ನು ಮದುವೆಯಾಗಬಹುದಾದ ಸೋದರ ಸಂಬಂಧಿ, ಜಾತಿಹುಡುಗಿಯರು ಮಧ್ಯಕಾಲೀನ ಯುಗಕ್ಕೆ ಹೆಪ್ಪುಗೊಂಡವರಂತೆ ಗೋಚರಿಸತೊಡಗುತ್ತಾರೆ. ಬಿಡುಗಡೆಗೊಂಡೆವೆಂದು ಭ್ರಮಿಸುವ ಚೈತನ್ಯಕ್ಕೆ ನಗರ ಪ್ರದೇಶದ ಮುಕ್ತ ವಾತಾವರಣ ಸ್ವಲ್ಪಮಟ್ಟಿಗೆ ಕಾರಣವಾಗುತ್ತದೆ.

ಈ ಸಂದರ್ಭದಲ್ಲಿ ಗ್ರಾಮದಿಂದ ದೂರಮಾಡಲ್ಪಟ್ಟ ಸಂಪೂರ್ಣ ನಗರದ್ದೂ ಅಲ್ಲದ, ಈ ವ್ಯಕ್ತಿತ್ವದ ನಡುವೆ ಏರ್ಪಡುವ ಬಿರುಕನ್ನು ಮುಚ್ಚುವ ತೀವ್ರವಾದ ಆತ್ಮೀಯ ಸಂಬಂಧವೊಂದನ್ನು ಹುಡುಕುತ್ತಿರುತ್ತಾರೆ.

ನಗರ ಪಟ್ಟಣ ಪ್ರದೇಶದಲ್ಲಿ ಬೆಳೆದ ಮೇಲು ಜಾತಿಗೆ ಸೇರಿದ ಹುಡುಗಿಯರು ತಮ್ಮ ಮಾತುಕತೆಗಳಲ್ಲಿ ಹಾವಭಾವಗಳಲ್ಲಿ ವಾತಾವರಣದ ಪ್ರಭಾವದಿಂದಾಗಿಯೇ ಸ್ವಲ್ಪ ಮಟ್ಟಿಗೆ ಮುಕ್ತತೆಯನ್ನು, ಸೀಮಿತವಾದ ಪ್ರಬುದ್ಧತೆಯನ್ನು ತೋರುತ್ತಿರುತ್ತಾರೆ. ಸ್ವಲ್ಪ ಹೆಚ್ಚು ಕಡಿಮೆ ತಮ್ಮ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಎಚ್ಚರಿಕೆ ತೋರಿಸುವಷ್ಟಾದರೂ ಬುದ್ಧಿವಂತಿಕೆ ತೋರಬಲ್ಲವರಾಗಿರುತ್ತಾರೆ.

ತಮ್ಮದೇ ಕೌಟುಂಬಿಕ ಹಿನ್ನಲೆಯ ಅನುಭವದಿಂದ ಮೇಲ್ಜಾತಿ ಮಧ್ಯಮವರ್ಗದ ವಿವಾಹದ ಕಹಿ-ಸಿಹಿ ಘಟನೆಗಳನ್ನು ಅಳೆದು ತೂಗಬಲ್ಲವರಾಗಿರುತ್ತಾರೆ.

ಗ್ರಾಮೀಣ ಮುಗ್ಧತೆಯನ್ನು ಮೀರಬಲ್ಲ, ಕೀಳರಿಮೆಯನ್ನು ಹೋಗಲಾಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಹುಡುಗರು ಹೊಸ ಲೈಂಗಿಕ ಸಾಹಸಗಳನ್ನು ಕೈಗೊಳ್ಳಲು ತಮಗಿಂತ ಮೇಲ್ಜಾತಿಯ ಹುಡುಗಿಯ ಸ್ನೇಹ ಪ್ರೇಮದಲ್ಲಿ ಹೊಸ ಸಮಾಜಿಕ ಸ್ಥಾನಮಾನದ ಮಜಲನ್ನು ಮುಟ್ಟಿದಂತೆ ಭಾವಿಸುತ್ತಾರೆ. ಎಲ್ಲವೂ ವಿವಾಹದಲ್ಲಿ ಕೊನೆಗೊಳ್ಳದೆ ಹೋದರೂ ಕೆಲವು ಅಂತರ ಜಾತಿಯ ವಿವಾಹದಲ್ಲಿ ಕೊನೆಗೊಳ್ಳುತ್ತವೆ.

-ಮುಂದುವರಿಯುವುದು-

ಪ್ರಸ್ತುತ ಸಂದರ್ಭದಲ್ಲಿ ಅಂತರಜಾತಿ ವಿವಾಹ ಬೇಕೇ? ಬೇಡವೇ? ಎಂಬ ಪ್ರಶ್ನೆ ಎತ್ತುವುದು ಜನವಿರೋಧಿ ಪ್ರಶ್ನೆಯಾಗಿದೆ. ಆದರೂ ಅಂಥ ಪ್ರಶ್ನೆಯನ್ನು ಕೇಳಿಕೊಳ್ಳುವುದು ಬಹಳಮುಖ್ಯ. 1970-80ರ ದಶಕದಲ್ಲಿ ಲೋಹಿಯಾವಾದ, ಅಂಬೇಡ್ಕರ್‌ವಾದದ ಪ್ರಭಾವದಿಂದ ಅಂತರಜಾತಿ ವಿವಾಹವಾಗುವುದು ಪ್ರಗತಿಪರ ಚಟುವಟಿಕೆಯಾಗಿತ್ತು. 1990ರ ತೀವ್ರ ಆರ್ಥಿಕ-ಸಾಮಾಜಿಕ ಬದಲಾವಣೆಗಳಿಂದ ಹೆಣ್ಣು-ಗಂಡು ಭೇಟಿಯಾಗುವ ಮುಕ್ತ ಪರಿಸ್ಥಿತಿಗಳು ಉದ್ಭವಿಸಿರುವುದರಿಂದ ಸಹಜವಾಗಿಯೇ ಲಕ್ಷಾಂತರ ಅಂತರಜಾತಿ ವಿವಾಹಗಳು ಜರುಗುತ್ತಿವೆ. ಈ ವಿವಾಹಗಳು ಯಾವುದೇ ಸೈದ್ಧಾಂತಿಕ-ಸಾಮಾಜಿಕ ಜವಾಬ್ದಾರಿಯನ್ನು ಘೋಷಿಸದೆ ಕೇವಲ ವೈಯಕ್ತಿಕ ವ್ಯಾಪ್ತಿಯಲ್ಲಿ ನಡೆಯುವುದರಿಂದ ಈ ಲೇಖನದಲ್ಲಿ ಅವುಗಳ ಬಗ್ಗೆ ಪ್ರಸ್ತಾಪಿಸುವುದಿಲ್ಲ.

ಅಂತರಜಾತಿ ವಿವಾಹ ಜಾತಿ ನಿರ್ಮೂಲನೆಯ ಸಾಧನವೆಂದು ಭಾವಿಸಿದ, ಪ್ರಗತಿಪರ ಸಮಾಜ ನಿರ್ಮಾಣಕ್ಕಾಗಿ ಎಂದು ಘೋಷಿಸಿಕೊಂಡ ವಿವಾಹಗಳ ಬಗ್ಗೆಯಷ್ಟೇ ಮಾತಾಡುವುದು ಲೇಖನದ ಉದ್ದೇಶವಾಗಿದೆ.

ಅಂತರಜಾತಿ ವಿವಾಹಗಳು ನಿಜವಾಗಿಯೂ ಜಾತಿ ನಿರ್ಮೂಲನೆಗೆ ಸಹಕರಿಸುತ್ತಿವೆಯಾ ಅಥವಾ ಇವುಗಳಿಂದ ಕೆಳಜಾತಿಗಳಲ್ಲಿ ಕನಿಷ್ಠ ಮಟ್ಟದ ಸಾಮಾಜಿಕ ಚಲನೆ ಸಾಧ್ಯವೇ? ನೋಡುವ.

ಪ್ರೇಮ ಮತ್ತು ವಿವಾಹಗಳು ಎಂಥದ್ದೇ ಆದರ್ಶದಿಂದ ಸಂಭವಿಸಿವೆ ಎಂದರೂ ಅವು ಕಾಲ, ಸಮಯ ಮತ್ತು ಆರ್ಥಿಕ ಸಾಮಾಜಿಕ ಪರಿಸ್ಥಿತಿಗಳಿಂದ ಹೊರತಾಗಿರಲು ಸಾಧ್ಯವೇ ಇಲ್ಲ. ಬಹುತೇಕ ಈ ಲೇಖನದ ಮೊದಲ ಭಾಗದಲ್ಲಿಯೇ ಸೂಚಿಸಿದಂತೆ ಅಂತರಜಾತಿ ವಿವಾಹಗಳಿಗಂತೂ 'ಪ್ರೇಮ' ಎಂದು ಕರೆಯಲಾಗುವ ಭಾವನೆಯೇ ಆಧಾರವಾಗಿರುತ್ತದೆ.

ಪ್ರೇಮ ಸಂಭವಿಸುವುದು ಅಚಾನಕ್, ಅನಿರೀಕ್ಷಿತ ಪರಿಸ್ಥಿತಿಗಳಿಂದಲ್ಲ, ಬದಲಾಗಿ ನಿರ್ದಿಷ್ಟ ಔದ್ಯೋಗಿಕ-ಸಾಮಾಜಿಕ-ಶೈಕ್ಷಣಿಕ ಸಾಂಸ್ಕೃತಿಕ ಪರಿಸರಗಳಲ್ಲಿ. ಇಂತಹ ಸಂದರ್ಭದಲ್ಲಿ ಉದಯಿಸುವ 'ಪ್ರೇಮ'ವು ಲೆಕ್ಕಾಚಾರ, ಸ್ವಲ್ಪ ಮಟ್ಟಿಗೆ ಅವಕಾಶವಾದವನ್ನು ಹೊಂದಿರುತ್ತದೆ. ಹೆಣ್ಣು ಗಂಡುಗಳಿಬ್ಬರೂ ಇದರಲ್ಲಿ ಸಮಾನವಾಗಿ ಪಾಲುದರರಾಗಿರುತ್ತಾರೆ. ಆದುದರಿಂದ ಪ್ರೇಮವನ್ನು 'ಶುದ್ದ ಅದರ್ಶ ಸ್ಥಿತಿ' ಎಂದು ಭಾವಿಸುವುದು ಕೇವಲ ರೋಮ್ಯಾಂಟಿಕ್ ಕಲ್ಪನೆಯಾಗಿಬಿಡುತ್ತದೆ.

ಈಗ ನಮ್ಮ ಮುಖ್ಯ ಸಮಸ್ಯೆಗೆ ಬರುವ. ಶುದ್ಧ ಪ್ರೇಮವಲ್ಲದೆ ಲೆಕ್ಕಾಚಾರ, ಅವಕಾಶವಾದಗಳನ್ನು ಒಳಗೊಂಡ ಇಂಥ ವಿವಾಹಗಳು ಜಾತಿ ನಿರ್ಮೂಲನೆಗೆ ಅಷ್ಟೇನೂ ಸಹಕಾರಿಯಾಗಲಾರವು. ಏಕೆಂದರೆ 'ಜಾತಿ' ಎಷ್ಟರ ಮಟ್ಟಿಗೆ ಸಾಂಸ್ಕೃತಿಕ- ಸಾಮಾಜಿಕ ಸಂಸ್ಥೆಯೋ ಅಷ್ಟರ ಮಟ್ಟಿಗೆ ಆರ್ಥಿಕ ಸಂಸ್ಥೆ ಕೂಡ.

'ಜಾತಿ' ಭಾರತೀಯ ಸಮಾಜದ ಮಟ್ಟಿಗೆ ಸಾಮಾಜಿಕ- ಸಾಂಸ್ಕೃತಿಕ 'ಬಂಡವಾಳ'. ಇದು ಆರ್ಥಿಕ ಬಂಡವಾಳದಷ್ಟೇ ಪರಿಣಾಮಕಾರಿ. ಈಗ ಜಾತಿಯು ಸಾಮಾಜಿಕ ಸಾಂಸ್ಕೃತಿಕ ಬಂಡವಾಳ ಹೇಗೆಂದು ನೋಡುವ. ಪ್ರತಿ

ಜಾತಿಯು ತಾನು ಬಳಸುವ ಭಾಷೆ, ಸಾಂಸ್ಕೃತಿಕ ಸಂಕೇತ, ಆಚರಣೆ ಮತ್ತು ಸಾಮಾಜಿಕರಣದ ಮೂಲಕ ಕೆಲವು ಮೌಲ್ಯಗಳನ್ನು ರೂಢಿಸಿಕೊಂಡಿರುತ್ತದೆ. ಇದಕ್ಕೆ ಯಾವ ಜಾತಿಯೂ ಹೊರತಲ್ಲ. ಹೀಗೆ ರೂಢಿಸಿಕೊಂಡ 'ಸಾಂಸ್ಕೃತಿಕ ಮೌಲ್ಯಗಳು' ಕೇವಲ ಮೌಲ್ಯಗಳಾಗಿರದೆ 'ಇತರ'ರ ಮೇಲೆ ಅಧಿಕಾರ ಚಲಾಯಿಸುವ ಸಾಧಾನಗಳಾಗಿರುತ್ತವೆ.

ಇದಕ್ಕೆ ಕೆಲವು ಉದಾಹರಣೆಗಳನ್ನು ನೀಡಬಹುದು. ಬ್ರಾಹ್ಮಣ ವ್ಯಕ್ತಿಯೊಬ್ಬ ಸಂಸ್ಕೃತ ಪ್ರಭಾವಿತ ಕನ್ನಡ ಶಿಷ್ಟ ಭಾಷೆ, ವೈದಿಕ ಮೂಲದ ಹೆಸರು, ಹಣೆಯ ಮೇಲೆ ನಾಮ,ಮುದ್ರೆ ಗಂಧ, ಎಲ್ಲವನ್ನೂ ಮೀರಿಕೇವಲ 'ಬ್ರಾಹ್ಮಣ' ಎಂಬ ಚಹರೆಯೊಂದಿಗೆ ಇತರರಿಗಿಂತ ಉನ್ನತಸ್ಥಾನ ಮಾನವನ್ನು ಪಡೆಯಬಲ್ಲ. ಇದನ್ನೇ ಸರಳವಾಗಿ ಸಾಂಸ್ಕೃತಿಕ ಬಂಡಾಳ ಎನ್ನಬಹುದು.

ಸಾಮಾಜಿಕ ಬಂಡವಾಳವೆಂದರೇನು? ಇದು ಸಾಂಸ್ಕೃತಿಕ ಬಂಡವಾಳದ ಮುಂದುವರಿದ ರೂಪವಷ್ಟೇ. ಒಂದೇ ಬಗೆಯ ಸಾಂಸ್ಕೃತಿಕ ಚಹರೆಗಳು ಮತ್ತು ಹುಟ್ಟು ಹೊಂದಿರುವ ವ್ಯಕ್ತಿಗಳು ತಮ್ಮಲ್ಲಿಯೇ ಒಂದು ಬಗೆಯ ಸಾಮಾಜಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುತ್ತಾರೆ, ಅದನ್ನು 'ಕಾಸ್ಟ್‌ಕೆಮಿಸ್ಟ್ರಿ' ಎಂದು ಕರೆಯಬಹುದು. ಅವರು ಬಹಳ ಬಿಗಿಯಾದ ನೆಟ್‌ವರ್ಕ್ ಏರ್ಪಡಿಸಿಕೊಂಡು ತಮ್ಮ ಜಾತಿಯವರನ್ನು ಮಾತ್ರವೇ ಆದ್ಯತೆ ಮತ್ತು ಅವಕಾಶಗಳ ಆಧಾರದ ಮೇಲೆ ಬೆಂಬಲಿಸುತ್ತಾರೆ. ಉದಾಹರಣೆಗೆ ಉದ್ಯೋಗ ನೇಮಕಾತಿ, ರಾಜಕೀಯ ಪಕ್ಷಕ್ಕೆ ಬೆಂಬಲ, ವರ್ಗಾವಣೆ ಬಡ್ತಿಗೆ ಶಿಫಾರಸ್ಸು, ಶೈಕ್ಷಣಿಕ ಅವಕಾಶ, ವಿವಾಹ ಸಂಬಂಧಗಳ ಏರ್ಪಡುವಿಕೆ- ಹೀಗೆ ಪ್ರತಿಯೊಂದು ತಮ್ಮ ಜಾತಿ ವರ್ತುಲದೊಳಗೆ ಸುತ್ತುವಂತೆ ನೋಡಿಕೊಳ್ಳುತ್ತಾರೆ. ಈ ಬಗೆಯ ಸಾಮಾಜಿಕ- ಸಾಂಸ್ಕೃತಿಕ ಬಂಡವಾಳ ನಮ್ಮ ಸಮಾಜದಲ್ಲಿ ಆರ್ಥಿಕ ಬಂಡವಾಳ ರೂಪಿಸುವ ಮೇಲು-ಕೀಳನ್ನು ಮತ್ತಷ್ಟು ಬಲಪಡಿಸುತ್ತದೆ. ಅಥವಾ ಅದರಿಂದ ಪ್ರತ್ಯೇಕವಾಗಿ ನಿಂತು ಅಸಮಾನ ಸಮಾಜವನ್ನು ಸೃಷ್ಟಿಸುತ್ತದೆ.

ಮೇಲು ಜಾತಿಗಳು ಹೊಂದಿರುವ 'ಸಾಮಾಜಿಕ- ಸಾಂಸ್ಕೃತಿಕ' ಬಂಡವಾಳವು ಉನ್ನತವಾದದು ಎಂದು ಮಾನ್ಯ ಮಾಡಲ್ಪಡುತ್ತದೆ. ಕೆಳಜಾತಿಗಳ ಈ ಬಂಡವಾಳವು ತನ್ನ ಸ್ವರೂಪದಲ್ಲಿ ಎಷ್ಟೇ ಶ್ರೀಮಂತವಾಗಿದ್ದರೂ ಅದಕ್ಕೆ ಇರುವ ಮಾನ್ಯತೆ ಕಡಿಮೆ. ಹೀಗಾಗಿ ಮೇಲು ಜಾತಿಗಳು ಈ ಬಂಡವಾಳವನ್ನು ಅಧಿಕಾರವಾಗಿ ಪರಿವರ್ತಿಸಿಕೊಳ್ಳುತ್ತವೆ. ಅದನ್ನು ಇತರರ ಮೇಲೆ ಹೇರುತ್ತಾ ಅದನ್ನು ಅನುಸರಿಸುವಂತೆ ಒತ್ತಾಯಿಸುತ್ತವೆ. ಆರ್ಥಿಕ ಬಂಡವಾಳವನ್ನು ಸಂಚಯಿಸುವಂತೆ ಸಾಮಾಜಿಕ-ಸಾಂಸ್ಕೃತಿಕ ಬಂಡವಾಳವನ್ನು ಕೂಡಿಡುವುದು ಕಷ್ಟ ಅದು ವಿಶಿಷ್ಟ ಮನೋ-ಸಾಮಾಜಿಕ ಭೂಮಿಕೆಯ ಮೇಲೆ ನಿರ್ಮಾಣವಾಗುತ್ತದೆ.

ಈ ಹಿನ್ನಲೆಯಲ್ಲಿ ಅಂತರಜಾತಿ ವಿವಾಹ ಬೇಕೆ? ಬೇಡವೇ ಎಂಬ ಪ್ರಶ್ನೆಗೆ ಮತ್ತೆ ಮರಳುವ.

ಅಂತರಜಾತಿ ವಿವಾಹವೆಂದರೆ ಕೇವಲ ಭಿನ್ನ ಜಾತಿಗಳಿಗೆ ಸೇರಿದ ಗಂಡು ಹೆಣ್ಣುಗಳ ನಡುವಿನ ಸಾಮಾಜಿಕ- ಸಾಂಸ್ಕೃತಿಕ ಬಂಡವಾಳದ ಹೂಡುವಿಕೆ. ಬಂಡವಾಳದ ಹೂಡುವಿಕೆಯ ಪ್ರಶ್ನೆ ಬಂದ ಕೂಡಲೆ ಅಲ್ಲಿ ಅಧಿಕಾರ ಸಂಬಂಧ ಏರ್ಪಡುತ್ತದೆ. ಈ ಮೊದಲೇ ಹೇಳಿದ ಹಾಗೆ ಅಂತರಜಾತಿ ವಿವಾಹಿತರು ಕ್ಲೈಮ್ ಮಾಡುವ 'ಶುದ್ಧ ಆದರ್ಶ ಪ್ರೇಮ' ಎಂಬ ಕಾಲ್ಪನಿಕ ಆದರ್ಶವೇನು ಇರುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ಬಂಡವಾಳದ ವಿನಿಮಯ, ದೀರ್ಘಕಾಲದ ಲೈಂಗಿಕ ಸಂಬಂಧ, ಆಸ್ತಿ ವರ್ಗಾವಣೆ ಮತ್ತು ಸಾಪೇಕ್ಷವಾಗಿ ಸುರಕ್ಷಿತ ಎನ್ನುವ ಬದುಕು ಮಾತ್ರವಲ್ಲದೇ ವಿವಾಹ ಏರ್ಪಡಲು ಅಂತಹ ಮಹತ್ತರ ಉದ್ದೇಶಗಳೇನೂ ಇರುವುದಿಲ್ಲ. ಲೇಖನದ ವ್ಯಾಪ್ತಿಯಲ್ಲಿ ಬರುವ ಪ್ರಗತಿಪರ ಅಂತರಜಾತಿ ವಿವಾಹಿತ ಗುಂಪು ಇದನ್ನು ಮೀರಿ 'ಹೆಣ್ಣು ಗಂಡಿನ' ನಡುವಿನ ಸಂಬಂಧವನ್ನು ಜಾತಿ ನಿರ್ಮೂಲನೆಯೆಂದು ಘೋಷಿಸಿಕೊಳ್ಳುತ್ತಾರೆ. ಆದರೆ ಸಾಮಾಜಿಕ- ಸಾಂಸ್ಕೃತಿಕ ಬಂಡವಾಳದ ಹೂರಣ ಒಳಗಡೆಯೇ ಹೂತಿರುತ್ತದೆ.

'ಪ್ರೇಮ ವಿವಾಹ', 'ಸಮಾನ' ಇತ್ಯಾದಿ ಎಂದು ಹೇಳಲ್ಪಟ್ಟ ಮೇಲಿನ ಹೊದಿಕೆ ಮಾಯವಾಗಿ ಅಧಿಕಾರ ಸಂಬಂಧದ ಹೂರಣ ಹೊರಬರುತ್ತದೆ. ಪರಸ್ಪರ ಹೆಣ್ಣು-ಗಂಡುಗಳಿಬ್ಬರೂ ತಮ್ಮ ಸಾಂಸ್ಕೃತಿಕ ಬಂಡವಾಳವನ್ನು ತಮ್ಮ ಜಾತಿಯ ಜನರಿಗೆ ವಿನಿಯೋಗಿಸಲು ಬಯಸುತ್ತಾರೆ. ಇತರ ಸಾಂಸ್ಕೃತಿಕ ಸಾಮಾಜಿಕ ಚಹರೆಯುಳ್ಳ ಜನರಿಗೆ ಅದನ್ನು ಬಳಸಲಾರರು. ಮೇಲು ಜಾತಿ ಕೆಳಜಾತಿ ನಡುವೆ ವಿವಾಹ ಸಂಬಂಧ ಏರ್ಪಟ್ಟಾಗ ಮೇಲು ಜಾತಿಯ ಸಂಗಾತಿಗೆ ಅದು ಹೆಣ್ಣಾಗಲಿ-ಗಂಡಾಗಲಿ ತನ್ನ ಸಾಂಸ್ಕೃತಿಕ ಬಂಡವಾಳದಿಂದಾಗಿಯೇ ಹೆಚ್ಚಿನ ಅಧಿಕಾರ ಲಭ್ಯವಾಗುತ್ತದೆ. ಕೆಳಜಾತಿಯ ಸಂಗಾತಿಗಳು ತಮ್ಮ ಮಾನ್ಯತೆಯಿಲ್ಲದ ಸಾಮಾಜಿಕ ಸಾಂಸ್ಕೃತಿಕ ಬಂಡವಾಳವನ್ನು ಅಧಿಕಾರಯುತವಾಗಿ ಹೊತ್ತಿದ್ದರೂ ಕೆಳಜಾತಿಗಳಿಗೆ ಹೆಚ್ಚಿನ ನಷ್ಟ ಉಂಟಾಗುತ್ತದೆ.

ಇಂತಹ ಸಂದರ್ಭದಲ್ಲಿ ಕೆಳಜಾತಿಯ ಸಂಗಾತಿಗೆ ಉಳಿದಿರಬಹುದಾದ್ದು ಸಂವಿಧಾನದ ಬಲದಿಂದ, 'ಆಧುನಿಕತೆ'ಯಿಂದ ಲಭ್ಯವಾದ ಆರ್ಥಿಕ ಬಂಡವಾಳದಿಂದ ತನ್ನ 'ಜಾತಿ' ಸಾಮಾಜಿಕ ಚಲನೆಗೆ ಒಳಪಡಬಹುದಾದ್ದು. ಆದರೆ ಮೇಲು ಜಾತಿಯ ಸಂಗಾತಿ ಬಳಸುವ ಸಾಮಾಜಿಕ ಸಾಂಸ್ಕೃತಿಕ ಬಂಡವಾಳದ ಆಯುಧ ಈ 'ಸಾಮಾಜಿಕ ಚಲನೆ'ಯನ್ನೂ ತಡೆಯುತ್ತದೆ. ಉದಾಹರಣೆಯ ಮೂಲಕ ಹೀಗೆ ವಿವರಿಸಿಕೊಳ್ಳುವ.

ಈ ಲೇಖನದ ಮೊದಲ ಭಾಗದಲ್ಲಿ ಗುರುತಿಸಿರುವ ಮೇಲು ಜಾತಿಯ ಗುಂಪಿನ ಹುಡುಗಿಯೊಬ್ಬಳನ್ನು ಕೆಳಜಾತಿಯ ಹುಡುಗ ಮದುವೆಯಾಗುತ್ತಾನೆ ಎಂದಿಟ್ಟುಕೊಳ್ಳುವ. ಅವನು ತನ್ನ ಆಧುನಿಕತೆಯಿಂದ ಪಡೆದ ಆರ್ಥಿಕ ಸಾಮಾಜಿಕ ಅಧಿಕಾರಗಳನ್ನು ತನ್ನ ಜಾತಿಯವರಿಗೆ ವಿಸ್ತರಿಸಲಾರ. ಏಕೆಂದರೆ ಸಾಮಾಜಿಕ-ಸಾಂಸ್ಕೃತಿಕ ಬಂಡವಾಳದಲ್ಲಿ ಬಲವಾಗಿರುವ ಮೇಲು ಜಾತಿಯ ಹುಡುಗಿಯು ಇವನ ಆರ್ಥಿಕ ಬಂಡವಾಳವನ್ನು ತನ್ನ ಜಾತಿಗೆ ತಿರುಗಿಸುವ ಅಧಿಕಾರ ಪಡೆದಿರುತ್ತಾಳೆ. ಅಥವಾ ಕೆಳಜಾತಿಯ ಹುಡುಗ ತನ್ನ ಜಾತಿ ಸದಸ್ಯರ ಮೇಲ್ಮುಖ ಸಾಮಾಜಿಕ ಚಲನೆಗೆ ಬಂಡವಾಳ ಹೂಡಲಾಗುವುದಿಲ್ಲ. ಹೀಗಾಗಿ ಅಂತರಜಾತಿ ವಿವಾಹಿತರು ತಾವು ಘೋಷಿಸಿಕೊಳ್ಳುವ ಜಾತಿ ನಿರ್ಮೂಲನೆಯಲ್ಲಿ ಕೆಳಜಾತಿ-ಮೇಲು ಜಾತಿಗಳ ಕನಿಷ್ಟ ಸಮಾನತೆ ಸಾಧಿಸುವುದೂ ಕಷ್ಟ

ಈಲೇಖನದ ಆಶಯ ಅಂತರಜಾತಿ ವಿವಾಹದ ವಿಶ್ಲೇಷಣೆ ನಡೆಸುವುದಷ್ಟೆ ಆಗಿದೆ. ಅಂತರಜಾತಿ ವಿವಾಹ ಒಳ್ಳೆಯದು ಅಥವಾ ಕೆಟ್ಟದು ಎಂಬ ತೀರ್ಮಾನ ಕೊಡುವ ಉದ್ದೇಶವನ್ನಂತೂ ಹೊಂದಿಲ್ಲ. □

ಕಂಡೋರ ಕಣದಲ್ಲಿ
ಗಿಡ್ಡ ಮೆದೆಗೊಂದು ಜಾಗಗಿಟ್ಟಿಸಿ
ಹಾರಿ ಬಂದು
ರಾಗಿ ಅರಿ ಬಾಚಿ ಬಾಚಿ, ಕಂತೆಕಟ್ಟಿ
ತಾರು ಮಾರಿಗೊಂದೊಂದು
ಬಳಗುಡ್ಡೆ ಒಟ್ಟಿದ ಒಬ್ಬೊಂಟಿ
ತುಂಡು ದರೆ ಹೊಲದ ಒಡತಿ!

ಮಿಟ್ಲಿ ಮರದಡಿಯಲ್ಲಿ
ಮಾಗಿ ಗಾಳಿಯ ಹುಯಿಲಿಗೆ
ಸಾಥು ಕೊಟ್ಟವಳ ಸುಯ್ಲು!

ಗಂಟು ಮೈ ಕೊಂಟು ಬಡ್ಡೆಯ
ಸುತ್ತ
ಕೆಮ್ಮಣ್ಣು ಪರೆಯೊಳಗೆ
ಪಿತುಗುಡುವ ಗೆದ್ದಲು!
ರೆಂಬೆ ಕವಲಲ್ಲಿ
ಇಣಿಕಿಣಿಕಿ ಕಿಚಿಪಿಚಿಸುವ
ಹೊಟ್ಟೆ ಪಾಡಿನ ಹಿಂಡು!

* * * * *

ಅರೆಗಳಿಗೆಯ ನಿರಾಳದಿಂದೆತ್ತಿ
ಕುಕ್ಕರಿಸಿ
ರೆಪ್ಪೆ ಸಿಪ್ಪೆಯ ಬಿಡಿಸಿದ
ಸನಿವಾರ ಸಂತೆ!

ತಿಂಗಳಾಗಿರ ಬೇಕು
ಅತ್ತ ಕಡೆ ಕಾಲುಗಳ
ಖಾಲಿ ಕೈ ಕಟ್ಟಿ!
ಕೈ ಸಾಲ ಹುಟ್ಟಿ!

ಹಿಕ್ಕೆ ಪಿಚಕಾರಿದ ಹಕ್ಕಿಯ
ಸಾಪಳಿಸಿ
ಚಿಂದಿ ತಲೆಸೆರಗ ಕೊಡವಿ
ಬಗಲ ಚಂಚಿಯ ತಡಕಲು

ಕಾವ್ಯ

○ ಬಿ. ರಾಜಣ್ಣ

ಬಂಗ

ಗೋಟು ಚೊರು, ಎಲೆ ತರಗು
ಒಣಸುಣ್ಣ, ಕಡ್ಡಿಹುಡಿದೊಳಿನ
ತಳದ ಒಳಕಿಸೆಯಲ್ಲಿ
ಅವಿಸಿಟ್ಟ ಪುಡಿಕಾಸು:
ಹುಣಿಸೆ ಬಿತ್ತಕ್ಕೆ ಹೊಂಗೆ ಬೀಜಕ್ಕೆ
ಕರಿ ಸಬಿ ಕೊಟ್ಟ ಅಡ್ವಾನ್ಸು!
ಕೆಕ್ಕನೆ ನಕ್ಕವು ಹಂಕಲಿನ ಕೊಳೆ!

* * * * *

ಬತ್ತಿದ ತೊಡೆಗಷ್ಟು ಹುರುಪು ಹತ್ತಿದ
ಸೇಣಕಲಿ–

ಸರಬರ ಕರಮರಿ ತರುಬಿ ದಾಪಿಕ್ಕಿ
ಗೋಟು ಸೇರುವ ವೇಳೆ–

ಮಾರಿಗುಡಿ ಕಟ್ಟೆಯಲ್ಲಿ
ಕೊರೆಬೀಡಿ ಗಂಡ!
ಕಂಡ ಗರತಿಯ ಕೊಣದ ಕಣ್ಗುಡ್ಡೆ
ನೀರೊಲೆಯ ಕೆಂಡ!

ಅಂದದ್ದ ಅಂಡಿಗೊರೆಸಿ
ಕೊದದ್ದ ಕುಂಡಿಗಿಳಿಸಿದಾಸಾಮಿ:
ಕಟ್ಟೆ ಜಂಪಕ್ಕೇ ನೆಟ್ಟ
ಕರಿಕಲ್ಲ ಮಂಟಿ!
ಭಟ್ಟಸೆರೆಯಂಟಿ!

* * * * *

ಗೋಣಿ, ಗೊಪ್ಪೆ, ಡೇರೆ–ಗುಡಾರಗಳು
ಗಂಟು ಕಟ್ಟುವ ಮುಂಚೆ
ಒಡೆದ ಹಳ್ಳುಪ್ಪು, ಬಾಡಿದೆಲೆ
ಕಸಬೆರೆಕೆ ಮೆಣಸು ಜೀರಿಗೆ
ಕೈಬುಡ್ಡಿ ಕುಪ್ಪಿಯೆಣ್ಣೆ....ಗೆ
ಕರಿ ಸಂಜೆ ಹಾದಿಯ
ಕುಟ್ಟೆ ಕೊರಕಲಿನಲ್ಲಿ
ಕುಕ್ಕೆ ಕಂಕುಳ ಒಣಕಲಿಯ
ಕುಕ್ಕು ಲೋಟ!

ಕಲರವದ ದಾರಿಯುದ್ದಕ್ಕು
ಬಂಗ ಮುಗಿದವರ ಮರುಕ!
ಕುಕ್ಕು ನೋಟ!

* * * * *

ಎತ್ತಂಗಡಿ ಹೊತ್ತಿ ನಾಸರಾಸರವ ತಟ್ಟಾಡಿ
ಕೋಮಟಿಯ ಕಟಪಡೆಯಾದಲ್ಲಿ
ಆರರದು ಮೂರು ನಾಕಕ್ಕಿಳಿದರೊ
ಮೂರಕ್ಕೇ ಮೊಟಕು ಆರರ ಗೋಟು!
ಕಾಳಿಳಿದ ಹತ್ತಿ: ನೆತ್ತಿ ಯೆಚ್ಚದ ಬುತ್ತಿ!
ಹಗಲ ಸೆರೆ ಬಿಟ್ಟ ಚಿಕ್ಕ ಇಣುಕೊ ಸಾಲದ
ಕುರುಚಲು ಬಯಲೂ,ಕತ್ತಲ ಕಾಡು!

* * * * *

ಒಪ್ಪೊತ್ತಿನ ಜಿಗುಟ ಕಾಲಿಗೆ, ಉಕ್ಕೆತೆರೆಯ
ಹೋರಿ ನಡೆ: ಕಾಡಿ, ಒಂಟಿಪೀಡೆ!
ಒಬ್ಬೆ ಇರುಕಿನ ಓಣಿಯ
ನಡು ಬಟ್ಟೆ ಕುಟ್ಟೆ ಮುಸುಕಿನಲ್ಲಿ
ಮಿಸುಕಾಡದ ಮಣ್ಣು ಮಂಡಲದಯ್ಯ:

ದುಡ ಬಕುತೆಯ ಕಾಯುವನೆ
ಬೋರೆ ಮೇಗಳ ಮಾದಯ್ಯ?

ನಮ್ಮೊಳಗೇ ಬುದ್ಧ ಪೂರ್ಣಿಮೆ

ಅಪೂರ್ವ ಡಿ, ಸಿಲ್ವ

ಬುದ್ಧ ಮಹಾಮೌನಿ, ಆ ಮೌನದೊಳಗೆ ಆಂತರಿಕ ವಿಕಾಸ ವಿದೆ. ಎಚ್ಚರದ ಸ್ಥಿತಿಯಿದೆ. ಮನಸ್ಸಿನ ಆಲೋಚನೆಗಳಿಂದ ಮುಕ್ತವಾದ ಮೌನವನ್ನು ಬುದ್ಧ ಅರಿವು ಮಾಡಿಕೊಂಡ. ಜೆನ್ ಎಂದರೆ ಧ್ಯಾನ್ಯ ಎಂದರ್ಥ. ಬೌದ್ಧ ಧರ್ಮದ ವಿವಿಧತೆಯಲ್ಲಿ ಜೆನ್ ಕೂಡ ಒಂದು ಮಾತಿಗೂ ಆಚೆಗಿನ ಮೌನವನ್ನು ಕುರಿತು ಒಂದು ಜೆನ್ ಕಥೆ ಇದೆ. ಒಬ್ಬ ಬುದ್ಧಿವಂತನಿದ್ದ. ಆತ ಹಲವಾರು ಪುಸ್ತಕಗಳನ್ನು ಓದಿ ಕೊಂಡಿದ್ದ. ಆತ ತನ್ನ ಆಂತರ್ಯದ ತಿಳಿವಿಗಿಂತ ಎಲ್ಲಾದಕ್ಕೂ ಪುಸ್ತ ಕಗಳನ್ನೆ ಆಶ್ರಯಿಸಿದ್ದ. ಒಮ್ಮೆ ಈತ ಜೆನ್ ಗುರು ಬಳಿ ಬಂದು ತಾನು ಓದಿರುವ ಪುಸ್ತಕಗಳ ಬಗ್ಗೆ ಮಾತನಾಡುತ್ತಾ ಹೋಗುತ್ತಾನೆ. ಆತ ಜೆನ್ ಗುರುಬಳಿ ಬುದ್ಧನ ಕುರಿತು ಕಲಿಯಲು ಬಂದಿರುತ್ತಾನೆ, ಆದರೆ ಬಂದ ಉದ್ದೇಶವನ್ನೆ ಬಿಟ್ಟು ಮಾತನಾಡುತ್ತ ಹೋಗುತ್ತಾನೆ.

ಒಂದೇ ಒಂದು ಮಾತನ್ನು ಆಡದೇ ಮೌನ ಮೂರ್ತಿಯಂತೆ ಕುಳಿತ ಜೆನ್ ಗುರು ಎದ್ದು ಒಳಕ್ಕೆ ಹೋಗುತ್ತಾನೆ. ಬುದ್ಧಿವಂತನಿಗೆ ಆಶ್ಚರ್ಯವಾಗುತ್ತದೆ. ಜೆನ್ ಗುರು ಚಹಾದ ಪಾತ್ರೆಯನ್ನು ಒಂದು ಲೋಟವನ್ನು ತಂದು ಚಹಾ ಸುರಿಯುತ್ತಾರೆ. ಲೋಟ ತುಂಬಿ ಚಹಾ ಸುರಿಯಲು ಪ್ರಾರಂಭವಾಗುತ್ತದೆ. ಬುದ್ಧಿವಂತ ಚಹಾ ಸುರಿಯುತ್ತಿದೆ ನಿಲ್ಲಿಸಿ ಎನ್ನುತ್ತಾನೆ. ಜೆನ್ ಗುರು ನಿಲ್ಲಿಸಿ., ನೋಡಪ್ಪ.. ನಿನ್ನ ತಲೆ ತುಂಬಿ ಸುರಿಯಲು ಪ್ರಾರಂಭಿಸಿದೆ. ನಿನ್ನ ಮಾತು ನಿನ್ನಿಂದ ಬರುವುದಲ್ಲ. ಪುಸ್ತಕಗಳ ನಕಲು ಅಷ್ಟೆ. ನೀನು ಮೌನಿಯಾಗಬೇಕು. ತಲೆಯಲ್ಲಿ ತುಂಬಿರುವುದ್ದೆಲ್ಲಾ ಖಾಲಿಯಾಗಬೇಕು. ಎಂದು ಅತಿಥಿಗೆ ಹೇಳಿದಾಗ ಬಿದ್ಧಿವಂತ ಮೌನಿ ಯಾಗುತ್ತಾನೆ. ಮೌನ ವಾದ ಕೂಡಲೇ ನಾವು ಬುದ್ಧರಾಗ ಬಹುದೇ ಎಂದು ನಮ್ಮನ್ನ ನಾವೇ ಕೇಳಿಕೊಂಡಾಗ ನಮ್ಮೊಳಗಿನ ಮನಸ್ಸು ಕೂಗಾಡಲು ಪ್ರಾರಂಭಿಸುತ್ತದೆ.

ಮತ್ತೆ - ದುಃಖ, ಅವಮಾನ, ಜಾತಿ, ರೂಪ, ಘನತೆ, ಸಿಧ್ಧಾಂತ ಇವೆಲ್ಲಾ ಒಂದರ ಹಿಂದೆ ಒಂದರಂತೆ ಬಾಧಿಸಲು ಪ್ರಾರಂಭಿಸುತ್ತದೆ. ಇದನ್ನೆಲ್ಲಾ ತಡೆದಷ್ಟು ಮನಸ್ಸು ಅದರ ಕೂಗಾಟವನ್ನು ಹೆಚ್ಚಿಸುತ್ತದೆ. ಮನಸ್ಸು ದ್ವಂದ್ವಗಳ ದಾಸನಾಗಿರುತ್ತದೆ. ಮನಸ್ಸು ಘಾಸಿಗೊಂಡಿದೆ. ತುಂಬಾ ದುಃಖದಲ್ಲಿದ್ದಾನೆ ಎಂಬ ಪದವನ್ನು ನಾವು ಬಳಸುತ್ತೇವೆ. ಒಮ್ಮೆ ಬುದ್ಧನ ಬಳಿಗೆ ಒಬ್ಬ ವ್ಯಕ್ತಿ ಬಂದು ಬುದ್ಧನನ್ನು ಬುದ್ಧನ ಧರ್ಮವನ್ನು ಬಾಯಿಗೆಬಂದ ಹಾಗೆ ಬಯ್ಯುತ್ತಿರುತ್ತಾನೆ. ಬುದ್ಧ ಮೌನವಾಗಿ ಕೇಳಿಸಿಕೊಂಡು ಆ ವ್ಯಕ್ತಿಗೆ ನಿಮ್ಮ ಮನೆಗೆ ಅತಿಥಿಗಳು ಬರುತ್ತಾರೆ. ನಿವು ಆ ಅತಿಥಿಗಳಿಗೆ ಸಿಹಿಯನ್ನು ಕೊಡುತ್ತೀರಿ. ಅತಿಥಿ ಸ್ವೀಕರಿಸುವುದಿಲ್ಲ. ಆಗ ಏನು ಮಾಡುತ್ತೀರಿ ಎಂದು ಕೇಳಿದಾಗ ಆ ವ್ಯಕ್ತಿ ನಾನೇ ಇಟ್ಟು ಕೊಳ್ಳುತ್ತೇನೆ ಎಂದು ಹೇಳುತ್ತಾನೆ.

ಹಾಗೆ ನಿನ್ನ ಬೈಗುಳ ನಾನು ಸ್ವೀಕರಿಸಿಲ್ಲ. ಅದನ್ನು ನೀನೇ ಇಟ್ಟುಕೋ ಎಂದು ಬುದ್ಧ ಹೇಳಿದಾಗ ಆತನಿಗೆ ಏನು ಹೇಳಬೇಕೆಂದು ತಿಳಿಯದೆ ಹೊರಟು ಹೋಗುತ್ತಾನೆ. ಆ ಬಯ್ಯುತ್ತಿರುವ ವ್ಯಕ್ತಿ ಅಪ್ರಜ್ಞಾಸ್ಥಿತಿಯಲ್ಲಿ ಮನಸ್ಸಿಗೆ ಬಂದ ಪದಗಳನ್ನೇ ಬಳಸುತ್ತಿರುತ್ತಾನೆ ಬುದ್ಧ ಇದಾವುದಕ್ಕೂ ಅಂಟಿಕೊಳ್ಳುವುದಿಲ್ಲ. ಆತನ ಬೈಗುಳ ಕೇಳಿಸಿಕೊಳ್ಳುತ್ತದೆ ಆದರೆ ಸ್ವೀಕರಿಸಿಕೊಂಡಿರುವುದಿಲ್ಲ. ಮನಸ್ಸಿನ ಇಂತಹ ಕೂಗಾಟವನ್ನು ಸಹಜವಾಗಿ ನೋಡುವ ಕ್ರಮವೊಂದನ್ನು ಬುದ್ಧ ಶೋಧಿಸಿದ ನಮ್ಮ ದೇಹದೊಳಗೆ ಆಗುವ ಬದಲಾವಣೆಗಳು ನಮ್ಮ ಅರಿವಿಗೆ ಬರುತ್ತದೆ ಮೌನದಲ್ಲಿ ತೀವ್ರವಾದ ಧ್ಯಾನದಲ್ಲಿ ಈ ಅರಿವು ಇನ್ನೂ ಹೆಚ್ಚು ಪ್ರಖರವಾಗುತ್ತಾ ಹೋಗುತ್ತದೆ. ಈ ಅರಿವನ್ನೇ ಅಂತರ್ ದೃಷ್ಟಿ ಎಂಬ ಪದದಲ್ಲಿಯೂ ಹೇಳುತ್ತೇವೆ. ಬುದ್ಧ ಇದನ್ನು ಪ್ರಜ್ಞೆ ಎಂಬುದಾಗಿ ಹೇಳುತ್ತಾನೆ. ಪವಿತ್ರವಾಗಿ ಸ್ವತಂತ್ರವಾಗಿ ಪ್ರಜ್ಞೆ ಮನುಷ್ಯನೊಳಗೆ ಇರುತ್ತದೆ. ಅದನ್ನು ಜಾಗೃತಗೊಳಿಸದಿದ್ದರೆ ನಮ್ಮ ನಡೆ ನುಡಿ ಆಲೋಚನೆಯ ಬಗ್ಗೆ ನಮಗೆ ಅರಿವೇ ಇರುವುದಿಲ್ಲ. ಅಪ್ರಜ್ಞಾಸ್ಥಿತಿಯಲ್ಲೇ ಮಾತಾಡುತ್ತೇವೆ ಆಲೋಚಿಸುತ್ತೇವೆ ಅದನ್ನು ಕ್ರಿಯೆಗೂ ಇಳಿಸುತ್ತೇವೆ.

ಬುದ್ಧನನ್ನು ಆ ಕಾರಣಕ್ಕೆ ಎಚ್ಚರಗೊಂಡವನು ಎಂದು ಹೇಳುತ್ತೇವೆ. ಮನಸ್ಸಿನ ಆಲೋಚನೆಗೆ ಸಾಕ್ಷಿಯಾಗಿರುವ ಸ್ಥಿತಿ, ಈ ಎಚ್ಚರದ ಸಾಕ್ಷಿ ಪ್ರಜ್ಞೆಯೇ , ಮನಸ್ಸಿನ ಕೂಗಾಟವನ್ನು ನಿಲ್ಲಿಸುತ್ತದೆ. ಜೆನ್ ದರ್ಶನವು ದೇಹವನ್ನು ಐದು ರಾಶಿಗಳಾಗಿ ಪರಿಗಣಿಸುತ್ತದೆ (1)ಭಾವನೆಗಳ ಹರಿಯುವಿಕೆ(2) ಗ್ರಹಿಕೆಗಳ ಹರಿಯುವಿಕೆ(3)ಮನಸಿಕಸ್ಥಿತಿಯಹರಿಯುವಿಕೆ (4) ಅಂಗಾಂಗಗಳ ಹರಿಯುವಿಕೆ (5)ಪ್ರಜ್ಞೆಯ ಹರಿಯುವಿಕೆ.ಪ್ರಜ್ಞೆಯನ್ನು ಹೊರತುಪಡಿಸಿ ಉಳಿದೆಲ್ಲವೂ ಮನಸ್ಸಿಗೆ ಬುದ್ಧಿಮಾತಿಗೆ ಸಂಬಂಧಪಟ್ಟ ವಿಚಾರವಾಗಿದೆ. ಹುಟ್ಟಿದ ಮಗು ಬೆಳೆದಂತೆ ಜಾತಿಯಬಗ್ಗೆ ಸಂಪ್ರದಾಯದ ಬಗ್ಗೆ ಆಹಾರದ ಬಗ್ಗೆ ಒಟ್ಟಾರೆ ಸಮಾಜ ಅದಕ್ಕೆ ಕಲಿಸಿ ಕೊಟ್ಟ ನಡೆಯನ್ನೆ



ಪ್ರಜ್ಞೆ ಜಾಗೃತಗೊಳ್ಳುತ್ತದೆ ಇಲ್ಲದಿದ್ದರೆ ಕಾಲದೇಶಗಆಗೆ ಕಾರ್ಯಕಾರಣಗಳಿಗೆ ಅದು ಒಳಗಾಗುತ್ತದೆ. ಒಂದು ಚೆಂಡನ್ನು ಗೋಡೆಗೆ ಎಸೆದಾಗ ಹೇಗೆ ಅದು ಹಿಂದಕ್ಕೆ ಬರುತ್ತದೊ ಹಾಗೆ ಎಚ್ಚರಿಕೆಯಿಲ್ಲದ ಪ್ರತಿ ನಡೆಯೂ ಅದಕ್ಕೆ ಬಾಧಿಸಲು ಪ್ರಾರಂಭಿಸುತ್ತದೆ. ಭಾವನೆಗಳಿಗೆ ಗ್ರಹಿಕೆಗಳಿಗೆ ನಮ್ಮ ಮಾನಸಿಕ ಸ್ಥಿತಿಗತಿಗಳಿಗೆ ದೇಹದ ಬೆಳವಣಿಗೆಗೆ ಒಂದಕ್ಕೊಂದು ಸಂಬಂಧವಿರುತ್ತದೆ ಇದು ಮನುಷ್ಯನನ್ನು ಆಸೆ ಆಮಿಷಗಳಿಗೆ ಅನುಮಾನಕ್ಕೆ ದೂಡುತ್ತದೆ. ಇದು ಮನುಷ್ಯನನ್ನು ಅಪ್ರಜ್ಞಾ ಸ್ಥಿತಿಗೆ ತಂದು ನಿಲ್ಲಿಸುತ್ತದೆ. ಬೌದ್ಧ ಧರ್ಮದಲ್ಲಿ ತಂದೆ ತಾಯಿಗಳ ಪೂರ್ವಿಕರ ಅಪ್ರಜ್ಞಾ ಸ್ಥಿತಿಯೇ ವಂಶವಾಯಿಗಳ ಮೂಲಕ ಮಕ್ಕಳಿಗೂ ಹರಿದು ಬರುವ ಸ್ಥಿತಿಯ ಬಗ್ಗೆ ಹೇಳುತ್ತಾರೆ ಇವನ್ನೆ ದೇಹದ ಐದು ರಾಶಿಗಳಲ್ಲಿ ಒಂದಾಂದ ಅಂಗಾಂಗಗಳ ಹರಿಯುವಿಕೆ ಎಂದು ಹೇಳುವುದು.

ಅದು ನಕಲು ಮಾಡಲು ಪ್ರಾರಂಭಿಸುತ್ತದೆ. ಇಂಥ ಪೂರ್ವಾಗ್ರಹಗಳೇ ಸ್ವತಂತ್ರ ಆಲೋಚನೆಯಿಂದ ಹೊರ ತಂದು ಅದನ್ನು ಅಪ್ರಜ್ಞಾಸ್ಥಿತಿಗೆ ದೂಡಲಾಗುತ್ತದೆ. ಸೃಜನಶೀಲವಾಗಿ ಸ್ವತಂತ್ರವಾಗಿ ಅದು ತನ್ನಹಾದಿಯನ್ನು ರೂಪಿಸಿಕೊಂಡಾಗ ಅದು ತನ್ನ ನಡೆ ನುಡಿಯ ಬಗ್ಗೆ ಎಚ್ಚರವಾಗಿರುತ್ತದೆ.

ಪ್ರಜ್ಞೆ ಜಾಗೃತಗೊಳ್ಳುತ್ತದೆ ಇಲ್ಲದಿದ್ದರೆ ಕಾಲದೇಶಗಳಿಗೆ ಕಾರ್ಯಕಾರಣಗಳಿಗೆ ಅದು ಒಳಗಾಗುತ್ತದೆ.ಒಂದು ಚೆಂಡನ್ನು ಗೋಡೆಗೆ ಎಸೆದಾಗ ಹೇಗೆ ಅದು ಹಿಂದಕ್ಕೆ ಬರುತ್ತದೂ ಹಾಗೆ ಎಚ್ಚರಿಕೆಯಿಲ್ಲದ ಪ್ರತಿನಡೆಯೂ ಅದಕ್ಕೆ ಬಾಧಿಸಲು ಪ್ರಾರಂಭಿಸುತ್ತದೆ. ಭಾವನೆಗಳಿಗೆ ಗ್ರಹಿಕೆಗಳಿಗೆ ನಮ್ಮ ಮಾನಸಿಕ ಸ್ಥಿತಿಗತಿಗಳಿಗೆ ದೇಹದ ಬೆಳವಣಿಗೆಗೆ ಒಂದಕ್ಕೊಂದು ಸಂಬಂಧವಿರುತ್ತದೆ ಇದು ಮನುಷ್ಯನನ್ನು ಆಸೆ ಆಮಿಷಗಳಿಗೆ ಅನುಮಾನಕ್ಕೆ ದೂಡುತ್ತದೆ.

ಇದು ಮನುಷ್ಯನನ್ನು ಅಪ್ರಜ್ಞಾ ಸ್ಥಿತಿಗೆ ತಂದು ನಿಲ್ಲಿಸುತ್ತದೆ. ಬೌದ್ಧ ಧರ್ಮದಲ್ಲಿ ತಂದೆ ತಾಯಿಗಳ ಪೂರ್ವಿಕರ ಅಪ್ರಜ್ಞಾ ಸ್ಥಿತಿಯೇ ವಂಶವಾಯಿಗಳ ಮೂಲಕ ಮಕ್ಕಳಿಗೂ ಹರಿದುಬರುವ ಸ್ಥಿತಿಯ ಬಗ್ಗೆ ಹೇಳುತ್ತಾರೆ ಇವನ್ನೆ ದೇಹದ ಐದುರಾಶಿಗಳಲ್ಲಿ ಒಂದಾಂದ ಅಂಗಾಂಗಗಳ ಹರಿಯುವಿಕೆ ಎಂದು ಹೇಳುವುದು. ಪ್ರಜ್ಞೆಯ ಉನ್ನತ ಸ್ಥರಗಳ ಮೂಲಕ ವಂಶವಾಹಿಯಾಗಿ ಬರುವ ರೋಗಗಳು ಕೆಟ್ಟಗುಣಗಳನ್ನು ತಡೆಯುವ ಬಗ್ಗೆ ಬುದ್ಧನ ಧರ್ಮದಲ್ಲಿ ಕಾಣಬಹುದಾಗಿದೆ. ಟಿಬೆಟಿಯನ್ ಬೌದ್ಧಧರ್ಮದ ಅನುಯಾಯಿಗಳು "ಬಾರ್ಡೋ" ಎನ್ನುವ ಮಾದರಿಯಲ್ಲಿ ಗರ್ಭಿಣಿಯರಿಗೆ ಇಂಥಹ ಉನ್ನತ ಪ್ರಜ್ಞಾಸ್ಥರಗಳ ಬಗ್ಗೆ ಭೋಧಿಸುವ ಮೂಲಕ ವಂಶವಹಿಯಾಗಿ ಬರುವ ಅಪ್ರಜ್ಞಾಸ್ಥಿತಿಯನ್ನು ಮಗುವಿನಿಂದ ಹೊರತೆಗೆಯುತ್ತಾರೆ.

ಮನಸ್ಸು ಹೇಗೆ ಮನುಷ್ಯನ್ನು ಅಪ್ರಜ್ಞಾಸ್ಥಿತಿಗೆ ದೂಡುತ್ತದೆ ಹಾಗೂ ಮನಸ್ಸಿನಿಂದ ಸ್ವತಂತ್ರಗೊಳ್ಳುವ ಕ್ರಮಗಳ ಬಗ್ಗೆ ಬುದ್ಧ ಬೇರೆ ಬೇರೆ ಪ್ರಯೋಗಗಳಿಗೆ ತನ್ನನ್ನೇ ಒಡ್ಡಿಕೊಂಡ. ಮನುಷ್ಯನ ಮನಸ್ಸು ದ್ವಂದ್ವಗಳ ದಾಸನಾಗಿರುತ್ತದೆ. ನಿಜಸುಳ್ಳು, ಕತ್ತಲೆ ಬೆಳಕು, ಕಪ್ಪುಬಿಳಿ, ದೇವರು–ಸೈತಾನ ಹೀಗೆ ಅದು ತೀವ್ರ ಸುಖಕ್ಕೊ ತೀವ್ರ ದುಃಖಕ್ಕೊ ಮನುಷ್ಯನನ್ನು ದೂಡುತ್ತದೆ. ಮನಸ್ಸು ಈ ಕ್ಷಣದಲ್ಲಿ ಇರುವ ಬದಲು ಭೂತಕಾಲಕ್ಕೊ ವರ್ತಮಾನಕ್ಕೊ ಮನುಷ್ಯನನ್ನು ದೂಡುತ್ತಿರುತ್ತದೆ ಒಟ್ಟಿನಲ್ಲಿ ಆತ ಪ್ರಜ್ಞೆ ಕಳೆದುಕೊಂಡು ಕನಸಿನ ಸಾಮ್ರಾಜ್ಯಕ್ಕೆ ಹೋಗುತ್ತಾನೆ. ಒಬ್ಬ ಜನಪ್ರಿಯ ನಾಯಕನೊ, ನಾಯಕಿಯೊ ಅಥವಾ ಕ್ರೀಡಾಪಟುವೂ ಜಾಹಿರಾತಿನಲ್ಲಿ ತೋರಿಸಿದ ಬಟ್ಟೆ ಆಹಾರ ದಿನನಿತ್ಯದ ವಸ್ತುಗಳನ್ನು ಆತ ಬಳಸಿದ ಎಂಬ ಕಾರಣಕ್ಕೆ ಯಾವುದೇ ಎಚ್ಚರಿಕೆಯಿಲ್ಲದೆ ಅಪ್ರಜ್ಞಾಸ್ಥಿತಿಯಲ್ಲಿ ಆ ನಾಯಕನ ಜಾಹಿರಾತಿನ ಅನುಕರಣೆ ಮಾಡುತ್ತೇವೆ.

ಇಂಥಹ ಅಪ್ರಜ್ಞಾಸ್ಥಿತಿಯೇ ಮನುಷ್ಯನನು ಕನಸುಗಳಾಗಿ ಬಾಧಿಸುತ್ತವೆ ಹಾಗೂ ಈ ಕನಸುಗಳ ಬಗ್ಗೆ ನಮಗೆ ಯಾವ ಎಚ್ಚರವೂ ಇರುವುದಿಲ್ಲ. ಇಂಥಹ ಮಾನಸಿಕ ಸ್ಥಿತಿಯಿಂದ ಸ್ವತಂತ್ರಗೊಂಡು ನೈಸರ್ಗಿಕವಾಗಿ ಮನಸ್ಸಿನ ಅವಲಂಬನೆ ಇಲ್ಲದಂತೆ ಬೆಳೆವ ಮಾರ್ಗವನ್ನು ಬುದ್ಧ ಶೋಧಿಸಿದ ಹಾಗೂ ಮನುಷ್ಯನ ದುಃಖಕ್ಕೆ ಮೂಲಕಾರಣವನ್ನು ಮತ್ತು ಅದನ್ನು ನಿವಾರಣೆಯನ್ನು ಮಾಡುವ ವಿಧಾನವನ್ನು ಕಂಡುಹಿಡಿದ. ಇಂಥ ದುಃಖ ನಿವಾರಣೆಯ ಸ್ಥಿತಿಯನ್ನು ಮನಸ್ಸಿನಿಂದ ಸ್ವತಂತ್ರಗೊಳ್ಳುವ ಕ್ರಮವನ್ನು ಬುದ್ಧ "ನಿರ್ವಾಣ" ಎಂದು ಕರೆದ, ನಿರ್ವಾಣಗೊಂಡ,

> **ಸತ್ಯದ ಹುಡುಗಾಟದಲ್ಲಿ ಬಲು ದೊಡ್ಡ ತೊಡಕು ಎಂಬುದಾಗಿ ಬುದ್ಧನಿಗೆ ಅರಿವಾಗಿತ್ತು. ಅದಕ್ಕಾಗಿ ಕಾಲಮರೆಂಬ ಭೋದಿಸತ್ವರಿಗೆ ಬುದ್ಧ ಹೀಗೆ ಹೇಳುತ್ತಾರೆ. "ಕೇವಲ ನೀವು ಕೇಳಿರುವುದನ್ನೆ ನಂಬಬೇಡಿ", ಕೇವಲ ಒಬ್ಬರಿಂದ ಇನ್ನೊಬ್ಬರಿಗೆ ಹಸ್ತಾಂತರವಾಗಿರುವುದನ್ನೆ ನೋಡಿ ನಂಬಬೇಡಿ", "ಕೇವಲ ಅನುಕೂಲಕರವಾದ ನಂಬಿಕೆ ಮತ್ತು ಅಭಿಪ್ರಾಯಗಳಂತೆ ನೆಡಯಬೇಡಿ.**

ಬುದ್ಧತ್ವವನ್ನು ಪಡೆದ ಮನುಷ್ಯನಿಗೆ ಕಾಲದೇಶಗಳು ಕಾರ್ಯಕಾರಣಗಳು ಬಾಧಿಸುವುದಿಲ್ಲ. ಬುದ್ಧನಾಗಲು ಇಂಥಹ ಪ್ರಜ್ಞೆಯ ಅಗತ್ಯವಿದೆಯೇ ಹೊರತು ಜಾತಿ ಧರ್ಮಗಳಾಗಲಿ, ರೂಪ ಅಂತಃಸ್ತಾಗಲಿ, ಅಪಾರ ಬುದ್ಧಿಯಾಗಲಿ ಇದಾವುದರ ಅಗತ್ಯವಿಲ್ಲ. ಇಂಥ ಮಾರ್ಗಗಳು ಬುದ್ಧನಾಗುವ ಮಾರ್ಗವನ್ನೇ ಮುಚ್ಚಿಬಿಡುತ್ತದೆ. ಬುದ್ಧನಾಗುವವನು ಹಂಸೆಯ ಹಾಗೆ ನೀರಿನಲ್ಲಿದ್ದರೂ ನೀರು ಸೋಕದಂತೆ, ಜಾತಿ–ಧರ್ಮ, ರೂಪ–ಅಂತಸ್ತುಗಳನ್ನೆಲ್ಲಾ ಮೀರಿದವನಾಗಿರುತ್ತಾನೆ. ಅಲ್ಲಮ ಪ್ರಭುಗಳ ಈ ವಚನ ಇಲ್ಲಿ ಹೇಳುವುದು ಸೂಕ್ತವಾಗಿ ಕಾಣುತ್ತದೆ.

"ಜಲದೊಳಗಿದ್ದ ಕಿಚ್ಚು ಜಲವ ಸುಡದೆ
ಜಲವು ತಾನಾಗಿದ್ದಿತು ನೋಡ
ನೆಲೆಯನರಿದು ನೋಡಿಹೆನೆಂದರೆ ಅದು ಜಲವು
ತಾನಲ್ಲ
ಕುಲದೊಳಗಿದ್ದು ಕುಲವ ಬೆರೆಸದೆ ನೆಲೆಗೆಟ್ಟು
ನಿಂದುದನಾರು ಬಲ್ಲರು ಹೊರಒಳಗೆ ತಾನಾಗಿದ್ದು
ಮತ್ತೆ ತಲೆದೊರದಿಪ್ಪದು ಗುಹೇಶ್ವರ
ನಿಮ್ಮ ನಿಲುವು ನೋಡ"

ಸತ್ಯದ ಹುಡುಗಾಟದಲ್ಲಿ ಬಲು ದೊಡ್ಡ ತೊಡಕು ಎಂಬುದಾಗಿ ಬುದ್ಧನಿಗೆ ಅರಿವಾಗಿತ್ತು. ಅದಕ್ಕಾಗಿ ಕಾಲಮರೆಂಬ ಭೋದಿಸತ್ವರಿಗೆ ಬುದ್ಧ ಹೀಗೆ ಹೇಳುತ್ತಾರೆ. "ಕೇವಲ ನೀವು ಕೇಳಿರುವುದನ್ನೆ ನಂಬಬೇಡಿ", ಕೇವಲ ಒಬ್ಬರಿಂದ ಇನ್ನೊಬ್ಬರಿಗೆ ಹಸ್ತಾಂತರವಾಗಿತುವುದನ್ನೆ ನೋಡಿ ನಂಬಬೇಡಿ", "ಕೇವಲ ಅನುಕೂಲಕರವಾದ ನಂಬಿಕೆ – ಅಭಿಪ್ರಾಯಗಳಂತೆ ನೆಡಯಬೇಡಿ. ಯಾರೋ ಸನ್ಯಾಸಿ ಅಥವಾ ಪೂಜ್ಯ ಹೇಳಿದರೆಂಬ ಮಾತ್ರಕ್ಕೆ ಅದನ್ನು ನಂಬಬೇಡಿ". ಎಂದು ಹೇಳುತ್ತಾ ಹೀಗೆ ಸತ್ಯದಅರಿವಾಗುವವರೆಗೂ ಯಾವುದಕ್ಕು ಅಂಟಿಕೊಳ್ಳದೆ ಸ್ವತಂತ್ರವಾಗಿರಬೇಕು. ಆ ಕಾರಣಕ್ಕಾಗಿ ತನ್ನನ್ನೇ ಅವಲಂಬಿಸದ ಆನಂದನಿಗೆ ಬುದ್ಧ ಎಚ್ಚರಿಸುತ್ತಾನೆ. ಇಡೀ ಒಂದು ದಿನದ ಮೌನದಲ್ಲಿ ಆನಂದನಿಗೆ ಜ್ಞಾನೋದಯವಾಗುತ್ತದೆ. ಆಗ ಅಲ್ಲಿ ಬುದ್ಧನೂ ಇರುವುದಿಲ್ಲ. ಬುದ್ಧನ ಸಂಘದಲ್ಲಿ ವಿಷಯಗಳ ಬಗ್ಗೆ ಗಂಭೀರವಾಗಿ ಅಧ್ಯಯನ ಮಾಡಿದವರು ಇರುತ್ತಾರೆ. ಆದರೆ ಸಂಘದಲ್ಲಿದ್ದ ಪಾತಿಸೇನ ಎಂಬ ವೃದ್ಧನಿಗೆ ವಿಷಯದ ಅಧ್ಯಯನವಾಗಲಿ ಅದನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳುವ ಬೌದ್ಧಿಕತೆಯೂ ಇರುವುದಿಲ್ಲ.

ಆದರೆ ಬೇರೆಲ್ಲಾ ಭಿಕ್ಕುಗಳಿಗಿಂತ ಮುಂಚೆ ಆತನಿಗೆ ಜ್ಞಾನೋದಯವಾಗುತ್ತದೆ. ಶೀಲವಿಲ್ಲದ ಜ್ಞಾನ ಅಪಾಯಕಾರಿ ಎಂದು ಬುದ್ಧ ಒತ್ತಿ ಹೇಳಿದ. ಇವತ್ತಿನ ವೈಜ್ಞಾನಿಕ ಸಂಶೋಧನೆಗಳ ಪ್ರಕಾರ ಮನುಷ್ಯ ಸಾಮರ್ಥದ ಎರಡರಷ್ಟನ್ನು ಮಾತ್ರ ಮಾನವ ಅರಿತು ಕೊಂಡಿದ್ದಾನೆ. ಆ ಎರಡರಷ್ಟು ಮನಸ್ಸಿಗೆ ಅವಲಂಬಿತವಾದ ಮೆದುಳಿನ ಕ್ರಿಯೆಯಾಗಿದೆ. ಪಾತಿಸೇನರಂತಹವರು ಮನುಷ್ಯ ಸಮಾರ್ಥ್ಯದಿಂದ ಮರೆಯಾದ 98ರಷ್ಟು ಸಾಮಾರ್ಥ್ಯದ ಅರಿವನ್ನು ಪಡೆದವರಾಗಿರುತ್ತಾರೆ. ಆದರೆ ಇಂದಿನ ಯುಗದಲ್ಲಿ ಎರಡರಷ್ಟು ಉಪಯೋಗಿಸುವ ಮಿದುಳಿನ ನರಮಂಡಲವಾಗಲಿ ಆ ಮೂಲಕ ನಿರ್ದೇಶಿಸುವ ಮಾನಸಿಕ ಸ್ಥಿತಿಯೇ ಆಗಲಿ ಜ್ಞಾನದ ಉನ್ನತ ಮಟ್ಟವೆನಿಸಿಕೊಂಡಿದೆ.

ಇತಂಹ ಜ್ಞಾನದ ಪೊರೆ ಮನುಷ್ಯನನ್ನು ಅಭಿವೃದ್ಧಿಯ ಹೆಸರಿನಲ್ಲಿ ಸಂಪತ್ತಿನ ಹೆಸರಿನಲ್ಲಿ ಭೋಗದ ಹೆಸರಿನಲ್ಲಿ ಅನೈತಿಕಗೊಳಿಸಿದೆ. ಆದ್ದರಿಂದ ಬೌದ್ಧಧರ್ಮದಲ್ಲಿ ಪ್ರಜ್ಞೆ ಕೇಂದ್ರವಾಗಿ ಮಾನಸಿಕ ಸ್ಥಿತಿಯಿಂದ ಆವೃತಗೊಂಡ ದೇಹ ನೆಪಮಾತ್ರವಾಗುತ್ತದೆ. ಆ ದೇಹಕ್ಕೆ ಪ್ರಜ್ಞೆ ಮೂಲಕ ಎಚ್ಚರದಸ್ಥಿತಿಯಲ್ಲಿ ಇಟ್ಟಿರುತ್ತದೆ. ಬುದ್ಧನ ಪ್ರಜ್ಞೆಯ ಜಾಗೃತಿ ಸೂಫಿಗಳಲ್ಲಿ ಅಗ್ರಮಾನ್ಯರಾದ ರೂಮಿಯ ತಿರುಗುವ ನೃತ್ಯದಲ್ಲಿ ವ್ಯಕ್ತವಾಗಿದೆ. ಭೂಮಿಯಂತೆ ತಿರುಗುವ ಮೂಲಕ ಒಂದು ದಿನಕ್ಕೂ ಅಧಿಕವಾಗಿ ತಿರುಗಿದ ರೂಮಿಗೆ ತನ್ನ ಕೇಂದ್ರ ತಟಸ್ಥವಾಗಿ ನಿಂತು ಅದರ ಸುತ್ತ ತನ್ನ ದೇಹತಿರುಗುವ ಅನುಭವವಾಗುತ್ತದೆ. ಆ ಕೇಂದ್ರವೇ ಪ್ರಜ್ಞೆಯಾಗಿ ದೇಹ ತನ್ನ ಸುತ್ತಲೂ ತಿರುಗುವುದರ ಜೊತೆಗೆ ಜಗತ್ತಿನ ವಿಸ್ಮಯಗಳಿಗೆ ಸಾಕ್ಷಿಯಾಗಿನಿಂತಿರುತ್ತದೆ. ಇಂತಹ ಪ್ರಜ್ಞೆಯ ಜಾಗೃತಿಗೆ ತೊಡಕಾಗಿರುವ ಮನಸ್ಸು, ಇಂದ್ರಿಯಗಳು, ಆಸೆ –ಅಮಿಷಗಳು, ಆಮೂಲಕ ಆಯ್ಕೆಗಳು, ಆಯ್ಕೆಗಳಿಂದ ಅನುಮಾನಗಳು ಹೀಗೆ ಪ್ರತಿಯೊಂದು ಪ್ರಜ್ಞೆಯ ಜಾಗೃತಿಗೆ ಕಗ್ಗಂಟಾಗುತ್ತಾ ಹೋಗುತ್ತದೆ.

ಯಾಕೆಂದರೆ ಪ್ರಜ್ಞೆ ಎಂಬುದು ದೇಹದಲ್ಲಿರುವ ಒಂದು ಸ್ವತಂತ್ರ ಅಸ್ಥಿತ್ವ, ನಾವು ಅದರ ನಿಗೂಢತೆಯನ್ನು ಅರ್ಥ ಮಾಡಿಕೊಳ್ಳಲು ಯಾವುದಕ್ಕೂ ಅಂಟಿಕೊಳ್ಳದಿರುವ, ಇದ್ದು ಇಲ್ಲದಂತಿರುವ ಸ್ಥಿತಿಯನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಮನುಷ್ಯ ಸಾಮರ್ಥ್ಯದ ನೂರರಷ್ಟು ಅರಿವೆಂದರೆ ದೇಹದಿಂದ ಕಳಚಿದ ಪ್ರಜ್ಞೆ ಸಮಷ್ಠಿಯೊಳಗೆ ಪ್ರವೇಶಗೊಳ್ಳುವ ಒಂದು ಪ್ರಕ್ರಿಯೆ. ಈ ಸ್ಥಿತಿಯಲ್ಲಿ ಪ್ರಜ್ಞೆ ಎಂಬುದು ಹೊರಗಿನಿಂದ ನಮ್ಮ ದೇಹವನ್ನು ನಾವೇ ನೋಡಿಕೊಳ್ಳುವುದರ ಜೊತೆಗೆ ವಿಶ್ವರೂಪವನ್ನು ತಾಳುವ ಅಗಾಧ ಸಾಮರ್ಥ್ಯ ಇಂಥ ಸಾಮರ್ಥ್ಯದೆವರು ದೇಹ ಕೇವಲ ಮಾನಸಿಕ ಸ್ಥಿತಿ–ಗತಿಯ ವಿದ್ಯಮಾನವಾಗಿ ಮಾತ್ರ ಒಬ್ಬ ಸಾಧಕನಿಗೆ ಕಾಣುತ್ತಾ ಹೋಗುತ್ತದೆ. ಲಾವುತ್ಸು ಎಂಬ ಅನುಭಾವಿ ಮರದಡಿಯಲ್ಲಿ ಮೌನವಾಗಿ ಕುಳಿತಿರುವಾಗ ಆ ಮರದಿಂದ ಒಂದು ಎಲೆ ಗಾಳಿಗೆ ತೂರಿಕೊಂಡುಬರುತ್ತದೆ. ಆ ಕ್ಷಣ ಲಾವುತ್ಸು ಆ ಎಲೆಯ ಭಾಗವಾಗಿ ಹೋಗುತ್ತಾನೆ. ತನ್ನ ದೇಹದಿಂದ ಕಳಚಿದ ಪ್ರಜ್ಞೆ ಎಲೆಯಾಗಿ ಪ್ರಕೃತಿಯೊಳಗಿನ ಎಲ್ಲದರಲ್ಲೂ ತನ್ನ ಅಸ್ಥಿತ್ವ ತೋರಿಸುತ್ತದೆ. ಇದನ್ನೆ ನಮ್ಮ ತತ್ವಪದರು ಹಾಡಿದ್ದಾರೆ.

"ತನುವಿನೊಳಗೆ ಅನುದಿನವಿದ್ದು ಎನ್ನ
ಮನಕ್ಕೊಂದು ಮಾತ ಹೇಳದೆ ಹೋದೆ
ಎಲೆ ಹಂಸೆ ಗಾಳಿ ಪಂಜರದೊಳಗೆ ಮಾಳಿಗೆ
ಮನೆಮಾಡಿ ಗಾಳಿಯೂ ಬೀಸಿ ಎಲೆ ತೂರಿ
ಹೋಗುವಾಗ ತನ್ನ ಗಾಳಿಗೊಂದು ಮಾತ
ಹೇಳದೆ ಹೋದೆ ಎಲೆ ಹಂಸೆ" ಎಂದು. ಮನುಷ್ಯ

ತನ್ನ ದೇಹವನ್ನೂ ಮೀರಿ ಪ್ರಕೃತಿಯೊಳಗಿನ ಪ್ರತಿಯೊಂದರೊಳಗೂ ತನ್ನ ಅಸ್ತಿತ್ವವನ್ನು ಅರಿವಾಗಿಸಿ ಕೊಳ್ಳುವುದನ್ನು ಬುದ್ಧ ಪರಂಪರೆಯ ಟಿಲೋಪ ಎನ್ನುವ ಅನುಭಾವಿ ಮಹಾಮುದ್ರ ಎಂದು ಕರೆಯುತ್ತಾನೆ ವೀರ್ಯ ಅಂಡಾಣುವಿನ ಮಿಳಿತದಿಂದ ಹುಟ್ಟುವ ಮಗುವಿನ ದೈಹಿಕ ಬೆಳವಣಿಗೆ ಮೂವತ್ತನೇಯದಿನ ಆ ದೇಹವು ಹಂದಿಯದ್ದೋ, ಮಂಗನದ್ದೊ, ಮನುಷ್ಯನದ್ದೊ ಎಂದು ಸಮರ್ಥವಾಗಿ ವಿಜ್ಞಾನಿಗಳಿಗೇ ಹೇಳಲಾಗದಂತೆ ಅದು ಪ್ರಾಣಿಗಳ ಗುಣ ವಿಶೇಷಣಗಳನ್ನು ಹೊಂದಿರುತ್ತದೆ.

ಮಗುವಿನ ಸಂಪೂರ್ಣ ಬೆಳವಣಿಗೆಯ ನಂತರವೂ ವಿಜ್ಞಾನ ಅಚ್ಚರಿಗೊಳ್ಳುವ ಒಂದು ವಿಚಾರವನ್ನು ಮಂಡಿಸಿದೆ. 98 ಭಾಗ ಚಿಂಪಾಂಜಿಯ ಗುಣವಿಶೇಷಣಗಳಿದ್ದು, ಒಂದುವರೆಯಷ್ಟು ಮನುಷ್ಯನ ಗುಣ ವಿಶೇಷಗಳಿದ್ದು ಉಳಿದಂತೆ ಹೂವಿನ ಹಣ್ಣಿನ ಗೂಣವಿಶೇಷಣಗಳನ್ನು ವಿಕಾಸಗೊಂಡ ಮಗು ಪಡೆದಿರುತ್ತದೆ. ಹೀಗೆ ಗರ್ಭದಲ್ಲಿರುವ ಮಗು ಪ್ರಕೃತಿಯ ಭಾಗವಾಗಿಯೇ ಈ ಜಗತ್ತಿಗೆ ಕಾಲಿಟ್ಟಿರುತ್ತದೆ. ವಿಜ್ಞಾನ ಜೀವ ಉತ್ಪತ್ತಿಯಲ್ಲೂ ಇದನ್ನೇ ಹೇಳಿದೆ. ಒಂದು ರಾಸಯನಿಕ ವಸ್ತು ಜೈವಿಕ ವಸ್ತುವಾಗಿ ಮಾರ್ಪಟ್ಟಿದೆ ಎಂದು ಇಂತಹ ಪ್ರಕೃತಿಯ ಭಾಗವಾದ ಮಾನವ, ದೇಹಕ್ಕೆ ಸೀಮಿತವಾಗಿ ದುಃಖವನ್ನೇ ಹಾಸಿಹೊದ್ದು ಅಪ್ರಜ್ಞಾ ಸ್ಥಿತಿಯಲ್ಲಿ ಮಲಗಿಕೊಂಡಿದ್ದಾನೆಂಬ ತಿಳಿವು ಬುದ್ಧತ್ವವನ್ನು ಪಡೆಯಲು ಹೋರಾಟ ಎಂಥವರಿಗಾದರೂ ಅನಿಸುತ್ತದೆ. ಬುದ್ಧ ನಮ್ಮಮನಸ್ಸಿನ ಭಾಗವೇ ಆದ ದೇವರ ಬಗ್ಗೆಯೂ ಎಚ್ಚರಗೊಂಡಿರುತ್ತಾನೆ ಹಾಗೂ ಅದರಿಂದಲೂ ಸ್ವತಂತ್ರಗೊಂಡು ದೇವರನ್ನು ಒಪ್ಪಿಕೊಳ್ಳುವುದಾಗಲಿ ನಿರಾಕರಿಸುವುದಾಗಲಿ ಮಾಡದೆ ಮಹಾಮೌನಾದ ಮೂಲಕ ತನ್ನೊಳಗೆ ಕಂಡ ಬುದ್ಧತ್ವವನ್ನು, ಸತ್ಯವನ್ನು, ನೀವು ಕಂಡುಕೊಳ್ಳಬಹುದು ಎಂದು ತೋರಿಸಿಕೊಡುತ್ತಾನೆ.

ಯಾವುದೇ ಧರ್ಮದಲ್ಲೂಕಾಣಸಿಗದಷ್ಟು ಬೌದ್ಧ ಧರ್ಮದಲ್ಲಿ ಜ್ಞಾನೋದಯಗೊಂಡ ಬುದ್ಧರು ನಮಗೆ ಕಾಣಿಸಿಗುತ್ತಾರೆ. ಒಬ್ಬ ಮಾರನಿಂದ ಬುದ್ಧ, ಕತ್ತಲಿನಿಂದ ಬೆಳಕು, ಸುಳ್ಳಿನಿಂದ ನಿಜ, ಕೆಟ್ಟವನಿಂದ ಒಳ್ಳೆಯವನು, ಹೀಗೆ ಮನುಷ್ಯ ಮನುಷ್ಯನೊಳಗಿನ ಸಂಬಂಧವು ಬುದ್ಧನಲ್ಲಿ ಅಂಗುಲಮಾಲನೊಳಗಿನ ಬುದ್ಧತ್ವವನ್ನು ನೋಡುವ ಕಣ್ಣುಗಳನ್ನು ಕರುಣಿಸಿರುತ್ತದೆ. ಅದು ಪ್ರೀತಿಯಾಗಿ, ಮೈತ್ರಿಯಾಗಿ ಹರಿದು ಅಂಗುಲಿಮಾಲನಂತಹ ಅಸಹಜ ಮನುಷ್ಯನನ್ನು ಸಹಜವಾಗಿ ಬೆಳಸಿ ಬುದ್ಧನನ್ನಾಗಿ ಮಾಡುತ್ತದೆ. ಹುಟ್ಟು ಎಂಬುದಾಗಲಿ ಸಾವೆಂಬುದಾಗಲಿ ಬುದ್ಧ ಪರಿಗಣಿಸಲೇ ಇಲ್ಲ. ಅದು ನಿರಂತರ ಹರಿಯುವಿಕೆ ಎಂದು ಹೇಳಿತ್ತಾನೆ. ಹುಟ್ಟಿನ ಮುಂಚೆ ನಿನ್ನ ಮುಖವನ್ನು ನೋಡಿದ್ದಿಯಾ ಅಥವಾ ಸತ್ತ ನಂತರ ಎಲ್ಲಿ ಹೋಗುತ್ತಿಯಾ ಎಂಬ ಅರಿವು ನಿನಗಿದೆಯೇ ಎಂಬುದನ್ನು ಬುದ್ಧ ಕೇಳುತ್ತಾನೆ. ಈ ಜಗತ್ತಿಗೆ ಕಾಲಿಟ್ಟ ಮಗು ಬೆಳದಂತೆ ತನ್ನ ಮನಃಸ್ಥಿತಿಗೆ ಅನುಗುಣವಾಗಿ ಬೆಳೆಯುತ್ತಾ ಹೋಗುತ್ತದೆ.

ಹೀಗೆ ಬೆಳದ ಆ ಮಾನವ ರೂಪವನ್ನು ನಿಜವಾಗಿ ನೀನು ಯಾರು? ನಿನ್ನ ನರಮಂಡಲವೇ ನೀನಾ? ನಿನ್ನ ಭಾವನೆಗಳೆ ನೀನಾ? ನಿನ್ನ ತಂದೆ ತಾಯಿಗಳ ಗುಣವಿಶೇಷವೇ ನೀನಾ? ಹೀಗೆ ಪ್ರಶ್ನೆ ಕೇಳಿದರೆ ಸ್ಪಷ್ಟವಾಗಿ ಅದಕ್ಕೆ ಹೇಳಲು ಬರುವುದಿಲ್ಲ. ಆದರೆ ಬುದ್ಧತ್ವ ಪಡೆದವರು ಇವೆಲ್ಲದರಿಂದ ಸ್ವತಂತ್ರಗೊಂಡ ಅಂಶವನ್ನು ತಮ್ಮ ದೇಹದೊಳಗೆ ಶೋಧಿಸಿ ಅಂತಹ ಸ್ವತಂತ್ರಗೊಂಡ ಅಂಶವನ್ನೇ ಪ್ರಜ್ಞೆ ಎಂಬುದಾಗಿ ಅರಿತು ಈ ಪ್ರಜ್ಞೆಯೆಂಬುದು ದೇಹದೊಳಗಿನ ಸ್ವತಂತ್ರ ಭಾಗವಾಗಿ ಹೇಗಿದೆಯೋ ಹಾಗೆಯೇ ದೇಹದಿಂದಲೂ ಸ್ವತಂತ್ರಗೊಂಡು ಹೊರಗಿನಿಂದ ಪ್ರಜ್ಞೆಯ ಮೂಲಕ ತನ್ನ ದೇಹವನ್ನು ತಾನೇ ನೋಡುವ ಕ್ರಮವೊಂದಿದೆ. ಇದು ಬೌದ್ಧ ಸಾಧನೆಯ ಉನ್ನತ ಸ್ಥಿತಿಯಾಗಿದೆ. ತನ್ನ ದೇಹದ ಉಸಿರಾಟವನ್ನೆ ತನ್ನ ದೇಹದಿಂದ ಬೇರ್ಪಡಿಸುವ ಕ್ರಮವನ್ನು ಸಾಧನೆಯ ಮೂಲಕ ಬುದ್ಧ ಕಂಡುಕೊಂಡ. ಇಂತಹ ಉಸಿರಾಟದ ಅತ್ಯುನ್ನತ ಹಂತವನ್ನು ವಿಪಸ್ಸನದ ಮೂಲಕ ಬಿಕ್ಕುಗಳಿಗೆ ಹೇಳಿಕೊಟ್ಟ. ಮನುಷ್ಯನಿಂದ ಬೇರ್ಪಡಿಸಬಹುದಾದ ಪ್ರಜ್ಞೆ ಪ್ರಕೃತಿಯೊಳಗಿನ ಎಲ್ಲಾ ಅಂಶದೊಳಗೆ ಬೆರೆವ ಸೋಜಿಗ ಮನುಷ್ಯನನ್ನು ಅನಾತ್ಮನನ್ನಾಗಿಸುತ್ತದೆ ಎಂದು ಹೇಳುವ ಮೂಲಕ ಆತ್ಮದ ಸಂಕೋಲೆಯಿಂದಲೂ ಮನುಷ್ಯನನ್ನು ಸ್ವತಂತ್ರಗೊಳಿಸಿದ. ಆ ಮೂಲಕ ಪ್ರಜ್ಞೆ ಬಯಲಾಗಿ ಕಾಣುವ ಕಾಣ್ಕೆಯನ್ನು ಜಗತ್ತಿಗೆ ಹಂಚುತ್ತಾ ಹೋದ.

ಈ ಶೂನ್ಯದ ಬಗ್ಗೆ ಜೆನ್ ಗುರು ಒಬ್ಬ ಹೀಗೆ ಹೇಳುತ್ತಾನೆ. ಒಂದು ಬಿಳಿಹಾಳೆಯಲ್ಲಿ ಜೆನ್ ಗುರು ಮೋಡ, ಮಳೆ, ಮರವನ್ನು ಕಾಣುತ್ತಾ ಬಿಳಿಹಾಳೆಯಾಗಲು ಮೋಡದಿಂದ ಮಳೆ ಸುರಿಯಬೇಕು, ಮಳೆಯಿಂದ ಗಿಡ ಬೆಳೆದು ಮರವಾಗಬೇಕು. ಆ ಮರದಿಂದ ಬಿಳಿಹಾಳೆ ರೂಪುಗೊಳ್ಳಬೇಕು. ಬಿಳಿಹಾಳೆಯೊಳಗಿನ ಬಯಲೊಳಗೆ ಇವೆಲ್ಲವೂ ಇದೆ ಹಾಗೆ ನೋಡಲು ಬಿಳಿ ಹಾಳೆ ಖಾಲಿಯಾಗಿಯೂ ಇದೆ. ಶೂನ್ಯವು ನಿರಂತರ ಬದಲಾವಣೆಗೆ ರೂಪಾಂತರಗಳಿಗೆ ಮೂಲ ಬೇರಾಗಿದೆ. ಆ ಶೂನ್ಯ ಪ್ರಜ್ಞೆಯಾಗಿ ಮನುಷ್ಯನೊಳಗೆ ಇದೆ. ಅದರ ಶೋಧನೆಗೆ ಹುಡುಗಾಟಕ್ಕೆ ನಿರಂತರ ಪಯಣಕ್ಕೆ ಬುದ್ಧನ ಅಷ್ಟಾಂಗ ಮಾರ್ಗವೂ ತುಂಬಾ ಮಹತ್ವದ್ದಾಗಿದೆ.

ಎಚ್ಚರದ ದೃಷ್ಠಿ, ಎಚ್ಚರದ ಧ್ಯೇಯ, ಎಚ್ಚರದ ಮಾತು, ಎಚ್ಚರದ ಪ್ರಯತ್ನ, ಎಚ್ಚರದ ದುಡಿಮೆ, ಎಚ್ಚರದಮಾರ್ಗ, ಎಚ್ಚರದ ಆಸಕ್ತಿ, ಎಚ್ಚರದ ಸಮಾಧಿ ಹೀಗೆ ಜಾಗೃತ ಸ್ಥಿತಿಯನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಮತ್ತೆ ಮನಸ್ಸಿನ ದ್ವಂದ್ವಗಳಿಗೆ ಸಿಕ್ಕಿಹಾಕಿ ಕೊಳ್ಳುತ್ತೇವೆ. ಹಾಗೂ ಪ್ರಾಪಂಚಿಕ ಆಗುಹೋಗುಗಳಿಗೆ ಅಂಟಿಕೊಂಡು ಬಿಡುತ್ತೇವೆ. ಅವಲಂಬನೆ ಎಂಬುದು ಗುಲಾಮಗಿರಿಯಾಗಿ ಕಗ್ಗಂಟಾಗಿ ನಮಗೆ ದುಃಖಕ್ಕೆ ದೂಡುತ್ತದೆ. ಬುದ್ಧನ ಜ್ಞಾನೋದಯವನ್ನೆ ಎಚ್ಚರದ ಸ್ಥಿತಿಯೆಂದರೆ ತಪ್ಪಾಗಲಾರದು. ಯಾಕೆಂದರೆ ಬುದ್ಧ ಪ್ರತಿ ನಡೆಯಲ್ಲೂ ಎಚ್ಚರವನ್ನು ಕಾಪಾಡುವ ಬಗ್ಗೆ ಹೇಳುತ್ತಾನೆ.

ನಮ್ಮೊಳಗೆ ನಡೆಯುವ ಲೈಂಗಿಕ ಬಯಕೆಗಳಾಗಲಿ, ಕೋಪವಾಗಲಿ ಅಹಂಆಗಲಿ, ಇವುಗಳ ಬಗ್ಗೆ ನಾವು ಎಚ್ಚರಿಕೆಯಿಂದ ಇಲ್ಲದಿದ್ದಾಗ ಅದರ ಗುಲಾಮರಂತೆ ವರ್ತಿಸುತ್ತೇವೆ ನಮ್ಮೊಳಗೆ ನಡೆಯುವ ಜೈವಿಕ ರಾಸಾಯನಿಕ ಬದಲಾವಣೆಗಳೇ ತಮ್ಮ ಹಿಡಿತದಲ್ಲಿ ನಮ್ಮನ್ನಿರಿಸಿ ಕೊಂಡು ಕೋಪವನ್ನೋ, ಅಸಹತೆಯನ್ನೂ, ದುರ್ನಡತೆಯನ್ನು ನಾವು ಪ್ರದರ್ಶಿಸುವ ಹಾಗೆ ಮಾಡುತ್ತದೆ. ನಮ್ಮನ್ನು ಮೀರಿ ನಮ್ಮ ದೇಹದ ಭಾಗಗಳು ನಮ್ಮನ್ನು ಅಪ್ರಜ್ಞಾ ಸ್ಥಿತಿಗೆ ದೂಡುತ್ತದೆ ಬುದ್ಧನಿಗೆ ಜ್ಞಾನೋದಯಕ್ಕೆ ಮುಂಚೆ ತನ್ನ ತಂದೆ ತಾಯಿಯರಾದ ಶುದ್ಧೋದನ ಹಾಗೂ ಮಹಾಮಾಯೆಯ ನೆನಪಿನಿಂದ ತನ್ನಹೆಂಡತಿ ಯಶೋಧರೆ ಹಾಗೂ ರಾಹುಲನ ನೆನಪಿನಿಂದ ಬಿಡುಗಡೆ ಪಡೆದು ಮರುಹುಟ್ಟು ಪಡೆಯಲೇ ಬೇಕಿತ್ತು. ಆದರೆ ಜ್ಞಾನೋದಯ ನಂತರ ಬುದ್ಧ ತನ್ನ ಬೆಳಕಿನ ಅರಿವನ್ನು ಯಶೋಧರೆಗೆ ತನ್ನ ಒಡನಾಡಿಗಳಿಗೆ ಹಂಚುತ್ತಾನೆ. ತನ್ನ ಬಗ್ಗೆ ಇರುವ ಗೊಂದಲಗಳಿಂದ ಬಿಡುಗಡೆಗೊಳಿಸುತ್ತಾನೆ.

ಇಲ್ಲಿ ಮರುಹುಟ್ಟು ಎಂಬ ಪದ ಯಾಕೆ ಬಳಕೆಯಾಗಿದೆ ಎಂದರೆ ಯಾವುದರ ಅವಲಂಬನೆಯಾಗಲಿ ಬುದ್ಧಮಾರ್ಗಕ್ಕೆ ಬಹುದೊಡ್ಡ ಅಡ್ಡಿಯಾಗುತ್ತದೆ. ನಮ್ಮ ದೇಹ, ಮನಸ್ಸು ಮತ್ತು ನಾನು ಎಂಬುದರಿಂದ ಬಿಡುಗಡೆಯನ್ನು ಪಡೆಯಲೇ ಬೇಕಾಗುತ್ತದೆ. ಇಂಥ ಬಿಡುಗಡೆ ಬಯಲಿನ ಪವಿತ್ರತೆಗೆ ಮಗ್ನತೆಗೆ ಒಯ್ಯುವ ಮೂಲಕ ಎಚ್ಚರದ ಸ್ಥಿತಿಯನ್ನು ಆ ಮೂಲಕ ಬುದ್ಧತ್ವದ ಅರಿವನ್ನು ಮೂಡಿಸುತ್ತದೆ. ಅರಿಯಲಿಲ್ಲದ ಅರಿವು ಎನ್ನುವುದೇ ಇಲ್ಲಿ ಮುಖ್ಯ. ಅರಿಯಷ್ಟು ಅದು ನಮಗೆ ಅಂಟಿಕೊಳ್ಳುತ್ತದೆ. ಇಂತಹ ಅಂಟಿಕೊಂಡಿರುವ ಅರಿವನ್ನು ತೊಳೆಯುವುದೇ ಸಮರ್ಥ ಗುರು ಒಬ್ಬನ ಕೆಲಸ. ಎಲ್ಲರೊಳಗೊ ಬುದ್ಧತ್ವವಿದೆ. ಸಮರ್ಥ ಗುರು ಬುದ್ಧತ್ವಕ್ಕೆ ಅಂಟಿಕೊಂಡಿರುವ ದೇಹ, ಮನಸ್ಸು, ನಾನು ಎಂಬ ಅಹಂ ಹಾಗೂ ಗುರುವೆಂಬ ತನ್ನನ್ನೊ ತೊಳೆದು ಬುದ್ಧತ್ವದ ಬೆಳಕಿನ ಪ್ರಕಾಶವನ್ನು ತೋರಿಸುತ್ತಾನೆ.' ಬೌದ್ಧ ಪರಂಪರೆಯಲ್ಲಿ ಬರುವ ಟಿಲೋಪ, ನರೋಪ, ಮಾರ್ಫ,ಮಿಲರೇಪ ಇವರೆಲ್ಲಾ ತಮ್ಮ ಶಿಷ್ಯರಿಗೆ ಮೊದಲು ಮನಸ್ಸಿನ ಗೊಂದಲಗಳು ಅದರಿಂದ ಉಂಟಾಗುವ ದುಃಖ ಹಾಗೂ ಅದರಿಂದ ಬಿಡುಗಡೆ ಈ ಮಾರ್ಗವನ್ನೆ ಹೇಳಿ ಮನಸ್ಸಿಲ್ಲದ ಸ್ಥಿತಿಗೆ ಕೊಂಡ್ಯೊಯ್ಯುತ್ತಾರೆ.

ಈ ಮನ ಎಂಬ ಮನುಷ್ಯನ ಸ್ಥಿತಿಯ ಬಗ್ಗೆ ಬುದ್ಧ ಶೋಧಿಸಿ ಮನಸ್ಸಿನ ರಹಿತವಾಗಿರುವ ಸ್ಥಿತಿಯನ್ನು ಹೇಳುತ್ತಾನೆ. ಇಂಗ್ಲೀಷ್‌ನಲ್ಲಿ No Mind ಎಂದು ಹೇಳುತ್ತೇವೆ. ಮನವನ್ನು ಪ್ರಜ್ಞೆಯ ಮೂಲಕ ಎಚ್ಚರವಾಗಿ ಗಮನಿಸಿದಾಗ ಅದು ತನ್ನ ಸ್ಥಿತಿಯನ್ನು ಕಳೆದುಕೊಳ್ಳುತ್ತದೆ. ಆ ಮೂಲಕ ಮೆದುಳಿನ ನರಮಂಡಳಗಳ ಕಂಪನದ, ಉದ್ವೇಗದ ಎಚ್ಚರಿಕೆ ನಮ್ಮ ಅರಿವಿಗೆ ಬರುತ್ತದೆ. ದ್ವಂದ್ವವನ್ನು ನಿವಾರಿಸಿ ಮನದ ಮುಂದಣ ಆಸೆಯ ಬದಲು ಎಚ್ಚರದ ಸ್ಥಿತಿಯನ್ನು ದ್ವಂದ್ವಗಳ ನಡುವಣ ಮಧ್ಯದ ಮಾರ್ಗವನ್ನು ನಮಗೆ ಪ್ರಜ್ಞೆಯ ಮೂಲಕ ಅರಿವಾಗುತ್ತದೆ. ಈ ಮಹಾಮೌನದ ಅರಿವು, ಅರಿತೇ ಎಂಬ ಭಾವವೂ ಅಲ್ಲಿರುವುದಿಲ್ಲ. ಬುದ್ಧಿಯು ಆಲೋಚನೆಯನ್ನು ಗಮನಿಸುವ ಅಥವಾ ಅದರ ಪ್ರತಿಫಲನ ನಮ್ಮ ಅರಿವಿಗೆ ಬರುತ್ತದೆ. ಇವೆರಡನ್ನು ಗಮನಿಸುವ ಸ್ಥಿತಿಯೊಂದಿಗಿದೆ. ಅಲ್ಲಿ ಆಲೋಚನೆ ಇರುವುದಿಲ್ಲ. ಮೌನವಾಗಿ ಗಮನಿಸುವ ಸ್ಥಿತಿಮಾತ್ರ ಅದನ್ನೆ ಬುದ್ಧ ಪ್ರಜ್ಞೆ ಎಂದು ಕರೆದ. ಪ್ರಜ್ಞೆಯೇ ಅಖಂಡಿತವಾದದ್ದು. ಅದನ್ನು ಮತ್ತೆ ಗಮನಿಸುವ ಸ್ಥಿತಿ ನಮ್ಮಲ್ಲಿಲ್ಲ.

ಎಚ್ಚರದ ದೃಷ್ಠಿ, ಎಚ್ಚರದ ಧ್ಯೇಯ, ಎಚ್ಚರದ ಮಾತು, ಎಚ್ಚರದ ಪ್ರಯತ್ನ, ಎಚ್ಚರದ ದುಡಿಮೆ, ಎಚ್ಚರ ದಮಾರ್ಗ, ಎಚ್ಚರದ ಆಸಕ್ತಿ, ಎಚ್ಚರದ ಸಮಾಧಿ ಹೀಗೆ ಜಾಗೃತ ಸ್ಥಿತಿಯನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಮತ್ತೆ ಮನಸ್ಸಿನ ದ್ವಂದ್ವಗಳಿಗೆ ಸಿಕ್ಕಿಹಾಕಿಕೊಳ್ಳುತ್ತೇವೆ. ಹಾಗೂ ಪ್ರಾಪಂಚಿಕ ಆಗುಹೋಗುಗಳಿಗೆ ಅಂಟಿಕೊಂಡು ಬಿಡುತ್ತೇವೆ.

ಇಂತಹ ಪ್ರಜ್ಞೆ ಮನುಷ್ಯನನ್ನು ಸಂಪೂರ್ಣ ಕರಗಿಸಿ ಆಲೋಚನೆಯನ್ನೇ ಇಲ್ಲವಾಗಿಸುವ ಸಾಧಕರು ಸಮಾಧಿ ಸ್ಥಿತಿಯನ್ನು ಸಾಧಿಸುತ್ತಾರೆ. ಬುದ್ಧ ಇಂತಹ ಸಮಾಧಿಯಲ್ಲೂ ಪ್ರಜ್ಞೆ ಜಾಗೃತವಾಗಿ ಎಚ್ಚರದಿಂದಿರಬೇಕೆಂದು ಹೇಳುತ್ತಾನೆ. ಇಂಥ ಅರಿಯಲಿಲ್ಲದ ಅರಿವಿನ ಬಗ್ಗೆ ಅಲ್ಲಮನ ಒಂದು ವಚನವಿದೆ.

ನರರು ಸುರರುಕಿನ್ನರರು ಮೊದಲಾದವರೆಲ್ಲ
ಪಿಂಡವೆಂಬ ಭಾಂಡದಲ್ಲಿ ಅಡಗಿಹರಾಗಿ
ನಾನವ ರೂಪಸಿ ಒಲ್ಲೆನಯು
ದೇವಗಣ ರುದ್ರಗಣ ಪ್ರಮಥಗಣ
ಮೊದಲಾದವನರೆಲ್ಲೂ ಬ್ರಹ್ಮಾಂಡವೆಂಬ
ಭಾಂಡದಲ್ಲಿ ಅಡಗಿಗರಾಗಿ ನಾನವರ
ಭಾವಿಸಿ ಒಲ್ಲೆನಯು ಸತ್ಯರು ನಿತ್ಯರು ಮುಕ್ತರು
ಎಂಬ
ಮಹಾಮಹಿಮರೆಲ್ಲರೂ ಚಿತ್‌ಬ್ರಹ್ಮಾಂಡವೆಂಬ
ಭಾಂಟದಲ್ಲಿಯೇ
ಅಡಗಿಹರಾಗಿ ನಾನವರ ಅರಿತು ಒಲ್ಲೆನಯ್ಯ ಇಂತಿ
ತ್ರಿಭಾಂಡವನ್ನೊಗೊಂಡ ಅಖಂಡಿತ ಪರಿಪೂ
ರ್ಣವಪ್ಪ
ಭಾಂಡವೇ ತನ್ನಿರವರಂದರಿತ ನಿಜಲಿಂಗಕ್ಯೆನ
ಉಪಮಿಸಲಿಲ್ಲ ಉಪಮಸಲಿಲ್ಲಾಗಿ
ರೂಹಿಸಲಿಲ್ಲ ರೂಹಿಸಲಿಲ್ಲಾಗಿ ಭಾವಿಸಲಿಲ್ಲ
ಭಾವಿಸಲಿಲ್ಲಾಗಿ
ಅರಿಯಲ್ಲಿ;; ಅರಿಯಲಿಲ್ಲದ ಅರಿವೇ ತಾನಾಗಿ
ಅದು
ಗುಹೇಶ್ವರನೆಂಬುದು ಬೇರಲ್ಲ"

ಎಂಬ ಅಲ್ಲಮನ ಈ ವಚನದಲ್ಲಿ ಅಖಂಡಿತ ಭಾಂಡ ಎಂದರೆ ಪಾತ್ರೆ: ಮನುಷ್ಯನ ಪ್ರಜ್ಞೆಯಾಗಿ ಮನುಷ್ಯನ ವ್ಯಕ್ತಿತ್ವ, ಬುದ್ಧಿ ಮತ್ತೆ ಇದಾವುದರ ಅವಲಂಬನೆ ಇಲ್ಲದ ಸರ್ವ ಸ್ವತಂತ್ರವಾದ ಪ್ರಜ್ಞೆಯನ್ನು ಭಾಂಡವಾಗಿ ಇಲ್ಲ ಹೇಳುತ್ತಾರೆ. ಈ ಪ್ರಜ್ಞೆ ನಿಜಲಿಂಗ್ಯೆಕ್ಯನ ಉಪಮಿಸಲಿಲ್ಲ ರೂಪಿಸಲಿಲ್ಲ. ಭಾವಿಸಲಿಲ್ಲ ಅರಿಯಲಿಲ್ಲ ಇಂಥ ಅರಿಯಲಿಲ್ಲದ ಅರಿವು ಎಂದರೆ ಯಾವುದಕ್ಕೂ ಅಂಟಿಕೊಳ್ಳದ ಸ್ಥಿತಿ ಅದು ನಮ್ಮ ದೇಹದವಾಗಲಿ ಧರ್ಮವಾಗಲಿ ಅನುಭವವಾಗಲಿ ಅಲೋಚನೆಗಳಾಗಲಿ ಎಲ್ಲವನ್ನು ಮೀರಿ ಮೌನವಾಗುವ ಉತ್ಕಟ ಸ್ಥಿತಿ ಇಂಥ ಪ್ರಜ್ಞೆ ಬುದ್ಧನಲ್ಲಿ ಜಾಗೃತವಾಗುತ್ತದೆ ಆ ಪ್ರಜ್ಞೆಯ ಮೂಲಕ ನಮ್ಮೊಳಗಿನ ದುಃಖವನ್ನು ಅವಮಾನವನ್ನು ಮನಸ್ಸಿನ ಅವಲಂಬನೆ ಇಲ್ಲದಂತೆ ನೋಡುವುದರ ಮೂಲಕ ದುಃಖದ ಅವಮಾನದ ಮೂಲತತ್ವಗಳು ಬದಲಾಗಿ ನಮ್ಮನ್ನು ಶಾಂತ ಸ್ಥಿತಿಗೆ ಒಯ್ಯುವ ಸೋಜಿಗವನ್ನು ಬುದ್ಧ ಪ್ರಯೋಗಿಸಿ ನೋಡಿದ.

ಆ ಮೂಲಕ ದುಃಖ ನಿವಾರಣೆಯ ಅದ್ಭುತ ಮಾಗಘವನ್ನು ಜಗತ್ತಿಗೆ ಸಾರಿದ. ಹಾಗೆ ನೋಡಿದರೆ ಬುದ್ಧ ಜಗತ್ತಿನ ಮೊದಲ ಮನಶಾಸ್ತ್ರಜ್ಞ ಹಾಗೂ ತನ್ನೊಳಗಿನ ಸತ್ಯವನ್ನಷ್ಟೆ ಹೇಳಿದ ವೈಜ್ಞಾನಿಕ ಪುರುಷ. ಬೀಜವನ್ನು ಕತ್ತರಿಸಿದರೆ ಅಲ್ಲಿ ಶೂನ್ಯ ಮಾತ್ರವೇ ಕಾಣಿಸುತ್ತದೆ. ಅದರೊಳಗಿನ ಮರವಾಗಲಿ ಅಸಂಖ್ಯಾಂತ ಎಲೆಗಳಾಗಲಿ ಹೂಗಳಾಗಲಿ ಕಾಣುವುದಿಲ್ಲ. ಹಾಗೆ ಅವು ಕಾಣಿಸಲು ಬೀಜ ಸತ್ತು ಅಥವಾ ತನ್ನ ಅಸ್ತಿತ್ವ ಕಳೆದು ಮರುಹುಟ್ಟು ಪಡೆದು ಗಿಡವಾಗುತ್ತದೆ ನಂತರ ಮರವಾಗುತ್ತದೆ ಇಂಥ ಚರಾಚರದಲ್ಲಿನ ಮೂಲಸ್ಥಿತಿಯಾದ ಶೂನ್ಯವನ್ನು ಬುದ್ಧ ಅನುಭವಿಸಿದ. ಮನುಷ್ಯನೊಳಗಿನ ದೈಹಿಕ ಬದಲಾವಣೆಯ ಪ್ರತಿ ಕ್ರಿಯೆಯನ್ನು ಧ್ಯಾನದ ಮೂಲಕ ಅರಿತ.

ದೈಹಿಕ ಬದಲಾವಣೆಗಳಲ್ಲಿ ಅಸೂಯೆ, ರಾಗದ್ವೇಷಗಳು, ಮನುಷ್ಯನನ್ನು ಹೇಗೆ ಬಾಧಿಸುತ್ತವೆ ಎಂಬುದನ್ನು ಅರಿತ. ಇದರಿಂದ ದುಃಖ ಹೇಗೆ ಉಂಟಾಗುತ್ತದೆಂದು ಇದನ್ನು ನಿವಾರಿಸುವ ಮಾರ್ಗ ಹೇಗೆಂದು ಅರಿತ. ಪ್ರಜ್ಞೆಯ ಅರಿವಿನ ಜೊತೆಗೆ ಕರುಣೆ, ಮೈತ್ರಿ, ಪ್ರೀತಿಯ ಜೀವರಸವನ್ನು ಬೆರೆಸಬೇಕೆಂದು ಜನರ ಮಧ್ಯೆ ಬಂದು ಉಪದೇಶಿಸಿದ.

ಇಂತ ದೈಹಿಕ ಬದಲಾವಣೆಗಳಲ್ಲಿ ಅಸೂಯೆ, ರಾಗದ್ವೇಷಗಳು, ಮನುಷ್ಯನನ್ನು ಹೇಗೆ ಬಾಧಿಸುತ್ತವೆ ಎಂಬುದನ್ನು ಅರಿತ. ಇದರಿಂದ ದುಃಖ ಹೇಗೆ ಉಂಟಾಗುತ್ತದೆಂದು ಇದನ್ನು ನಿವಾರಿಸುವ ಮಾರ್ಗ ಹೇಗೆಂದು ಅರಿತ. ಪ್ರಜ್ಞೆಯ ಅರಿವಿನ ಜೊತೆಗೆ ಕರುಣೆ, ಮೈತ್ರಿ, ಪ್ರೀತಿಯ ಜೀವರಸವನ್ನು ಬೆರೆಸಬೇಕೆಂದು ಜನರ ಮಧ್ಯೆ ಬಂದು ಉಪದೇಶಿಸಿದ. ಬುದ್ಧನಾಗುವ ಮಾರ್ಗ ಎಲ್ಲರಲ್ಲೂ ಇದೆ ಎಚ್ಚರದ ಸ್ಥಿತಿಯಲ್ಲಿ ಮಾತ್ರ ಅದು ನಮಗೆ ದೊರಕುತ್ತದೆ ಎಂದು ಹೇಳಿದಗೆಯೆ ಅರಳಿ ಮರದಡಿ ಜ್ಞಾನೋದಯ ಪಡೆದ ಬುದ್ಧ ತನ್ನೊಡನೆ ಕಠಿಣ ತಪ್ಪಸ್ಸಾನ್ನಾಚರಿಸುತ್ತಿದ್ದ ಮತ್ತು ತಾನು ತಪಸ್ಸನ್ನು ತ್ಯಜಿಸಿದ್ದಕ್ಕೆ ತನ್ನನ್ನು ಬಿಟ್ಟುಹೋದ ಐವರು ಸಹಚರರಿಗೆ ತನ್ನ ಉಪದೇಶವನ್ನು ಮೊದಲ ಬಾರಿಗೆ ನೀಡಿ ಅವರನ್ನು ಭೋಧಿಸತ್ವರನ್ನಾಗಿ ಮಾಡುತ್ತಾನೆ. ಭೋಧಿಸತ್ವರು ಜ್ಞಾನೋದಯವನ್ನು ಪಡೆದು ಅದನ್ನು ವೈಯಕ್ತಿಕ ಬೆಳವಣಿಗೆಗೆ ಬಳಸದೆ ಬೇರೆಯವರ ದುಃಖ ತಮ್ಮ ದುಃಖವೆಂದು, ಬೇರೆಯವರ ಹಸಿವು ತಮ್ಮ ಹಸಿವೆಂದು ತಿಳಿದು ಒಬ್ಬರೊಳಗೆ ಮತ್ತೊಬ್ಬರನ್ನು ಕಾಣುವ ಮೂಲಕ ಎಲ್ಲರ ದುಃಖ ನಿವಾರಣೆಗಾಗಿ ಪಣತೊಡುತ್ತಾರೆ. ಪರಮಾತ್ಮ ಆತ್ಮ ಯಜ್ಞಯಾಗಾದಿ ಎಂದು ಹೇಳದೆ ಮನುಷ್ಯ ಮನುಷ್ಯನೊಳಗಿನ ಸಂಬಂಧ ಮತ್ತು ಆತನ ದುಃಖ ನಿವಾರಣೆಯೇ ಬುದ್ಧನ ಧರ್ಮವಾಗಿದೆ.

ಊಹೆಗಳ ಆಧಾರದ ಮೇಲೆ ಧರ್ಮ ನಿಲ್ಲಲು ಸಾಧ್ಯವಿಲ್ಲ ಅದು ನಮ್ಮೊಳಗಿನ ಸತ್ಯವಾಗಿ ಗೋಚರವಾಗಬೇಕು. ಅದಕ್ಕಾಗಿ ಸದ್ಗುಣ ಮಾಗದದ ಬಗ್ಗೆ ಬುದ್ಧ ಉಪದೇಶಿಸಿದ. ನೈತಿಕ ಭಾವನೆಯ ಮೂಲಕ ಶೀಲವನ್ನು ಕಾಪಾಡಿಕೊಳ್ಳುವುದು, ಪ್ರಾಪಂಚಿಕ ಸುಖವನ್ನು ತ್ಯಜಿಸುವುದು, ಬೇರೆಯವರ ಒಳಿತಿಗಾಗಿ ದುಡಿಯುವುದು, ಒಳ್ಳೆಯ ಪ್ರಯತ್ನದ ಹಾದಿ ತುಳಿಯುವುದು, ದ್ವೇಷವನ್ನು ಸಹನೆಯ ಮೂಲಕ ಶಾಂತಿಗೊಳಿಸುವುದು, ಸತ್ಯವಾಗಿ ಇರುವುದು, ಇದನ್ನು ಗುರಿ ಮುಟ್ಟಿಸುವ ಪ್ರತಿಪೂರ್ವಕ ಕರಣೆ, ಸ್ನೇಹದಿಂದಿರುವ ಗುಣವಾದ ಮೈತ್ರಿ ಮತ್ತು ನಿರ್ಮೋಹದ ಮೂಲಕ ವೈಯಕ್ತಿಕವಾಗಿಯೂ ಸಾರ್ವತ್ರಿಕವಾಗಿಯೂ ಇರಬಹುದಾದ ಶುದ್ಧತೆಯ ಮಾರ್ಗವನ್ನು ಭೋಧಿಸಿದ. ಇದಾವುದನ್ನು ಅಪ್ರಜ್ಞಾಪೂರ್ವಕವಾಗಿ ಆಚರಿಸದೆ ಪ್ರಜ್ಞೆಯ ಮೂಲಕವೇ ನೀನು ಸಾಕ್ಷಿಯಾಗಿ ನಿಂತು ಪರಿಕ್ಷಿಸಿ ಆಚರಿಸು ಎಂದು ಬುದ್ಧ ಉಪದೇಶಿಸಿದ. ಪ್ರಜ್ಞೆ ಇಲ್ಲದ ಧ್ಯಾನವು ನಮಗೆ ಎದೆಗೂಂದಿಸುತ್ತದೆ. ಪ್ರಜ್ಞೆ ಇಲ್ಲದಿದ್ದರೆ ಕರುಣೆಯು ಕೇಡಿಗೆ ಪ್ರೋತ್ಸಾಹ ನೀಡುತ್ತದೆ ಮಾನವನ ನೋವುಗಳನ್ನು ನಿವಾರಿಸುವ ಮಾರ್ಗ ಧರ್ಮದಲ್ಲಿದೆ ಇದನ್ನು ಒಪ್ಪುತ್ತಿರೊ ಎಂದು ಮೊದಲು ಉಪದೇಶ ಪಡೆದವರನ್ನು ಬುದ್ಧ ಕೇಳಿದ್ದಕ್ಕೆ ಐದು ಮಂದಿಯೂ ಒಪ್ಪುತ್ತೇವೆ ಎಂದು ಹೇಳುತ್ತಾರೆ.

ಬುದ್ಧ ಇದಕ್ಕೆಲ್ಲಾ ಅನವಶ್ಯಕವಾಗಿ ದೇಹ ದಂಡನೆಯ ಮಾರ್ಗ ಹೇಳಿ ಕೊಡಲಿಲ್ಲ. ಬುದ್ಧನ ಸರಳ ಮಾರ್ಗವೇ ಪರಿಣಾಮಕಾರಿಯಾಗಿ ಫಲಿತಾಂಶಗವನ್ನು ನೀಡುತ್ತಿತ್ತು. ಅದಕ್ಕಾಗಿಯೇ ಬುದ್ಧ ಕಿಸಾಗೋತಮಿಯನ್ನು ಸಾವಿಲ್ಲದ ಮನೆಯ ಸಾಸಿವೆಯನ್ನು ತರಲುಹೇಳಿ ಸಾವಿನ ದುಃಖದಿಂದ ಹೊರತರುತ್ತಾನೆ ಅಂಗುಲಿಮಾಲನಂತಹ ಬಹಳಷ್ಟು ದುಷ್ಟರನ್ನು ಬದಲಾವಣೆಗೊಳಿಸುತ್ತಾನೆ. ಬುದ್ಧ ಪ್ರಾಣಾಯಾಮದಲ್ಲೂ ವಿಪ್ಪಸ್ಸನ ಎಂಬ ಸರಳಮಾರ್ಗವನ್ನೆ ಭೋಧಿಸುತ್ತಾನೆ. ಉಸಿರಾಟವನ್ನು ಒತ್ತಾಯಪೂರ್ವಕವಾಗಿ ಏರಿಸಿ ಇಳಿಸುವ ಬದಲು ಮನಸ್ಸಿನ ಗೊಂದಲಗಳಿಂದಂತೆ ನಿರ್ಮಲವಾಗಿ ನೈಸರ್ಗಿಕವಾಗಿ ಒಳ ಹೋಗುವ ಹಾಗೂ ಹೊರಬರುವ ಉಸಿರನ್ನು ನೋಡುವ ಕ್ರಮವನ್ನು ಕೇಳಿಕೊಡುತ್ತಾನೆ. ಈ ವಿದ್ಯೆಯ ಮೂಲಕ ಪ್ರಾಣದ ಆಯಾಮವೂ ನಮ್ಮ ಒಳ ಹೊತಗೂ ಹೋಗುವ ಅರಿವು ಮತ್ತು ನಮ್ಮ ದೇಹದಿಂದಾಚೆ ಪ್ರಾಣದ ಅಸ್ಥಿತ್ವದ ಬಗ್ಗೆ ಬುದ್ಧ ಅರಿತು ಅದನ್ನು ಸಹಜವಾಗಿ ಸ್ವಾಭಾವಿಕವಾಗಿ ಬಹಳ ಮಹತ್ವವಿದೆ. ನಾನು ಇದನ್ನು ಮಾಡುತ್ತೇನೆ ಎಂಬುದರಲ್ಲಿ ಅಹಂ ಇದೆ. ತಿಳಿವು ಸ್ವಾಭಾವಿಕವಾಗಿ ನಮ್ಮೊಳಗೆ ಇದೆ.

ಅದಕ್ಕೆ ನಾನು ನನ್ನಿಂದ ಎಂಬ ಪದದ ಅವಶ್ಯಕತೆಯೇ ಇಲ್ಲ. ನನ್ನಿಂದ ಎಂಬ ಅಹಂ ಹುಟ್ಟುವುದೇ ಮನಸ್ಸಿನ ದ್ವಂದ್ವದಿಂದ ಇಂತಹ ಪೊರೆಯನ್ನು ಕಳಚಿದಾಗ ಪ್ರಕೃತಿ ಸಹಜವಾಗಿ ಉಸಿರು ನಮ್ಮೊಡನೆ ಒಂದಾಗುತ್ತದೆ. ತನ್ನ ಅಸ್ಥಿತ್ವದ ಅಗಾಧತೆಯನ್ನು ತೋರಿಸುತ್ತದೆ. ನಾನು ಎಂದಾದ ಬರೀ ಮೂಳೆ,ಮಾಂಸ, ಮಜ್ಜೆಯ ಮನುಷ್ಯನಾಗಿ ಮಾತ್ರ ನಾವು ಕಾಣುತ್ತೇವೆ. ಇದು ಶಾಶ್ವತವಾಗಿಲ್ಲದ ವಿಚಾರವಾಗಿದೆ. ಶಾಶ್ವತವಾದದ್ದು ಅಖಂಡವಾದದ್ದನ್ನು ಬುದ್ಧ ಭೋಧಿಸಿದ.

ಬೌದ್ಧ ಸಾಧಕರಲ್ಲಿ ಸತ್ತ ನಂತರವೂ ಪ್ರಜ್ಞೆಯನ್ನು ಉಳಿಸಿಕೊಳ್ಳುವ ಮಾರ್ಗ ಅಸ್ಥಿತ್ವದಲ್ಲಿದೆ. ಅಖಂಡವಾಗಿ ಅರಿಯುವುದಕ್ಕೆ ಮನುಷ್ಯನ ದೇಹದ ಮಿತಿಯನ್ನು ಅದು ಹೇಳುತ್ತದೆ. ಹಾಗೂ ಅ ಮಿತಿಯನ್ನು ಮೀರಿ ನಮ್ಮ ದೇಹವನ್ನುನಾವೇ ಹೊರಗಿನ ಪ್ರಜ್ಞೆಯ ಮೂಲಕ ಭಾವನೆಗಳನ್ನು, ಗ್ರಹಿಕೆಗಳನ್ನು, ಮಾನಸಿಕಸ್ಥಿತಿಯನ್ನು ನೋಡುವ ಕ್ರಮ ಬೌದ್ಧ ಸಾಧನೆಯ ದಾರಿಯಾಗಿದ್ದು, ಅಧು ಮತ್ತೆ ಜನರ ದುಃಖ ನಿವಾರಣೆಗಾಗಿ ಜನರ ಧರ್ಮವಾಗಿ ರೂಪಂತರಗೊಳ್ಳುತ್ತದೆ. ಈ ರೂಪಾಂತರ ಎನ್ನುವುದಕ್ಕೆ ಒಂದು ಜೇನು ಹುಟ್ಟಿನ ಬಗ್ಗೆ ಇಲ್ಲಿ ಹೇಳಬೇಕಾಗಿದೆ. ಜೇನು ಹುಟ್ಟಿನಲ್ಲಿ ಕೆಲಸಗಾರ ಜೇನು ಹಾಗೂ ಒಂದೆ ರಾಣಿ ಜೇನಿರುತ್ತದೆ ರಾಣಿ ಜೇನು ಆಕಸ್ಮಿಕವಾಗಿ ಸತ್ತು ಹೋದರೆ ಕೆಲಸಗಾರ ಜೇನೊಂದು ತನ್ನನ್ನು ತನ್ನ ದೇಹದ ಜೈವಿಕ ಬದಲಾವಣೆಯನ್ನು ರೂಪಾಂತರಗೊಳಿಸಿ ರಾಣಿ ಜೇನಾಗುತ್ತದೆ. ಇಂಥ ಕೆಲಸಗಾರ ಜೇನುಗಳಾದ ಭೋದಿಸತ್ವರು ರೂಪಾಂತರಗೊಂಡು ಬುದ್ಧರಾಗಿ ನಮ್ಮ ನಡುವೆ ಇದ್ದಾರೆ. ನೋಡುವ ಕಣ್ಣುಗಳಷ್ಟೆ ನಮಗೆಬೇಕು. ಆ ಹಾದಿಯಲ್ಲಿ ಹೋಗೋಣ ಮನಸ್ಸಿನಿಂದ ಮುಕ್ತವಾದ ಮೌನದೊಳಗೆ ನಾವೀಗ ಹೋಗೋಣ. □

ಹಿಂಸೆ-ಪ್ರತಿಹಿಂಸೆ ಮತ್ತು ನಾಗರಿಕ ಸಮಾಜ

ನಾ ದಿವಾಕರ್

ನಮ್ಮ ದೇಶದಲ್ಲಿ ಎಲ್ಲವೂ ಸಂಭವಿಸುತ್ತಿದೆ. ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡಲು ಕಾರ್ಪೋರೇಟ್ ಉದ್ಯಮಿಗಳು ಛತ್ತೀಸ್‌ಘಡ,ಝಾರ್ಖಂಡ್, ಒರಿಸ್ಸಾಗಳಲ್ಲಿ, ಬಹುತೇಕ ಎಲ್ಲಾ ರಾಜ್ಯಗಳಲ್ಲೂ ಸನ್ನದ್ಧರಾಗಿದ್ದಾರೆ. ಇವರ ಮುಂದಿನ ತಂಗುದಾಣ ಕರ್ನಾಟಕವಾಗಲಿದೆ. ಇತ್ತೀಚೆಗೆ ವೈಭವದಿಂದ ನಡೆದ ಜಾಗತಿಕ ಬಂಡವಾಳ ಹೂಡಿಕೆ ದಾರರ ಸಮಾವೇಶ ಈ ನಿಟ್ಟಿನಲ್ಲಿ ಸೂಚನೆಯಷ್ಟೆ. ಈ ಉದ್ಯಮಿಗಳ ಹಿತಾಸಕ್ತಿಗಳನ್ನು ರಕ್ಷಿಸಲು ಪ್ರಭುತ್ವ ಸಂಪೂರ್ಣ ಬದ್ಧತೆಯನ್ನು ತೋರಿದೆ. ಅಭಿವೃದ್ಧಿ-ಪ್ರಗತಿ ಮುಖ್ಯವಲ್ಲವೇ ಭಾರತ ವಿಶ್ವ ಭೂಪಟದಲ್ಲಿ ಏಕ ಮಾದ್ವಿತೀಯ ರಾಷ್ಟ್ರವಾಗಿ ಕಂಗೊಳಿಸ ಬೇಕಾದರೆ ನಮ್ಮ ಅರಣ್ಯಗಳೆಲ್ಲವೂ ನಾಶವಾಗಿ ಉಕ್ಕು, ಸಿಮೆಂಟ್,ಗಣಿ ಉದ್ದಿ ಮೆಗಳು ತಲೆ ಎತ್ತಬೇಕು.

ಖ್ಯಾತ ಲೇಖಕಿ ಅರುಂಧತಿ ರಾಯ್ ಅವರ ಬಹು ಪಾಲು ಲೇಖನಗಳು ವಿವಾದಗ್ರಸ್ತವಾಗದಿದ್ದರೂ ಚರ್ಚಾಸ್ಪದವಾಗಿರುತ್ತವೆ. ಆದರೆ ಆಳ್ವಿಕರಿಗೆ ಚುರುಕು ಮುಟ್ಟಿಸುವುದಂತೂ ಸತ್ಯ. ನಕ್ಸಲೀಯರನ್ನು ಕುರಿತ ಅವರ ಸುದೀರ್ಘ ಪ್ರತ್ಯಕ್ಷದರ್ಶಿ ಲೇಖನವೂ ಇದೇ ಜಾಡಿನಲ್ಲಿದೆ. ಈ ಲೇಖನವನ್ನು ಕುರಿತು ಜಿ.ಕೆ.ಜಿಯವರ ಸುದೀರ್ಘ ಪ್ರತಿಕ್ರಿಯೆ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಎಲ್ಲೋ ಒಂದೆಡೆ ಲೇಖಕರು ಇಡೀ ಸಮಸ್ಯೆಯನ್ನು ಹಿಂಸೆ -ಅಹಿಂಸೆಯ ಸುತ್ತಲಿನ ದ್ವಂದ್ವದಲ್ಲೇ ಅರ್ಥೈಸಲು ಪ್ರಯತ್ನಿಸುವುದು ಸ್ಪಷ್ಟವಾಗುತ್ತದೆ. ಹಾಗಾಗಿಯೇ ಸ್ಟಾಲಿನ್, ಮಾವೋ, ಚೀನಾ ಇತ್ಯಾದಿಗಳು ಉಲ್ಲೇಖವಾಗುತ್ತವೆ. ಇದೇ ಲೇಖನವನ್ನು ಕುರಿತು ಡಿ.ಎಸ್.ನಾಗಭೂಷಣ್ ಸಹ ತಮ್ಮ ವ್ಯಾಖ್ಯಾನವನ್ನು ಸಲ್ಲಿಸಿದ್ದಾರೆ. ಅರುಂಧತಿಯವರ ಲೇಖನ ಮೂಲಭೂತವಾಗಿ ಒಂದು ದಿನಚರಿಯ ರೂಪದಲ್ಲಿರುವುದೇ ಹೊರತು, ನಕ್ಸಲ್ ಸಮಸ್ಯೆ ಮತ್ತು ಅದರ ಸುತ್ತ ಬೆಳೆದಿರುವ ಸಾಮಾಜಿಕ ಪರಿಸರದ ವಿಶ್ಲೇಷಣೆಯಲ್ಲಿ ತೊಡಗುವುದಿಲ್ಲ.

ಹಾಗಾಗಿ ಅವರ ಲೇಖನದಲ್ಲಿ ನಕ್ಸಲರನ್ನು ಬೆಂಬಲಿಸುವ ಛಾಯೆ ಕಂಡುಬಂದರೂ ಹೆಚ್ಚೇನಿಲ್ಲ. ಇಲ್ಲಿ ರಾಯ್ ಅವರ ಗ್ರಹೀತಗಳು ಮತ್ತು ಪ್ರತಿಪಾದನೆಗಳಿಗಿಂತಲೂ ನಕ್ಸಲ್ ಚಳುವಳಿ ರೂಪುಗೊಂಡ ಸನ್ನಿವೇಶ - ಪ್ರಸ್ತುತ ಸನ್ನಿವೇಶದಲ್ಲಿ ಈ ಜನಾಂದೋಲನದ ಪ್ರಸ್ತುತತೆಗಳು ಹೆಚ್ಚು ಮುಖ್ಯವಾದಲ್ಲಿ ಒಂದು ಉತ್ತಮ ಚರ್ಚೆ ಸಾಧ್ಯ. ಪ್ರಸ್ತುತ ಸನ್ನಿವೇಶದಲ್ಲಿ ಪ್ರಜ್ಞಾವಂತ ಸಮುದಾಯದಲ್ಲಿ ಉದ್ಭವಿಸುತ್ತಿರುವ ಪ್ರಶ್ನೆ ಎಂದರೆ ಭಾರತದ ಆಳುವ ವರ್ಗಗಳು ಅನುಸರಿಸುತ್ತಿರುವ ಅಭಿವೃದ್ಧಿಯ ಮಾರ್ಗವನ್ನು ಕುರಿತಾದದ್ದು. ಅಭಿವೃದ್ಧಿ ಮತ್ತು ಪ್ರಗತಿಯನ್ನು ಭಿನ್ನವಾಗಿ ವಿಶ್ಲೇಷಿಸಿ ನೋಡದೆಹೋದಲ್ಲಿ, ಬಹುಶಃ ನಾವೂ ದಂಡಕಾರಣ್ಯದಲ್ಲೇ ಕಳೆದು ಹೋಗುವ ಸಂಭವವೇ ಹೆಚ್ಚು. *ಒಂದುವೇಳೆ ಸರ್ಕಾರ ನಕ್ಸಲರು ಎತ್ತುತ್ತಿರುವ ಪ್ರಶ್ನೆಗಳನ್ನು ಗಂಭೀರವಾಗಿ ಪರಿಗಣಿಸಿ ಪರಿಹಾರ ಮಾರ್ಗಗಳನ್ನು ಕಂಡುಹಿಡಿದು ಕಾರ್ಯಗತಗೊಳಿಸಿದರೆ ನಕ್ಸಲರು ಇದನ್ನು ಸ್ವಾಗತಿಸುತ್ತಾರೆಯೇ* ಎಂಬ ಪ್ರಶ್ನೆಯಲ್ಲಿ ಈ ದ್ವಂದ್ವ ಕಂಡುಬರುತ್ತದೆ. ಭಾರತವನ್ನು ಆಳುತ್ತಿರುವ ಚುನಾಯಿತ ಪ್ರಜಾತಾಂತ್ರಿಕ ಸರ್ಕಾರ ತನ್ನ ಪ್ರಜೆಗಳ ಅಭ್ಯುದಯಕ್ಕಾಗಿ ಕೈಗೊಳ್ಳುವ ಕಾರ್ಯಕ್ರಮಗಳು ನಕ್ಸಲರಿಗಾಗಲೀ ಮತ್ತಾವುದೇ ಪಕ್ಷ-ಸಂಘಟನೆಗಳಿಗಾಗಲೀ ಒಪ್ಪಿಗೆಯಾಗಬೇಕಾದ ಅಗತ್ಯತೆಏನಿದೆ ? ಮೂಲಭೂತವಾಗಿ ಭಾರತೀಯ ಜನಸಮುದಾಯಗಳ ಒಪ್ಪಿಗೆ ಮುಖ್ಯವಾಗುತ್ತದೆ. ಆದರೆ ಈ ಜನಸ ಮುದಾಯಗಳನ್ನು ಪ್ರತಿನಿಧಿಸುವ ರಾಜಕೀಯ ಪಕ್ಷಗಳು, ಸಾಂಸ್ಕೃತಿಕ-ಸಾಮಾಜಿಕ ಸಂಘಟನೆಗಳು ಅಭಿವೃದ್ಧಿಯನ್ನು ಯಾವ ದೃಷ್ಟಿ ಕೋನದಿಂದ ನೋಡುತ್ತವೆ ಎಂಬ ಮೂರ್ಖ ಪ್ರಶ್ನೆ ನಕ್ಸಲ್ ಚಳುವಳಿಯ ಹಿನ್ನೆಲೆಯಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆಯುತ್ತದೆ.

ಪ್ರಗತಿ-ಅಭಿವೃದ್ಧಿ ಇತ್ಯಾದಿ ,,,

ನಮ್ಮ ದೇಶದಲ್ಲಿ ಎಲ್ಲವೂ ಸಂಭವಿಸುತ್ತಿದೆ. ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡಲು ಕಾರ್ಪೋರೇಟ್ ಉದ್ಯಮಿಗಳು ಛತ್ತೀಸ್ ಘಡ, ಝಾರ್ಖಂಡ್, ಒರಿಸ್ಸಾಗಳಲ್ಲಿ, ಬಹುತೇಕ ಎಲ್ಲಾ ರಾಜ್ಯಗಳಲ್ಲೂ ಸನ್ನದ್ಧರಾಗಿದ್ದಾರೆ. ಇವರ ಮುಂದಿನ ತಂಗುದಾಣ ಕರ್ನಾಟಕವಾಗಲಿದೆ. ಇತ್ತೀಚೆಗೆ ವೈಭವದಿಂದ ನಡೆದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಈ ನಿಟ್ಟಿನಲ್ಲಿ ಸೂಚನೆಯಷ್ಟೆ. ಈ ಉದ್ಯಮಿಗಳ ಹಿತಾಸಕ್ತಿಗಳನ್ನು ರಕ್ಷಿಸಲು ಪ್ರಭುತ್ವ ಸಂಪೂರ್ಣ ಬದ್ಧತೆಯನ್ನು ತೋರಿದೆ. ಅಭಿವೃದ್ಧಿ-ಪ್ರಗತಿ ಮುಖ್ಯವಲ್ಲವೇ ? ಭಾರತ ವಿಶ್ವ ಭೂಪಟದಲ್ಲಿ ಏಕಮಾದ್ವಿತೀಯ ರಾಷ್ಟ್ರವಾಗಿ ಕಂಗೊಳಿಸಬೇಕಾದರೆ ನಮ್ಮ ಅರಣ್ಯಗಳೆಲ್ಲವೂ ನಾಶವಾಗಿ ಉಕ್ಕು, ಸಿಮೆಂಟ್, ಗಣಿ ಉದ್ದಿಮೆಗಳು ತಲೆ ಎತ್ತಬೇಕು. ಪರಮಾಣು ವಿದ್ಯುತ್ ಘಟಕಗಳು, ಥರ್ಮಲ್ ವಿದ್ಯುತ್ ಘಟಕಗಳು ರಾರಾಜಿಸಬೇಕು. ಬೃಹತ್ ಅಣೆಕಟ್ಟುಗಳು ಹರಿವ ನೀರನ್ನು ತಡೆಹಿಡಿದು ಮುಗಿಲೆತ್ತರ ಎದ್ದು ನಿಲ್ಲುವಂತೆ ಮಾಡಬೇಕು. ಫ್ಲೈ ಓವರ್, ಚತುಷ್ಪಥ-ಷಟ್ಪಥ ರಸ್ತೆ, ಕಾರಿಡಾರ್ ರಸ್ತೆಗಳು, ಮೆಟ್ರೋ ಯೋಜನೆಗಳು, ವಿಮಾನ ನಿಲ್ದಾಣಗಳು, ವಿಶೇಷ ಆರ್ಥಿಕ ವಲಯಗಳು ಇವೆಲ್ಲವೂ ಅಭಿವೃದ್ಧಿ ಪಥದ ಪ್ರಮುಖ ರೂಪಕಗಳು. ಈ ರೂಪಕಗಳಿಗಾಗಿ ಜನಸಾಮಾನ್ಯರು ತಮ್ಮ ಮನೆ, ಭೂಮಿ, ಕೆರೆ, ಬಾವಿ ಕೊನೆಗೆ ಜೀವವನ್ನೂ ತ್ಯಾಗ ಮಾಡಬೇಕು.

ಎಷ್ಟಾದರೂ ನಮ್ಮ ದೇಶ ತ್ಯಾಗಮಯಿಗಳ ತವರೂರಲ್ಲವೇ. ನಮ್ಮ ಪೂರ್ವಿಕರು, ಋಷಿ ಮುನಿಗಳು, ಮಹಾತ್ಮರು ಹೇಳಿರುವುದೂ ಇದನ್ನೇ. ಮಾತೃ ಭೂಮಿಗಾಗಿ ಸರ್ವಸ್ವವನ್ನೂ ತ್ಯಾಗಮಾಡಬೇಕು. ಜನನಿ ಜನ್ಮ ಭೂಮಿಷ್ಚ ಸ್ವರ್ಗಾದಪಿ ಧರೀಯಸಿ ಅಲ್ಲವೇ. ಇಲ್ಲಿ ಸ್ವರ್ಗವನ್ನು ಕಾಣಬೇಕೆಂದರೆ ಭೂಮಿಯ ಮೇಲಿನ ಜನಸಾಮಾನ್ಯರು ನರಕದ ಬಾಗಿಲನ್ನು ತಟ್ಟುವುದರಲ್ಲಿ ತಪ್ಪೇನಿಲ್ಲ ! ಮುಂದಿನ ಹಲವಾರು ಪೀಳಿಗೆಗಳು ಇವರ ತ್ಯಾಗ, ಬಲಿದಾನಗಳನ್ನು ನೆನೆಯುತ್ತವೆ. ಈಗಲೂ ನಾವು ಭಗತ್ ಸಿಂಗ್, ಆಜಾದ್ ಮುಂತಾದವ

ರನ್ನು ನೆನೆಯುತ್ತಿಲ್ಲವೇ. ಇಂದಿನ ಪ್ರಜ್ವಲಿಸುತ್ತಿರುವ ಭಾರತಕ್ಕಾಗಿಯೇ ಅಲ್ಲವೇ ಅವರೆಲ್ಲರೂ ತಮ್ಮ ಹದಿಹರೆಯದ ವಯಸ್ಸಿನಲ್ಲೇ ಪ್ರಾಣ ತ್ಯಾಗಮಾಡಿದ್ದುದು ? ಹಾಗಾಗಿಯೇ ನಮ್ಮೊಳಗಿನ ಉದಯೋನ್ಮುಖ ಲೇಖಕರೊಬ್ಬರು ಜನಾಂದೋಲನಗಳಿಗೆ ಪರಕೀಯರಾದ ಮಾವೋ, ಲೆನಿನ್ ಏಕೆ ಮಾದರಿಯಾಗಬೇಕು, ಭಗತ್ ಸಿಂಗ್, ಆಜಾದ್, ಸುಭಾಷ್ ಬೋಸ್ ಇಲ್ಲವೇ ಎಂದೂ ಕೇಳುತ್ತಾರೆ. ***(ಪ್ರತಾಪ್ ಸಿಂಹ-ಬೆತ್ತಲೆ ಜಗತ್ತು 12-6-2010 ವಿಕ.)***

ಹಾಗಾಗಿ ಇರುವವರಲ್ಲೇ ಕೆಲವರು ತ್ಯಾಗ ಮಾಡಬೇಕು. ಅರಣ್ಯಗಳಲ್ಲಿ ಕಾರ್ಪೋರೇಟ್ ಉದ್ಯಮಿಗಳು ನೆಲೆಯೂರಬೇಕಾದರೆ ಆದಿವಾಸಿಗಳು ಜಾಗ ಖಾಲಿ ಮಾಡಬೇಕು. ತಮ್ಮ ಜೀವನ ಶೈಲಿಯಲ್ಲಿ ಬದಲಾವಣೆ ತಂದುಕೊಳ್ಳಬೇಕು. ಬೃಹತ್ ಅಣೆಕಟ್ಟುಗಳಿಗಾಗಿ ಗ್ರಾಮೀಣ ಬಡಜನತೆ ತಮ್ಮ ಗ್ರಾಮೀಣ ಜೀವನ ಸಂಸ್ಕೃತಿಯನ್ನೇ ತೊರೆದು ನಗರವಾಸಿಗಳಾಗಬೇಕು. ಅಥವಾ ವಲಸೆ ಹೋಗಬೇಕು. ರಸ್ತೆ-ಕಾರಿಡಾರ್-ಫ್ಲೈಓವರ್‌ಗಳಿಗಾಗಿ ಪಟ್ಟಣದ ಜನತೆ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡು ಮನೆ-ಅಂಗಡಿಗಳನ್ನು ಕಳೆದುಕೊಳ್ಳಬೇಕು. ವಿಶೇಷ ಆರ್ಥಿಕ ವಲಯಗಳಿಗಾಗಿ ಕೃಷಿಕರು ತಮ್ಮ ಭೂಮಿಯನ್ನು ಕಳೆದುಕೊಳ್ಳಬೇಕು. ಈ ತ್ಯಾಗ(?)ಮೂರ್ತಿಗಳನ್ನು ಸಂತೈಸಲು, ಪರಿಹಾರಗಳ ಮೂಲಕ ಸಂತೃಪ್ತಿಪಡಿಸಲು, ಪ್ರತಿಭಟಿಸಿದರೆ ನಿಗ್ರಹಿಸಲು ಕಾನೂನುಗಳಿವೆ. ವಸಾಹತು ಕಾಲದ ಶಾಸನಗಳಿವೆ. ರಾಜಕೀಯ ಪಕ್ಷಗಳಿವೆ. ನವ ಉದಾರವಾದಿ ಸಿದ್ಧಾಂತವೂ ಇದೆ. ಭಾರತದ ಸಂಸ್ಕೃತಿಯಲ್ಲೇ ಹಾಸು ಹೊಕ್ಕಾಗಿರುವ ಸಾಮ-ಬೇಧ-ದಂಡ ನೀತಿಯೂ ಇದೆ. ಅದರಲ್ಲಿ ಕೊನೆಯ ನೀತಿಯನ್ನು ಈಗ ಎಲ್ಲೆಡೆ ಕಾಣುತ್ತಿದ್ದೇವೆ. ಛತ್ತೀಸ್‌ಘಡದಲ್ಲಿ ಆದಿವಾಸಿಗಳ ಉಚ್ಚಾಟನೆಗಾಗಿಯೇ ಸಾರ್ವಜನಿಕ ಸೇನಾ ಪಡೆಗಳನ್ನು ಸೃಷ್ಟಿಸಲಾಗಿದೆ. ಈ ಗುಂಪುಗಳನ್ನು ಗೌರವಯುತವಾಗಿ ಸಲ್ವಾಜುಡುಂ ಎಂದು ಕರೆಯುತ್ತಾರೆ. ಈ ಪಡೆಗಳಿಗೆ ಆದಿವಾಸಿ ಯುವಕರನ್ನೇ ನೇಮಿಸಿಕೊಂಡು ಅವರಿಗೆ ವಿಶೇಷ ಪೋಲೀಸ್ ಅಧಿಕಾರಿ ಎಂಬ ಪದವಿಯನ್ನೂ ನೀಡಲಾಗುತ್ತದೆ. ದಾಂತೆವಾಡ-2 ಪ್ರಕರಣದಲ್ಲಿ ಮೃತಪಟ್ಟವರಲ್ಲಿ ಇವರೇ ಹೆಚ್ಚಿನ ಸಂಖ್ಯೆಯಲ್ಲಿದ್ದುದು ಗಮನಾರ್ಹ.

ಇಲ್ಲಿ ನಡೆಯುತ್ತಿರುವುದು ಪ್ರಭುತ್ವದ ಅಭಿವೃದ್ಧಿಯ ಪರಿಕಲ್ಪನೆ ಮತ್ತು ಜನಸಾಮಾನ್ಯರ ಅಂದರೆ ಸರ್ಕಾರದ ಯೋಜನೆಗಳ ಫಲಾನುಭವಿಗಳ ಜೀವನಾಧಾರದ ನಡುವಿನ ಸಂಘರ್ಷ. ಈ ಸಂಘರ್ಷದಲ್ಲಿ ಎರಡು ಬಣಗಳಂತೂ ಇರಲೇಬೇಕಲ್ಲವೇ. ಪ್ರಭುತ್ವವನ್ನು ಪ್ರತಿನಿಧಿಸಲು ರಾಜಕೀಯ ಪಕ್ಷಗಳಿವೆ, ಪೋಲೀಸ್ ವ್ಯವಸ್ಥೆ ಇದೆ, ಕಾನೂನಿನ ಚೌಕಟ್ಟಿದೆ, ನವ ಉದಾರವಾದದ ಪ್ರತಿಪಾದಕರೂ ಇದ್ದಾರೆ. ಒರಿಸ್ಸಾದ ಪಾಸ್ಕೋ, ಛತ್ತೀಸ್‌ಘಡದ ವೇದಾಂತ, ಝಾರ್ಖಂಡ್‌ನ ಮಿತ್ತಲ್, ಕರ್ನಾಟಕದ ರೆಡ್ಡಿ ಸೋದರರು, ವಿಶೇಷ ಆರ್ಥಿಕ ವಲಯದ ಅಂಬಾನಿಗಳು, ಕಾರಿಡಾರ್ ರಸ್ತೆಯ ಖೇಣಿಗಳು ಇವರುಗಳನ್ನು ಸಮರ್ಥಿಸುವ ಅನೇಕ ಶಕ್ತಿ ಕೇಂದ್ರಗಳಿವೆ. ಮಾಧ್ಯಮಗಳಿವೆ. ಘಟಾನುಘಟಿ ಅರ್ಥಶಾಸ್ತ್ರಜ್ಞರಿದ್ದಾರೆ. ಮತ್ತೊಂದು ಬಣವನ್ನು ಪ್ರತಿನಿಧಿಸಲು ?

ಒಬ್ಬ ಮೇಧ ಪಾಟ್ಕರ್, ಕೆಲವು ಎನ್‌ಜಿಒಗಳು, ಬೆರಳೆಣಿಕೆಯ ಸಂಘಟನೆಗಳು, ಪ್ರಗತಿಪರ ಬುದ್ಧಿಜೀವಿಗಳು ಅಷ್ಟೇ. ಈ ಬುದ್ಧಿ ಜೀವಿಗಳು ಆಳ್ವಿಕರ ಬುದ್ಧಿಗೇಡಿ ಅಭಿವೃದ್ಧಿ ಪಥವನ್ನು ನಿಗ್ರಹಿಸಲು ಸಾಧ್ಯವೇ ಎಂದು ನೋಡಿದಾಗ ನಿರಾಶೆಯ ಕಾರ್ಮೋಡ ಕವಿಯುತ್ತದೆ. ಈ ಜೀವಿಗಳು ಮಾತನಾಡುವುದಾದರೂ ಯಾರಪರವಾಗಿ, ರೈತರು, ಕೃಷಿ ಕಾರ್ಮಿಕರು, ಆದಿವಾಸಿಗಳು, ಶ್ರಮಿಕ ವರ್ಗಗಳು, ಗ್ರಾಮೀಣ ಬಡಜನತೆ, ನಿರುದ್ಯೋಗಿಗಳು, ಮಹಿಳೆಯರು, ದಲಿತರು ಇತ್ಯಾದಿ ಇತ್ಯಾದಿ. ವಿಪರ್ಯಾಸವೆಂದರೆ ಈ ಯಾವುದೇ ವ್ಯಕ್ತಿ-ಸಂಘಟನೆಗಳೂ ರಾಜಕೀಯ ಧೋರಣೆಹೊಂದಿಲ್ಲ. ರಾಜಕೀಯದ ಹೊರತಾಗಿಯೇ ತಮ್ಮ ಗುರಿ ಸಾಧಿಸುವ ಛಲ ತೊಟ್ಟವರು ಇಂದು ಜನಸಾಮಾನ್ಯರನ್ನು ಪ್ರತಿನಿಧಿಸುತ್ತಿದ್ದಾರೆ. ಗಾಂಧಿ ಮಾರ್ಗದಲ್ಲಿ ಮುನ್ನಡೆದು ಸರ್ಕಾರಗಳ ಮೇಲೆ ಧರಣಿ, ಸತ್ಯಾಗ್ರಹದ ಮೂಲಕ ಒತ್ತಡತಂದು ತಮ್ಮ ಅಭಿವೃದ್ಧಿಗಾಗಿ ಹೋರಾಡುವ ಸಾಧ್ಯತೆಗಳನ್ನು ನಾಗಭೂಷಣ್ ತಮ್ಮ ಲೇಖನದಲ್ಲಿ ಪ್ರಸ್ತಾಪಿಸುತ್ತಾರೆ. ಆದರೆ ಈ ಸಂಘಟನೆಗಳು ಗಾಂಧಿ ಮಾರ್ಗದಲ್ಲಿ ನಡೆಯುತ್ತಲೇ ಇವೆ. ಫಲಿತಾಂಶ ನರ್ಮದಾ ಬಚಾವ್ ಆಂದೋಲನದಲ್ಲಿ ಮೇಧಾ ಅವರನ್ನು ಹಿಂಬಾಲಿಸುವ ಅಮಾಯಕ ಜನಸಮುದಾಯಗಳೇ ಚುನಾವಣೆಗಳಲ್ಲಿ ಕಾಂಗ್ರೆಸ್-ಭಾಜಪ ಮುಂತಾದ ಪಕ್ಷಗಳನ್ನು ಬೆಂಬಲಿಸುತ್ತವೆ. ಕೆಂಬಾವುಟದಡಿಕಾರ್ಮಿಕರ ಹಕ್ಕುಗಳಿಗಾಗಿ ಹೋರಾಡುವ ಶ್ರಮಿಕರೂ ಇದೇ ಮಾರ್ಗ ಅನುಸರಿಸುತ್ತಾರೆ.

> **ಒಬ್ಬ ಮೇಧ ಪಾಟ್ಕರ್, ಕೆಲವು ಎನ್‌ಜಿಒಗಳು, ಬೆರಳೆಣಿಕೆಯ ಸಂಘಟನೆಗಳು, ಪ್ರಗತಿಪರ ಬುದ್ಧಿಜೀವಿಗಳು ಅಷ್ಟೇ. ಈ ಬುದ್ಧಿ ಜೀವಿಗಳು ಆಳ್ವಿಕರ ಬುದ್ಧಿಗೇಡಿ ಅಭಿವೃದ್ಧಿ ಪಥವನ್ನು ನಿಗ್ರಹಿಸಲು ಸಾಧ್ಯವೇ ಎಂದು ನೋಡಿದಾಗ ನಿರಾಶೆಯ ಕಾರ್ಮೋಡ ಕವಿಯುತ್ತದೆ. ಈ ಜೀವಿಗಳು ಮಾತನಾಡುವುದಾದರೂ ಯಾರಪರವಾಗಿ, ರೈತರು, ಕೃಷಿ ಕಾರ್ಮಿಕರು, ಆದಿವಾಸಿಗಳು, ಶ್ರಮಿಕ ವರ್ಗಗಳು, ಗ್ರಾಮೀಣ ಬಡಜನತೆ, ನಿರುದ್ಯೋಗಿಗಳು, ಮಹಿಳೆಯರು, ದಲಿತರು ಇತ್ಯಾದಿ ಇತ್ಯಾದಿ. ವಿಪರ್ಯಾಸವೆಂದರೆ ಈ ಯಾವುದೇ ವ್ಯಕ್ತಿ-ಸಂಘಟನೆಗಳೂ ರಾಜಕೀಯ ಧೋರಣೆಹೊಂದಿಲ್ಲ.**

ಇನ್ನು ಇದೇ ಜನಸಮುದಾಯಗಳನ್ನು, ಅರ್ಥಾತ್ ಶ್ರಮಜೀವಿಗಳನ್ನು ಪ್ರತಿನಿಧಿಸುವ ಎಡಪಂಥೀಯ ಪಕ್ಷಗಳು ಈಗ ರಾಜಕೀಯ ಅನಿವಾರ್ಯತೆಯ ಸುಳಿಯಲ್ಲಿ ಸಿಲುಕಿ ತಮ್ಮ ಮಾರ್ಕ್ಸ್‌ವಾದಿ ಧೋರಣೆಯನ್ನು ವಿಭಿನ್ನ ಮಾರ್ಗದಲ್ಲಿ ಕೊಂಡೊಯ್ಯುತ್ತಿವೆ. ಬದುಕುಳಿಯುವುದೇ ಒಂದು ಸಮಸ್ಯೆಯಾದಾಗ ಯಾವುದೇ ಇಸಂಗಳು ಪ್ರಸ್ತುತವೆನಿಸುವುದಿಲ್ಲ ಎಂಬ ವಾಸ್ತವವನ್ನು ಎಡಪಕ್ಷಗಳು ನಿರೂಪಿಸಿಬಿಟ್ಟಿವೆ. ಇಂತಹ ಸನ್ನಿವೇಶದಲ್ಲಿ ದೇಶದ ಅಭಿವೃದ್ಧಿಗಾಗಿ ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ಬೀದಿಪಾಲಾಗುತ್ತಿರುವ ಜನಸಮುದಾಯಗಳು ಯಾರನ್ನು ಆಶ್ರಯಿಸಬೇಕು. ಸ್ಥಳೀಯವಾಗಿ ಕೆಲವು ಸಂಘಟನೆಗಳು, ಪಕ್ಷಗಳು ಈ ಸಮುದಾಯಗಳ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸಿದರೂ ಎಲ್ಲೋ ಒಂದು ಕಡೆ ದ್ವಿಮುಖ ನೀತಿಗಳು ಈ ಪ್ರವೃತ್ತಿಗೆ ಕಡಿವಾಣ ಹಾಕುತ್ತಿವೆ. ಬಂಗಾಲದಲ್ಲಿ ಸಿಂಗೂರ್ ಪ್ರಕರಣಕ್ಕೆ ಕಾರಣವಾದ ಸಿಪಿಎಂ ಪಕ್ಷವೇ ಆಂಧ್ರ-ಒರಿಸ್ಸಾಗಳಲ್ಲಿ ರೈತರ ಪರವಾಗಿ ಹೋರಾಟ ನಡೆಸುತ್ತದೆ. ಛತ್ತೀಸ್‌ಘಡದಲ್ಲಿ ಸಲ್ವಾಜುಡಂನಂತಹ ಜೀವವಿರೋಧಿ ಅಸಂವಿಧಾನಿಕ ಪಡೆಗಳನ್ನು ಸೃಷ್ಟಿಸಿ ಪೋಷಿಸುತ್ತಿರುವ ಭಾಜಪ ಮತ್ತೊಂದೆಡೆ ದೇಶದ ಕಾನೂನು ವ್ಯವಸ್ಥೆ ಸುಭದ್ರವಾಗಿಲ್ಲ, ಸಮರ್ಥವಾಗಿಲ್ಲ ಎಂದು ಹೇಳುತ್ತದೆ. ಕರ್ನಾಟಕದಲ್ಲಿ ಅಕ್ರಮ ಗಣಿಗಾರಿಕೆಯನ್ನು ವಿರೋಧಿಸುವ ಕಾಂಗ್ರೆಸ್ ಆಂಧ್ರಪ್ರದೇಶದಲ್ಲಿ ಬೆಂಬಲಿಸುತ್ತದೆ. ಹೀಗಿರುವಾಗ ತಮ್ಮ ಮೂಲ ನೆಲೆಯನ್ನೇ ಕಳೆದುಕೊಳ್ಳುತ್ತಿರುವ ಆದಿವಾಸಿಗಳು, ಶೋಷಿತ ಸಮುದಾಯಗಳು, ಕೃಷಿಕರು ಯಾರನ್ನು ಆಶ್ರಯಿಸಬೇಕು ?

ರಾಜಾಶ್ರಯವೋ-ರಾಜಕೀಯ ಆಶ್ರಯವೋ ?

ನಾವು ನಿಮ್ಮನ್ನು ಪ್ರತಿನಿಧಿಸುತ್ತೇವೆ ! ಎಂಬ ಕೂಗು ಕೇಳಿದೊಡನೆಯೇ ಈ ಜನಸಮುದಾಯಗಳು ಅಂತಹ ಕರೆಗೆ ಕೂಡಲೇ ಸ್ಪಂದಿಸುತ್ತವೆ. ಅನಿವಾರ್ಯತೆ, ಅಸಹಾಯಕತೆ ಮತ್ತು ಬದುಕುವ ಇಚ್ಛೆ ಮಾನವ ಸಹಜಅಲ್ಲವೇ. ಜನನಿ ಜನ್ಮಭೂಮಿಷ್ಚ ಇಲ್ಲಿಯೂ ಅನ್ವಯಿಸುತ್ತದೆ. ಶತಮಾನಗಳಿಂದಲೂ, ತಮ್ಮ ಪೂರ್ವಿಕರ ಕಾಲದಿಂದಲೂ ಅರಣ್ಯಗಳನ್ನೇ ನಂಬಿ ಬಾಳುತ್ತಿರುವ ಜನಸಮುದಾಯಗಳಿಗೆ ಅರಣ್ಯದ ಹಾಡಿಗಳೇ ಜನ್ಮಭೂಮಿ. ಅವರಿಗೆ ದೇಶ-ರಾಷ್ಟ್ರ-ರಾಷ್ಟ್ರೀಯತೆಯ ಪರಿಕಲ್ಪನೆಗಳು ಅಮೂರ್ತ ಸ್ವರೂಪದಲ್ಲಿ ಮಾತ್ರ ಇರುತ್ತದೆ. ಹಾಗಾಗಿ ತಮ್ಮ ಜನ್ಮಭೂಮಿಯ ರಕ್ಷಣೆಗೆ, ತಮ್ಮ ಬದುಕಿನ ರಕ್ಷಣೆಗೆ ಯಾವುದೇ ತ್ಯಾಗಕ್ಕಾದರೂ ಸಿದ್ಧರಾಗಿರುತ್ತಾರೆ. ಅವರಿಗೂ ಭಗತ್ ಸಿಂಗ್-ಆಜಾದ್ ಅಂತಹ ನಾಯಕರೇ ಪ್ರೇರಣೆಯಾಗಿರುತ್ತಾರೆ. ಈ ಜನಸಮುದಾಯಗಳಿಗೆ ಯಾವುದೇ ರಾಜಕೀಯ ಪಕ್ಷಗಳು ಸಕಾರಾತ್ಮಕವಾಗಿ ಸ್ಪಂದಿಸಿ, ನಾವು ನಿಮ್ಮೊಡನಿದ್ದೇವೆ ಎಂದು ಆಶ್ವಾಸನೆ ನೀಡಿರುವ ನಿದರ್ಶನಗಳಿವೆಯೇ ? ನಮಗೆ ವೋಟ್‌ಹಾಕಿ ಗೆಲ್ಲಿಸಿ ನಿಮ್ಮ ಅಭಿವೃದ್ಧಿ ನಮ್ಮ ಹೊಣೆಗಾರಿಕೆ ಎಂದು ಆಶ್ವಾಸನೆ ನೀಡುವ ರಾಜಕೀಯ ಪಕ್ಷಗಳು ಈ ಜನಸಮುದಾಯಗಳ ಒಳಸುಳಿಗಳನ್ನು ಗ್ರಹಿಸಿವೆಯೇ? ಇದು ಮೂರ್ತ ಪ್ರಶ್ನೆ.

ಆದಿವಾಸಿಗಳ ಅಭಿವೃದ್ಧಿ ಎಂದರೆ ಅವರನ್ನು ಆಧುನಿಕತೆಯ ಮುಖ್ಯವಾಹಿನಿಗೆ ಕರೆತರುವುದು ಎಂದೇ ಪರಿಭಾವಿಸುವ ಆಧುನಿಕತೆಯ ವಕ್ತಾರರು ಆ ಜನಸಮುದಾಯಗಳ ಮೂಲಭೂತ ಸಾಂಸ್ಕೃತಿಕ-ಸಾಮಾಜಿಕ ಆಂತರ್ಯವನ್ನು ಗ್ರಹಿಸಿಲ್ಲವೆಂದೇ ಹೇಳಬಹುದು. ಅರಣ್ಯ ಸಂಪತ್ತನ್ನು ಕಾರ್ಪೋರೇಟ್ ಉದ್ಯಮಿಗಳ ವಶಕ್ಕೆ ಒಪ್ಪಿಸಿ, ಗಣಿಗಾರಿಕೆ, ಕೈಗಾರಿಕೋದ್ಯಮಗಳನ್ನು ಪ್ರಾರಂಭಿಸುವಮೂಲಕ ತಮ್ಮ ಜಲ-ನೆಲ-ವಾಯು ಸಂಪನ್ಮೂಲಗಳನ್ನು ತ್ಯಾಗ ಮಾಡುವವರಿಗೆ ಪರಿಹಾರ ಎಂಬ ರೊಟ್ಟಿಯ ತುಂಡನ್ನು ಎಸೆಯುವ ಆಳ್ವಿಕರ ನೀತಿಗೆ ಆದಿವಾಸಿಗಳು ಹೇಗೆ ಸ್ಪಂದಿಸಬೇಕು? ಈ ಪ್ರಶ್ನೆ ಇಂದು ಕೇವಲ ಆದಿವಾಸಿಗಳಿಗೆ ಮಾತ್ರ ಸೀಮಿತವಾಗಿಲ್ಲ. ಪ್ರತಿಯೊಂದು ಗ್ರಾಮದಲ್ಲೂ ಈ ಸಮಸ್ಯೆ ತಲೆ ಎತ್ತುತ್ತಿದೆ. ಕರ್ನಾಟಕದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಉದ್ಯಮಿಗಳ ಆಯ್ಕೆಯನ್ನು ನೋಡಿದರೆ ಭವಿಷ್ಯದ ಕರಾಳತೆಯ ಪ್ರತ್ಯಕ್ಷ ದರ್ಶನವಾಗುತ್ತದೆ.

ಸಮಾಜವಾದ-ಸಮತಾವಾದ ಒತ್ತಟ್ಟಿಗಿರಲಿ, ಜನಸಮುದಾಯಗಳ ಮೂಲಭೂತ ಅಗತ್ಯತೆಗಳನ್ನೂ ಪೂರೈಸಲಾಗದ ಆಳ್ವಿಕರ ಚರಿತ್ರೆಯನ್ನು ಕಳೆದ ಆರು ದಶಕಗಳ ಸ್ವತಂತ್ರ ಭಾರತದಲ್ಲಿ ಕಂಡಿದ್ದೇವೆ. ರಸ್ತೆ, ಬೀದಿ ದೀಪ, ನೀರು, ವಸತಿ ಮುಂತಾದ ಕನಿಷ್ಠ ಸೌಲಭ್ಯಗಳಿಂದಲೂ ವಂಚಿತರಾಗಿರುವ ಗ್ರಾಮೀಣ ಸಮುದಾಯಗಳ ಸಂಖ್ಯೆ ಲಕ್ಷಾಂತರ. ತಮ್ಮ ಶಿಕ್ಷಣವನ್ನು ಪೂರೈಸಿದ ಕೂಡಲೇ ಉದ್ಯೋಗ ದೊರೆಯುತ್ತದೆ ಎನ್ನುವ ಭರವಸೆಯನ್ನೇ ಕಳೆದುಕೊಂಡಿರುವ ಯುವಪೀಳಿಗೆ ಕೋಟ್ಯಾಂತರ. ಇವರ ಆಸೆ, ಆಕಾಂಕ್ಷೆ ಮತ್ತು ಕನಸುಗಳನ್ನು ಸಾಕಾರಗೊಳಿಸುವ ಹೊಣೆಗಾರಿಕೆ ಯಾರದು? ಮಾರುಕಟ್ಟೆ, ಹಣಕಾಸು ಬಂಡವಾಳ ಮತ್ತು ಸ್ಪರ್ಧಾತ್ಮಕ ಪ್ರಪಂಚವೇ ಇವೆಲ್ಲವನ್ನೂ ನಿಭಾಯಿಸುತ್ತದೆ ಎಂಬ ನವ ಉದಾರವಾದದ ನೀತಿಯನ್ನು ಅನುಸರಿಸುವ ಭಾರತೀಯ ಪ್ರಭುತ್ವ ಈ ಹೊಣೆಗಾರಿಕೆಯಿಂದ ನುಣುಚಿಕೊಂಡಿರುವುದು ನಿಚ್ಚಳವಾಗಿ ಗೋಚರಿಸುತ್ತಿದೆ.

ಆದರೆ ಜನಸಾಮಾನ್ಯರಿಗೆ ಇದು ಜೀವವಿರೋಧಿ ನೀತಿಯಾಗಿ ಪರಿಣಮಿಸುತ್ತಿದೆ. ಕಳಿಂಗನಗರ, ಪಾಸ್ಕೋ, ಸಿಂಗೂರ್, ನಂದಿಗ್ರಾಮ, ನಂದಗುಡಿ, ಚಾಮಲಾಪುರ, ತದಡಿ ಹೀಗೆ ಅಸಂಖ್ಯಾತ ಉದಾಹರಣೆಗಳು ನಮ್ಮ ಕಣ್ಣಮುಂದಿದ್ದು ರಾಚುತ್ತಿವೆ. ಅಭಿವೃದ್ಧಿಯ ನೀತಿಗಳು ಜನಸಮುದಾಯಗಳ ಭವಿಷ್ಯದ ಏಳಿಗೆಗಾಗಿ ರೂಪುಗೊಳ್ಳಬೇಕೆ ವಿನಹ, ಸಮುದಾಯದ ಹಿತಾಸಕ್ತಿಗಳನ್ನೇ ಬಲಿ ಕೊಟ್ಟು ಉದ್ಯಮಿಗಳ ಲಾಭಕೋರತನ ಮತ್ತು ಬಂಡವಾಳ ದಾಹವನ್ನು ಹೆಚ್ಚಿಸುವ ನಿಟ್ಟಿನಲ್ಲಿ ರೂಪುಗೊಳ್ಳಬಾರದು. ಈ ಗಂಭೀರ ಸತ್ಯವನ್ನು ಆಳ್ವಿಕರು, ಪ್ರಭುತ್ವ ಗ್ರಹಿಸದೆ ಹೋದಲ್ಲಿ ಜನಸಾಮಾನ್ಯರು ಏನು ಮಾಡಬೇಕು ? ಈ ಪ್ರಶ್ನೆಗೆ ಯಾವುದೇ ರಾಜಕೀಯ ಪಕ್ಷ ನಿಷ್ಠೆಯಿಂದ ಉತ್ತರಿಸುವ ಸಾಧ್ಯತೆ ಇದೆಯೇ ? ಗಾಂಧಿ, ಅಂಬೇಡ್ಕರ್, ಫುಲೆ, ಬಸವಣ್ಣ, ಮಾರ್ಕ್ಸ್, ಲೆನಿನ್, ಮಾವೋ ಇವರಾರನ್ನೂ ಉಲ್ಲೇಖಿಸದೆಯೇ ಯೋಚಿಸಿದರೂ ಈ ಪ್ರಶ್ನೆಗೆ ಉತ್ತರ ಸಿಗುವುದು ಪ್ರಸ್ತುತ ಸಂದರ್ಭದಲ್ಲಿ ಕಷ್ಟವೇ.

ಆದರೆ ವಾಸ್ತವ ಪ್ರಪಂಚ ವಿಭಿನ್ನವಾಗಿದೆ. ಭಾರತದಂತಹ ಜಾತಿ ಕೇಂದ್ರಿತ, ವರ್ಗಾಧಾರಿತ ಸಮಾಜದಲ್ಲಿ ಅಭಿವೃದ್ಧಿಯ ಪರಿಕಲ್ಪನೆಯೇ ವಿಭಿನ್ನವಾಗಿರಬೇಕಾಗುತ್ತದೆ. ಆದಿವಾಸಿಗಳು ಎಂದರೆ ಕಾಡು ಮನುಷ್ಯರು, ಸಂಸ್ಕೃತಿ ಇಲ್ಲದವರು ಎಂದು ಭಾವಿಸುವ ಜನ ನಮ್ಮೊಳಗಿನ್ನೂ ಇರುವಾಗ, ಆದಿವಾಸಿಗಳ ಅಸ್ಮಿತೆಯನ್ನು ಇಡೀ ಸಮಾಜ ಒಪ್ಪಿಕೊಳ್ಳುವಂತೆ ಮಾಡುವ ಜವಾಬ್ದಾರಿ ಯಾರದು? ಅವರ ಸಾಮಾಜಿಕ-ಸಾಂಸ್ಕೃತಿಕ ಅಸ್ಮಿತೆಗಳನ್ನು ಅವರ ನೆಲೆಯಲ್ಲೇ ನಿಂತು ವಿಶ್ಲೇಷಿಸಬೇಕಾದವರು ಯಾರು? ಪ್ರಭುತ್ವವೇ, ರಾಜಕೀಯ ಪಕ್ಷಗಳೇ, ಸಾಂಸ್ಕೃತಿಕ ಸಂಘಟನೆಗಳೇ ಅಥವಾ ಆಳುವ ವರ್ಗಗಳೇ? ಈ ಹಂತದಲ್ಲಿ ಪ್ರಭುತ್ವ ಮತ್ತು ಚುನಾಯಿತ ಸರ್ಕಾರಗಳ ನಡುವಿನ ಸೂಕ್ಷ್ಮ ವ್ಯತ್ಯಾಸಗಳು ಪ್ರಮುಖ ಪಾತ್ರವಹಿಸುತ್ತವೆ. ಇಂದು ಭಾರತದ ಅಭಿವೃದ್ಧಿ ಪಥವನ್ನು ನಿರ್ದೇಶಿಸಿ, ಸೂತ್ರ ಧಾರಿಯಂತೆ ನಡೆಸುತ್ತಿರುವುದು ಪ್ರಭುತ್ವವೇ ಹೊರತು, ಕಾಂಗ್ರೆಸ್-ಭಾಜಪ-ಸಿಪಿಎಂ ಪಕ್ಷಗಳಲ್ಲ. ಹಾಗಾಗಿಯೇ ಸಿಂಗೂರಿನಲ್ಲಿ ನಡೆಯುವಂತೆಯೇ ಕಳಿಂಗನಗರದಲ್ಲೂ ನಡೆಯುತ್ತದೆ. ಛತ್ತಿಸ್‌ಘಡದಂತೆಯೇ ಕರ್ನಾಟಕವೂ ವರ್ತಿಸುತ್ತದೆ.

ಆದರೆ ಜನಸಮುದಾಯಗಳಿಗೆ ಆಳ್ವಿಕರ ಈ ವೈವಿಧ್ಯತೆ ನಗಣ್ಯ. ಭಾರತ ಸರ್ಕಾರದ ಸಾಮಾಜಿಕ-ಆರ್ಥಿಕ ನೀತಿಗಳು ವರ್ಗ ಹಿತಾಸಕ್ತಿಗಳನ್ನು ಕಾಪಾಡುವ ನಿಟ್ಟಿನಲ್ಲಿ ರೂಪುಗೊಳ್ಳುತ್ತಿರುವಂತೆಯೇ, ಜಾತಿ ವ್ಯವಸ್ಥೆಯ ಮೂಲಭೂತ ಲಕ್ಷಣಗಳನ್ನು ರಕ್ಷಿಸುವ ನಿಟ್ಟಿನಲ್ಲೂ ಸಾಗುತ್ತಿರುವುದು ಸುಸ್ಪಷ್ಟ. ಹೀಗಿರುವಾಗ ಭಾರತದಲ್ಲಿ ಜಾತಿ ಮಾತ್ರ ಇದೆ, ವರ್ಗಗಳೇ ಇಲ್ಲ ಎಂದು ಪ್ರತಿಪಾದಿಸುವ ಪ್ರತಾಪ್ ಸಿಂಹ ಅವರಂತಹ ಲೇಖಕರು*(ಅದೇ ಲೇಖನ)* ಮಾರ್ಕ್ಸ್‌ವಾದವನ್ನು ಅಲ್ಲಗಳೆಯುವ ನೆಪದಲ್ಲಿ ವಾಸ್ತವತೆಯನ್ನೇ ಅಲ್ಲಗಳೆಯುತ್ತಿದ್ದಾರೆ. ಬಹುಶಃ ತುರ್ತು ಪರಿಸ್ಥಿತಿಯ ನಂತರದ ಪೀಳಿಗೆಗೆ ಪ್ರಭುತ್ವ ಮತ್ತು ಸರ್ಕಾರದ ನಡುವಿನ ಅಂತರ ತಿಳಿದಿರಲಿಕ್ಕಿಲ್ಲ. ಏಕೆಂದರೆ ಕಳೆದ ಮೂರು ದಶಕಗಳಲ್ಲಿ ಎರಡೂ ಒಂದೇ ಹಳಿಯ ಮೇಲೆ ಸಾಗುತ್ತಿವೆ. ಆದರೆ ಸಮಾಜಶಾಸ್ತ್ರಜ್ಞರಿಗೆ, ರಾಜಕೀಯ ವಿಶ್ಲೇಷಕರಿಗೆ ಈ ವ್ಯತ್ಯಾಸದ ಗ್ರಹಿಕೆ ಇರಲೇಬೇಕಾಗುತ್ತದೆ. ವಿಪರ್ಯಾಸವೆಂದರೆ ಈ ಅಭಿಪ್ರಾಯಗಳನ್ನು ವಿಷದಪಡಿಸುವವರನ್ನು ಬುದ್ಧಿಜೀವಿಗಳೆಂದೋ, ಎಡಪಂಥೀಯರೆಂದೋ ಹೀಗಳೆದು ಮೂಲೆಗುಂಪು ಮಾಡಲಾಗುತ್ತಿದೆ. (ಭಿನ್ನರೀತಿಯಲ್ಲಿ ಯೋಚಿಸುವವರು ಬುದ್ಧಿ ಇಲ್ಲದ ಜೀವಿಗಳೇ?)

ಶೂನ್ಯದಲ್ಲಿ ಹುಡುಕಾಟ

ಇಲ್ಲಿ ಒಂದು ರಾಜಕೀಯ-ಸೈದ್ಧಾಂತಿಕ ಶೂನ್ಯತೆ ಸೃಷ್ಟಿಯಾಗಿದೆ. ಈ ಶೂನ್ಯವನ್ನು ತುಂಬುವ ಕೆಲಸ ಆಗಬೇಕಿದೆ. ತಮ್ಮ ಆಯ್ದ ಪ್ರತಿನಿಧಿಗಳ ಬಗ್ಗೆ ಜನಸಮುದಾಯಗಳಲ್ಲಿ ವಿಶ್ವಾಸ ಕುಂದುತ್ತಿರುವಂತೆಲ್ಲಾ ವ್ಯವಸ್ಥೆ ಮತ್ತಷ್ಟು ಭ್ರಷ್ಟವಾಗುತ್ತಿದೆ. ಈ ಭ್ರಷ್ಟ ವ್ಯವಸ್ಥೆಗೆ ಪರ್ಯಾಯವೇನು ? ಅನಂತಮೂರ್ತಿಯವರು ತಮ್ಮ ಪ್ರಜಾವಾಣಿಯ ಲೇಖನದಲ್ಲಿ(9-6-2010) ಹೇಳುವಂತೆ ಲೆನಿನ್-ಮಾವೋವಾದವು ಇಂತಹ ಭ್ರಷ್ಟ ಅಧಿಕಾರಿಯನ್ನು ಕೊಂದು ಹಾಕುವ ಮೂಲಕ ಕ್ರಾಂತಿ ಸಾಧಿಸಲು ಸೂಚಿಸುವುದಿಲ್ಲ. ಇದು

1967ರ ನಕ್ಸಲ್‌ಬಾರಿಯಂತಹ ಜನ ಪರ ಚಳುವಳಿಗಳು ಸಂಭವಿಸುತ್ತಿಲ್ಲ. ನಿರುದ್ಯೋಗ, ಬೆಲೆ ಏರಿಕೆ, ಅಸಮಾನತೆ, ಸಾಮಾಜಿಕ ದೌರ್ಜನ್ಯ, ಸಾಂಸ್ಕೃತಿಕ ದಾಳಿಗಳು ತಾಂಡವಾಡುತ್ತಿದ್ದರೂ ಪ್ರತಿಭಟನಾ ದನಿ ಮಾತ್ರ ಕ್ಷೀಣಿಸುತ್ತಲೇ ಇದೆ. ಜಾಗತೀಕರಣ-ನವ ಉದಾರೀಕರಣ ಚಳುವಳಿಗಳ ಪರಂಪರೆಯನ್ನೇ ನುಂಗಿಹಾಕಿದೆ. ಸಂಘಟಿತ ಹೋರಾಟಗಳು ಯಾವುದೋ ಒಂದು ಹಂತದಲ್ಲಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿವೆ. ಅಥವಾ ಪಕ್ಷ ರಾಜಕೀಯ ಪಕ್ಷಗಳು, ಜಾತಿ ಪ್ರಜ್ಞೆ, ವರ್ಗ ಹಿತಾಸಕ್ತಿ ಮತ್ತು ಹಣಕಾಸು ಬಂಡವಾಳ ಈ ಸಂಘಟನೆಗಳ ಹೋರಾಟದ ಸಾಮರ್ಥ್ಯವನ್ನೇ ಆಪೋಷನ ತೆಗೆದುಕೊಳ್ಳುತ್ತಿವೆ

ಮಾವೋವಾದವನ್ನು ಸರಳೀಕರಿಸುವ ಪ್ರವೃತ್ತಿಯಷ್ಟೆ. ಬದಲಾಗಿ ಪ್ರಸ್ತುತ ವ್ಯವಸ್ಥೆಗೆ ಪರ್ಯಾಯವಾದ ಒಂದು ಸಮತಾಸಮಾಜವನ್ನು ನಿರ್ಮಿಸುವ, ನೈಜ ಪ್ರಜಾತಂತ್ರವನ್ನು ಅನುಸರಿಸುವ ಜನಮುಖೀ ಸಮಾಜವನ್ನು ನಿರ್ಮಿಸುವುದು ಯಾವುದೇ ಕ್ರಾಂತಿಯ ಕಾಳಜಿಯಾಗಿರುತ್ತದೆ. ಮಾವೋ, ಲೆನಿನ್ ಅವರ ಮಾರ್ಗದಲ್ಲಿ ಸಂಭವಿಸಿರಬಹುದಾದ ಅನೇಕ ತಪ್ಪು ಒಪ್ಪುಗಳನ್ನು ವಿಮರ್ಶಿಸುತ್ತಲೇ ಈ ಕ್ರಾಂತಿಕಾರಿ ಹಾದಿಯ ಸಾರ್ಥಕತೆಯನ್ನು ಕಂಡುಕೊಳ್ಳುವುದು ಸಾಧ್ಯ ಎಂದು ಕ್ಯೂಬಾ ನಿರೂಪಿಸಿಲ್ಲವೇ ? ಅದಕ್ಕೆ ಅವಶ್ಯವಾಗಿರುವುದು ರಾಜಕೀಯ ಶೂನ್ಯವನ್ನು ತುಂಬುವ ಶಕ್ತಿ ಮತ್ತು ಸಂಘಟನಾತ್ಮಕ ಚಳುವಳಿ.

1967ರಲ್ಲಿ ಒಂದು ಕುಗ್ರಾಮದಲ್ಲಿ ಭುಗಿಲೆದ್ದ ನಕ್ಸಲ್‌ಬಾರಿ ಚಳುವಳಿ ಇಂತಹ ಸನ್ನಿವೇಶದಲ್ಲೇ ಉದ್ಭವಿಸಿತ್ತು. ಇಂತಹ ಶೂನ್ಯವನ್ನು ತುಂಬುವ ಉದ್ದೇಶದಿಂದಲೇ ಉದ್ಭವಿಸಿತ್ತು. ಆದರೆ ಭಾರತೀಯ ಸಂದರ್ಭಗಳಿಗನುಸಾರವಾಗಿ ತಮ್ಮ ಹೋರಾಟದ ಮಾರ್ಗಗಳನ್ನು ರೂಪಿಸುವಲ್ಲಿ ಉಂಟಾದ ವ್ಯತ್ಯಯಗಳು ಇಡೀ ಚಳುವಳಿಯ ದಿಕ್ಕು ತಪ್ಪಿಸಿದ್ದೂ ಅಷ್ಟೇಸತ್ಯ. ಕನುಸನ್ಯಾಲ್, ಚಾರುಮಜುಂದಾರ್ ಇಬ್ಬರನ್ನು ಬಿಟ್ಟರೆ ನಿಜವಾದ ನಕ್ಸಲ್‌ವಾದಿ ಯಾರು ಹೊರಹೊಮ್ಮಿದ್ದಾರೆ ಎಂದು ಪ್ರಶ್ನಿಸುವ ಪ್ರತಾಪ್ ಸಿಂಹ *(ಅದೇ ಲೇಖನ)* ಒಂದೆಡೆ ಈ ನಾಯಕರು ಪ್ರತಿಪಾದಿಸುವ ಸಿದ್ಧಾಂತವನ್ನೇ ಅಲ್ಲಗಳೆಯುತ್ತಾ ಮತ್ತೊಂದೆಡೆ ಅವರನ್ನು ವೈಭವೀಕರಿಸುವುದು ಭಾರತೀಯ ಪ್ರಜಾತಂತ್ರದ ಲಕ್ಷಣವಷ್ಟೆ. ಈಲಕ್ಷಣವೇ ನಕ್ಸಲ್‌ಚಳುವಳಿಗೂ, ಇತರ ಪ್ರಗತಿಪರ ಚಳುವಳಿಗೂ ಮಾರಕವಾಗಿದೆ ಎಂದು ಹೇಳಬಹುದು.

ಆದರೆ ಈಗ 1967ರ ನಕ್ಸಲ್‌ಬಾರಿಯಂತಹ ಜನಪರ ಚಳುವಳಿಗಳು ಸಂಭವಿಸುತ್ತಿಲ್ಲ. ನಿರುದ್ಯೋಗ, ಬೆಲೆ ಏರಿಕೆ, ಅಸಮಾನತೆ, ಸಾಮಾಜಿಕ ದೌರ್ಜನ್ಯ, ಸಾಂಸ್ಕೃತಿಕ ದಾಳಿಗಳು ತಾಂಡವಾಡುತ್ತಿದ್ದರೂ ಪ್ರತಿಭಟನಾ ದನಿ ಮಾತ್ರ ಕ್ಷೀಣಿಸುತ್ತಲೇ ಇದೆ. ಜಾಗತೀಕರಣ-ನವ ಉದಾರೀಕರಣ ಚಳುವಳಿಗಳ ಪರಂಪರೆಯನ್ನೇ ನುಂಗಿಹಾಕಿದೆ. ಸಂಘಟಿತ ಹೋರಾಟಗಳು ಯಾವುದೋ ಒಂದು ಹಂತದಲ್ಲಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿವೆ. ಅಥವಾ ಪಕ್ಷ ರಾಜಕೀಯ ಪಕ್ಷಗಳು, ಜಾತಿ ಪ್ರಜ್ಞೆ, ವರ್ಗ ಹಿತಾಸಕ್ತಿ ಮತ್ತು ಹಣಕಾಸು ಬಂಡವಾಳ ಈ ಸಂಘಟನೆಗಳ ಹೋರಾಟದ ಸಾಮರ್ಥ್ಯವನ್ನೇ ಆಪೋಷನ ತೆಗೆದುಕೊಳ್ಳುತ್ತಿವೆ. ಈ ಸಂದರ್ಭದಲ್ಲಿ ತಮ್ಮ ಅರಣ್ಯರೋದನವನ್ನು ಯಾರೂ ಕೇಳುತ್ತಿಲ್ಲವಲ್ಲಾ ಎಂದು ಹಪಹಪಿಸುತ್ತಿರುವ ಆದಿವಾಸಿಗಳ, ಶೋಷಿತ ಸಮುದಾಯಗಳ ಆಕ್ರಂದನಕ್ಕೆ, ಇದೋ ನಾವು ನಿಮ್ಮೊಡನೆ ಇದ್ದೇವೆ ಎಂದು ಹೇಳುತ್ತಿರುವವರು ಯಾರು ? ಯಾವುದೇ ಸಾಮಾಜಿಕ, ಧಾರ್ಮಿಕ, ಮತೀಯ, ಜಾತೀಯ ಲೇಪನಗಳಿಲ್ಲದೆ ಒಂದು ಪ್ರಜಾಸತ್ತಾತ್ಮಕ ಸಮಾಜಕ್ಕಾಗಿ ಹೋರಾಡಲು ಸ್ಪಂದಿಸುತ್ತಿರುವವರಾರು ? ಸಂಸದೀಯ ಎಡಪಕ್ಷಗಳೇ, ಕಾಂಗ್ರೆಸ್-ಭಾಜಪದಂತಹ ಪಕ್ಷಗಳೇ, ತೃತೀಯ ರಂಗವೇ ಅಥವಾ ಮಾವೋವಾದಿಗಳೇ ?

ಒಂದು ರೀತಿಯಲ್ಲಿ ಮಾವೋವಾದಿಗಳು ಮಾತ್ರ ಈ ಸಮುಹಾಯಗಳ ಕೂಗಿಗೆ ಸ್ಪಂದಿಸುತ್ತಿದ್ದಾರೆ. ಮಾವೋವಾದಿಗಳ ಚಳುವಳಿ(?)ಯಲ್ಲಿ ವಾಸ್ತವವಾಗಿ ಮಾವೋವಾದದ ತಿರುಳು ಇದೆಯೋ ಇಲ್ಲವೋ ಚರ್ಚಾಸ್ಪದ. ಆದರೆ ಪ್ರಸ್ತುತ ಮಾವೋವಾದಿಗಳಲ್ಲಿ 1967ರ

ನಕ್ಸಲ್‌ಬಾರಿಯ ಕಿಡಿಗಳು ಬತ್ತಿಹೋಗಿರುವುದು ಮಾತ್ರ ಸತ್ಯ. ಆದರೂ ಆದಿವಾಸಿಗಳು ಈ ಹಿಂಸಾತ್ಮಕ ಹೋರಾಟದ ಮಾರ್ಗಕ್ಕೆ ಏಕೆ ಬಲಿಯಾಗುತ್ತಿದ್ದಾರೆ. ಸೈದ್ಧಾಂತಿಕ ಬದ್ಧತೆಯಿಂದಲೇ, ರಾಜಕೀಯ ಅನಿವಾರ್ಯತೆಯಿಂದಲೇ ಅಥವಾ ತಮ್ಮ ಅಸ್ತಿತ್ವ–ಅಸ್ಮಿತೆಯ ಉಳಿವಿನ ದೃಷ್ಟಿಯಿಂದಲೇ? ತಮ್ಮ ಮೂಲಭೂತ ಹಕ್ಕುಗಳ ರಕ್ಷಣೆಗಾಗಿ, ತಮ್ಮ ಅಸ್ತಿತ್ವದ ರಕ್ಷಣೆಗಾಗಿ ಹೋರಾಡುವ ಯಾವುದೇ ಜನಸಮುದಾಯಗಳಿಗೆ ಹಿಂಸೆ–ಅಹಿಂಸೆ ಮಹತ್ವದ ಪ್ರಶ್ನೆಗಳಾಗುವುದಿಲ್ಲ ಎಂಬ ಅಂಶ ಚರಿತ್ರೆಯಲ್ಲಿ ನಿರೂಪಿತವಾಗಿದೆ. ಇಡೀ ದೇಶದ ಯುವ ಪೀಳಿಗೆ ಗಾಂಧೀಜಿಯವರನ್ನು ಹಿಂಬಾಲಿಸುತ್ತಿದ್ದಾಗ, ಭಗತ್ ಸಿಂಗ್ ಮತ್ತು ಸಹಚರರು ಹಿಂಸೆಯ ಮಾರ್ಗವನ್ನು ಆಯ್ದುಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಇಂತಹ ಸನ್ನಿವೇಶದಲ್ಲಿ ಸಂಭವಿಸಬಹುದಾದ ದಾಂತೆವಾಡ, ಕರಗ್‌ಪುರ ಘಟನೆಗಳನ್ನು ಹೇಗೆ ವ್ಯಾಖ್ಯಾನಿಸಬಹುದು ? ಗುಜರಾತ್, ಸೂರತ್, ಮುಂಬೈ ಘಟನೆಗಳಿಗೆ ಹೇಗೆ ಸಾಮಾಜಿಕ ಸನ್ನಿವೇಶಗಳು ಪೂರಕವಾಗಿದ್ದವೋ, ಈ ಭೀಕರ ಹತ್ಯೆಗಳಿಗೂ ಮತ್ತೊಂದು ರೀತಿಯ ಸನ್ನಿವೇಶಗಳು ಪೂರಕವಾಗಿರುತ್ತವೆ. ಈ ಸನ್ನಿವೇಶಗಳನ್ನು ಸೃಷ್ಟಿಸಿದವರಾರು? ಹೇಗೆ ಸೃಷ್ಟಿಯಾಯಿತು? ಪರಿಹಾರವೇನು? ಈ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುವಾಗ ಕೇವಲ ಹಿಂಸೆ–ಅಹಿಂಸೆ–ಪ್ರತಿಹಿಂಸೆಗಳ ಸುತ್ತ ಚರ್ಚೆ ನಡೆಸುವುದು ವ್ಯರ್ಥಾಲಾಪವಾಗುವುದರಲ್ಲಿ ಸಂಶಯವೇ ಇಲ್ಲ. ಕೋಮುವಾದದಲ್ಲಿ ಹೆಚ್ಚು ಜನ ಮೃತರಾಗಿದ್ದಾರೋ, ಭಯೋತ್ಪಾದನಾ ದಾಳಿಯಲ್ಲಿ ಹೆಚ್ಚು ಜನ ಬಲಿಯಾಗಿದ್ದಾರೋ, ಮೋದಿ ಹೆಚ್ಚು ಜನರನ್ನು ಕೊಂದಿದ್ದಾರೋ, ನಕ್ಸಲರು ಹೆಚ್ಚು ಜನರನ್ನು ಕೊಂದಿದ್ದಾರೋ ಎಂಬ ಪ್ರಶ್ನೆಗಳು ಈ ಸಂದರ್ಭದಲ್ಲಿ ಹಾಸ್ಯಾಸ್ಪದವಾಗುತ್ತದೆ. ಸ್ಟಾಲಿನ್ ಆಡಳಿತದಲ್ಲಿ ಅತಿ ಹೆಚ್ಚು ಹತ್ಯೆಗಳು ಸಂಭವಿಸಿವೆ ಎಂದ ಮಾತ್ರಕ್ಕೆ ಮಾರ್ಕ್ಸ್‌ವಾದವೇ ಹಿಂಸಾತ್ಮಕ ವೆಂದು ಹೇಳಲಾಗುವುದಿಲ್ಲ. ಆದರೆ ಪ್ರತಾಪ್ ಸಿಂಹ ಈ ಅಭಿಪ್ರಾಯ ತಾಳುತ್ತಾರೆ*(ಅದೇ ಲೇಖನ)* *"ಎಲ್ಲೆಲ್ಲಿ ಬಡತನ, ಅನ್ಯಾಯ, ನಿರುದ್ಯೋಗ ಇರುತ್ತದೆಯೋ ಅಲ್ಲಿ ಕಮ್ಯುನಿಸಂ ಮತ್ತು ಕಮ್ಯುನಿಸ್ಟರಿರುತ್ತಾರೆ, ಎಲ್ಲೆಲ್ಲಿ ಕಮ್ಯುನಿಸ್ಟರಿರುತ್ತಾರೊ ಅಲ್ಲಿ ಬಡತನ ಅನ್ಯಾಯ, ನಿರುದ್ಯೋಗ ಇದ್ದೇ ಇರುತ್ತದೆ "* ಎಂಬ ಪ್ರತಾಪ್ ಸಿಂಹರ ವಿತಂಡವಾದ ಈ ನಿಟ್ಟಿನಲ್ಲೇ ಸಾಗುತ್ತದೆ. ಬಹುಶಃ ಸಿಂಹ ಅವರು ಕ್ಯೂಬಾ, ವಿಯಟ್ನಾಮ್, ಲೆನಿನ್ ಕಾಲದ ಸೋವಿಯತ್ ದೇಶವನ್ನು ಕುರಿತು ಅಧ್ಯಯನ ಮಾಡಿಲ್ಲವೆನಿಸುತ್ತದೆ.

ಮತೀಯವಾದಿಗಳಿಗೂ, ಕೋಮುವಾದಿಗಳಿಗೂ, ಭಯೋತ್ಪಾದಕರಿಗೂ ಇರುವ ಸಾಮ್ಯತೆ ಎಂದರೆ ಹಿಂಸಾತ್ಮಕ ಧೋರಣೆ ಮತ್ತು ಮನುಜ ಜೀವದ ಬಗ್ಗೆ ನಿಕೃಷ್ಟ ಕಾಳಜಿ. ಈಗ ಮಾವೋವಾದಿಗಳಲ್ಲೂ ಇದೇ ಪ್ರವೃತ್ತಿ ಕಂಡುಬರುತ್ತಿದೆ. ದಾಂತೆವಾಡ ಮತ್ತು ಕರಗ್‌ಪುರಗಳು ಇದನ್ನೇ ತೋರುತ್ತವೆ. ದಾಂತೆವಾಡದ ಎರಡು ಪ್ರಕರಣಗಳಲ್ಲಿ, ಕರಗ್‌ಪುರದಲ್ಲಿ, ಗುಜರಾತ್, ಮುಂಬೈ, ಸೂರತ್‌ಗಳಲ್ಲಿ ಮಡಿದ ಅಮಾಯಕ ಜನತೆಗೆ ತಾವು ಯಾರಿಂದ ಹತರಾಗುತ್ತಿದ್ದೇವೆ ಎಂಬಪರಿವೆ ಇರಲಿಕ್ಕಿಲ್ಲ. ಕಾಳಜಿಯೂ ಇರಲಿಕ್ಕಿಲ್ಲ. ಆದರೆ ಈ ಎಲ್ಲಾ ಘಟನೆಗಳಲ್ಲಿ ಹತ್ಯೆ ಉಂಟಾದದ್ದು ಮಾನವನ ಅಚಾತುರ್ಯದಿಂದ ಅಥವಾ ದುಸ್ಸಾಹಸದಿಂದ ಅಥವಾ ಹಿಂಸಾತ್ಮಕ ಮನೋಭಾವ ದಿಂದ. ಇಲ್ಲಿ ಅಪರಾಧಿ ಯಾರು?

ದಾಂತೆವಾಡ, ಛತ್ತಿಸ್‌ಘಡ, ಸಲ್ವಾಜುಡಂ ಮುಂತಾದ ವಿದ್ಯಮಾನಗಳು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಾಧ್ಯವೇ ಎಂಬ ಮೂರ್ಖ ಪ್ರಶ್ನೆ ಕಾಡುವುದಾದರೆ, ಅಭಿವೃದ್ಧಿಯ ಹೆಸರಿನಲ್ಲಿ ದೇಶದ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಿರುವ ಬಂಡವಾಳ ಶಾಹಿ–ಕಾರ್ಪೋರೇಟ್ ಒಕ್ಕೂಟದ ಪ್ರಗತಿ ಪಥ ಸಾಧುವೇ ಎಂಬ ಪ್ರಶ್ನೆಯೂ ಮೂಡ ಬೇಕಾದ್ದೇ ಅಲ್ಲವೇ? ಈ ಸಮಸ್ಯೆಗಳ ನಿವಾರಣೆಗೆ ಹಿಂಸಾತ್ಮಕ ಮಾರ್ಗವೇ ಪರಿಹಾರ ಎಂದು ಭಾವಿಸುವವರಿಗೆ, ಸರ್ಕಾರದ ಉತ್ತರ ತನ್ನ ಸಾಮಾಜಿಕ–ಆರ್ಥಿಕ ನೀತಿಗಳಲ್ಲಿರಬೇಕೇ ಹೊರತು, ಬಂದೂಕಿನ ನಳಿಕೆಗಳಲ್ಲಲ್ಲ.

ಪ್ರಭುತ್ವದ ದೃಷ್ಟಿಯಲ್ಲಿ ತನ್ನ ಪ್ರಗತಿಪಥಕ್ಕೆ ಅಡ್ಡಿ ಬರುವ ಯಾರೇ ಆದರೂ ಅಪರಾಧಿಗಳೇ. ಆದರೆ ಜನಸಾಮಾನ್ಯರ ದೃಷ್ಟಿಯಲ್ಲಿ ತಮ್ಮ ಭವಿಷ್ಯವನ್ನೇ ಅಂಧಕಾರಕ್ಕೆ ದೂಡುವ ಪ್ರಭುತ್ವದ ನೀತಿಗಳೇ ಅಪರಾಧಿ ಸ್ಥಾನದಲ್ಲಿ ನಿಲ್ಲುತ್ತವೆ. ಇಲ್ಲಿ ಪ್ರಗತಿ ಯಾರಿಗಾಗಿ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ವಿಪರ್ಯಾಸವೆಂದರೆ ನಮ್ಮ ಮಾಧ್ಯಮ ಪಂಡಿತರು ಈ ಪ್ರಶ್ನೆಯನ್ನು ಎಂದಿಗೂ ಚರ್ಚೆಗೊಳಪಡಿಸುವುದಿಲ್ಲ. ಮಾವೋವಾದಿಗಳ ಹಿಂಸೆಸರಿಯೋ; ಪ್ರಭುತ್ವದ ಪ್ರತಿಹಿಂಸೆ ಸರಿಯೋ ಎಂಬ ದ್ವಿಮುಖ ಪ್ರಶ್ನೆಗಳನ್ನೇ ದಿನವಿಡೀ ಬಿತ್ತರಿಸುವ ಸಂವಹನ ಮಾಧ್ಯಮಗಳು ಚರ್ಚೆಗೆ ಆಹ್ವಾನಿಸುವುದು ಯಾರನ್ನು ? ಒಂದು ಬಣ ಪ್ರಭುತ್ವವನ್ನು ಪ್ರತಿನಿಧಿಸಿದರೆ ಮತ್ತೊಂದು ಬಣ ಪ್ರಭುತ್ವವನ್ನು ತಾತ್ವಿಕವಾಗಿ ಒಪ್ಪಿಕೊಂಡೇ ರಾಜಿ ಸೂತ್ರಗಳನ್ನು ಅರಸುವ ಬುದ್ಧಿಜೀವಿಗಳನ್ನು ಅಥವಾ ರಾಜಕೀಯ ಪಂಡಿತರನ್ನು. ದೇಶದ ಅಭಿವೃದ್ಧಿ–ಪ್ರಗತಿಯನ್ನು ಕುರಿತ ಸಂವಾದದ ಗುತ್ತಿಗೆ ಪಡೆದಿರುವ ಕೆಲವೇ ವಾಕ್ ಪಟುಗಳು ತಮ್ಮ ಯೋಚನಾ ಲಹರಿಯನ್ನು ಪುಂಖಾನುಪುಂಖವಾಗಿ ಹರಿಯಬಿಡುತ್ತಾರೆ. ಆದರೆ ಅಂತಿಮ ನಿರ್ಧಾರ ಮಾತ್ರ ಪ್ರಶ್ನೆಯಾಗಿಯೇ ಉಳಿಯುತ್ತದೆ ?

ಹಿಂಸೆ–ಪ್ರತಿಹಿಂಸೆಯ ಚೌಕಟ್ಟಿನಿಂದ ಹೊರತಾದ ಪರಿಹಾರ ಸಾಧ್ಯವೇ ಇಲ್ಲವೇನೋ ಎನ್ನುವ ಸನ್ನಿವೇಶವನ್ನು ಮಾಧ್ಯಮಗಳು–ರಾಜಕೀಯ ಪಕ್ಷಗಳು ಸೃಷ್ಟಿಸಿವೆ. ವಿಮಾನ ದುರಂತದಲ್ಲಿ ಕಷ್ಟ ಪಟ್ಟು ಬದುಕುಳಿದ ವ್ಯಕ್ತಿಗಳನ್ನು ಆಸ್ಪತ್ರೆಯಲ್ಲೇ ಸಂದರ್ಶನ ಮಾಡುವ ಮಾಧ್ಯಮಗಳು ಪ್ರಭುತ್ವದ ಅಭಿವೃದ್ಧಿ ಪಥದಲ್ಲಿ ನಿರ್ನಾಮವಾಗುತ್ತಿರುವ ಜನಸಮುದಾಯಗಳನ್ನೇಕೆ ಸಂದರ್ಶಿಸುವುದಿಲ್ಲ ಎಂಬ ಪ್ರಶ್ನೆಗೆ ಉತ್ತರ ಬೇಕಿದೆ. ಹಾಗೆ ಸಂದರ್ಶಿಸುವ ಅರುಂಧತಿ ರಾಯ್ ಪ್ರಭುತ್ವ ವಿರೋಧಿ ಎಂದು ಗುರುತಿಸಲ್ಪಡುತ್ತಾರೆ. ಒಂದು ವೇಳೆ ಮಾವೋವಾದಿಗಳನ್ನು ಸಂಪೂರ್ಣವಾಗಿ ನಿರ್ನಾಮ ಮಾಡಿದರೆ ಎಲ್ಲ ಸಮಸ್ಯೆಗಳೂ ಪರಿಹಾರವಾಗುತ್ತವೆಯೇ? ಕಾರ್ಪೋರೇಟ್ ಉದ್ಯಮಿಗಳ ಹಾದಿ ಸುಗಮವಾಗಬಹುದು ಆದರೆ ಆದಿವಾಸಿಗಳ ಬದುಕು ಹಸನಾಗುವುದೇ? ಆದಿವಾಸಿಗಳ, ಶೋಷಿತ ಸಮುದಾಯಗಳ ಮೂಲ ಸಮಸ್ಯೆಗಳಾದರೂ ಏನು ಎಂದು ಸರ್ಕಾರ ಯೋಚಿಸಿರುವುದೇ? ಇದು ಪ್ರಭುತ್ವದ ಪ್ರತಿನಿಧಿಗಳು ಚಿಂತಿಸಬೇಕಾದ ವಿಚಾರ.

ಭವಿಷ್ಯದ ಹಾದಿ

ಭಾರತೀಯರನ್ನು ಪ್ರತಿನಿಧಿಸುವ ಆಳ್ವಿಕರು ಅನುಸರಿಸುವ ನೀತಿಗಳು ಪ್ರಜೆಗಳಿಗೆ ಸ್ವೀಕಾರಾರ್ಹವಾಗಿರಬೇಕೇ ಹೊರತು, ಪ್ರಾತಿನಿಧಿಕ ಸಂಘಟನೆಗಳಿಗಲ್ಲ. ಹಾಗಾಗಿ ನಕ್ಸಲ್ ಸಮಸ್ಯೆಯನ್ನು ಪರಿವಾರಗಳ ಚೌಕಟ್ಟಿನಲ್ಲಿ ನೋಡುವುದು ಇಡೀ ಸಮಸ್ಯೆಯನ್ನು ಹಗುರಗೊಳಿಸಿದಂತಾಗುತ್ತದೆ. ಪ್ರಜಾತಂತ್ರದಲ್ಲಿ ನಂಬಿಕೆ ಇರುವ ಯಾವುದೇ ವ್ಯಕ್ತಿಯೂ ಮಾವೋವಾದಿಗಳ ಹಿಂಸಾತ್ಮಕ ಮಾರ್ಗವನ್ನು ಒಪ್ಪಲಾಗುವುದಿಲ್ಲ. ಆದರೆ ಆದಿವಾಸಿ ಸಮುದಾಯಗಳು ಏಕೆ ಅವರನ್ನು ಹಿಂಬಾಲಿಸುತ್ತಿವೆ ? ಈ ಪ್ರಶ್ನೆಗೂ ಉತ್ತರ ಕಂಡುಕೊಳ್ಳಬೇಕಲ್ಲವೇ? ಅರುಂಧತಿ ರಾಯ್ ಈ ಪ್ರಶ್ನೆಯನ್ನು ಸೂಕ್ಷ್ಮವಾಗಿ ಬಿಂಬಿಸಿದ್ದಾರೆಯೇ ಹೊರತು, ಸ್ಪಷ್ಟ ಚಿತ್ರಣನೀಡಿಲ್ಲ. ಆದರೂ ಪ್ರಜ್ಞಾವಂತ ಭಾರತೀಯ ಜನತೆ ಈ ಪ್ರಶ್ನೆಗೆ ಪರಿಹಾರಕಂಡು ಕೊಳ್ಳಲೇಬೇಕಾಗುತ್ತದೆ.

ದಾಂತೆವಾಡ, ಛತ್ತಿಸ್‌ಘಡ, ಸಲ್ವಾಜುಡಂ ಮುಂತಾದ ವಿದ್ಯಮಾನಗಳು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಾಧ್ಯವೇ ಎಂಬ ಮೂರ್ಖ ಪ್ರಶ್ನೆ ಕಾಡುವುದಾದರೆ, ಅಭಿವೃದ್ಧಿಯ ಹೆಸರಿನಲ್ಲಿ ದೇಶದ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಿರುವ ಬಂಡವಾಳಶಾಹಿ–ಕಾರ್ಪೋರೇಟ್ ಒಕ್ಕೂಟದ ಪ್ರಗತಿ ಪಥ ಸಾಧುವೇ ಎಂಬ ಪ್ರಶ್ನೆಯೂ ಮೂಡ ಬೇಕಾದ್ದೇ ಅಲ್ಲವೇ? ಈ ಸಮಸ್ಯೆಗಳ ನಿವಾರಣೆಗೆ ಹಿಂಸಾತ್ಮಕ ಮಾರ್ಗವೇ ಪರಿಹಾರ ಎಂದು ಭಾವಿಸುವವರಿಗೆ, ಸರ್ಕಾರದ ಉತ್ತರ ತನ್ನ ಸಾಮಾಜಿಕ–ಆರ್ಥಿಕ ನೀತಿಗಳಲ್ಲಿರಬೇಕೇ ಹೊರತು, ಬಂದೂಕಿನ ನಳಿಕೆಗಳಲ್ಲಲ್ಲ. ಭಾರತದ ಬಹುತೇಕ ಜನಪರಚಳುವಳಿಗಳು ಅಹಿಂಸಾತ್ಮಕವಾಗಿಯೇ ಇವೆ. ರೈತರು, ದಲಿತರು, ಮಹಿಳೆಯರು, ಅಲ್ಪ ಸಂಖ್ಯಾತರು ತಮ್ಮ ಹಕ್ಕುಗಳ ಪ್ರತಿಪಾದನೆಗೆ ಎಂದಿಗೂ ಹಿಂಸಾತ್ಮಕ ಮಾರ್ಗಅನುಸರಿಸಿಲ್ಲ. ಆದರೆ ಈ ಜನಸಮುದಾಯಗಳ ಸಮಸ್ಯೆಗಳ ಪಾಡೇನು? ಸರ್ಕಾರ ಎಂದಾದರೂ ಯೋಚಿಸಿದೆಯೇ? ರಾಜಸ್ತಾನದ ಗುಜ್ಜರ್ ಹೋರಾಟವನ್ನೇ ಗಮನಿಸಿದರೆ, ಅವರ ಶಾಂತಿಯುತ ಹೋರಾಟ ಎಷ್ಟು ಫಲಪ್ರದವಾಯಿತು ಎಂದು ಗ್ರಹಿಸಬಹುದು.

ಹಾಗೆಂದ ಮಾತ್ರಕ್ಕೆ ಹಿಂಸಾತ್ಮಕ ಮಾರ್ಗದಿಂದಲೇ ಎಲ್ಲ ಸಮಸ್ಯೆಗಳು ಪರಿಹಾರವಾಗುತ್ತವೆ ಎಂದರ್ಥವಲ್ಲ. ಮಾವೋವಾದಿಗಳ ಮಾರ್ಗದಲ್ಲಿ ನಡೆದು ಆದಿವಾಸಿಗಳು ನಷ್ಟ ಅನುಭವಿಸಿರುವುದೇ ಹೆಚ್ಚು. ಇತ್ತ ದರಿ ಅತ್ತ ಪುಲಿ ಎಂಬ ಸನ್ನಿವೇಶದಲ್ಲಿ ಸಿಲುಕಿದ್ದಾರೆ. ಆದರೆ ಅವರ ಹೋರಾಟಗಳಿಗೆ ಪರ್ಯಾಯ ಒದಗಿಸುವವರಾರು? ಅರಣ್ಯ ರಕ್ಷಣೆ – ಆದಿವಾಸಿಗಳ ಜೀವರಕ್ಷಣೆಯ ಹೋರಾಟದಲ್ಲಿ ಸೃಷ್ಟಿಯಾಗಿರುವ ಶೂನ್ಯತೆಯನ್ನು ತುಂಬುವವರಾರು ? ಹಿಂಸೆ–ಪ್ರತಿಹಿಂಸೆಯಿಂದ ಯಾವುದೇ ಸಮಸ್ಯೆ ಬಗೆಹರಿಯಲಾರದು ಆದರೆ ಶಾಂತಿಯುತ ಹೋರಾಟ

(41ನೇ ಪುಟಕ್ಕೆ)

ಜನಗಣತಿ: ಭಾಷೆಯನ್ನು ಹೊರಗಿಟ್ಟು ಸಾಧಿಸುವುದಾದರೂ ಏನನ್ನು?

ಮೇಟಿ ಮಲ್ಲಿಕಾರ್ಜುನ

"Language is the most massive and inclusive art we know"

- Edward Sapir

ಜಾತಿಯಾಧಿರಿತ ಜನಗಣತಿಯ ಮಹತ್ವವನ್ನು ಹಲವು ಚಿಂತಕರು ಎತ್ತಿಹಿಡಿದಿದ್ದಾರೆ. ಈ ಕುರಿತು ನನ್ನ ಅಭಿಪ್ರಾಯಗಳೇನು ಎಂಬುದನ್ನು ಚರ್ಚಿಸುವುದು ಈ ಲೇಖನದ ಗುರಿಯಲ್ಲ. ಬದಲಾಗಿ ಭಾಷೆಯನ್ನು ಹೊರಗಿಟ್ಟು ಜನಗಣತಿ ಸಾಧಿಸುವುದಾದರೇನೂ ಹಾಗೂ ಇಂತಹ ನಿಲುವು ಹುಟ್ಟಿಸಬಹುದಾದ ಶೈಕ್ಷಣಿಕ-ಸಾಂಸ್ಕೃತಿಕ ಇಕ್ಕಟ್ಟು ಮತ್ತು ಕೊರತೆಗಳಾವವು ಎಂಬುದನ್ನು ಬಿಡಿಸಿ ನೋಡುವ ಪ್ರಯತ್ನ ಮಾತ್ರ. 1961ರ ಜನಗಣತಿ ಪ್ರಕಾರ, 1652 ಭಾಷೆಗಳು ಭಾರತವಾಸಿಗಳ ತಾಯ್ನುಡಿಗಳಾಗಿದ್ದವು. ಅವುಗಳನ್ನು ನಾಲ್ಕನೂರು ಪ್ರಧಾನ ನುಡಿಗಳನ್ನಾಗಿ ಗುರುತಿಸಿ, ಬೇರೆ ಬೇರೆ ನುಡಿಕುಲಕ್ಕೆ ಅನುಗುಣವಾಗಿ, ಈ ಎಲ್ಲ ನುಡಿಗಳನ್ನು ಇಂಡೋ-ಆರ್ಯನ್, ಡ್ರಾವಿಡಿಯನ್, ಆಸ್ಟ್ರಿಕ್ ಹಾಗೂ ಟಿಬೆಟೋ-ಬರ್ಮನ್ (Indo-Aryan, Dravidian, Austric, and Tibeto-Burman) ಎಂದು ನಾಲ್ಕು ನುಡಿಕುಟುಂಬಗಳನ್ನಾಗಿ ವರ್ಗೀಕರಿಸಿದ್ದಾರೆ. ಕಾಲಕ್ರಮೇಣ, ಜನಗಣತಿಯಲ್ಲಿ ಹೆಸರಿಸಿದಂತೆ, ಈ ತಾಯ್ನುಡಿಗಳ ಮೌಲ್ಯವನ್ನು ಗುರುತಿಸುವ/ಅರಿಯುವ ಪ್ರಯತ್ನಗಳು ನಡೆದವು. ಇಂತಹ ಭಾಷಿಕ ವೈವಿಧ್ಯತೆಯನ್ನು ಮುನ್ನೆಲೆಗೆ ತರುವ ಪ್ರಕ್ರಿಯೆಗೆ ಸಾಕಷ್ಟು ಅಡ್ಡಿ-ಆತಂಕಗಳೂ ಎದುರಾದವು ಎಂಬುದು ಗಮನಾರ್ಹ.

ಎರಡುಸಾವಿರದ ಒಂದರ ಜನಗಣತಿಯಲ್ಲಿ ಸಾಮಾಜಿಕ-ಸಾಂಸ್ಕೃತಿಕ ಮಾಹಿತಿಯನ್ನೂ ದಾಖಲಿಸುವ ಪ್ರಯತ್ನಗಳು ನಡೆದವು. ಇದರಲ್ಲಿ ಮುಖ್ಯವಾಗಿ, ತಾಯ್ನುಡಿಗಳ ಹೆಸರು ಹಾಗೂ ಬಾತಮಿದಾರನಿಗೆ ಗೊತ್ತಿರುವ ಇನ್ನಾವುದೇ ಬೇರೆ ಎರಡು ಭಾಷೆಗಳ ಹೆಸರುಗಳನ್ನು ಸೂಚಿಸಬೇಕಿತ್ತು. ಅಂತಹ ಭಾಷೆಗಳಲ್ಲಿ ಅವನಿ/ಳಿಗೆ ಎಷ್ಟೊಂದು ಪ್ರಾವಿಣ್ಯತೆಯಿದೆ ಎಂಬುದನ್ನು ಅವನು/ಳೇ ನಿರ್ಧರಿಸಬೇಕಿತ್ತು. ಈ ಬಗೆಯ ದಾಖಲೀಕರಣ ಮಹತ್ವದೆಂದೇ ಹೇಳಬೇಕು. ಆದರೆ ಆ ಎರಡು ಭಾಷೆಗಳಲ್ಲಿ ಒಂದು ಹಿಂದಿಯೇ ಆಗಿರುತ್ತಿತ್ತು ಎಂಬುದು ಕುತೂಹಲ ಹುಟ್ಟಿಸುವ ಸಂಗತಿ. ಆದರೆ, ತಾಯ್ನುಡಿಯನ್ನು ವ್ಯಾಖ್ಯಾನಿಸುವುದಕ್ಕೆ ಬಳಸಿಕೊಳ್ಳುವ ಮಾನದಂಡಗಳು ಮಾತ್ರ ವಿಚಿತ್ರವಾಗಿರುತ್ತವೆ. ಉದಾ.ಗೆ 2001ರ ಜನಗಣತಿಯ ಪ್ರಕಾರ ತಾಯ್ನುಡಿಯನ್ನು ಗುರುತಿಸುವ ಬಗೆಗಳು ಈ ಕೆಳಗಿಂತವೆ;

1. ಮಗುವಿನ ಬಾಲ್ಯದಲ್ಲಿ ಅವಳ/ನ ತಾಯಿ ಯಾವ ಭಾಷೆಯಲ್ಲಿ ಮಾತನಾಡುತ್ತಾಳೋ ಅದು ಆ ಮಗುವಿನ ತಾಯ್ನುಡಿಯಾಗುತ್ತದೆ.

2. ಒಂದು ಪಕ್ಷ ಮಗು ಬಾಲ್ಯದಲ್ಲಿಯೇ ತನ್ನ ತಾಯಿಯನ್ನೂ ಕಳೆದುಕೊಂಡರೆ, ಆ ಮಗುವಿನ ಕೌಟುಂಬಿಕ ವಲಯದಲ್ಲಿ ಬಳಕೆಯಾಗುವ ಭಾಷೆಯೇ, ಅವನ/ಳ ತಾಯ್ನುಡಿ ಎಂದೂ ಗುರುತಿಸಬೇಕು.

3. ಮಗುವೇನಾದರೂ ಮೂಗನೋ ಅಥವಾ ಕಿವುಡನೋ ಆಗಿದ್ದರೆ, ಆ ಮಗುವಿನ ತಾಯಿ ಮಾತಾಡುವ ಭಾಷೆಯೇ ಅವಳ/ನ ತಾಯ್ನುಡಿಯೆಂದು ಪರಿಗಣಿಸತಕ್ಕದ್ದೂ.

ತಾಯ್ನುಡಿಗೆ ಸಂಬಂಧಿಸಿದಂತೆ ಇನ್ನೂ ಕೆಲವು ವಿಭಿನ್ನ ಬಗೆಯ ಮಾಹಿತಿಗಳು ಜನಗಣತಿಯ ಸಂದರ್ಭದಲ್ಲಿ ಬೆಳಕಿಗೆ ಬರುವುದನ್ನು ಕಾಣಬಹುದು. ಅವೇನೆಂದರೆ, ತಂದೆ-ತಾಯಿಯಂದಿರು ಬೇರೆ ಬೇರೆ ಧರ್ಮ, ಜನಾಂಗ, ರಾಜ್ಯ ಹಾಗೂ ಭಾಷಾವರ್ಗಕ್ಕೆ ಸೇರಿದ್ದರೆ, ಅಂತಹವರ ತಾಯ್ನುಡಿ ಯಾವುದೆಂಬುದನ್ನು ಗುರುತಿಸುವುದಕ್ಕೆ ಎನುಮರೇಟರ್ಸ್ ವೈಯಕ್ತಿಕವಾಗಿ ಒಬ್ಬೊಬ್ಬರನ್ನೇ ಕೇಳಿ ತಿಳಿದುಕೊಳ್ಳಬೇಕು. ಇಂತಹ ಸನ್ನಿವೇಶದಲ್ಲಿ, ಆ ಇಡೀ ಮನೆಯವರ ತಾಯ್ನುಡಿ ಯಾವುದೆಂಬುದನ್ನು ನಿರ್ಧರಿಸುವುದಕ್ಕೆ ಸಾಧ್ಯವಾಗದು. ಇಂತಹ ನೆಲೆಗಳು ಹುಟ್ಟು ಹಾಕುವ ಭಾಷಿಕ-ಸಾಂಸ್ಕೃತಿಕ-ಶೈಕ್ಷಣಿಕ ಇಕ್ಕಟ್ಟುಗಳನ್ನು ಸಾಕಷ್ಟು ಸಂಖ್ಯೆಯಲ್ಲಿಯೇ ಗುರುತಿಸಬಹುದು.

ತಾಯಿಯೋ/ತಂದೆಯೋ ವ್ಯವಹಾರಿಕ ಕಾರಣಗಳಿಂದ ತನ್ನ ತಾಯ್ನುಡಿಯನ್ನು ಕೈಬಿಟ್ಟು, ಬೇರೊಂದು ನುಡಿಗೆ ಪಲ್ಲಟವಾಗಿರುವ

ಎರಡುಸಾವಿರದ ಒಂದರ ಜನಗಣತಿಯಲ್ಲಿ ಸಾಮಾಜಿಕ-ಸಾಂಸ್ಕೃತಿಕ ಮಾಹಿತಿಯನ್ನೂ ದಾಖಲಿಸುವ ಪ್ರಯತ್ನಗಳು ನಡೆದವು. ಇದರಲ್ಲಿ ಮುಖ್ಯವಾಗಿ, ತಾಯ್ನುಡಿಗಳ ಹೆಸರು ಹಾಗೂ ಬಾತಮಿದಾರನಿಗೆ ಗೊತ್ತಿರುವ ಇನ್ನಾವುದೇ ಬೇರೆ ಎರಡು ಭಾಷೆಗಳ ಹೆಸರುಗಳನ್ನು ಸೂಚಿಸಬೇಕಿತ್ತು. ಅಂತಹ ಭಾಷೆಗಳಲ್ಲಿ ಅವನಿ/ಳಿಗೆ ಎಷ್ಟೊಂದು ಪ್ರಾವಿಣ್ಯತೆಯಿದೆ ಎಂಬುದನ್ನು ಅವನು/ಳೇ ನಿರ್ಧರಿಸ ಬೇಕಿತ್ತು. ಈಬಗೆಯ ದಾಖಲೀಕರಣ ಮಹತ್ವದೆಂದೇ ಹೇಳಬೇಕು. ಆದರೆ ಆ ಎರಡು ಭಾಷೆಗಳಲ್ಲಿ ಒಂದು ಹಿಂದಿಯೇ ಆಗಿರುತ್ತಿತ್ತು ಎಂಬುದು ಕುತೂಹಲ ಹುಟ್ಟಿಸುವ ಸಂಗತಿ. ಆದರೆ, ತಾಯ್ನುಡಿಯನ್ನು ವ್ಯಾಖ್ಯಾನಿಸುವುದಕ್ಕೆ ಬಳಸಿಕೊಳ್ಳುವ ಮಾನದಂಡಗಳು ಮಾತ್ರ ವಿಚಿತ್ರವಾಗಿರುತ್ತವೆ. ಉದಾ.ಗೆ ೨೦೦೧ರ ಜನಗಣತಿಯ ಪ್ರಕಾರ ತಾಯ್ನುಡಿಯನ್ನು ಗುರುತಿಸುವ ಬಗೆಗಳು ಈ ಕೆಳಗಿಂತವೆ;

ಸಾಧ್ಯತೆ ಇರುತ್ತದೆ. ಇವರ ತಾಯ್ನುಡಿ ಇವರ ಮಕ್ಕಳ ತಾಯ್ನುಡಿ ಆಗದೇ ಇರಬಹುದು. ಹಾಗಾಗಿ ಅವರು ಹುಟ್ಟಿನಿಂದ ಯಾವ ಭಾಷೆಯನ್ನು ರೂಢಿಸಿಕೊಂಡು ಬೆಳೆಯುತ್ತಾರೋ, ಅದುವೇ ಅವರ ಅಭಿವ್ಯಕ್ತಿ ಮಾಧ್ಯಮವಾಗಿರುತ್ತದೆ. ಅವರ ಶೈಕ್ಷಣಿಕ-ಸಾಂಸ್ಕೃತಿಕ ವ್ಯವಹಾರಗಳ ಮಾಧ್ಯಮವೂ ಇದೇ ಆಗಿರುತ್ತದೆ. ಭಾಷಿಕ ಮಾಹಿತಿಗಳನ್ನು ಸಂಗ್ರಹಿಸುವ ಪ್ರಯತ್ನಗಳೇನೋ 1961, 1991 ಹಾಗೂ 2001ರ ಜನಗಣತಿಯಲ್ಲಿ ನಡೆದವು. ಈ ಜನಗಣತಿಯಿಂದ ಶೈಕ್ಷಣಿಕ-ಸಾಂಸ್ಕೃತಿಕ ನಿಲುವುಗಳ ವಿಶ್ಲೇಷಣೆಗೆ ಬೇಕಾದ ಯಾವುದೇ ದತ್ತವು ಸಿಕ್ಕಲ್ಲ ಎನ್ನುವುದು ಗಮನಾರ್ಹ. ಭಾಷೆಯಾಧಾರಿತ ಈ ನೆಲೆಯ ಜನಗಣತಿಯ ಅಗತ್ಯವಿರುವುದನ್ನು ಮನಗಾಣದೇ ಇರುವುದು ವಿಪರ್ಯಾಸವೆ ಸರಿ.

ವಸಹಾತುಶಾಹಿ ಸಂದರ್ಭದಲ್ಲಿ ನಡೆದ ಜಾತಿಯಾಧಾರಿತ ಜನಗಣತಿ ಹಾಗೂ ಗ್ರೀಯರ್ಸನ್‌ನ ಮುಂದಾಳುತನದಲ್ಲಿ ನಡೆದ ಭಾಷಾ ಸಮೀಕ್ಷೆಯ ಹಿಂದಿನ ಉದ್ದೇಶಗಳು ಭಾರತೀಯರನ್ನು ಉದ್ಧರಿಸುವುದಾಗಿರಲಿಲ್ಲ. ಬದಲಾಗಿ ತಮ್ಮ ಆಡಳಿತಕ್ಕೆ ಯಾವುದೇ ತೊಡಕು ಎದುರಾಗದಂತೆ ನೋಡಿಕೊಳ್ಳುವುದೇ ಆಗಿತ್ತು ಎಂಬ ಆರೋಪಗಳು ಕೇಳಿಬರುತ್ತವೆ. ಜನಗಣತಿಯ ಉದ್ದೇಶಗಳು ಯಾರ ಹಿತಾಸಕ್ತಿಯನ್ನು ಕಾಪಾಡಬೇಕು? ಅವು ಯಾವೆಲ್ಲ ಮಾನದಂಡಗಳನ್ನು ಅನುಸರಿಸಬೇಕು? ಆ ಮಾನದಂಡಗಳವ್ಯಾಪ್ತಿ ಎಂತಹದು? ಎಂಬೆಲ್ಲ ಸಂಗತಿಗಳನ್ನು ಗಮನದಲ್ಲಿರಿಸಿಕೊಂಡು ಜನಗಣತಿಯಂತಹ ಉದ್ದೇಶಗಳು ಜಾರಿಗೊಳ್ಳಬೇಕು. ಭಾಷೆಯೂ ಅಂತಹ ಬಹುಮುಖ್ಯ ಉದ್ದೇಶಗಳಲ್ಲಿ ಒಂದು ಎಂಬುದು ವಿಶೇಷ. ಭಾಷಿಕ ತೀರ್ಮಾನಗಳು ಸಮುದಾಯಗಳ ಏಳ್ಗೆಯ ತೀರ್ಮಾನಗಳೂ ಆಗುತ್ತವೆ ಎಂಬುದು ಮನವರಿಕೆಯಾಗದೇ ಇರುವುದು ಶೋಚನೀಯ ಸಂಗತಿ.

ಯಾಕೆ? ನಮ್ಮ ಸರಕಾರಗಳು ರಾಷ್ಟ್ರದ ಉದ್ಧಾರ/ಏಳ್ಗೆಯ ಭಾಗವಾಗಿ ಭಾಷೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸುವುದಿಲ್ಲ. ಭಾಷೆಯ ಬಗೆಗಿನ ಧೋರಣೆಗಳು ಯಾಕೆ ಅಸಡ್ಡೆಯಿಂದ ಕೂಡಿರುತ್ತವೆ? ಪ್ರಭುತ್ವದ ಇಂತಹ ನಿಲುವುಗಳಿಂದ ಶೈಕ್ಷಣಿಕ-ಸಾಂಸ್ಕೃತಿಕ-ಆರ್ಥಿಕ ಕೊರತೆಗಳುಂಟಾಗುತ್ತವೆ ಅನ್ನುವುದು, ಇನ್ನೂ ಯಾಕೇ ಅರ್ಥವಾಗಿಲ್ಲ? ಶೈಕ್ಷಣಿಕ - ಸಾಂಸ್ಕೃತಿಕ - ಆರ್ಥಿಕ ಉತ್ಪಾದನೆಗೆ ಭಾಷೆಯೇ ಮುಖ್ಯ ಸಂಪನ್ಮೂಲವಾಗಿರುತ್ತೇ ಎನ್ನುವ ನಿಜ ಯಾರಿಗೂ ತಿಳಿಯದೆ ಹೋಗಿದೆ. ಕೇವಲ ಶೈಕ್ಷಣಿಕ ಅನುಪಾತವನ್ನು ಹೆಚ್ಚಿಸುವ ಒಣ ಪ್ರಯತ್ನಗಳು ನಿರಂತರವಾಗಿ ನಡದಿವೆ. ನಮ್ಮ ದೇಶದ ಜನರ ಸಾಕ್ಷರತೆಯ ಸೋಲಿಗೆ ಕಾರಣಗಳು ಹಲವು ಇರಬಹುದು. ಇವುಗಳಲ್ಲಿ ಅಂತ್ಯಂತ ಮುಖ್ಯ ಕಾರಣವೇನೆಂದರೆ ಭಾಷೆಯ ಬಗೆಗಿನ ತಾತ್ಸಾರವೇ ಎಂದು ಹೇಳಬಹುದು. ಬಹುಭಾಷಿಕ ಸನ್ನಿವೇಶ ಹುಟ್ಟುಹಾಕಬುದಾದ ಶೈಕ್ಷಣಿಕ ತೊಡಕುಗಳೆಂತಹವು ಎಂಬುದುನ್ನು, ಬಹುಭಾಷಿಕತೆಯ ಸ್ವರೂಪವನ್ನು ಅರ್ಥೈಸಿಕೊಳ್ಳದೆ ತಿಳಿದುಕೊಳ್ಳುವುದು ಅಸಾಧ್ಯ.

ಜಾತಿಯಾಧಾರಿತ ಜನಗಣತಿಯ ಹಿಂದಿರುವ ಉದ್ದೇಶಗಳ ಖಚಿತ ತಾತ್ತ್ವಿಕತೆ ಏನೆಂಬುದು ನಿಚ್ಚಳವಾಗಿಲ್ಲ. ಇದು ರಾಜಕೀಯ ಪ್ರೇರೇಪಿತ ಉದ್ದೇಶದಂತೆ ಗೋಚರಿಸಿರುವುದಂತೂ ದಿಟ. ಜಾತಿ-ಧರ್ಮಗಳಿಗಿರುವ ಹೊರಚಾಚು ಭಾಷೆಗೂ ಇದೆ. ಭಾಷೆಯೊಂದಗಿನ ನಂಟು ಅಮೂರ್ತವಾಗಿ ಹಾಗೂ ಬೂದಿಮುಚ್ಚಿದ ಕೆಂಡದಂತೆ ಇರುತ್ತದೆ. ಜಾತಿಯೊಂದಗಿನ ಒಡನಾಟವೂ ಅಮೂರ್ತವಾದಷ್ಟು, ಅದು ಕಣ್ಣಿಗೆ ರಾಚುತ್ತಲೇ ಇರುತ್ತದೆ. ಭಾಷೆ ಮತ್ತು ಜಾತಿಗಳ ನಂಟು ಅಗಾಧವಾದುದು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಭಾಷೆಗೆ ಅಸ್ತಿತ್ವ ಹಾಗೂ ಅಧಿಕಾರ ಸಂಬಂಧದ ನೆಲೆಗಳು ಸಿಗುವುದು ಜಾತಿಯ ಪ್ರಭಾವದಿಂದಲೇ ಎನ್ನುವುದು ವಿಶೇಷ. ಜಾತಿ-ಧರ್ಮಗಳ ಲೇಪನದಿಂದ ಭಾಷೆಯ ಪ್ರಾಮುಖ್ಯತೆ ನಿರ್ಧಾರಗೊಳ್ಳುವುದು ಗೊತ್ತಿರುವ ಸಂಗತಿ. ಜಾತಿ-ಧರ್ಮ-ಮತಗಳಂತಹ ಸಾಂಸ್ಥಿಕ ವ್ಯವಸ್ಥೆಗಳ ಬೆಂಬಲದಿಂದ ಸಾಮಾಜಿಕ-ರಾಜಕೀಯ ಅಂತಸ್ತು ಗಟ್ಟಿಗೊಳ್ಳುತ್ತದೆ. ಆದರೆ, ಭಾಷೆ ಇದಕ್ಕೆ ಯಾವುದೇ ರೀತಿಯಲ್ಲಿ ನೆರವು ನೀಡಲಾರದು, ಬದಲಾಗಿ ಇಂತಹ ಸಾಂಸ್ಥಿಕ ವ್ಯವಸ್ಥೆಗಳಿಂದ ಭಾಷೆಯೂ ತನ್ನನ್ನು ತಾನೇ ಬಲಪಡಿಸಿಕೊಳ್ಳುತ್ತದೆ. ಈ ಕಾರಣದಿಂದಲೇ ಜಾತಿ-ಧರ್ಮಗಳು ಪಡೆದುಕೊಳ್ಳುವ ಅಧಿಕಾರದ ನೆಲೆಗಳು ಭಾಷೆಗೆ ತನ್ನಷ್ಟಕ್ಕೆ ತಾವು ಯಾವಾಗಲೂ ದಕ್ಕಲಾರವು. ಇಂತಹ ಅಧಿಕಾರ ಸಂಬಂಧವು ಭಾಷೆಗೆ ಸಿಗುವುದು ಮತ್ತೆ ಅದೇ ಜಾತಿ-ಧರ್ಮಗಳ ಮೂಲಕವೆಂದೇ ಹೇಳಬೇಕು. ಈ ಕಾರಣಕ್ಕಾಗಿಯೇ ಜಾತಿ-ಧರ್ಮಗಳು ಭಾಷೆಯನ್ನು ಒಂದು ಸಾಧನವನ್ನಾಗಿ ಬಳಸಿಕೊಂಡಿವೆ.

ವಸಹಾತುಶಾಹಿ ಸಂದರ್ಭದಲ್ಲಿ ನಡೆದ ಜಾತಿಯಾ ಧಾರಿತ ಜನಗಣತಿ ಹಾಗೂ ಗ್ರೀಯರ್ಸನ್‌ನ ಮುಂದಾಳುತನದಲ್ಲಿ ನಡೆದ ಭಾಷಾ ಸಮೀಕ್ಷೆಯ ಹಿಂದಿನ ಉದ್ದೇಶಗಳು ಭಾರತೀಯರನ್ನು ಉದ್ಧರಿಸುವುದಾಗಿರಲಿಲ್ಲ. ಬದಲಾಗಿ ತಮ್ಮ ಆಡಳಿತಕ್ಕೆ ಯಾವುದೇ ತೊಡಕು ಎದುರಾಗದಂತೆ ನೋಡಿಕೊಳ್ಳುವುದೇ ಆಗಿತ್ತು ಎಂಬ ಆರೋಪಗಳು ಕೇಳಿ ಬರುತ್ತವೆ. ಜನಗಣತಿಯ ಉದ್ದೇಶಗಳು ಯಾರ ಹಿತಾಸಕ್ತಿಯನ್ನು ಕಾಪಾಡಬೇಕು? ಅವು ಯಾವೆಲ್ಲ ಮಾನದಂಡಗಳನ್ನು ಅನುಸರಿಸಬೇಕು? ಆ ಮಾನದಂಡಗಳ ವ್ಯಾಪ್ತಿ ಎಂತಹದು? ಎಂಬೆಲ್ಲ ಸಂಗತಿಗಳನ್ನು ಗಮನದಲ್ಲಿರಿಸಿಕೊಂಡು ಜನಗಣತಿಯಂತಹ ಉದ್ದೇಶಗಳು ಜಾರಿಗೊಳ್ಳಬೇಕು. ಭಾಷೆಯೂ ಅಂತಹ ಬಹುಮುಖ್ಯ ಉದ್ದೇಶಗಳಲ್ಲಿ ಒಂದುಎಂಬುದು ವಿಶೇಷ. ಭಾಷಿಕ ತೀರ್ಮಾನಗಳು ಸಮುದಾಯಗಳ ಏಳ್ಗೆಯ ತೀರ್ಮಾನಗಳೂ ಆಗುತ್ತವೆ ಎಂಬುದು ಮನವರಿಕೆಯಾಗದೇ ಇರುವುದು ಶೋಚನೀಯ ಸಂಗತಿ.

ಸಾಮಾಜಿಕ-ಸಾಂಸ್ಕೃತಿಕ ಬೇಧಭಾವ, ಅಂತಸ್ತು ಹಾಗೂ ಅಸಮಾನತೆಗಳನ್ನು ಭಾಷೆಯಲ್ಲಿ ಹುದುಗಿಸಿ ಇಟ್ಟಿದ್ದಾರೆ. ಶೋಷಕ ವರ್ಗವು ಯಾವಾಗಲೂ, ಭಾಷೆಯ ಬಗೆಗೆ ಜನಸಾಮಾನ್ಯರಲ್ಲಿ ನಂಬಿಕೆಗಿಂತ ಹೆಚ್ಚಾಗಿ ಅಪನಂಬಿಕೆಯನ್ನೇ ಹುಟ್ಟು ಹಾಕುತ್ತದೆ. ಲೈಂಗಿಕತೆಯ ಬಗೆಗಿರುವಷ್ಟೇ ಗೀಳು ಭಾಷೆಯೊಂದಿಗೂ ಇರುತ್ತದೆ ಎಂಬ ಆರೋಪವಿದೆ. ಆದರೆ ಇದಕ್ಕಿಂತ ಹೆಚ್ಚಿನಮಟ್ಟದ ಅಬ್ಸೆಸ್ಸಿಯನ್ ಜಾತಿ ಧರ್ಮಗಳ ಮೇಲಿರುತ್ತೆ ಅನ್ನುವುದು ಗಮನಾರ್ಹ. ಬಹುಸಂಖ್ಯಾತ ಜಾತಿ-ಧರ್ಮದವರ ಆಚರಣೆ, ನಡೆ-ನುಡಿ ಹಾಗೂ ಸಂಕೇತ-ಲಾಂಛನ ಮುಂತಾದವುಗಳು ರಾಷ್ಟ್ರೀಯತೆಯ ಕುರುಹುಗಳಾಗಿ ನೆಲೆನಿಂತಿರುತ್ತವೆ. ಯಾವುದೇ ದೇಶದ ಭಾಷೆ ಹಾಗೂ ರಾಷ್ಟ್ರೀಯತೆಯ ಚಹರೆಗಳು, ಆ ದೇಶದ ಬಲಿಷ್ಠ ಜಾತಿ-ಧರ್ಮಕ್ಕೆ ಮಾತ್ರ ಸೇರಿರುತ್ತವೆ. ಹಾಗಾಗಿ ಭಾಷೆ ಯಾವಾಗಲೂ ಸೆಕೆಂಡ್ ಸೆಕ್ಸ್‌ಯೆಂದೇ ಹೇಳಬಹುದು. ಭಾಷೆ ಶತಶತಮಾನಗಳಿಂದಲೂ ಜಾತಿ-ಧರ್ಮಗಳಿಗೆ ಅಧೀನವಾಗಿದ್ದುಕೊಂಡೆ ಬಂದಿದೆ. ಭಾಷೆಗಳನ್ನು ರಾಷ್ಟ್ರದ ಸಂಪತ್ತೆಂದೇ ಹೇಳುತ್ತಾರೆ. ಆದರೆ ಯಾರಾರ ಭಾಷೆಗಳು ಈ ಸಂಪತ್ತಿನ ಪರಧಿಯಲ್ಲಿರುತ್ತವೆ? ಯಾರಾರ ಭಾಷೆಗಳು ಇಂತಹ ಸಂಪತ್ತಿನ ಸ್ಥಾನ-ಮಾನಗಳಿಂದ ವಂಚಿತವಾಗಿರುತ್ತವೆ? ಎಂಬೆಲ್ಲ ಅಂಶಗಳನ್ನು ಬಿಡಿಸಿ ನೋಡಿದರೆ, ಯಾಜಮಾನ್ಯ-ಅಧೀನ ನೆಲೆಗಳಿಗೆ ಏನೇನೂ ಕಾರಣಗಳೆಂಬುದು ನಿಚ್ಚಳವಾಗಿ ಕಾಣಿಸುತ್ತವೆ. ಈ ಬಗೆಯ ವಿಭಜನೆಗೆ ಜಾತಿ-ಧರ್ಮಗಳೇ ಕಾರಣವೆಂಬುದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ.

ಯಾವುದೇ ಸಮುದಾಯದ ಅನನ್ಯತೆಯ ಪ್ರಾಥಮಿಕ ಲಕ್ಷಣಗಳಾವವು ಎಂದರೆ ಜಾತಿ, ಧರ್ಮಗಳೆಂದೇ ಹೇಳಬಹುದು. ಭಾಷೆಯೂ ಇಂತಹದೇ ಒಂದು ಲಕ್ಷಣವೆಂಬುದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಆದರೆ, ಯಾವುದೆ ಸಮುದಾಯದ ಅನನ್ಯತೆಯನ್ನು ಗುರುತಿಸುವಲ್ಲಿ ಭಾಷೆಯೂ ಪ್ರಾಥಮಿಕ ಲಕ್ಷಣವಲ್ಲಯೆನ್ನುವುದು ಗಮನಾರ್ಹ. ಜನಾಂಗ, ಧರ್ಮ, ಜಾತಿ, ಲಿಂಗ, ಜ್ಞಾನ ಮುಂತಾದ ಅಧಿಕಾರ ಕೇಂದ್ರಗಳು ತಮ್ಮ ಅಧಿಕಾರವನ್ನು ಭಾಷೆಯ ಮೂಲಕವೇ ಪ್ರಸ್ತುತಪಡಿಸುತ್ತವೇನೋ ನಿಜ, ಆದರೆ ಭಾಷೆ ಯಾವಾಗಲೂ ಜಾತಿಯ ನಂತರವೇ ಸಮುದಾಯದ ಅಸ್ಮಿತಿಯ ಲಕ್ಷಣವಾಗಿರುತ್ತದೆ ಎಂಬುದು ದಿಟ. ಯಾವುದೆ ಒಂದು ಸಮುದಾಯದವು ಮತ್ತೊಂದು ಸಮುದಾಯ/ಜಾತಿ/ಧರ್ಮದ ಮೇಲೆ ತನ್ನ ಯಾಜಮಾನ್ಯವನ್ನು ಹೇರಲು, ಭಾಷೆಯನ್ನೂ ಬೌದ್ಧಿಕ ಕಸರತ್ತಿನ ಮಾಧ್ಯಮವನ್ನಾಗಿ ಬಳಸಿಕೊಳ್ಳತ್ತದೆ. ಹಾಗಾಗಿಯೇ, ಒಂದು ಭಾಷಾಸಮುದಾಯ ಮತ್ತೊಂದು ಭಾಷಾಸಮುದಾಯದೊಂದಿಗೆ ಸಂಪರ್ಕಹೊಂದುವ ಪ್ರಕ್ರಿಯೆಯಲ್ಲಿ ಜಾತಿ,ಧರ್ಮ,ಅಧಿಕಾರ,ವರ್ಚಸ್ಸು, ಪ್ರಭಾವ ಮುಂತಾದ ಅಧಿಕಾರ ಕೇಂದ್ರಗಳು ಪ್ರಭಾವ ಬೀರುತ್ತವೆ. ಸಾಮಾಜಿಕ-ಭಾಷಿಕ ಸಂಘರ್ಷಗಳ ಹಿಂದಿನ ಗೊತ್ತು-ಗುರಿಗಳೇನು? ಅವುಗಳ ಹಿಂದಿರುವ ಒತ್ತಡಗಳ ಸ್ವರೂಪವೆಂತಹದೂ? ಯಾರ ಏಳ್ಗೆಯನ್ನು ಗುರಿಯಾಗಿಸಿಕೊಂಡು ಇಂತಹ ಸಂಘರ್ಷಗಳು ತಲೆ ಎತ್ತುತ್ತವೇ? ಎಂಬೆಲ್ಲ ಕೇಳ್ವಿಗಳಿಗೂ ಇದೇ ಬದಲು.

ಎಷ್ಟೋ ಸಂದರ್ಭಗಳಲ್ಲಿ, ಯಾವುದೆ ಭಾಷೆಯ ಅಂತಸ್ತು ಹೆಚ್ಚುವುದು, ಆ ಭಾಷೆಗಿರುವ ಚರಿತ್ರೆ, ಪರಂಪರೆಯ ಮಹತ್ವಕ್ಕಿಂತ, ಅದು ಹೊಂದಿರುವ ಅಧಿಕಾರ ಕೇಂದ್ರಗಳೊಂದಗಿನ ನಂಟೇ ಮುಖ್ಯ ಮಾನದಂಡವಾಗು

ತ್ತದೆ. ಜಾತಿರಾಜಕಾರಣ, ಧರ್ಮರಾಜಕಾರಣಗಳ ಮುಂದೆ ಭಾಷಾರಾಜಕಾರಣವೇನೂ ಅಲ್ಲ ಎನ್ನುವುದು ಸಾಬೀತಾಗಿದೆ. ಫ್ಯೂಕೋ, ಎಡ್ವರ್ಡ್ ಸೈದ್, ಗ್ರಾಮ್‌ಸಿ ಹಾಗೂ ಗೂಗಿ ಮುಂತಾದವರು ಭಾಷಾ ಯಾಜಮಾನ್ಯದ ನೆಲೆಗಳು ಎಂತಹವು ಎಂಬುದನ್ನು ಬಲವಾಗಿಯೇ ಪ್ರತಿಪಾದಿಸಿದ್ದಾರೆ. ಆದಾಗ್ಯೂ ಜಾತಿ-ಧರ್ಮಗಳೆ ಹೆಚ್ಚು ಪ್ರಭಾವಶಾಲಿ ಎನ್ನುವುದನ್ನು ಯಾರು ಅಲ್ಲಗಳೆಯುವಂತಿಲ್ಲ. ಅಧಿಕಾರ ನಿರ್ಮಾಣದಲ್ಲಿ ಜಾತಿ, ಧರ್ಮಗಳಿಗಿರುವಷ್ಟು ಪ್ರಾಬಲ್ಯ ಭಾಷೆಗಿರಲಾರದು ಎಂಬುದು ಇದರಿಂದ ನಿಚ್ಚಳವಾಗುತ್ತದೆ. ಗ್ರೀಕ್, ಲ್ಯಾಟಿನ್, ಸಂಸ್ಕೃತ, ಪರ್ಶಿಯನ್ ಹಾಗೂ ಅರಾಬಿಕ್ ಭಾಷೆಗಳಂತಹವು ಧರ್ಮರಾಜಕಾರಣ ಹಾಗೂ ಯಾಜಮಾನ್ಯದಿಂದ ತಮ್ಮ ಪ್ರಾಬಲ್ಯವನ್ನು ಮೆರದಿವೆ. ಇಂಗ್ಲಿಷ್‌ನಂತಹ ಭಾಷೆಗಳ ಯಾಜಮಾನ್ಯ ಹಾಗೂ ಪ್ರಾಬಲ್ಯವನ್ನು ಬೇರೆಯೇ ನೆಲೆಯಿಂದ ಬಿಡಿಸಿ ನೋಡಬೇಕು. ಅದೇನೆಂದರೆ, ವಸಾಹತುಶಾಹಿ ಪ್ರಾಬಲ್ಯ ಹಾಗೂ ಪ್ರಭುತ್ವದ ಬೆಂಬಲದಿಂದ, ಇಂಗ್ಲಿಷ್ ಭಾಷೆಗೆ ಜ್ಞಾನ, ಅಧಿಕಾರದ ನೆಲೆಗಳು ಸಿಕ್ಕವು. ಇದರೊಂದಿಗೆ ಪೈಪೋಟಿಯನ್ನು ನಡಸದೇ ಸೋತುಹೋದ ದೇಶೀಯ ಭಾಷೆಗಳು ಇಂಗ್ಲಿಶ್‌ನ ಅಧೀನ ಭಾಷೆಗಳಂತೆ ಬಿಂಬಿತವಾದವು.

ರಾಜ್ಯಭಾಷೆ, ರಾಷ್ಟ್ರಭಾಷೆ ಹಾಗೂ ಸಂಪರ್ಕಭಾಷೆಗಳು ಯಾವುದೇ ಪ್ರಭಾವಿ ಜಾತಿ/ಧರ್ಮದವರ ಹದ್ದುಬಸ್ತಿನಲ್ಲಿರುತ್ತವೆ. ಶಿಕ್ಷಣಕ್ರಮ, ಪಠ್ಯಕ್ರಮ ಹಾಗೂ ಶೈಕ್ಷಣಿಕ ಉದ್ದೇಶಗಳು ಯಾರಾರ ಆಶೋತ್ತರಗಳನ್ನು ಗುರಿಯಾಗಿಸಿಕೊಂಡಿರುತ್ತವೆ? ಅವುಗಳ ಈಡೇರಿಕೆಯ ನೆಲೆಗಳೇನಾಗಿರುತ್ತವೆ? ಮುಂತಾದ ವಿಚಾರಗಳನ್ನು ಬೇರೆ ಬೇರೆ ಆಯಾಮಗಳಲ್ಲಿ ಬಿಡಿಸಿ ನೋಡಿದರೆ, ಜಾತಿ-ಧರ್ಮಗಳ ಬೇರು-ರೆಂಬೆ-ಕೊಂಬೆಗಳು ಎಲ್ಲೆಲ್ಲಿ ಚಾಚಿಕೊಂಡಿರುತ್ತವೆ ಎಂಬುದು ಇನ್ನೂ ಹೆಚ್ಚು ಹೆಚ್ಚು ಅರ್ಥವಾಗುತ್ತದೆ. ಭಾರತದಂತಹ ಬಹುಭಾಷಿಕ-ಸಾಂಸ್ಕೃತಿಕ ಸನ್ನಿವೇಶದಲ್ಲಿ, ರಾಜಕೀಯ ಪ್ರೇರಿತ ವಿಷಯಗಳ ಹಿಂದಿನ 'ಕೈ' ಜಾತೀಯ ಕೈಯೇ ಆಗಿರುತ್ತದೆ ಇದರಲ್ಲಿ ಯಾವುದೇ ಅನುಮಾನವಿಲ್ಲ. ಯಾಕೆ ಕೆಲವೇ ಕೆಲವು ಭಾಷೆಗಳು ಆಢ್ಯತೆಯ ಭಾಷೆಗಳಾಗುತ್ತವೆ? ಅವುಗಳಿಗೆ ಮಾತ್ರ ಎಲ್ಲ ಬಗೆಯ ಸವಲತ್ತುಗಳು ಸಿಗುತ್ತವೆ? ಇನ್ಯಾವುದೇ ಕೆಲವು ಭಾಷೆಗಳು ಅವಸಾನದಂಚಿನಲ್ಲಿವೆ? ಮತ್ಯಾವುದೇ ಕೆಲವು ಭಾಷೆಗಳು ಸಮಾದಿಯನ್ನೂ ಸೇರಿದ್ದರೂ, ಅವುಗಳಿಗೆ ಯಾಕೆ ರಾಜ್ಯಮರ್ಯಾದೆ ಹಾಗೂ ಪಾವಿತ್ರತೆಯ ಸ್ಥಾನ ಸಿಕ್ಕಿದೆ? ಈ ಎಲ್ಲಾ ಕೇಳ್ವಿಗಳಿಗೂ ಮತ್ತೆ ಅದೇ ಬದಲು ಅದೇನೆಂದರೆ, ಜಾತಿ ಹಾಗೂ ಧರ್ಮ.

ಇವತ್ತು ರಾಜಕಾರಣಿಗಳು ತಮ್ಮೆಲ್ಲ ಬಲವನ್ನೂ ಅವರವರ ಜಾತಿ-ಧರ್ಮಗಳಿಂದಲೇ ಪಡೆದುಕೊಳ್ಳುತ್ತಾರೆ. ಇವರಿಗೆ ಭಾಷೆಯನ್ನು ಉದ್ಧರಿಸಬೇಕು ಎಂಬ ಇರಾದೆಕ್ಕಿಂತ ಜಾತಿಗಳನ್ನು ರಾಜಕೀಯವಾಗಿ ಬಲಪಡಿಸಬೇಕೆಂಬ ತುಡಿತವೇ ಜಾಸ್ತಿ. ಭಾಷೆಯನ್ನು ಸಮುದಾಯದ ಏಳ್ಗೆಗೆ ಬಳಸಿಕೊಳ್ಳುವುದಕ್ಕಿಂತ ಹೆಚ್ಚಾಗಿ, ತಮ್ಮ ಜಾತಿ-ಧರ್ಮಗಳಿಗೆ ಶೋಷಕ ಶಕ್ತಿಯನ್ನು ಇಮ್ಮಡಿಸುವ ಸಾಧನವನ್ನಾಗಿ ಮಾತ್ರ ಬಳಸಿಕೊಳ್ಳುತ್ತಾರೆ. ಇದೇ ಕಾರಣಕ್ಕೆ ಭಾಷೆಯಲ್ಲಿ ಶೋಷಿತರಪರವಾದ ಗುಣಗಳಕ್ಕಿಂತ ವಿರೋಧಿ ಗುಣಗಳೇ ತುಂಬಿರುತ್ತವೆ. ಇದು ಸಾಮಾಜಿಕಭಾಷಾಶಾಸ್ತ್ರೀಯ ನೆಲೆಯಿಂದ ಗುರುತಿಸಬಹುದಾದಲಕ್ಷಣ. ಶೋಷಕ ಶೋಷಿತ, ಯಾಜಮಾನ್ಯ-ಅಧೀನ, ಮೇಲು-ಕೀಲು ಮುಂತಾದ ಭಾಷಿಕ-ಸಾಂಸ್ಕೃತಿಕ ವೈರುಧ್ಯಗಳು ಜಾತಿ-ಧರ್ಮಗಳ ಕಾರಣದಿಂದ ಭಾಷೆಯಲ್ಲಿ ಅಂತರ್ಗತವಾಗಿರುತ್ತವೆ.

ಜನಗಣತಿಯ ಬಹುಮುಖ್ಯ ಉದ್ದೇಶ ಸಾಮಾಜಿಕ-ಆರ್ಥಿಕ ಬೆಳವಣಿಗೆಯೇ ಆಗಿದ್ದರೆ, ಭಾಷೆಯನ್ನು ಹೊರಗಿಟ್ಟು ಇದನ್ನು ಸಾಧಿಸಲು ಹೇಗೆ ಸಾಧ್ಯ? ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿಗೆ ಭಾಷೆಯೂ ಒಂದು ಮುಖ್ಯ ಮಾನದಂಡವೆಂಬುದನ್ನು ಮರೆತಂತಿದೆ. ಶಿಕ್ಷಣ ನೀತಿಗೂ ಭಾಷಾನೀತಿಗೂ ಇರುವ ನಂಟಿನ ಮಹತ್ವವನ್ನೂ ಮರೆತಂತಿದೆ.

ಶಿಕ್ಷಣಭಾಷೆ, ಸಾಮಾಜಿಕ ಜಾಗೃತಿಯನ್ನು ಮೂಡಿಸುವ ಭಾಷೆ, ಬೇಸಾಯ ಪದ್ಧತಿ/ಅರಿವು ಮೂಡಿಸಲು ಬಳಸುವ ಭಾಷೆ, ಆರೋಗ್ಯ ಮಾಹಿತಿಗೆ ಬಳಸುವ ಭಾಷೆ, ಸಾರ್ವಜನಿಕ ಕರಪತ್ರಗಳ ಭಾಷೆ ಯಾವುದಾಗಿರಬೇಕೆಂದು ನಿರ್ಧರಿಸಲಕ್ಕೆ ಹೇಗೆ ಸಾಧ್ಯ? ಎಷ್ಟೆಷ್ಟು ಭಾಷೆಗಳನ್ನು ಎಷ್ಟೆಷ್ಟು ಜನರು ಮಾತನಾಡುತ್ತಾರೆಂಬುದು ಗೊತ್ತಾಗದೇ, ಯಾವ ಬಗೆಯ ಭಾಷಾನೀತಿ/ಯೋಜನೆಗಳನ್ನು ರೂಪಿಸಲಕ್ಕೆ ಸಾಧ್ಯವೆಂಬುದನ್ನು ಮನಗಾಣಬೇಕಿದೆ. ಭಾರತದ ಪ್ರತಿಯೊಬ್ಬ ನಾಗರೀಕನಿಗೆ ತಾನೇನು ಭಾಷೆಯನ್ನು ಮಾತಾಡುತ್ತಾನೆಂಬುದುಗೊತ್ತಿದೆ. ಮೀಸಲಾತಿ, ಉದ್ಯೋಗಾವಕಾಶ, ಶಾಜಕೀಯ ಸ್ವಾತಂತ್ರ್ಯ ಮುಂತಾದ ಸಾಮಾಜಿಕ-ರಾಜಕೀಯ ನೀತಿಗಳನ್ನೂ ರೂಪಿಸಲಕ್ಕೆ ಜಾತಿಯಾಧಾರಿತ ಜನಗಣತಿಯಿಂದ ಸಾಧ್ಯವಾಗುವುದಾದರೆ, ಸಾಮಾಜಿಕ-ಸಾಂಸ್ಕೃತಿಕ-ಶೈಕ್ಷಣಿಕ ನೀತಿಗಳನ್ನೂ ರೂಪಿಸಲಕ್ಕೆ ಭಾಷೆಯಾಧಾರಿತ ಜನಗಣತಿಯಿಂದಲೇ ಸಾಧ್ಯ.

ಒಟ್ಟಾರೆ, ಪ್ರತಿಯೊಬ್ಬ ನಾಗರೀಕನ ಪ್ರತಿಯೊಂದು ಸಾಮಾಜಿಕ - ಸಾಂಸ್ಕೃತಿಕ ವಿವರವನ್ನು ಜನಗಣತಿ ಮುಖೇನ ದಾಖಲಿಸಬೇಕಾದದ್ದು ಅನಿವಾರ್ಯ. ನಿಜ, ತಾಯ್ನುಡಿಯಂತಹ ಪರಿಕಲ್ಪನೆಗಳನ್ನು ವ್ಯಾಖ್ಯಾನಿಸುವುದು ದುಸ್ತರ. ಆದರೆ, ಭಾರತದ ಪ್ರತಿ ನಾಗರೀಕನ ಮನೆಮಾತು, ಪರಿಸರದಮಾತು, ಬೇರೆ ಬೇರೆ ವಲಯಗಳಲ್ಲಿ ಬಳಸುವ ಭಾಷಿಕ ದತ್ತವನ್ನು ಸಂಗ್ರಹಿಸಬೇಕು. ಈ ಮಾಹಿತಿಗನುಗುಣವಾಗಿ ಭಾಷಾನೀತಿಗಳನ್ನು ರೂಪಿಸಬಹುದು. ಹೌದು 1961, 1991 ಹಾಗೂ 2001ರ ಜನಗಣತಿಯಲ್ಲಿ ಭಾಷಿಕ ದಾಖಲೆಗಳಿವೆ. ವಿಪರ್ಯಾಸವೇನೆಂದರೆ ಭಾಷೆ-ಉಪಭಾಷೆ, ಭಾಷಾಕುಟುಂಬ ಮುಂತಾದವುಗಳಿಗೆ ಮಾತ್ರ ಇವುಗಳನ್ನು ಬಳಸಿಕೊಂಡಿದ್ದಾರೆ.

ರಾಜ್ಯಭಾಷೆ, ರಾಷ್ಟ್ರಭಾಷೆ ಹಾಗೂ ಸಂಪರ್ಕ ಭಾಷೆಗಳು ಯಾವುದೇ ಪ್ರಭಾವಿ ಜಾತಿ/ಧರ್ಮದವರ ಹದ್ದು ಬಸ್ತಿನಲ್ಲಿರುತ್ತವೆ. ಶಿಕ್ಷಣಕ್ರಮ, ಪಠ್ಯಕ್ರಮ ಹಾಗೂ ಶೈಕ್ಷಣಿಕ ಉದ್ದೇಶಗಳು ಯಾರಾರ ಆಶೋತ್ತರಗಳನ್ನು ಗುರಿಯಾಗಿಸಿಕೊಂಡಿರುತ್ತವೆ? ಅವುಗಳ ಈಡೇರಿಕೆಯ ನೆಲೆಗಳೇನಾಗಿರುತ್ತವೆ? ಮುಂತಾದ ವಿಚಾರಗಳನ್ನು ಬೇರೆ ಬೇರೆ ಆಯಾಮಗಳಲ್ಲಿ ಬಿಡಿಸಿ ನೋಡಿದರೆ, ಜಾತಿ-ಧರ್ಮಗಳ ಬೇರು-ರೆಂಬೆ-ಕೊಂಬೆಗಳು ಎಲ್ಲೆಲ್ಲಿ ಚಾಚಿಕೊಂಡಿರುತ್ತವೆ ಎಂಬುದು ಇನ್ನೂ ಹೆಚ್ಚು ಹೆಚ್ಚು ಅರ್ಥವಾಗುತ್ತದೆ. ಭಾರತ ದಂತಹ ಬಹುಭಾಷಿಕ-ಸಾಂಸ್ಕೃತಿಕ ಸನ್ನಿವೇಶದಲ್ಲಿ, ರಾಜಕೀಯ ಪ್ರೇರಿತ ವಿಷಯಗಳ ಹಿಂದಿನ 'ಕೈ' ಜಾತೀಯ ಕೈಯೇ ಆಗಿರುತ್ತದೆ ಇದರಲ್ಲಿ ಯಾವುದೇ ಅನುಮಾನವಿಲ್ಲ.

ಜನಗಣತಿಯ ಪ್ರಾಮುಖ್ಯತೆ ಕೇವಲ ಭಾಷಿಕ ವರ್ಗೀಕರಣ, ಗಂಡು-ಹೆಣ್ಣು, ಜಾತಿ-ಧರ್ಮಗಳಿಗೆ ಸಂಬಂಧಪಟ್ಟ ಅಂಕಿ-ಸಂಖ್ಯೆಗಳನ್ನು ಮಾತ್ರ ಹೇಳುವುದಲ್ಲ. ಆ ದೇಶದ ಜನರ ಸಾಮಾಜಿಕ-ಆರ್ಥಿಕ-ಶೈಕ್ಷಣಿಕ ಹಾಗೂ ರಾಜಕೀಯ ಬೇಡಿಕೆಗಳನ್ನು ಈಡೇರಿಸಲು ಈ ಅಂಕಿ-ಸಂಖ್ಯೆಗಳನ್ನು ಬಳಸಿಕೊಳ್ಳುವ ಗುರಿ ಹೊಂದಿರುತ್ತದೆಂದು ನಂಬಿರುತ್ತೇನೆ. ಭಾಷೆಗಳ ಲೆಕ್ಕಾಚಾರವು ಅವುಗಳನ್ನು ಮಾತನಾಡುವ ಜನರ ಬೇಡಿಕೆಗಳನ್ನು ತೀರಿಸುವ ಕ್ರಮವಾಗಿರಬೇಕಾದದ್ದು ಅನಿವಾರ್ಯ. ಭಾಷಾನೀತಿ ಹಾಗೂ ಯೋಜನೆಯನ್ನು ರೂಪಿಸುವ ಬಗೆಗಳು ಏನನ್ನು ಗುರಿಯಾಗಿಸಿಕೊಂಡು ನಿರ್ಧಾರವಾಗಬೇಕು? ಭಾಷಾ ಯೋಜನೆ ಮತ್ತು ನೀತಿಗಳನ್ನು ಎಷ್ಟು ವರ್ಷಕ್ಕೊಮ್ಮೆ ಮರುರೂಪಿಸಬೇಕು? ಶಿಕ್ಷಣಮಾಧ್ಯಮ ಮತ್ತು ಆಡಳಿತ ಭಾಷೆಗಳಂತಹ ಕಾರ್ಯಯೋಜನೆಗಳು ಏನನ್ನು ಆಧರಿಸಿಕೊಂಡು ನೆಲೆಗೊಳ್ಳಬೇಕು? ಇಂತಹ ಸಾಕಷ್ಟು ಕೇಳ್ವಿಗಳು ನಮ್ಮನ್ನು ಕಾಡುತ್ತಿವೆ. ಏಕೆಂದರೆ, ಭಾರತದ ಸಂವಿಧಾನವು ಭಾಷಗೆ ಸಂಬಂಧಿಸಿದ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿದ್ದೇನೆ ಎಂಬ ಭ್ರಮೆಯಲ್ಲಿದೆ. ಆದರೆ, ಅವುಗಳಿಗೆ ತಕ್ಕುದಾದ ವ್ಯವಸ್ಥೆಯನ್ನು ಒದಗಿಸುವುದರಲ್ಲಿ ಸೋತಿದೆ.

ಉದಾ.ಗೆ ತಾಯ್ನುಡಿಯಲ್ಲಿ ಶಿಕ್ಷಣವನ್ನು ಪೂರೈಸುವುದು, ಅಲಕ್ಷಿತ ಸಮುದಾಯಗಳನ್ನು ಸಾಮಾಜಿಕ-ರಾಜಕೀಯ ಮುಖ್ಯವಾಹಿನಿಗೆ ತರಬೇಕಿದ್ದಲ್ಲಿ, ಅವರ ಭಾಷೆಯನ್ನೂ ಎಲ್ಲಾ ವಲಯಗಳಲ್ಲಿ ಬಳಸುವಂತೆ ಸಜ್ಜುಗೊಳಿಸಬೇಕಾಗಿದೆ. ಹಾಗೂ ಯಾವುದಾದರೂ ದ್ವಿಭಾಷಿಕ ಸನ್ನಿವೇಶದಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಯನ್ನು ಮಾತನಾಡುವ ಜನರು ಶೇ.30% ಹಾಗೂ ಅದಕ್ಕಿಂತ ಹೆಚ್ಚಿದ್ದರೆ, ಅವರ ಭಾಷೆಯನ್ನೂ ಕೂಡ ಆಡಳಿತ ಭಾಷೆಯನ್ನಾಗಿ ಜಾರಿಗೊಳಿಸಬೇಕು. ಆಧುನಿಕತೆ ಹಾಗೂ ಜಾಗತೀಕರಣ ಇವುಗಳ ಪ್ರಾಬಲ್ಯ ಮತ್ತು ಪ್ರಭಾವದಿಂದ ನಲುಗಿ ಹೋಗುತ್ತಿರುವ ಭಾಷೆಗಳನ್ನು ಜೋಪಾನ ಮಾಡಬೇಕಿದೆ. ಈ ಭಾಷೆಗಳನ್ನು ಜೋಪಾನ ಮಾಡುವ ಮಾದರಿಗಳನ್ನೂ ಕಂಡುಹಿಡಯಬೇಕೆಂದರೆ, ಅಂತಹ ಭಾಷೆಗಳನ್ನು ಸಾಂಸ್ಥಿಕವಾಗಿ ಬೆಂಬಲಿಸಬೇಕು. ಇಂತಹ ಕ್ರಮಗಳಿಂದ ಪ್ರತಿಯೊಂದು ಭಾಷೆಯೂ ತನ್ನ ಅಸ್ತಿತ್ವ ಹಾಗೂ ಅಸ್ಮಿತಿಯನ್ನು ಕಾಪಾಡಿಕೊಳ್ಳುವುದಕ್ಕೆ ಸಾಧ್ಯವಾಗಬಹುದು. ಈ ನಿಲುವುಗಳು ಕೇವಲ ಪೊಲಟಿಕಲಿ ಕರೆಕ್ಟನೆಸ್‌ಗೆ ಮಾತ್ರ ಸೀಮಿತವಾಗದೇ, ಸಾಂಸ್ಕೃತಿಕ ಹಿರಿಮೆಯನ್ನು ಹೆಚ್ಚಿಸುವುದಕ್ಕೂ ಅನಕೂಲವಾಗುತ್ತವೆ.

ಹೌದು. ಜಾತಿಯಾಧಾರಿತ ಜನಗಣತಿಯು ಸ್ವಾತಂತ್ರೋತ್ತರ ಭಾರತದ ಮೊದಲ ಪ್ರಯತ್ನ. ಕೊನೆಯ

(49ನೇ ಪುಟಕ್ಕೆ)

ಹೊಸತು ಒಂದು ಮೀನೂ ಬಂದು

ಕಾವ್ಯ

ಮೂಲ: ಕೈವಾರ ತಾತಯ್ಯ
ಅನು: ಸ. ರಘುನಾಥ



ಹೊಸತೂ ಒಂದೂ ಮೀನೂ ಬಂದು ತುಂಬು ಕೆರೆಯ ನೀರಾ
ಕುಡಿದು
ಬಟ್ಟಬಯಲು ಮಾಡೀತೋ
ಓ ಶಿಷ್ಯಾಗ್ರ ತನಯ ಮುತ್ತಿನಾಸು ಮೀನು ನೋಡಯ್ಯಾ

ಗಗನದಲ್ಲಿ ಇದ್ದೂದಲ್ಲ ಭೂಮಿ ಮ್ಯಾಲೆ ಇರಲೇ ಇಲ್ಲ
ನಟ್ಟನಡುವೆ ಇರುವೂದೇನಯ್ಯಾ
ಓ ಶಿಷ್ಯಾಗ್ರ ತನಯ ಸುಲಭವಿಹುದು ನೋಡಿ ಹೇಳಯ್ಯಾ
ಕಾಲೂ ಇಲ್ಲ ಕೈಯೂ ಇಲ್ಲ ಬಾಯಿ ನೊಸಲು ಕೊಂಬೂ ಇಲ್ಲ
ಜಟ್ಟಿ ಜನರ ಕೊಂದು ಹಾಕೀತೋ
ಓ ಶಿಷ್ಯಾಗ್ರ ತನಯ ಅವನ ಗೆಲಿದವ ಧೀರ ನೋಡಯ್ಯಾ

ಬಾನಿನಲ್ಲಿ ಮಿಂಚೂ ಮಿಂಚಿ ಮಣ್ಣಿನಲ್ಲಿ ಮೊಳಕೆ ಒಡೆದು ನೋಡ
ನೋಡ
ಬೆಳೆದು ಹೋಯಿತೋ
ಓ ಶಿಷ್ಯಾಗ್ರ ತನಯ ಬಾನು ಬುವಿಗೆ ಏಕವಾಯಿತೋ

ಅಂದದಂಥ ಮರವು ಒಂದು ಬಾನಿನಲ್ಲಿ ಹರಡೀ ಇರಲು ಮೇಕೆಯೈದು
ಮೇದು ಹೋದಾವೋ
ಓ ಶಿಷ್ಯಾಗ್ರ ತನಯ ಎಂಥ ಚೋದ್ಯವಾತೂ ನೋಡಯ್ಯಾ

ಮೂಕ ತಾನು ಓದು ಕಲಿತು ಸಕಲ ಶಾಸ್ತ್ರ ಪುರಾಣಗಳ
ಸಾರವರಿತು ಹೇಳಿದಾ
ಓ ಶಿಷ್ಯಾಗ್ರ ತನಯ ತಿಳಿದುಕೊಳ್ಳೊ ಅವನ ಮರ್ಮಾವಾ

ಒಂಟಿ ಕೈಯಿಯವನು ಒಬ್ಬ ಒಂಟಿ ಕಾಲಿನವನು ಒಬ್ಬ ಇಬ್ಬರಿಗು
ಯುದ್ಧವಾಯಿತೋ
ಓ ಶಿಷ್ಯಾಗ್ರ ತನಯ ಗೆದ್ದುದಾರು ಸೋತುದಾರಯ್ಯಾ

ಆನೆಗಳ ಹಿಂಡಾ ಮ್ಯಾಲೆ ಇಲಿಗಳೆಲ್ಲ ಗುಂಪುಗೂಡಿ ಆನೆಗಳ
ಅಟ್ಟಬಿಟ್ಟಾವೋ
ಓ ಶಿಷ್ಯಾಗ್ರ ತನಯ ಇಲಿಗಳೆಲ್ಲ ಚೆದುರಿ ಹೋದಾವೋ

ಕುಲಗಳಿಗೆಲ್ಲ ಮೇಲು ಕುಲದವನೊಬ್ಬನಿರುವ ಅವನದಾವ ಕುಲವೊ
ಹುಡುಕಿ ಹೇಳಯ್ಯಾ
ಓ ಶಿಷ್ಯಾಗ್ರ ತನಯ ನಿನ್ನ ನೀನೇ ಅರಿತು ನೋಡಯ್ಯಾ

ಸತ್ತವರು ಎಲ್ಲಾ ಬಂದು ಎದುರು ಎದುರು ಮಾತನಾಡಿ ಹೋಗುವಂಥ
ಮಾಯೆ ಎಂಥಾದೋ
ಓ ಶಿಷ್ಯಾಗ್ರತನಯ ನಿನ್ನ ನೀನೇ ಅರಿತು ನೋಡಯ್ಯಾ

ಅವನಿಯಲ್ಲಿ ಕೈವಾರವು ಶ್ರೀ ಅಮರ ನಾರೇಯಣಸ್ವಾಮಿ
ಕಾಮಿತಾರ್ಥ ವರಪ್ರದನೋ
ಓ ಶಿಷ್ಯಾಗ್ರತನಯ ಕರುಣೆಯಿಂದಲೆಮ್ಮ ಕಾಯುವನೋ.

ಜಾತಿ, ನಿರ್ವಸತೀಕರಣ ಹಾಗೂ ಜನಗಣತಿ

೮

ಇಂದಿನ ಸಂದರ್ಭದಲ್ಲಿ ಜಾತಿಯ ಜನಗಣತಿ ಅತ್ಯಂತ ಚರ್ಚೆಗೆ ಗ್ರಾಸವಾದ ವಿಷಯ. ಒಂದನೇದಾಗಿ, ಜಾತಿಯನ್ನು ಜನಗಣತಿಯಲ್ಲಿ ದಾಖಲಿಸಬೇಕೆ ಅಥವಾ ಅದಕ್ಕೆ ಹೊರತಾಗಿರಬೇಕೆ ಎಂಬುದು ಇಲ್ಲಿರುವ ಪ್ರಮುಖ ಚರ್ಚೆ. ಇದೇ ಸಂದರ್ಭದಲ್ಲಿ ಇನ್ನೊಂದು ಚರ್ಚೆಯನ್ನು ಕೂಡ ಗುರುತಿಸುವುದು ಅವಶ್ಯಕ. ಅದನ್ನು ಮುಖ್ಯ ಚರ್ಚೆಯ ಭಾಗವಾಗಿ ಅಥವಾ ರೂಪವಾಗಿ ಗುರುತಿಸದಿದ್ದರೂ ಅದರ ಮಹತ್ವವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಇದು ಮುಖ್ಯವಾಗಿ ವಿವಿಧ "ಧರ್ಮ"ದೊಳಗಿರುವ ಜಾತಿಗಳನ್ನು ಗುರುತಿಸುವುದಾಗಿದೆ. ಜಾತಿಗಳನ್ನು ಒಪ್ಪದಿದ್ದ ಧರ್ಮಗಳಲ್ಲಿ "ಜಾತಿಗಳ" ಅಸ್ತಿತ್ವವನ್ನು ಅಥವಾ ಐಡಂಟಿಟಿಯನ್ನು ಜನಗಣತಿಯಲ್ಲಿ ಗುರುತಿಸಬೇಕೆ? ಅಥವಾ ಅವುಗಳನ್ನು ಹೊಸತಾಗಿ ನಿರ್ಮಿಸಬೇಕೆ?

ಇವೆಲ್ಲಾ ರಾಜಕಾರಣಕ್ಕೆ ಮೀಸಲಾತಿ ಒಂದು ಕಾರಣವೆಂದು ಪ್ರತಿಪಾದಿಸಲಾಗುತ್ತಿದೆ. ಹತ್ತು ಹಲವುಬಾರಿ ನಮ್ಮ ಸರ್ವೋಚ್ಚನ್ಯಾಯಲಯವು ಜಾತಿಯ ನಿಖರವಾದ ಅಂಕಿಅಂಶಗಳನ್ನು ಕೇಳುತ್ತಾ ಬಂದದ್ದು ಇದಕ್ಕೆ ಬಹುಮುಖ್ಯ ಕಾರಣ. ಈ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಕುರಿತಾದ ನಿಖರ ಸಂಖ್ಯೆ ಸಮಸ್ಯೆಯಾಗುತ್ತಾ ಹೋಯಿತು. ಅಖಿಲ ಭಾರತ ಮಟ್ಟದಲ್ಲಿ ಹಿಂದುಳಿದ ವರ್ಗಗಳ ಸಂಖ್ಯೆ 52 ಶೇಕಡಾವೆಂದು ಒಪ್ಪಿಕೊಂಡರೂ ಅದರ ನಿಖರತೆ ಕುರಿತು ಜಿಗುಪ್ಸೆ ಇದೆ. ಕೆಲವರ ಪ್ರಕಾರ ಹಿಂದುಳಿದ ವರ್ಗಗಳ ಸಂಖ್ಯೆ 49 ಶೇಕಡಾ ಇದೆ. ವಾಸ್ತವವಾಗಿ ಜಾತಿ ಕೇಂದ್ರೀಕೃತವಾದ ಜನಗಣತಿಯ ಬೇಡಿಕೆ ಹೊಸತೇನಲ್ಲ. 2001 ಜನಗಣತಿಯ ಸಂದರ್ಭದಲ್ಲೂ ಇದೇ ರೀತಿಯ ಒತ್ತಡ ಹಾಗೂ ಬೇಡಿಕೆ ಬಂದಿತ್ತು, ಆದರೆ ಅಂದಿನ ಸರಕಾರ ಇದಕ್ಕೆ ಕಿವಿಗೊಡಲಿಲ್ಲ.

ಈ ಸಂದರ್ಭದಲ್ಲಿ ಎರಡು ರೀತಿಯ ವಾದವನ್ನು ಗುರುತಿಸಬೇಕು: ಒಂದು ವಾದ ಜನಗಣತಿಯಲ್ಲಿ ಜಾತಿಯ ದಾಖಲಾತಿಯನ್ನು ಅಥವಾ ಗುರುತಿಸುವಿಕೆಯನ್ನು ವಿರೋಧಿಸುತ್ತದೆ. ಜಾತಿ ಕೇಂದ್ರೀಕೃತ ಜನಗಣತಿಯನ್ನು ವಿರೋಧಿಸುವವರ ಪ್ರಕಾರ ಜನಗಣತಿ ಜಾತಿಗಳ ನಡುವೆ ತೀವ್ರತರವಾದ ಬಿಕ್ಕಟ್ಟನ್ನು ಸೃಷ್ಟಿಸುವುದರಲ್ಲಿ ಅನುಮಾನವೇನಿಲ್ಲ, ಜಾತ್ಯತೀತ ರಾಷ್ಟ್ರವೆಂದು ಘೋಷಿಸಿದ ದೇಶ ಜಾತಿಯನ್ನು ಮುಂದಿಟ್ಟು ಜನಗಣತಿಯನ್ನು ಮಾಡುವುದು ಸರಿಯಲ್ಲ, ಜಾತಿಯ ಜನಗಣತಿ ಜಾತ್ಯತೀತ ಮೌಲ್ಯಗಳ ವಿರುದ್ಧ ಹೋಗುತ್ತದೆ ಇತ್ಯಾದಿ. ಅಲ್ಲದೇ ಇದು ಜಾತಿಯ ವ್ಯವಸ್ಥೆಯನ್ನು ಅಥವಾ ಸಂರಚನೆಯನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ ಎಂದೆಲ್ಲಾ ವಾದಿಸುತ್ತಾರೆ. ಇದನ್ನು ಪುಷ್ಟೀಕರಿಸಲು 1930ರ ಜನಗಣತಿಯ ಅಥವಾ ಸೆನ್ಸಸ್ ಕಮೀಷನರ್ ಆಗಿದ್ದ ಸರ್ ಹಟ್ಟನ್‌ನ ಅಂದಿನ ವಾದವನ್ನು ಮುಂದಿಡುತ್ತಾರೆ. ಹಟ್ಟನ್ ತನ್ನ "ರಿಟರ್ನ್ ಆಫ್ ಕಾಸ್ಟ್"ನಲ್ಲಿ ಈ ರೀತಿ ವಾದಿಸುತ್ತಾನೆ.

A certain amount of criticism has been directed at the Census for taking any note at all of caste. It has been alleged that the mere act of labeling persons as belonging to a caste tends to perpetuate the system. It is, however, difficult to see why the record of a fact that actually exists should lend to stabilize that existence. It is just as easy to argue and with at least as much truth, that it is impossible to get rid of any institution by ignoring its existence like a proverbial ostrich."

ಜಾತಿಯ ಜನಗಣತಿ ನಡೆದದ್ದು ಪ್ರಥಮ ಬಾರಿಗೆ 1930ರಲ್ಲಿ, ಅದರಲ್ಲೂ ವಸಾಹತುಶಾಹಿಯ ಸಂದರ್ಭದಲ್ಲಿ.ವಸಾಹತುಶಾಹಿಗೆ ಜನಗಣತಿಯನ್ನು ಪ್ರಥಮಬಾರಿ ಜಾತಿಯಾಧಾರಿತವಾಗಿ ನಡೆಸಿದಾಗ ಅದರ ವಿಶಾಲವಾದ ಅಜೆಂಡಾವನ್ನು ನಾವು ಮರೆಯಬಾರದು. ಜಾತಿಯ ಜನಗಣತಿ ಮುಖಾಂತರ ಭಾರತದಲ್ಲಿ ಅಸಂಖ್ಯಾತ ಸಾಮಾಜಿಕ ಐಡೆಂಟಿಟೆಗಳನ್ನು ನಿರ್ಮಿಸುವುದು. ಎರಡನೇದಾಗಿ ರಾಜಕೀಯವಾಗಿ ನಿರ್ಮಿಸಲ್ಪಟ್ಟ ಐಡೆಂಟಿಟಿಗಳನ್ನು ಸಾಮಾಜಿಕ ಸಂರಚನೆಗಳಲ್ಲಿ ವಿರೋಧಗಳಾಗಿ ಗುರುತಿಸುವುದು. ಈ ಸಂದರ್ಭದಲ್ಲಿ ಒಂದು ವಾದದ ಉಲ್ಲೇಖ ಮುಖ್ಯ. ಅದೇನಂದರೆ ವಸಾಹತುಶಾಹಿ ಜನಗಣತಿಯ ಮುಖಾಂತರ ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸಿತ್ತು. ವಾಸ್ತವವಾಗಿ ವಸಾಹತುಶಾಹಿ ಏಕಕಾಲದಲ್ಲಿ ಮೂರು ಕೆಲಸಗಳನ್ನು ಮಾಡಿತ್ತು; ಮೊದಲನೇದಾಗಿ ಅದು ಜಾತಿಯ ಚೌಕಟ್ಟನ್ನು ಒಂದೆಡೆ ಗಟ್ಟಿಗೊಳಿ ಸುತ್ತಾ ಇನ್ನೊಂದೆಡೆ ವ್ಯವಸ್ಥೆಯನ್ನು ಶಿಥಿಲಗೊಳಿಸಿತ್ತು. ಅಲ್ಲದೇ ಇದೇ ಸಂದರ್ಭದಲ್ಲಿ ಬಹಳಷ್ಟು ಜಾತಿಗಳು ವಸಾಹತುಶಾಹಿಯ ನಿರ್ಮಿತಿಗಳಾದವು. ಇದಕ್ಕೆ ಒಂದು ಕಾರಣವಿದೆ. ಬಹಳಷ್ಟು ಜಾತಿಗಳು ವಸಾಹತುಶಾಹಿಯ 'ಬಾಬು"ಗಳ ಅಕ್ಷರ ಜ್ಞಾನದ ತಪ್ಪಿನಿಂದ ಸರಕಾರಿ ಪಟ್ಟಿಯಲ್ಲಿ ಹುಟ್ಟಿ ಕೊಂಡವು.

ವಾಸ್ತವವಾಗಿ "ಕಾಸ್ಟ್" ಶಬ್ದದ ಉತ್ಪತ್ತಿ ವಸಾಹತುಶಾಹಿಯ ಶೋಧನೆ ಎಂದರೂ ತಪ್ಪಾಗಲಾರದು, ವಸಾಹತುಶಾಹಿಗಳಲ್ಲಿ ಪೋರ್ಚುಗೀಸರು ಹಾಗೂ ಸ್ಪೇನಿಯರು ಇದನ್ನು "ಕಾಸ್ಟ ಎಂಬರ್ಥದಲ್ಲಿ ಉಪಯೋಗಿಸಿದರು. ಬ್ರಿಟಿಷ್ ವಸಾಹತುಗಳಲ್ಲಿ ಇದು "ಕಾಸ್ಟ್" ಆಗಿ ಪರಿವರ್ತಿತವಾಯಿತು. ಆಸಕ್ತಿಎಂದರೆ ವಸಾಹತುಶಾಹಿ ಕಾಸ್ಟ್ ಎಂಬ ಶಬ್ದದ ಪ್ರಯೋಗ ಭಾರತಕ್ಕೆ ಮಾತ್ರ ಸೀಮಿತಗೊಳಿಸಲಿಲ್ಲ. ಎಲ್ಲೆಲ್ಲಾ ವಸಾಹತುಶಾಹಿ ತನ್ನ ಕದಂಭ ಬಾಹುಗಳನ್ನು ವಿಸ್ತರಿಸುತ್ತಾ ಹೋಯಿತೋ ಅಲ್ಲೆಲ್ಲಾ ಅದರ ಪ್ರಯೋಗವನ್ನು ಮಾಡಿತ್ತು. ಇದರ ಪ್ರಯೋಗ ನಿಚ್ಚಳವಾಗಿ ಕಂಡುಬರುವುದು ಸ್ಪಾನೀಯಾರ್ಡ್ ಅಮೇರಿಕಾ, ಲ್ಯಾಟಿನ್ ಅಮೇರಿಕಾದ ಮೆಕ್ಸಿಕೋ, ಫಿಲಿಫೈನ್‌ನ ಮೆಟಿಸ್ ಇತ್ಯಾದಿ ಮೂಲನಿವಾಸಿಗಳನ್ನು ಗುರುತಿಸುವಲ್ಲಿ "ಕಾಸ್ಟ್" ಶಬ್ದವನ್ನು ವಸಾಹತುಶಾಹಿ ಉಪಯೋಗಿಸಿತ್ತು.

ವಸಾಹತುಶಾಹಿ "ಕಾಸ್ಟ್'ಅನ್ನು ತನ್ನ ವಸಾಹತುಗಳಲ್ಲಿ ನಿರ್ಮಿಸುವಾಗ ಕೆಲವು ಪೂರ್ವನಿರ್ಧಾರಿತ ಪರಿಕಲ್ಪನೆಗಳನ್ನು ಮುಂದಿಟ್ಟು ಸಾಮಾಜಿಕ ಸಂರಚನೆಯನ್ನು ವಿಶ್ಲೇಷಿಸಿತ್ತು- ಅಂದರೆ "ಕಾಸ್ಟ್" ಎಂಬುದು ಒಂದು ಪೂರ್ವ ನಿರ್ಧಾರಿತ ಚೌಕಟ್ಟು, ಆ ಚೌಕಟ್ಟು 'ಜಾತಿಗೆ" ಸಮಾನವಾಗಿದ್ದ ಕಾರಣ 'ಜಾತಿ"

ಜಾತಿಯ ಜನಗಣತಿ ನಡೆದದ್ದು ಪ್ರಥಮ ಬಾರಿಗೆ ೧೯೩೦ರಲ್ಲಿ, ಅದರಲ್ಲೂ ವಸಾಹತುಶಾಹಿಯ ಸಂದರ್ಭದಲ್ಲಿ. ವಸಾಹತುಶಾಹಿಗೆ ಜನಗಣತಿಯನ್ನು ಪ್ರಥಮಬಾರಿ ಜಾತಿಯಾಧಾರಿತವಾಗಿ ನಡೆಸಿದಾಗ ಅದರ ವಿಶಾಲವಾದ ಅಜೆಂಟಾವನ್ನು ನಾವು ಮರೆಯಬಾರದು. ಜಾತಿಯ ಜನಗಣತಿ ಮುಖಾಂತರ ಭಾರತದಲ್ಲಿ ಅಸಂಖ್ಯಾತ ಸಾಮಾಜಿಕ ಐಡೆಂಟಿಟೆಗಳನ್ನು ನಿರ್ಮಿಸುವುದು .ಎರಡನೇದಾಗಿ ರಾಜಕೀಯವಾಗಿ ನಿರ್ಮಿಸಲ್ಪಟ್ಟ ಐಡೆಂಟಿಟಗಳನ್ನು ಸಾಮಾಜಿಕ ಸಂರಚನೆಗಳಲ್ಲಿ ವಿರೋಧಗಳಾಗಿ ಗುರುತಿಸುವುದು. ಈ ಸಂದರ್ಭದಲ್ಲಿ ಒಂದು ವಾದದ ಉಲ್ಲೇಖ ಮುಖ್ಯ. ಅದೇನಂದರೆ ವಸಾಹತುಶಾಹಿ ಜನಗಣತಿಯ ಮುಖಾಂತರ ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸಿತ್ತು. ವಾಸ್ತವವಾಗಿ ವಸಾಹತುಶಾಹಿ ಏಕಕಾಲದಲ್ಲಿ ಮೂರು ಕೆಲಸಗಳನ್ನು ಮಾಡಿತ್ತು;

ಅಂತಿಮ ಹಂತದಲ್ಲಿ "ಕಾಸ್ಟ್"ಆಗಿ ಪರಿವರ್ತಿತವಾಯಿತು. ಅದರಲ್ಲಿ ಶ್ರೇಣೀಕೃತ ವ್ಯವಸ್ಥೆ, ಸಾಮಾಜಿಕ ಸ್ಥಾನಮಾನ ಇತ್ಯಾದಿಗಳನ್ನು ಸೇರಿಸಬೇಕು. ಮೆಕ್ಸಿಕೋ ಸಂದರ್ಭದಲ್ಲಿ ಅಂದಿನ ವಸಾಹತುಶಾಹಿ ಸೃಷ್ಟಿಸಿದ ಶ್ರೇಣೀಕೃತ ವ್ಯವಸ್ಥೆಯನ್ನು ಇಲ್ಲಿ ಉಲ್ಲೇಖಿಸಬೇಕು. ಈ ವ್ಯವಸ್ಥೆಯಲ್ಲಿ ಮೂರು ವರ್ಗಗಳಿದ್ದವು: ಮೇಲ್ವರ್ಗದಲ್ಲಿ ಮೆಕ್ಸಿಕೋದಲ್ಲೇ ಹುಟ್ಟಿದ ಸ್ಪಾನೀಷರಾದ ಗಚುಪ್ಯೇನ್ಸ್‌ಗಳು, ಎರಡನೇ ಹಂತದಲ್ಲಿದ್ದದ್ದು "ಕ್ರಿಯೋಲ್ಲಸ್"ಗಳು'– ಇವರು ಸ್ಪಾನೀಷ್ ಕುಟುಂಬಗಳಿಗೆ ಹುಟ್ಟಿದ ಸಂಜಾತರು.

ಮೂರನೇ ಹಂತದಲ್ಲಿದ್ದದ್ದು ಮೆಕ್ಸಿಕೋ ಮೂಲ ನಿವಾಸಿಗಳು. ಇದೇ ಪೂರ್ವ ನಿರ್ಧಾರಿತ ಚೌಕಟ್ಟು ಇಟ್ಟುಕೊಂಡು ಭಾರತದ ಸಾಮಾಜಿಕ ಸಂರಚನೆಯನ್ನು "ಕಾಸ್ಟ್" ಎಂದು ವಸಾಹತುಶಾಹಿ ನಾಮಕರಣ ಮಾಡಿದ್ದು ಸತ್ಯ ಸಂಗತಿ. ಆದಕಾರಣ ನಮ್ಮ ಸಾಮಾಜಿಕ ಹಾಗೂ ಅಕಡೆಮಿಕ್ ಸಂಕಥನಗಳಲ್ಲಿ ಒಂದು ಮಹತ್ತರ ಬದಲಾವಣೆ ಅವಶ್ಯಕ. ನಿರ್ವಸತೀಕರಣ ಅಥವಾ ಅವಸಾಹತುಶಾಹೀಕರಣ ಭಾಗವಾಗಿ "ಕಾಸ್ಟ್" ಬದಲಿಗೆ "ಜಾತಿ" ಶಬ್ದದ ಪ್ರಯೋಗ ಅವಶ್ಯಕ ಅನಿಸುತ್ತದೆ.

ಇಲ್ಲೊಂದು ಹೊಸತಾಗಿರುವ ವಾದವನ್ನು ಮುಂದಿಡುವುದು ಅವಶ್ಯಕ ಹಾಗೂ ಅನಿವಾರ್ಯ. ಅದೇನೆಂದರೆ– "ಕಾಸ್ಟ್"ವಾಸ್ತವವಾಗಿ "ಜಾತಿ"ಯಲ್ಲ. "ಜಾತಿ", "ಕಾಸ್ಟ್"ನ ಶೋಧನೆಯೊಂದಿಗೆ ಹುಟ್ಟಿತ್ತು ಎಂಬುದು ಕೂಡ ಸರಿಯಲ್ಲ."ಜಾತಿಗೊಂದು ಇತಿಹಾಸವಿದೆ. ಅದು "ಕಾಸ್ಟ್" ಗಿಂತಲೂ ಪ್ರಾಚೀನ. ವಸಾಹತುಶಾಹಿ ಮಾಡಿದ ಅತೀ ದೊಡ್ಡ ತಪ್ಪೆಂದರೆ ಅದು ಎಲ್ಲಾ ಜಾತಿಗಳನ್ನು ತನ್ನ "ಕಾಸ್ಟ್"ಚೌಕಟ್ಟಿನಲ್ಲಿ ವಿಶ್ಲೇಷಿಸಿದ್ದು. ನೈಜವಾಗಿ ನೋಡುವುದಾದರೆ 'ಜಾತಿ' ಒಂದು ಸಂಪೂರ್ಣಗೊಳ್ಳದ ಸಾಮಾಜಿಕ ಪ್ರಕ್ರಿಯೆ ಹಾಗೂ ಸಂರಚನೆ. ವಸಾಹತು ಕಾಲದ ಪೂರ್ವದಿಂದಲೂ ಅದು ಅಪೂರ್ಣಗೊಂಡ ಪ್ರಕ್ರಿಯೆಯಾಗಿತ್ತು ಎಂದರೂ ತಪ್ಪಾಗಲಾರದು. ಆದಕಾರಣ ಕಾಲ ಕಾಲಕ್ಕೆ ಅನುಗುಣವಾಗಿ ಹೊಸ ಹೊಸ ಜಾತಿಗಳು ನಿರ್ಮಾಣಗೊಳ್ಳುವುದು ಅನಿವಾರ್ಯವಾಯಿತು. ಹೊಸ ಹೊಸ ಜಾತಿಗಳ ನಿರ್ಮಿತಿಯಲ್ಲಿ ವಸಾಹತುಶಾಹಿ ನಿರ್ಣಾಯಕ ಪಾತ್ರ ವಹಿಸಿದ್ದನ್ನು ಕೂಡ ನಾವು ಮರೆಯಬಾರದು. ಎಷ್ಟೋ ಜಾತಿಗಳು ವಸಾಹತುಶಾಹಿ ಸಂದರ್ಭದಲ್ಲಿ ರಾಜಕೀಯಕ್ಕೆ ಅನುಗುಣವಾಗಿ ಅಥವಾ ಮುಖಾಮುಖಿಯಾಗಿ ಹುಟ್ಟಿಕೊಂಡವು.

ಇಲ್ಲೊಂದು ಮಿಥ್ಯೆ ಇದೆ, ಈ ಮಿಥ್ಯೆ 'ಜಾತಿ' ಯನ್ನು ಭಾರತಕ್ಕೆ ಮಾತ್ರ ಸೀಮಿತಗೊಳಿಸುತ್ತದೆ. ವಾಸ್ತವವಾಗಿ "ಜಾತಿ" ಭಾರತಕ್ಕೆ ಮಾತ್ರ ಸೀಮಿತಗೊಂಡಿಲ್ಲ. ಅದು ದಕ್ಷಿಣಾ ಏಷ್ಯಾದಲ್ಲಿ ಸಾರ್ವತ್ರಿಕವಾಗಿ ಹರಡಿದೆ. ಶ್ರೀಲಂಕಾದಲ್ಲಿ ಇರುವ 'ಜಾತಿ'ಗಳನ್ನು ಗಮನಿಸಿ: ಗೋಯಿಗಾನ, ವಸಗಾಮ ಇತ್ಯಾದಿ. ಪಾಕಿಸ್ತಾನದಲ್ಲೂ ಜಾತಿ ವ್ಯವಸ್ಥೆ ನಿಚ್ಚಳವಾಗಿ ಇದೆ.ನೇಪಾಳ, ಬಾಂಗ್ಲಾದೇಶ ಇದಕ್ಕೆ ಅಪವಾದವಲ್ಲ.

ಜನಗಣತಿ ಜಾತಿಗೆ ಹೊಸ ಆಯಾಮವನ್ನು ನೀಡಿದ್ದನ್ನು ನಾವು ಅಲ್ಲಗಳೆಯಲು ಸಾಧ್ಯವಿಲ್ಲ. ಅದು ಬಹುರೂಪಿ ವಿರೋಧಗಳನ್ನು ಸೃಷ್ಟಿಸಿದ್ದು ಕೂಡ ಸತ್ಯ: ಬಹುಸಂಖ್ಯಾಕ ವರ್ಸಸ್ ಅಲ್ಪ ಸಂಖ್ಯಾಕ, ಹಿಂದುಳಿದ ವರ್ಸಸ್ ಮುಂದುವರಿದ, ಪ್ರಬಲ ವರ್ಸಸ್ ಬಲಹೀನ, ಶಕ್ತಿವಂತ ವರ್ಸಸ್ ಶಕ್ತಿಹೀನ ಇತ್ಯಾದಿ

ಜನಗಣತಿಯ ರಾಜಕಾರಣದಲ್ಲಿ ಮೊತ್ತಮೊದಲು

ಜಾತಿಯ ಕುರಿತು ಬೆಳಕು ಚೆಲ್ಲುವುದು 1901ರ ಜನಗಣತಿ ಎಂದರೂ ತಪ್ಪಾಗಲಾರದು.1901ರ ಜನಗಣ ತಿಯ ಒಂದು ವಿಶೇಷ ಗುಣವೆಂದರೆ ಅದು ಭಾರತದಲ್ಲಿ ಜಾತಿಯ ಉಗಮಕ್ಕೆ ಹೊಸಥಿಯರಿಯನ್ನು ನೀಡುವ ಯತ್ನ ಮಾಡುತ್ತದೆ. ಅದರ ಪ್ರಕಾರ "ಜಾತಿ ಸಿಧ್ಧಾಂತವು ಪರ್ಶಿಯನ್‌ನಿಂದ ಬಂದಿರಬಹುದು" ವಸಾಹತುಶಾಹಿ ಪ್ರಕಾರ "ಆ ಸಿದ್ದಾಂತಕ್ಕೆ ಯಾವುದೇ ತಳಹದಿ ಇಲ್ಲದಿದ್ದರೂ ಅದನ್ನು ಸಾರ್ವತ್ರಿಕವಾಗಿ ಎಲ್ಲರೂ ಒಪ್ಪಿಕೊಳ್ಳುತ್ತಾರೆ" ಈವಾದ ಬಹಳ ವಿವಾದಗಳಿಗೆ ದಾರಿಮಾಡಿ ಕೊಟ್ಟಿದ್ದು ವಾಸ್ತವ. ಇಂದಿನ ಸಂದರ್ಭದಲ್ಲಿ ಜಾತಿ ಕೇಂದ್ರಿಕೃತ ಜನಗಣತಿಗೆ ವಿವಿಧ ವಿರೋಧಗಳಲ್ಲದೇ ವಾದಗಳೂ ಹುಟ್ಟಿಕೊಂಡಿವೆ.

ಬಲಿಯಾದ್ದದ್ದು ವಿವಿಧ ಧರ್ಮಗಳೇ ಹೊರತು 'ಜಾತಿ' ಯಲ್ಲ. ಅಂದರೆ ಆರಂಭದ ಜನಗಣತಿಗಳು ಧರ್ಮಾಧಾರಿತವಾಗಿದ್ದವು. ಜನಗಣತಿಯಲ್ಲಿ ಪ್ರಮುಖ ಧರ್ಮಗಳೆಂದು ಉಲ್ಲೇಖಗೊಳ್ಳುವ ಧರ್ಮಗಳೆಂದರೆ. ಸಿಖ್,ಮೊಹಮ್ಮದನ್, ಬುದ್ದಿಸ್ಟ್, ಕ್ರಿಶ್ಚಿಯನ್, ಆಂಗ್ಲೋಇಂಡಿಯನ್ ಇತ್ಯಾದಿ. ಇಲ್ಲಿ ಜಾತಿ ಒಂದು ಅಂಶವಾಗಿತ್ತೇ ಹೊರತು, ಅತ್ಯಂತ ಪ್ರಮುಖ ವಿಷಯವಾಗಿರಲಿಲ್ಲ. ಅಂದಿನ ಜನಗಣತಿಯಲ್ಲೂ ನ್ಯೂನತೆಗಳು ಹೇರಳವಾಗಿದ್ದವು. ಕೆಲವೊಮ್ಮೆ ಪ್ರಾಂತೀಯವಾರು ಜನಗಣತಿ ಅಸ್ಪಷ್ಟ ಉತ್ತರವನ್ನು ನೀಡುತ್ತಿತ್ತು.

ಜಾತಿಯ ಕುರಿತು ಬೆಳಕು ಚೆಲ್ಲುವುದು 1901ರ ಜನಗಣತಿ ಎಂದರೂ ತಪ್ಪಾಗಲಾರದು.1901ರ ಜನಗಣತಿಯ ಒಂದು ವಿಶೇಷ ಗುಣವೆಂದರೆ ಅದು ಭಾರತದಲ್ಲಿ ಜಾತಿಯ ಉಗಮಕ್ಕೆ ಹೊಸಥಿಯರಿಯನ್ನು ನೀಡುವ ಯತ್ನ ಮಾಡುತ್ತದೆ. ಅದರ ಪ್ರಕಾರ "ಜಾತಿ ಸಿಧ್ಧಾಂತವು ಪರ್ಶಿಯನ್‌ನಿಂದ ಬಂದಿರಬಹುದು" ವಸಾಹತುಶಾಹಿ ಪ್ರಕಾರ "ಆ ಸಿದ್ಧಾಂತಕ್ಕೆ ಯಾವುದೇ ತಳಹದಿ ಇಲ್ಲದಿದ್ದರೂ ಅದನ್ನು ಸಾರ್ವತ್ರಿಕವಾಗಿ ಎಲ್ಲರೂ ಒಪ್ಪಿಕೊಳ್ಳುತ್ತಾರೆ" ಈ ವಾದ ಬಹಳ ವಿವಾದಗಳಿಗೆ ದಾರಿ ಮಾಡಿ ಕೊಟ್ಟಿದ್ದು ವಾಸ್ತವ.

ಇಂದಿನ ಸಂದರ್ಭದಲ್ಲಿ ಜಾತಿ ಕೇಂದ್ರಿ ಕೃತ ಜನಗಣತಿಗೆ ವಿವಿಧ ವಿರೋಧಗಳಲ್ಲದೇ ವಾದಗಳೂ ಹುಟ್ಟಿಕೊಂಡಿವೆ. ಜಾತಿ ಕೇಂದ್ರೀಕೃತ ಜನಗಣತಿ ಭವಿಷ್ಯದಲ್ಲಿ ಹೊಸ ಹೊಸ ಜಾತಿಗಳಿಗೆ, ಹೊಸ ಹೊಸ ಸಂಘರ್ಷಗಳಿಗೆ ದಾರಿಮಾಡಿ ಕೊಡುತ್ತದೆ ಎಂಬ ವಾದವಿದೆ. ಇತಿಹಾಸದಲ್ಲಿ ಜನಗಣತಿ ಹೊಸ ಹೊಸ ಜಾತಿಗಳಿಗಾಗಿ ಮಾಡಿಕೊಟ್ಟದ್ದು ವಾಸ್ತವ. ಅದು ವಸಾಹತುಶಾಹಿಯ ಸಂದರ್ಭದಿಂದಲೇ ನೋಡಬೇಕು. ಜನಗಣತಿ ಮಾಡಿದ ಹಲವು ಅವಂತಾರಗಳಲ್ಲಿ ಜಾತಿಗಳ ನಿರ್ಮಿತಿಯೂ ಒಂದು. ಇದಕ್ಕೆ ಅಕ್ಷರ ಜ್ಞಾನವೂ ಒಂದು ಕಾರಣ.

ಒಂದೆಡೆ ಅಕ್ಷರ ಜ್ಞಾನ ಆಧುನಿಕತೆಯನ್ನು ಅಳವಡಿಸಲು ಸಹಾಯ ಮಾಡಿದರೆ ಮತ್ತೊಂದೆಡೆ ಅದೇ ಅಕ್ಷರ ಜ್ಞಾನ ಸಾಮಾಜಿಕ ಸಂರಚನೆಯಲ್ಲಿ ಮುಖಾಮುಖಿ ವಿರೋಧಗಳನ್ನು ಸೃಷ್ಟಿಸಲು ಅನುವು ಮಾಡಿಕೊಟ್ಟಿತ್ತು. ಜನಗಣತಿ ಇದರ ಒಂದು ಭಾಗವಷ್ಟೆ. ಅಂದಿನ ಸಂದರ್ಭದಲ್ಲಿ ಜನಗಣತಿಗಾಗಿ ನಿಯೋಜಿತವಾದ ಸರಕಾರಿ ವರ್ಗಕ್ಕೆ ಅಥವಾ 'ಬಾಬು'ಗಳಿಗೆ ಜಾತಿಯ ಕುರಿತಾದ ಆಳವಾದ ಅನುಭವವಿರಲಿಲ್ಲ. ಈ ಅನುಭವದ ಕೊರತೆ ವಿವಿಧ ಅವಂತಾರಗಳಿಗೆ ಕಾರಣವಾಯಿತು. ಬಹಳಷ್ಟು ಸಲ ಅಕ್ಷರ ಜ್ಞಾನದ ಸರಕಾರಿ ವರ್ಗ ತನ್ನ ಅನುಭವದ

ಕೊರತೆಯಿಂದ ಜನಗಣತಿಯ ಪಟ್ಟಿಯಲ್ಲಿ ತಪ್ಪು ತಪ್ಪಾಗಿ ಹೆಸರುಗಳನ್ನು ಬರೆಯಿತು. ಆದಕಾರಣ ಒಂದು ಸಣ್ಣ ಅಕ್ಷರ ತಪ್ಪು ಹತ್ತು ಹಲವು ಜಾತಿಗಳನ್ನು ಸೃಷ್ಟಿಸಿತ್ತು. ವಾಸ್ತವವಾಗಿ ಒಂದೇ ಹೆಸರಿಗೆ ಅನ್ವಯವಾಗುವ ಅಥವಾ ಸರಿಹೊಂದುವ ಹತ್ತು ಹಲವು ಜಾತಿಗಳು ನಿರ್ಮಿತಿಯಾದದ್ದು ಇದೇ ಸಂದರ್ಭಲ್ಲಿ.

ಆ ತಪ್ಪುಗಳು ಮುಂದೇ ಹಾಗೇನೆ ಉಳಿದವು. ಇದಕ್ಕೆ ಹತ್ತು ಹಲವು ಉದಾಹರಣೆಗಳನ್ನು ನೀಡಬಹುದು. ಕರ್ನಾಟಕದಲ್ಲಿ ನಾಯಕ್, ನಾಯ್ಕೆನಾಯ್ಕ್, ನಾಯಕಾ ಇತ್ಯಾದಿಗಳನ್ನು ಗುರುತಿಸಬಹುದು. ಈ ರೀತಿಯ ಗುರುತಿಸುವಿಕೆ ಅಥವಾ "ಚಾರಿತ್ರಿಕ ತಪ್ಪುಗಳು"ಒಂದು ರೀತಿಯಲ್ಲಿ ಒಳ್ಳೆಯದು. ಯಾಕೆಂದರೆ ಇವು ಅತ್ಯಂತ ಕಡಿಮೆ ಜನಸಂಖ್ಯೆಯ ಆಥವಾ ಅತ್ಯಂತ ಹಿಂದುಳಿದ/ಐತಿಹಾಸಿಕವಾಗಿ ಗುರುತಿಸಲ್ಪಡದ ಜಾತಿಗಳನ್ನು ನಿರ್ಮಿಸಿತ್ತು ಅಲ್ಲದೇ ಐಡೆಂಟಿಟಿಗಳನ್ನು ನೀಡಿತ್ತು. ರಾಜಕೀಯವಾಗಿ ಸರಕಾರಿ ಪಟ್ಟಿಯಲ್ಲಿ ಜಾತಿಗಳು ಹೊಸ ಐಡೆಂಟಿಟಿಗಳನ್ನು ಪಡೆದುಕೊಂಡವು. ಇದರರ್ಥ ಐಡೆಂಟಿಟಿಯ ರಾಜಕಾರಣ ಸಂಪೂರ್ಣಗೊಂಡಿದೆ ಎಂದರ್ಥವಲ್ಲ.

ಈ ಸಂದರ್ಭದಲ್ಲಿ ಜಾತಿಗಳ ಬಹುರೂಪದ ರಾಜಕಾರಣವನ್ನು ಅರ್ಥ ಮಾಡಿಕೊಳ್ಳಬೇಕು. ಇದನ್ನು ಸ್ವಾತಂತ್ರೋತ್ತರ ಕಾಲಾವಧಿಯಲ್ಲಿ ನೋಡಬಹುದು. ರಾಜಕೀಯ ಐಡೆಂಟಿಟಿಗಾಗಿ ಜಾತಿಗಳು ಮೀಸಲಾತಿಯ ವಾದವನ್ನು ಮುಂದಿಡುತ್ತಿರುವುದು ಒಂದು ಬಹು ಮುಖ್ಯವಾದ ಅಂಶವೆನ್ನಬಹುದು. ಭಾರತದ ಒಂದು ದುರಂತವೆಂದರೆ ಯಾವುದಾದರೊಂದು ಜಾತಿಯನ್ನು ಮೀಸಲಾತಿಯ ಪಟ್ಟಿಯಲ್ಲಿ ಸೇರಿಸಿದ ನಂತರ ಅದನ್ನು ಹೊರಗಿಡುವುದು ಅಷ್ಟು ಸುಲಭ ಸಾಧ್ಯವಿಲ್ಲದ ಮಾತು. ಎರಡನೇದಾಗಿ ಜಾತಿಗಳು ಮೀಸಲಾತಿ ಸಂದರ್ಭದಲ್ಲಿ ತಮ್ಮನ್ನು ತಾವು ಹಿಂದುಳಿದ ವರ್ಗಗಳೆಂದು ಘೋಷಿಸುತ್ತವೆ ಆದರೆ ಸಾಮಾಜಿಕ ಸಂದರ್ಭದಲ್ಲಿ ತಮ್ಮನ್ನು ತಾವು ಮುಂದುವರಿದ ಜಾತಿಗಳೆಂದು ಪ್ರತಿಪಾದಿಸುತ್ತವೆ. ಇದು ಜಾತಿಗಳಲ್ಲಿರುವ ವೈರುಧ್ಯಗಳೆಂದು ಕರೆಯಬಹುದು. ಅದಕ್ಕೆ ಕರ್ನಾಟಕದ ಅಕ್ಕಸಾಲಿಗ ಅಥವಾ ವಿಶ್ವಕರ್ಮರೇ ಸಾಕ್ಷಿ. ಇವುಗಳ ನಡುವೆ ಜಾತಿಗಳು ತಮ್ಮ ಶಕ್ತಿಯನ್ನು ಗುರುತಿಸಲು ಇನ್ನಿತರ ಜಾತಿಗಳನ್ನು ತನ್ನ ಕಕ್ಷೆಯಲ್ಲಿ ಅಥವಾ ಚೌಕಟ್ಟಿನಲ್ಲಿ ತಂದು ಬಹುದೊಡ್ಡ ಜಾತಿಯನ್ನು ನಿರ್ಮಿಸಲು ನೋಡುತ್ತದೆ. ಇದಕ್ಕೆ ಕರ್ನಾಟಕದ ಒಕ್ಕಲಿಗರೇ ಉತ್ತಮ ಉದಾಹರಣೆ.

ಕೆಲವು ವರ್ಷದ ಹಿಂದೆ ಒಕ್ಕಲಿಗ ಜಾತಿಯಲ್ಲಿ ಹೆಚ್ಚು ಕಡಿಮೆ 90 ಜಾತಿಗಳನ್ನು ಗುರುತಿಸಿ ವಿಶಾಲವಾದ ಒಕ್ಕಲಿಗ ಜಾತಿಯನ್ನು ನಿರ್ಮಿಸಲು ಯತ್ನಿಸಿದ್ದನ್ನು ಇಲ್ಲಿ ನೆನೆಪಿಸಬೇಕು. ಈ ಸಂದರ್ಭದಲ್ಲಿ ಒಕ್ಕಲಿಗರಲ್ಲದವರನ್ನು "ಒಕ್ಕಲಿಗರ"ನ್ನಾಗಿಸುವ ಯತ್ನವನ್ನು ಮಾಡಲಾಗಿತ್ತು. ಈ ಎಲ್ಲಾವಾದದ ಅರ್ಥವೆಂದರೆ ಜಾತಿಯ ರಾಜಕಾರಣ ಮುಗಿದಿದೆ ಎಂದರ್ಥವಲ್ಲ. ಇವತ್ತಿಗೂ ಎಷ್ಟೋ ಜಾತಿಗಳು ಸರಕಾರಿ ಪಟ್ಟಿಯಿಂದ ಹೊರಗಿವೆ. ಸರಕಾರದ ಸವಲತ್ತುಗಳನ್ನು ಪಡೆಯಬೇಕಾದರೆ ಪಟ್ಟಿಯೊಳಗೆ ಬರಬೇಕಾದದ್ದು ಅನಿವಾರ್ಯ ಹಾಗೂ ಅವಶ್ಯಕ. ಜನಗಣತಿ ಸರಕಾರಿಪಟ್ಟಿಯಲ್ಲಿ ಗುರುತಿಸಲು ಅನುವು ಮಾಡಿಕೊಡುವುದು ವಾಸ್ತವ. ಸರಕಾರಿ ಪಟ್ಟಿಯಲ್ಲಿ ಬರದಿದ್ದರೆ ಹತ್ತು ಹಲವು ಜಾತಿಗಳು ಮತ್ತೊಮ್ಮೆ ಅಂಚಿಗೆ ಹೋಗುತ್ತವೆ, ಐಡೆಂಟಿಟಿಗಳಿಲ್ಲದ ಸಾಮಾಜಿಕ ವರ್ಗಗಳಾಗಿ ನಶಿಸಿಹೋಗುತ್ತವೆ.

ಜನಗಣತಿಯಿಂದ ಜಾತಿಗಳಿಗೆ ಬಹಳಷ್ಟು ಲಾಭಗಳಿವೆ. ಇವತ್ತಿನ ಸಂದರ್ಭದಲ್ಲಿ ಜಾತಿ ಐಡೆಂಟಿಟಿಯ ಸಂಕೇತ. ಗ್ರಾಮೀಣ ಪ್ರದೇಶದಲ್ಲಂತೂ ಜಾತಿ ಇವತ್ತೂ ಗಟ್ಟಿಯಾಗಿದೆ. ಬಹಳಷ್ಟು ಚಿಂತಕರು ಜಾತಿಯ ನಾಶದ ಕುರಿತು ವಾದಿಸಿದ್ದು ಸುಳ್ಳಾಗಿದೆ. ಅವರ ಪ್ರಕಾರ ಭಾರತದ ತೀವ್ರತರ ಅಭಿವೃದ್ಧಿ ಅದರಲ್ಲೂ ಕೈಗಾರಿಕರಣ ಜಾತಿ ಯಂತಹ ಫ್ಯೂಡಲ್ ಸಾಮಾಜಿಕ ಚೌಕಟ್ಟನ್ನು ನಾಶಮಾಡುತ್ತದೆ, ಅಲ್ಲದೇ ಅದು ಭಾರತವನ್ನು ಪರಿಪೂರ್ಣವಾಗಿ ಜತ್ಯತೀತ ದೇಶವನ್ನಾಗಿ ನಿರ್ಮಿಸುತ್ತದೆ ಅಥವಾ ಪರಿವರ್ತಿಸುತ್ತದೆ ಎಂಬವಾದ ಭಾರತದಲ್ಲಿ ಗಟ್ಟಿಯಾಗಿರುವ ಸಾಮಾಜಿಕ ಚೌಕಟ್ಟುಗಳು ಸುಳ್ಳಾಗಿಸಿವೆ.

ಇಲ್ಲಿರುವ ಎರಡನೆ ವಾದವೆಂದರೆ ಭಾರತ ಒಂದು ಜ್ಯಾತತೀತ ರಾಷ್ಟ್ರ. ಜಾತ್ಯತೀತ ರಾಷ್ಟ್ರದ ನಿರ್ಮಿ ತಿಯ ಸಂದರ್ಭದಲ್ಲಿ ಜಾತಿಗಳನ್ನು ರಾಜಕೀಯವಾಗಿ ಗುರುತಿಸಬಾರದು– ಅದು ಜಾತ್ಯತೀ ಆಶಯಗಳ ವಿರುದ್ಧವಾಗಿ ಹೋಗುತ್ತದೆ. ವಾಸ್ತವವಾಗಿ ಭಾರತದ ಪ್ರಭುತ್ವದ ರಾಜಕೀಯದಲ್ಲಿ ಜಾತಿ ಜೀವಂತವಾಗಿರುವುದು ಸ್ಪಷ್ಟ. ಇದು ಕಾಕ ಕಾಲೇಲ್ಕರ್. ಮಂಡಲ್. ಹಾವನೂರು ಇತ್ಯಾದಿ ಆಯೋಗಗಳು ಗುರುತಿಸಿದ್ದವು. ಮಂಡಲ್ ಆಯೋಗ 52%ರಷ್ಟು ಹಿಂದುಳಿದ ವರ್ಗಗಳನ್ನು ಗುರುತಿಸಿದ್ದನ್ನು ಇಲ್ಲಿ ದಾಖಲಾಗಿಸಬೇಕು. ಈ ಸಂಖ್ಯೆ ಕುರಿತು ಸರ್ವೋಚ್ಚನ್ಯಾಯಾಲಯ ಶಂಕೆಯನ್ನು ವ್ಯಕ್ತಪಡಿಸಿತ್ತು. ಯಾಕೆಂದರೆ ಹಿಂದುಳಿದ ವರ್ಗಗಳ ಲೆಕ್ಕಾಚಾರ ಮಾಡುವಾಗ ಅದು 1931ರ ಜನಗಣತಿಯನ್ನು ಆಧಾರಿಸಿತ್ತು. ಆದಕಾರಣ ಹೊಸತಾಗಿ ಜಾತೀಯ ಜನಗಣತಿ ಅನಿವಾರ್ಯ ಹಾಗೂ ಅವಶ್ಯಕ. ಈ ಸಂದರ್ಭದಲ್ಲಿ ಬಂದಿರುವ ಇನ್ನೊಂದು ಸೂಕ್ತವಾದ ಚರ್ಚೆಯನ್ನು ಗಮನಿಸಬೇಕು. ಜಾತಿಗಳನ್ನು ಒಪ್ಪದ ಅಥವಾ ನಂಬದ ಧರ್ಮಗಳಲ್ಲಿ ಜಾತಿಗಳನ್ನು ಹುಡುಕುವುದು ಸರಿಯೆ? ಇಲ್ಲಿಯತನಕ ನಡೆದಿರುವ ಜನಗಣತಿಗಳು ಧರ್ಮೊಧಾರಿತ ಜಾತಿಯನ್ನು ನಿರ್ಮಿಸಲಿಲ್ಲವಾದರೂ, ಧರ್ಮದೊಳಗಿನ ಜಾತಿಯನ್ನು ನಿರ್ಮಿಸಲು ಸಾಧ್ಯವೇ? ಜನಗಣತಿಯಲ್ಲಿ ಅವುಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆ?.

ಇಂತಹ ಪ್ರಶ್ನೆ ಬಹು ಮುಖ್ಯವಾಗಿ ಕಾಡುತ್ತಿರುವುದು ಅಲ್ಪಸಂಖ್ಯಾಕರಿಗೆ, ಅದರಲ್ಲೂ ಮುಸ್ಲಿಂಮರಿಗೆ. ಒಂದೆಡೆ ಇಸ್ಲಾಂ ಚಾರಿತ್ರಿಕವಾಗಿ ಜಾತಿಯನ್ನು ಒಪ್ಪುವುದಿಲ್ಲ, ಮೂಲಭೂತವಾಗಿ ಅದು ಮುಸ್ಲಿ "ಉಮ್ಮಾ" ವನ್ನು ಒಪ್ಪುವ ಕಾರಣ ಜಾತಿ ಎಂಬುದು ಧರ್ಮವಿ ರೋಧಿ ಎಂಬ ವಾದವನ್ನು ಒಂದು ವರ್ಗ ಮುಂದಿಡುತ್ತದೆ. ಇದನ್ನು ಬೇರೆ ಬೇರೆ ಸಂದರ್ಭದಲ್ಲಿ ನೋಡಬಹುದು. ಆಂಧ್ರಪ್ರದೇಶ ಸರಕಾರ ಮುಸ್ಲಿಮರಿಗೆ 5 ಶೇಕಡಾ ಮೀಸಲಾತಿಯನ್ನು ನೀಡಿದಾಗ ಇದೇ ಕಾರಣಕ್ಕಾಗಿ ವಿರೋಧಿಸಲಾಯಿತು. ಕೋರ್ಟ್ ಕೂಡ ಧರ್ಮಾ ಧಾರಿತ ಮೀಸಲಾತಿಯನ್ನು ವಿರೋಧಿಸಿದ್ದು ವಾಸ್ತವ. ಆದರೆ ಇಲ್ಲಿರುವ ಒಂದು ಅಂಶವನ್ನು ಕೋರ್ಟ್‌ಗಳು ಗಮನಿಸಲಿಲ್ಲ. ಅದೇನೆಂದರೆ ಮೀಸಲಾತಿಯ ರಾಜಕಾರಣದಲ್ಲಿ ಎಲ್ಲಾ ಧರ್ಮಗಳು ಕೂಡ ಲಾಭ ಪಡೆಯುತ್ತಾ ಹೋಗುತ್ತಿರುವುದು. ಸಿಖ್ ಹಾಗೂ ಬುದ್ಧಿಸ್ಟರು ನೇರವಾಗಿ ಮೀಸಲಾತಿಯ ಲಾಭವನ್ನು ಪಡೆದರೆ, ಮುಸ್ಲಿಮರು ಬೇರೆ ಬೇರೆ ಪ್ರವರ್ಗದಡಿಯಲ್ಲಿ ಲಾಭವನ್ನು ಪಡೆದರು. ಇದನ್ನು ಕರ್ನಾಟಕದಲ್ಲಿ, ತಮಿಳುನಾಡಿನಲ್ಲಿ ನೋಡಬಹುದು. ಕರ್ನಾಟಕದಲ್ಲಿ ಕೆಲವರು ಪ್ರವರ್ಗ ಒಂದರಲ್ಲಿ ಮೀಸಲಾತಿಯನ್ನು ಪಡೆದರೆ, ಇನ್ನು ಕೆಲವರು ಪ್ರವರ್ಗ ಎರಡು ಬಿಯಲ್ಲಿ ಪಡೆದರು. ಇದರರ್ಥವೆಂದರೆ ಮುಸ್ಲಿಂಮರು ಒಂದು ಏಕರೂಪಿ ಸಮುದಾಯವಲ್ಲ.

ಅವರಲ್ಲೂ ವಿವಿಧತೆ ಇದೆ. ಇದನ್ನೇ ಎಡ್ವರ್ಡ್ ಸೈದ್,ಖ್ಯಾತ ಚಿಂತಕ ಹೇಳಿರುವುದು."ಇಸ್ಲಾಂ ಏಕರೂಪಿಯಲ್ಲ, ಬಹುರೂಪಿ". ಈ ಸಂದರ್ಭದಲ್ಲಿ ಎರಡು ಪ್ರಶ್ನೆ ಕೇಳುವುದು ಅವಶ್ಯಕ. ಇಸ್ಲಾಂ ಭಾರತಕ್ಕೆ ಬಂದ ನಂತರ ತನ್ನ ಏಕರೂಪತೆಯ ಮೌಲ್ಯಗಳೊಂದಿಗೆ "ಜಾತಿಯ" ಮೌಲ್ಯಗಳನ್ನು ಉಳಿಸಿಕೊಳ್ಳಲು ಸಾಧ್ಯವಾಯಿತೆ? ಜನಗಣತಿಯ ಸಂದರ್ಭದಲ್ಲಿ "ಇಂಡಿಯನ್ ಮುಸ್ಲಿಂ" ಎಂಬ ಹೊಸ ಸಾಮಾಜಿಕ ಚೌಕಟ್ಟನ್ನು ನಿರ್ಮಿಸಿ ವಿವಿಧ ಜಾತಿಗಳನ್ನು ತೋರಿಸಲು ಸಾಧ್ಯವೇ?

ಭಾರತಕ್ಕೆ ಇಸ್ಲಾಂ ಬಂದದ್ದು ಮೂರು ರೂಪಗಳಲ್ಲಿ ಸಂತರ ರೂಪದಲ್ಲಿ, ಅಧಿಪತ್ಯದ ರೂಪದಲ್ಲಿ, ಹಾಗೂ ವ್ಯಾಪಾರದ ರೂಪದಲ್ಲಿ. ಈ ಎಲ್ಲಾ ಸಂದರ್ಭದಲ್ಲಿ ಅದು ಮೂರು ಮಟ್ಟದ ಜಾತಿಗಳನ್ನು ಸೃಷ್ಟಿಸಿದ್ದು ವಾಸ್ತವ. ಒಂದು ವಾದದ ಪ್ರಕಾರ ಮುಸ್ಲಿಮರಲ್ಲಿ ಜಾತಿ ಹುಟ್ಟಲು ಅದರಲ್ಲಿರುವ "ಕಫಾ." ಎಂಬ ಕಾನ್ಸೆಪ್ಟ್ ಕಾರಣ. ಈ ಕಾನ್ಸೆಪ್ಟ್ ಮೂರು ಜಾತಿಗಳಿಗೆ ದಾರಿ ಮಾಡಿಕೊಟ್ಟಿತ್ತು: ಮೊದಲನೆಯವರು ಅಶ್ರಫ್‌ಗಳು– ಅರಬ್ ಮೂಲದವರು ಹಾಗೂ ಮೇಲ್ಜಾತಿಗಳು(ಸೈಯ್ಯದ್,ಶೇಖ್,ಪಠಾಣ್). ಎರಡನೇಯವರು **ಅಜ್ಲಫ್‌ಗಳು– ಹಿಂದುಳಿದ ಜಾತಿಗಳು, ಇವುಗಳ ನಡುವೆ ಅರ್ಜಲ್ಸ್ ಗಳು– ಮೂಲತ:ವಾಗಿ ದಲಿತ**

ಜನಗಣತಿಯಿಂದ ಜಾತಿಗಳಿಗೆ ಬಹಳಷ್ಟು ಲಾಭಗಳಿವೆ. ಇವತ್ತಿನ ಸಂದರ್ಭದಲ್ಲಿ ಜಾತಿ ಐಡೆಂಟಿಟಿಯ ಸಂಕೇತ. ಗ್ರಾಮೀಣ ಪ್ರದೇಶದಲ್ಲಂತೂ ಜಾತಿ ಇವತ್ತೂ ಗಟ್ಟಿಯಾಗಿದೆ. ಬಹಳಷ್ಟು ಚಿಂತಕರು ಜಾತಿಯ ನಾಶದ ಕುರಿತು ವಾದಿಸಿದ್ದು ಸುಳ್ಳಾಗಿದೆ. ಅವರ ಪ್ರಕಾರ ಭಾರತದ ತೀವ್ರತರ ಅಭಿವೃದ್ಧಿ ಅದರಲ್ಲೂ ಕೈಗಾರಿಕರಣ ಜಾತಿ ಯಂತಹ ಫ್ಯೂಡಲ್ ಸಾಮಾಜಿಕ ಚೌಕಟ್ಟನ್ನು ನಾಶಮಾಡುತ್ತದೆ, ಅಲ್ಲದೇ ಅದು ಭಾರತವನ್ನು ಪರಿಪೂರ್ಣವಾಗಿ ಜ್ಯಾತಾತೀತ ದೇಶವನ್ನಾಗಿ ನಿರ್ಮಿಸುತ್ತದೆ ಅಥವಾ ಪರಿವರ್ತಿಸುತ್ತದೆ ಎಂಬವಾದ ಭಾರತದಲ್ಲಿ ಗಟ್ಟಿಯಾಗಿರುವ ಸಾಮಾಜಿಕ ಚೌಕಟ್ಟುಗಳು ಸುಳ್ಳಾಗಿಸಿವೆ. ಇಲ್ಲಿರುವ ಎರಡನೇ ವಾದವೆಂದರೆ ಭಾರತ ಒಂದು ಜ್ಯಾತತೀತ ರಾಷ್ಟ್ರ. ಜ್ಯಾತತೀತ ರಾಷ್ಟ್ರದ ನಿರ್ಮಿತಿಯ ಸಂದರ್ಭದಲ್ಲಿ ಜಾತಿಗಳನ್ನು ರಾಜಕೀಯವಾಗಿ ಗುರುತಿಸಬಾರದು– ಅದು ಜ್ಯಾತತೀತ ಆಶಯಗಳ ವಿರುದ್ಧವಾಗಿ ಹೋಗುತ್ತದೆ.

ಜಾತಿಗಳಿಂದ ಮತಾಂತರಗೊಂಡವರು.(ಉದಾಹರಣೆಗೆ ಹಲಾಲ್ಖೋರರು, ಹಿಜ್ರ, ಕಸಬಿ,ಇತ್ಯಾದಿ). ವಾಸ್ತವವಾಗಿ ಜಾತಿಯನ್ನು ವಿವಿಧ ಇಸ್ಲಾಮಿಕ್ ಚಿಂತಕರು ಪ್ರತಿಪಾದಿಸಿದ್ದನ್ನು ಇಲ್ಲಿ ದಾಖಲಿಸಬೇಕು ಅದರಲ್ಲೂ ಮೌಲ್ವಿ ಅಹಮದ್ ರಾಝು ಖಾನ್ ಬರೇಲ್ವಿ ಹಾಗೂ ಮೌಲ್ವಿ ಅಶ್ರಫ್ ಆಲಿ ಥರೂಕಿ ತನ್ವಿ ಇವರು ಹುಟ್ಟು ಆಧಾರಿತ ಜಾತಿಯ ಸ್ಥಾನಮಾನವನ್ನು ಪ್ರತಿಪಾದಿಸಿದರು – ಮೇಲ್ಜಾತಿಯ ಮುಸಿಮರು ಕೆಳಜಾತಿಯ ಮುಸ್ಲಿಂ ಹೆಣ್ಣು ಮಕ್ಕಳನ್ನು ಮದುವೆಯಾಗಬಹುದೇ ಹೊರತು ಅದರ ವಿರುದ್ಧವಲ್ಲ. ಮುಸ್ಲಿಮರಲ್ಲಿ ಜಾತಿಯನ್ನು ಪ್ರತಿಪಾದಿಸಿದ ಇನ್ನೊಬ್ಬ ಚಿಂತಕನೆಂದರೆ ಜಿಯಾವುದ್ದಿನ್ ಬರನಿ. ಅವನ ಫತ್ವ–ಎ–ಜಹಾಂಗಿರಿಯಲ್ಲಿ ಇದನ್ನು ಅತ್ಯಂತ ನೇರವಾಗಿ ಪ್ರತಿಪಾದಿಸುತ್ತಾನೆ.

ಮುಸ್ಲಿಮರಲ್ಲಿರುವ ವಿವಿಧ ಜಾತಿಗಳನ್ನು ರಾಜಕೀಯ ವ್ಯವಸ್ಥೆ ಬಹಳಹಿಂದೆಯೇ ಗುರುತಿಸಿತ್ತು, ಅಲ್ಲದೇ ಕೆಲವು ಜಾತಿಗಳನ್ನು ಕೂಡ ನಿರ್ಮಿಸಿತ್ತು. ಅಂದರೆ ಕೆಲವು ಜಾತಿಗಳು ರಾಜಕೀಯ ನಿರ್ಮಿತಿ ಹೌದು. 1901ರ ಜನಗಣತಿ ಮೂಲತಃ ಮುಸ್ಲಿಂಮರಲ್ಲಿದ್ದ ಹಿಂದುಳಿದ ಜಾತಿಗಳಾದ ಅರ್ಜಲ್ಸ್‌ಗಳನ್ನು ಗುರುತಿಸಿತ್ತು. ಅತ್ಯಂತ ಹಿಂದುಳಿದ ಜಾತಿಗಳಾದ ಕಾರಣ ಅವರಿಗೆ 1935ಕಾಯಿದೆ ವಿಶೇಷಸ್ಥಾನ ಮಾನವನ್ನು ಕಲ್ಪಿಸಿತ್ತು. ಇಲ್ಲಿರುವ ಮತ್ತೊಂದು ಆಸಕ್ತಿಯ ವಿಷಯವೆಂದರೆ ಮುಸ್ಲಿಮರಲ್ಲಿರುವ ಗೋತ್ರ ಪದ್ಧತಿ. ಇತ್ತೀಚೆಗೆ ಹರಿಯಾಣದಲ್ಲಿ ಸ್ವಗೋತ್ರ ಮದುವೆ ಕುರಿತು ನಡೆದ ಚರ್ಚೆಯ ಸಂದರ್ಭದಲ್ಲಿ ಈ ವಿಷಯ ಹೊರ ಬಂದಿತ್ತು.

ಇಕ್ಲಾಸ್ ಎಂಬ ಹೆಸರಿನ ವ್ಯಕ್ತಿ ಅಜುಂ ಹೆಸರಿನ ಹೆಣ್ಣನ್ನು ಮದುವೆಯಾದಾಗ , ಮದುವೆ ಅಸಿಂಧುವೆಂದು 300ಹಳ್ಳಿಗಳ "ಖಾಪ್" ಪಂಚಾಯತ್ ಆದೇಶಿಸಿತ್ತು. ಯಾಕೆಂದರೆ ಅವರಿಬ್ಬರೂ ಒಂದೇ ಗೋತ್ರಕ್ಕೆ ಸೇರಿದ್ದರು ಎಂಬ ಕಾರಣವನ್ನು ಈ ಸಂದರ್ಭದಲ್ಲಿ ಮುಂದಿಡಲಾಯಿತು. ಇಸ್ಲಾಂ ಮೂಲತಃ ಸ್ವಗೋತ್ರ ಮದುವೆಯನ್ನು ಒಪ್ಪಿದರೂ, ಉತ್ತರ ಭಾರತದಲ್ಲಿ ಸ್ವಗೋತ್ರ ಮದುವೆ ನಿಷಿದ್ಧ. ಇದು ಇಸ್ಲಾಂ ಭಾರತೀಕರಣಗೊಳ್ಳುವ ಸಂದರ್ಭದಲ್ಲಿ ಜಾತೀಯ ಮೌಲ್ಯಗಳನ್ನು ಅಪ್ಪಿಕೊಳ್ಳುವುದರ ಸಂಕೇತ ಹಾಗೂ ಪ್ರತಿಫಲನ.

ಮುಸ್ಲಿಮರಲ್ಲಿ ಗೋತ್ರಗಳು ನಿಚ್ಚಳವಾಗಿ ಕಂಡುಬರುವುದು ಉತ್ತರ ಭಾರತದಲ್ಲಿ ಹಾಗೂ ಪಾಕಿಸ್ಥಾನದಲ್ಲಿ. ಬಹಳಷ್ಟು ಸಲ ಗೋತ್ರ ಪದ್ಧತಿ ಜಾಟ್ ಸಮುದಾಯದಲ್ಲಿ ಕಂಡು ಬಂದರೂ ಅದು ಮುಸ್ಲಿಂ ಜಾಟರಲ್ಲೂ ವಿಸ್ತೃತವಾಗಿರುವುದು ತೆರೆದ ಸಂಗತಿ. ಮುಸ್ಲಿಂ ಜಾಟರಲ್ಲಿ ಹೆಚ್ಚು ಕಡಿಮೆ 400 ಗೋತ್ರಗಳಿರುವುದನ್ನು ಅಂದಿನ ಜನಗಣತಿ ಲೆಕ್ಕ ಹಾಕಿದ್ದನ್ನು ಇಲ್ಲಿ ದಾಖಲಿಸಬೇಕು. ಅವುಗಳು ಹಿಂದೂ ಪದ್ಧತಿಯಂತೆ "ಸ್ವಗೋತ್ರ"ಮದುವೆಯನ್ನು ನಿಷೇಧಿಸುತ್ತವೆ. ಆದಕಾರಣ ಗೋತ್ರ ಪದ್ಧತಿ ಜೀವಂತವಾಗಿರುವುದು ಸ್ಪಷ್ಟ. ಕಾಶ್ಮೀರದಲ್ಲಿ ಮುಸ್ಲಿಂರಾಗಿ ಮತಾಂತರ ಗೊಂಡ ಬಹಳಷ್ಟು ಸಮುದಾಯಗಳು ತಮ್ಮ ಗೋತ್ರ ಸಂಪ್ರದಾಯವನ್ನು ಜೀವಂತವಾಗಿಟ್ಟಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಅವುಗಳಲ್ಲಿ ಲಂಗು, ಹಂಡೂ, ಬಗತಿ, ಭಾನ್. ಭಟ್,ಧರ್, ಸಪ್ರೂ,ಕಿಚ್ಲೂ,ಕಸ್ಬ ಇತ್ಯಾದಿ. 1930ರ ಜನಗಣತಿ ಉತ್ತರ ಭಾರತದ ಮುಸ್ಲಿಂ ಜಾಟರಲ್ಲಿರುವ ವಿವಿಧ ಗೋತ್ರಗಳನ್ನು ಪ್ರಾಂತ್ಯವಾರಾಗಿ ಹಾಗೂ ಸಂಖ್ಯಾಧಾರಿತವಾಗಿ ಗುರುತಿಸುತ್ತದೆ. ಪಂಜಾಬಿನ ಸಿಯಾಲ್ಕೋಟ್‌ನಲ್ಲಿ ಕಡಿಮೆಯೆಂದರೂ 36, ಗುಗ್ರನ್ವಾಲ ಜಿಲ್ಲೆಯಲ್ಲಿ 33,ಲಾಹೋರಿನಲ್ಲಿ 40, ಜೇಲಮ್ ಜಿಲ್ಲೆಯಲ್ಲಿ 38,ರಾವಲ್ಪಿಂಡಿಯಲ್ಲಿ 18, ಮುಲ್ತಾನ್‌ಜಿಲ್ಲೆಯಲ್ಲಿ 80, ಜಾಟ್ ಮುಸ್ಲಿಂ ಗೋತ್ರಗಳಿದ್ದವು ಎಂದು ದಾಖಲಿಸುತ್ತದೆ.

ಅಂದಿನ ಜನಗಣತಿ ಗುರುತಿಸುವ ಪ್ರಮುಖ ಗೋತ್ರಗಳೆಂದರೆ ಅಶಿಯಾನಿ, ಅನಾನ್, ಬಾಬರ್, ಬರ್ರ, ಬಟ್ವಾನಿ,ಭಟ್ಟಿ, ಭುಟ್ಟ, ಬುಟಾರ್, ಲಾಕ್, ಹುಜಾಜ್, ಮಹರ್, ಸಂದಿಲ್ಲಾ, ಮಹೆಸರ್, ಮೋಹನ, ಮುಲಾನ, ಮಲ್ಹನ್, ಮಂಗಿಲ್ ಮಕ್ವಲ್, ಇತ್ಯಾದಿ. ಕೆಲವು ಗೋತ್ರಗಳು ಬರೇ ಮುಸ್ಲಿಮರಿಗೆ ಮಾತ್ರ ಸೀಮಿತವಾಗಿಲ್ಲ. ಅದು ಕೆಲವೊಮ್ಮೆ ಮೂರು ಧರ್ಮಗಳಲ್ಲಿ ಕಂಡುಬರುತ್ತದೆ. ಉದಾಹರಣೆಗೆ ಭಹಲರ್ ಗೋತ್ರವನ್ನು ಹಿಂದೂಗಳಲ್ಲೂ, ಸಿಖ್ಖರಲ್ಲೂ ಹಾಗೂ ಮುಸ್ಲಿಮರಲ್ಲೂ ಕಾಣಬಹುದು. ಕೆಲವು ಗೋತ್ರಗಳನ್ನು ಇವತ್ತೂಕೂಡ ಪಾಕಿಸ್ಥಾನದಲ್ಲೂ ಕಾಣಬಹುದು ಭಲ್ಲಿ ಎಂಬ ಜಾಟರ ನಡುವೆ ಇರುವ ಗೋತ್ರ ಮೂಲತ:ವಾಗಿ ಭಾರತ ಹಾಗೂ ಇಂದಿನ ಪಾಕಿಸ್ಥಾನದ ನಡುವೆ ಹರಡಿರುವುದು ವಾಸ್ತವ. ಇದರ ವಿಶಿಷ್ಟತೆ ಅಂದರೆ ಆದು ತನ್ನ ಮೂಲವನ್ನು ಅರಬ್ ಮುಸ್ಲಿಮರಲ್ಲಿ ಕಂಡುಕೊಳ್ಳುತ್ತದೆ.

ಆದ ಕಾರಣ ಧರ್ಮದೊಳಗಿನ ಜಾತಿಗಳನ್ನು ಜನಗಣತಿಯಲ್ಲಿ ಗುರುತಿಸುವುದು ಹಾಗೂ ದಾಖಲಿಸುವುದು ಅವಶ್ಯಕ. ಇದು ಮೂಲಭೂತವಾಗಿರುವ ಧರ್ಮದ ಕುರಿತಾದ ಸಾರ್ವತ್ರಿಕ ಪಡಿಯಚ್ಚುಗಳನ್ನು ಹೋಗಲಾಡಿಸಿ ಹೊಸ ಪರಿಕಲ್ಪನೆಗಳನ್ನು ನಿರ್ಮಿಸುತ್ತದೆ 'ಹೊರಗಿನವ ಬೇರೆಯವನು" ಅನ್ನುವ ದಿನನಿತ್ಯದ ಚರ್ಚೆಗಳಲ್ಲಿ ಧರ್ಮದೊಳಗಿನ ಜಾತಿಯ ಐಡೆಂಟಿಟಿಗಳು ಧರ್ಮವನ್ನು ದೇಸಿಕರಣಗೊಳಿಸುವುದರಲ್ಲಿ ಅನುಮಾನಗಳಿಲ್ಲ,-ಉದಾಹರಣೆಗೆ ಇಸ್ಲಾಂ "ಭಾರತೀಯ ಇಸ್ಲಾಂ" ಆಗುತ್ತದೆ, ಮುಸ್ಲಿಂ "ಭಾರತೀಯ ಮುಸ್ಲಿಂ"ನಾಗುತ್ತಾನೆ. ಇದೇ ಸ್ಥಿತಿ ಉಳಿದ ಧರ್ಮಕ್ಕೂ ಆಗುವ ಸಾಧ್ಯತೆಗಳಿವೆ – ಕ್ರಿಶ್ಚಿಯನ್ "ಭಾರತೀಯ ಕ್ರಿಶ್ಚಿಯನ್"ನಾಗುತ್ತಾನೆ.

ಈ ಜನಗಣತಿಯ ರಾಜಕಾರಣದಲ್ಲಿ ಒಂದಂತು ಸ್ಪಷ್ಟ: ಜಾತಿಯ ದಾಖಲಾತಿ ಜಾತಿಗಳ ಸಂಖ್ಯೆಯನ್ನು ಹೆಚ್ಚಿಸುತ್ತದೆ, ಹೊಸ ಜಾತಿಗಳನ್ನು ನಿರ್ಮಿಸುತ್ತದೆ ಅಥವಾ ಭಲಿಷ್ಟ –ಬಲಹೀನವೆಂಬ ವೈರುಧ್ಯಗಳನ್ನು ಸೃಷ್ಟಿಸುತ್ತದೆ. ಅದರರ್ಥ ಜಾತಿ ಕೇಂದ್ರೀಕೃತ ಜನಗಣತಿಯನ್ನು ವಿರೋಧಿಸುವುದಲ್ಲ. ಜಾತಿಯ ಜನಗಣತಿಯನ್ನು ಮೂರು ಕಾರಣಕ್ಕಾಗಿ ಬೆಂಬಲಿಸಬೇಕು. ಅವು ಐಡೆಂಟಿಟಿಗಳಿಲ್ಲದ ಜಾತಿಗಳಿಗೆ ಹೊಸ ಐಡೆಂಟಿಟಿಯನ್ನು ಕಲ್ಪಿಸುತ್ತದೆ; ಎರಡನೇದಾಗಿ, ಪ್ರಜಾಪ್ರಭುತ್ವದ ತಳಹದಿಯನ್ನು ಇನ್ನಷ್ಟು ಗಟ್ಟಿ ಮಾಡುತ್ತದೆ, ಅಲ್ಲದೇ ಧರ್ಮಗಳನ್ನು "ದೇಸಿ" ಕರಣಗೊಳಿಸಿ ಹೊಸ ರಾಜಕಾರಣವನ್ನು ನಿರ್ಮಿಸಲು ಅನುವು ಮಾಡಿಕೊಡುತ್ತದೆ– ಪರಕೀಯತೆಯಿಂದ" "ಅಪರಕೀಯತೆಗೆ" ದಾರಿ ಮಾಡಿಕೊಡುತ್ತದೆ. ಈ ಸಂದರ್ಭದಲ್ಲಿ ವಸಾಹತುಶಾಹಿ ನಿರ್ಮಿಸಿದ "ಕಾಸ್ಟ್"ಗೆ ಪರ್ಯಾಯವಾಗಿ ದೇಸಿಯವಾಗಿರುವ "ಜಾತಿಯ" ಸಂಕಥನವನ್ನು ಪ್ರತಿಪಾದಿಸುವುದು ಉತ್ತಮ. ಜನಗಣತಿ ನಿರ್ವಸತೀಕರಣದೊಂದಿಗೆ, ಅಪೂರ್ಣಗೊಂಡಿರುವ ಜಾತಿಯ ಸಂರಚನೆ ಹಾಗೂ ಐಡೆಂಟಿಟಿಯ ಪ್ರಕ್ರಿಯೆಗೆ ಹೊಸ ರೂಪವನ್ನು ಕೊಡುವುದರಲ್ಲಿ ಸಂಶಯವಿಲ್ಲ. □

ಹಿಂಸೆ–ಪ್ರತಿಹಿಂಸೆ ಮತ್ತು ನಾಗರಿಕ ಸಮಾಜ

(31ನೇ ಪುಟದಿಂದ)

ದಿಂದ ಬಗೆಹರಿಯುವುದೇ? ಹೋರಾಟ ನಿರಂತರವಾಗುತ್ತದೆ ಅಷ್ಟೇ. ಭಾರತದಲ್ಲಿ ನಡೆಯುತ್ತಿರುವ ಗಾಂಧೀ ಮಾರ್ಗದ ಹೋರಾಟಗಳನ್ನೇ ನೋಡಿದರೆ ತಿಳಿಯುತ್ತದೆ. ಶಾಂತಿಯುತವಾಗಿ ಹೋರಾಡುತ್ತಿರುವ ಮಾನವ ಹಕ್ಕುಗಳ ಕಾರ್ಯಕರ್ತರೂ ಪ್ರಭುತ್ವದ ಅವಕೃಪೆಗೆ ಪಾತ್ರರಾಗಿರುವುದು ನಮ್ಮ ಪ್ರಜಾತಂತ್ರದ ದುರಂತವಲ್ಲವೇ?

ಭಾರತದ ಜನತೆಗೆ ಬೇಕಿರುವುದು, ಯಾವುದೇ ಜನಸಮೂಹಗಳ ಹೋರಾಟಗಳನ್ನು ರೂಪಿಸದೆ, ಅರಣ್ಯಗಳಲ್ಲಿ ಅಡಗಿ ಬಂದೂಕಿನ ನಳಿಕೆಯಿಂದಲೇ ಕ್ರಾಂತಿಯನ್ನು ಸಾಧಿಸುವ ಮಾವೋವಾದಿಗಳ ಮಾರ್ಗವಲ್ಲ. ಅಥವಾ ಪ್ರಸಕ್ತ ರಾಜಕೀಯ–ಸಾಮಾಜಿಕ ಮತ್ತು ಆರ್ಥಿಕ ವಿದ್ಯಮಾನಗಳನ್ನು ವಸ್ತುನಿಷ್ಠವಾಗಿ ಗ್ರಹಿಸದೆ ಆದರ್ಶಗಳ ಬೆನ್ನು ಹತ್ತುವ ಗಾಂಧಿವಾದವೂ ಅಲ್ಲ. ಅಥವಾ ಪ್ರಸ್ತುತ ವ್ಯವಸ್ಥೆಯನ್ನೇ ಅನಿವಾರ್ಯವೆಂದು ಸ್ವೀಕರಿಸಿ ಪರಿಸ್ಥಿತಿಯನ್ನು ಉತ್ತಮಪಡಿಸುವ ಸಮಾಜವಾದಿ ಮಾರ್ಗವೂ ಅಲ್ಲ. ಪ್ರಭುತ್ವವು ತನ್ನ ಸಂವಿಧಾನಾತ್ಮಕ ಕರ್ತವ್ಯಗಳನ್ನು ನಿಷ್ಠೆಯಿಂದ, ಜನಪರ ಕಾಳಜಿಯಿಂದ ಪಾಲಿಸುವಂತೆ ಮಾಡುವ ಪ್ರಜಾಸತ್ತಾತ್ಮಕ ಹೋರಾಟ ಇಂದಿನ ತುರ್ತು ಅಗತ್ಯತೆಯಾಗಿದೆ. ಈ ದೃಷ್ಟಿಯಿಂದ ಮಾವೋವಾದಿಗಳ ಹಿಂಸಾತ್ಮಕ ಮಾರ್ಗವನ್ನು ತಿರಸ್ಕರಿಸುತ್ತಲೇ, ದೇಶದ ಆಳ್ವಿಕರಿಗೆ ತಮ್ಮ ಪ್ರಾತಿನಿಧಿಕ ಕರ್ತವ್ಯಗಳನ್ನು ಮನದಟ್ಟು ಮಾಡುವುದೂ ಪ್ರಜ್ಞಾವಂತರ ಆದ್ಯತೆಯಾಗಬೇಕಿದೆ. ಹಾಗೆಯೇ ಆಳ್ವಿಕರು ಮಾನವೀಯ ಸಂವೇದನೆಯನ್ನು ಬೆಳೆಸಿಕೊಳ್ಳುವ ಅನಿವಾರ್ಯತೆಯೂ ಇದೆ.

ಮತ್ತೊಂದೆಡೆ ಮಾವೋವಾದಿಗಳೂ ತಮ್ಮ ದುಷ್ಕೃತ್ಯ, ದುಸ್ಸಾಹಸಗಳನ್ನು ಕುರಿತು ಪರಾಮರ್ಶಿಸಬೇಕಾಗಿದೆ. ಅಮಾಯಕ ಜನತೆಯ ಹತ್ಯೆಯಿಂದ ಯಾವುದೇ ಕ್ರಾಂತಿ ಸಾಧ್ಯವಿಲ್ಲ ಎಂದು ಕ್ರಾಂತಿಗಳ ಇತಿಹಾಸವೇ ನಿರೂಪಿಸಿದೆ. ಕ್ಯೂಬಾದ ಯಶಸ್ಸು ಮತ್ತು ಚೀನಾದ ವೈಫಲ್ಯವೇ ಇದಕ್ಕೆ ಸಾಕ್ಷಿಯಲ್ಲವೇ ? ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಜನಸಮುದಾಯಗಳು ಸಮೂಹ ಸಂಘಟನೆಗಳ ಮೂಲಕ ಪ್ರಜಾಸತ್ತಾತ್ಮಕ ಹೋರಾಟಗಳನ್ನು ರೂಪಿಸುವುದು ಯಾವುದೇ ಕ್ರಾಂತಿಯ ಪ್ರಮುಖ ಲಕ್ಷಣವಾದಾಗ ಮಾತ್ರ ಅದು ಪ್ರಜಾಕ್ರಾಂತಿ ಎನಿಸಿಕೊಳ್ಳುತ್ತದೆ. ಇಲ್ಲವಾದಲ್ಲಿ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಜನತೆಯಲ್ಲಿ ಭೀತಿ ಹುಟ್ಟಿಸುವ ಭಯೋತ್ಪಾದನೆಗೂ, ಫ್ಯಾಸಿಸ್ಟರಿಗೂ, ಮಾವೋವಾದಿಗಳಿಗೂ ಯಾವುದೇ ವ್ಯತ್ಯಾಸವಿರುವುದಿಲ್ಲ.

ಮಾವೋವಾದಿಗಳನ್ನು ನಿರ್ನಾಮ ಮಾಡಲು ಪ್ರಭುತ್ವಕ್ಕೆ ಆದಿವಾಸಿಗಳು ರಕ್ಷಣಾ ಕವಚವಾಗಿರುವಂತೆ ಮತ್ತು ಪ್ರಭುತ್ವದ ವಿರುದ್ಧ ಸೆಣಸಲು ಮಾವೋವಾದಿಗಳಿಗೆ ಆದಿವಾಸಿಗಳು ರಕ್ಷಣಾ ಕವಚದಂತಾಗಿರುವುದಂತೂ ಸತ್ಯ. ಇಲ್ಲಿ ಬಲಿಯಾಗುತ್ತಿರುವುದು ಆದಿವಾಸಿ ಜನಸಮುದಾಯ. ಸಾಮಾಜಿಕ ಸ್ವಾಸ್ಥ್ಯ ಮತ್ತು ನಾಗರಿಕ ಪ್ರಜ್ಞೆ, ಹಾಗಾಗಿ ಮಾವೋವಾದಿಗಳ ಹಿಂಸಾತ್ಮಕ ಕೃತ್ಯಗಳನ್ನು ಮತ್ತು ಪ್ರಭುತ್ವದ ಪ್ರತಿಹಿಂಸೆಯನ್ನು ಖಂಡಿಸುವುದೇ ಪ್ರಧಾನವಾಗದೆ ಹಿಂಸೆ–ಪ್ರತಿಹಿಂಸೆಯ ಧೋರಣೆಯ ವಿರುದ್ಧ ದನಿ ಎತ್ತುವ ಮೂಲಕ ಒಂದು ನ್ಯಾಯಯುತ ಸಮಾಜದ ನಿರ್ಮಾಣದ ನಿಟ್ಟಿನಲ್ಲಿ ಆಲೋಚಿಸುವುದೇ ನಾಗರಿಕ ಸಮಾಜ ಮಾಡಬಹುದಾದ ಮಹದುಪಕಾರವಾಗುತ್ತದೆ. □

ಕರ್ನಾಟಕ ಸಾಗುತ್ತಿರುವ ದಾರಿ: ಕೈಗಾರಿಕೀಕರಣವೋ? ವಿನಾಶವೋ?



ಒಂದು ಕಾಲಕ್ಕೆ ನಮ್ಮ ರಾಜ್ಯದ ಆರ್ಥಿಕತೆಯ ರೂವಾರಿಯ ಲ್ಲೊಬ್ಬರಾದ ಸರ್.ಎಂ. ವಿಶ್ವೇಶ್ವರಯ್ಯ 'ಕೈಗಾರಿಕೀಕರಣ ಅಥವಾ ವಿನಾಶ' ಎಂಬ ಘೋಷಣೆಯನ್ನು ನೀಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅದು ಅಂದಿನ ಸಂದರ್ಭದಲ್ಲಿ ಸರಿಯಾಗಿದ್ದಿರಬಹುದು. ಅಂದು ಆಯ್ಕೆಯು ಅನಿವಾರ್ಯವಾಗಿ ಕೈಗಾರಿಕೀಕರಣವಾಗಿತ್ತು. ವಿಶ್ವಾದ್ಯಂತ ಅಂತಹ ನಂಬಿಕೆ ಅಂದು ಇತ್ತು. ಕೈಗಾರಿಕೀಕರಣವೇ ಅಭಿವೃದ್ಧಿಯೆನು ವಂತೆ ಸಿದ್ಧಾಂತಗಳನ್ನು ತಜ್ಞರು ಕಟ್ಟಿದ್ದರು. ಅನೇಕ ದೇಶಗಳು ಅಂದು ಅಭಿವೃದ್ಧಿಯನ್ನು ಕೈಗಾರಿಕೀಕರಣದ ಮೂಲಕ ಸಾಧಿಸಿ ಕೊಂಡಿದ್ದವು. ಆದರೆ ಇಂದು ಚಿತ್ರ ಬದಲಾಗಿದೆ. ಸರ್. ಎಂ.ವಿ. ಹೇಳಿದ್ದಾರೆ ಎಂಬ ಕಾರಣಕ್ಕೆ ನಾವು ಅದಕ್ಕೆ ಈಗಲೂ ಅಂಟಿಕೊಂಡಿರಬೇಕಾಗಿಲ್ಲ.

ಪ್ರಸ್ತಾವನೆ

ಕರ್ನಾಟಕ ಸರ್ಕಾರವು ಜೂನ್ ತಿಂಗಳ ಮೊದಲ ವಾರದಲ್ಲಿ (3 ಮತ್ತು 4, 2010) ಎರಡು ದಿನಗಳ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ನಡೆಸಿತು. ಈ ಸಮಾವೇಶದಲ್ಲಿ ಬಹುರಾಷ್ಟ್ರೀಯ ಮತ್ತು ನಮ್ಮದೇ ರಾಷ್ಟ್ರೀಯ ಕಂಪೆನಿಗಳು ನಾಲ್ಕು (ಐದು)ಲಕ್ಷ ಕೋಟಿಗೂ(ರೂ 400.000 ಕೋಟಿ) ಮಿಕ್ಕು ಬಂಡವಾಳವನ್ನು ಕರ್ನಾಟಕದಲ್ಲಿ ಹೂಡುವ ಬಗ್ಗೆ ಸರ್ಕಾರದ ಜೊತೆಯಲ್ಲಿ ನೂರಾರು ಒಪ್ಪಂದ ಮಾಡಿಕೊಂಡಿರುವುದಾಗಿ ಹೇಳಲಾಗಿದೆ. ಅದೇಷ್ಟೋ ಲಕ್ಷ ಉದ್ಯೋಗಗಳನ್ನು ಅವು ಒದಗಿಸುವುದಾಗಿ ಕಂಪೆನಿಗಳು ಹೇಳುವ ಮೊದಲೇ ಅವುಗಳ ಪರವಾಗಿ ಸರ್ಕಾರವೇ ಉದ್ಘೋಷಿಸುತ್ತಿದೆ.

ಇನ್ನು ಮುಂದೆ ಕರ್ನಾಟಕದಲ್ಲಿ ಕೇವಲ ಸಂಪತ್ತಿನ ಹೊಳೆ ಹರಿಯುತ್ತದೆ ಎಂದು ಕರ್ನಾಟಕಸ್ಥರು ನೆಮ್ಮದಿಯ ನಿಟ್ಟುಸಿರು ಬಿಡಬಹುದೆಂದು ಕಾಣುತ್ತದೆ. ಈ ಸಮಾವೇಶಕ್ಕಾಗಿಯೇ ಸರ್ಕಾರ ಸುಮಾರು ರೂ 50ಕೋಟಿ ಹಣವ್ಯಯಿಸಿದೆ ಎಂದ ಮೇಲೆ ಅಲ್ಲಿ ಕೋಟಿ ಕೋಟಿ ಗಟ್ಟಲೆ ಹಣ ಹರಿಯಲೇಬೇಕು ತಾನೆ! ನಮ್ಮ ಎಲ್ಲ ಸಮಸ್ಯೆಗಳಿಗೂ ಇದು ಔಷಧವೆನ್ನುವಂತೆ ಪರಿಭಾವಿಸಿಕೊಳ್ಳಲಾಗುತ್ತಿದೆ. ಅತ್ಯಂತ ಕುತೂಹಲಕಾರಿಯೂ, ವಿಷಾದನೀಯವೂ ಆದ ಸಂಗತಿಯೇನೆಂದರೆ ಈ ಎಲ್ಲ ಉಪಕ್ರಮಗಳ ಪ್ರವಾಹದಲ್ಲಿ 'ಜನರು', ಅದರಲ್ಲೂ ಮಹಿಳೆಯರು ಕಾಣೆಯಾಗಿ ಬಿಟ್ಟಿದ್ದಾರೆ. ಅಲ್ಲಿ ಏನಿದ್ದರೂ ಹಣ, ಕೈಗಾರಿಕೆಗಳು, ಒಪ್ಪಂದಗಳು, ತಂತ್ರಜ್ಞಾನ ಇವೇ ಕಾಣುತ್ತವೆ. ಜನರು ಎನ್ನುವುದನ್ನು ಇಲ್ಲಿ ಬಡವರನ್ನು, ದುಡಿಮೆಗಾರರನ್ನು, ವಂಚಿತರನ್ನು, ಮಹಿಳೆಯರನ್ನು, ಪರಿಶಿಷ್ಟರನ್ನು ಮಾತ್ರ ಒಳಗೊಂಡಂತೆ ಬಳಸಲಾಗಿದೆ.

ಒಂದು ಕಾಲಕ್ಕೆ ನಮ್ಮ ರಾಜ್ಯದ ಆರ್ಥಿಕತೆಯ ರೂವಾರಿಯಲ್ಲೊಬ್ಬರಾದ ಸರ್.ಎಂ.ವಿಶ್ವೇಶ್ವರಯ್ಯ 'ಕೈಗಾರಿಕೀಕರಣ ಅಥವಾ ವಿನಾಶ' ಎಂಬ ಘೋಷಣೆಯನ್ನು ನೀಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅದು ಅಂದಿನ ಸಂದರ್ಭದಲ್ಲಿ ಸರಿಯಾಗಿದ್ದಿರಬಹುದು. ಅಂದು ಆಯ್ಕೆಯು ಅನಿವಾರ್ಯವಾಗಿ ಕೈಗಾರಿಕೀಕರಣವಾಗಿತ್ತು. ವಿಶ್ವಾದ್ಯಂತ ಅಂತಹ ನಂಬಿಕೆ ಅಂದು ಇತ್ತು. ಕೈಗಾರಿಕೀಕರಣವೇ ಅಭಿವೃದ್ಧಿಯೆನುವಂತೆ ಸಿದ್ಧಾಂತಗಳನ್ನು ತಜ್ಞರು ಕಟ್ಟಿದ್ದರು. ಅನೇಕ ದೇಶಗಳು ಅಂದು ಅಭಿವೃದ್ಧಿಯನ್ನು ಕೈಗಾರಿಕೀಕರಣದ ಮೂಲಕ ಸಾಧಿಸಿಕೊಂಡಿದ್ದವು. ಆದರೆ ಇಂದು ಚಿತ್ರ ಬದಲಾಗಿದೆ. ಸರ್.ಎಂ.ವಿ. ಹೇಳಿದ್ದಾರೆ ಎಂಬ ಕಾರಣಕ್ಕೆ ನಾವು ಅದಕ್ಕೆ ಈಗಲೂ ಅಂಟಿಕೊಂಡಿರಬೇಕಾಗಿಲ್ಲ. ಇಂದು ನಾವು ಕೈಗಾರಿಕೋತ್ತರ ಸಮಾಜದ ಬಗ್ಗೆ ಮಾತನಾಡುತ್ತಿದ್ದೇವೆ. ಕೈಗಾರಿಕೀರಕರಣ ಎಂಬುದು ಇಂದು ನಮ್ಮ ಸಮಸ್ಯೆಗಳಿಗೆ ಉತ್ತರವಾಗುವುದು ಸಾಧ್ಯವಿಲ್ಲ. ಸರ್.ಎಂ.ವಿ. ಅವರ ಘೋಷಣೆಯನ್ನು ಸ್ವಲ್ಪ ಬದಲಾಯಿಸಿ ಇಂದಿನ ದಿನಮಾನಕ್ಕೆ ಹೊಂದುವ 'ಕೈಗಾರಿಕೀಕರಣ ಮತ್ತು ವಿನಾಶ' ಎಂದು ಅದನ್ನು ತಿದ್ದಿ ಹೇಳಬಹುದು. ಪ್ರಪಂಚದಲ್ಲಿ 1950–60ರ ದಶಕಗಳಲ್ಲಿ ಇದ್ದ ಹಾಗೆ ಕೈಗಾರಿಕೀಕರಣದ ಪ್ರಕ್ರಿಯೆ ಇಂದು ಇಲ್ಲ. ಇಂದು ಕೈಗಾರಿಕೀಕರಣ ಮತ್ತು ವಿನಾಶ ಎರಡೂ ಏಕಕಾಲಕ್ಕೆ ಸಂಭವಿಸುವ ಪ್ರಕ್ರಿಯೆಗಳಾಗಿವೆ. ಇಲ್ಲಿ ಆಯ್ಕೆಯಿಲ್ಲ.

ಆದ್ದರಿಂದ ಅದನ್ನು ಅತ್ಯಂತ ವಿಭಿನ್ನ ರೀತಿಯಲ್ಲಿ ಪರಿಭಾವಿಸಿಕೊಳ್ಳ ಬೇಕಾಗುತ್ತದೆ. ಆದರೆ ನಮ್ಮ ಆಳುವ ಸರ್ಕಾರಗಳು, ಅದಕ್ಕೆ ಸಲಹೆ–ಮಾರ್ಗದರ್ಶನ ನೀಡುತ್ತಿರುವ ತಜ್ಞರು, ವಿದ್ವಾಂಸರು ಓಬಿರಾಯನ ಕಾಲದ ಕೈಗಾರಿಕೋದ್ಯಮದ ಬಗ್ಗೆ ಇಂದು ಮಾತನಾಡುತ್ತಿರುವುದು ಅಚ್ಚರಿಮೂಡಿಸುತ್ತದೆ. ಇಂದು ನಾವು ಪರಿಸರಕ್ಕೆ ದಕ್ಕೆ ಮಾಡದ ಹಾಗೆ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವುದು ಹೇಗೆ ಎಂಬುದರ ಬಗ್ಗೆ ಚಿಂತಿಸುತ್ತಿದ್ದೇವೆ. 'ಪರಿಸರ ಬದಲಾವಣೆ'ಯ ಹಿನ್ನೆಲೆಯಲ್ಲಿ ಅದರ ರಕ್ಷಣೆ ಹೇಗೆ ಎಂಬುದು ಇಂದು ಚರ್ಚೆಯ ಸಂಗತಿಯಾಗಿದೆ. ಕೈಗಾರಿಕೀಕರಣ – ಸುಸ್ಥಿರನಡೆಗಳನ್ನು ಒಂದುಮಾಡಿ ಸಂಯೋಜಿಸಿಕೊಂಡು ಅಭಿವೃದ್ಧಿಯನ್ನು ಸಾಧಿಸಿಕೊಳ್ಳಬೇಕಾದ ಒತ್ತಡದಲ್ಲಿ ನಾವಿದ್ದೇವೆ. ಸುಸ್ಥಿರನಡೆಯ ಅಭಿವೃದ್ಧಿಯು ಇಂದು ಸಂಶೋಧನೆಯ ಮುಂಚೂಣಿಯಲ್ಲಿರುವ ವಿಷಯವಾಗಿದೆ. ಈ ನಮ್ಮ ಪರಿಸರವನ್ನು ನಾಶಮಾಡಿಕೊಂಡು ಅಭಿವೃದ್ಧಿಯನ್ನು ಸಾಧಿಸಿಕೊಂಡು ನಾವು ಮಾಡುವುದಾದರೂ ಏನು?. ವಿಶ್ವ ಬಂಡವಾಳ ಹೂಡಿಕೆಗಾರರ ಸಮಾವೇಶವನ್ನು ಕುರುಡು ಕುರುಡಾಗಿ ಹೊಗಳುವ ಜನರು ನಮ್ಮ ಜನರ ಬಡತನದ ಬಗ್ಗೆ ಆಗಲಿ, ಹಸಿವಿನ ಬಗ್ಗೆ ಆಗಲಿ, ಶಾಲೆಯಿಂದ ಹೊರಗಿರುವ ಮಕ್ಕಳ ಬಗ್ಗೆ ಆಗಲಿ, ಮಹಿಳೆಯರ ಅಪೌಷ್ಠಿಕತೆಯ ಬಗ್ಗೆ ಆಗಲಿ, ಉತ್ತರ ಕರ್ನಾಟಕದ ಜನರ ವಲಸೆ ಬಗ್ಗೆ ಮಾತನಾಡುತ್ತಿಲ್ಲ.

ಇಂತಹ ಸಂಗತಿಗಳು ಆಳುವ ವರ್ಗದ ಗಮನವನ್ನು ಸೆಳೆಯುತ್ತಿಲ್ಲವೆಂಬುದು ವಿಚಿತ್ರವಾಗಿ ಕಾಣುತ್ತದೆ. ನಮ್ಮ ಕಾಲದ ವಿಸಂಗತಿಯೆಂದರೆ ಇಂತಹ ಸಂಗತಿಗಳ ಬಗ್ಗೆ ಗಮನನೀಡದೆಯೂ ಜನಪ್ರತಿನಿಧಿಗಳು ಅಧಿಕಾರದಲ್ಲಿರಬಹುದು ಎಂಬುದಾಗಿದೆ. ಇಂದು ವಿಮಾನ ನಿಲ್ದಾಣಗಳು ನಮ್ಮ ಆಳುವ ವರ್ಗದ ಆದ್ಯತೆಯ ಸಂಗತಿಗಳಾಗಿದೆ. ಥಳಥಳನೆ ಹೊಳೆಯುವ ರಸ್ತೆಗಳು ಅತ್ಯಗತ್ಯವಾದ ಅವಶ್ಯಕತೆಗಳಾಗಿವೆ. ಹೆಲಿ–ಟೂರಿಸಮ್ ಬಗ್ಗೆ ಸರ್ಕಾರದ ಮಂದಿ ಮಾತನಾಡುತ್ತಿದ್ದಾರೆ. ಜನರು ಈಗ ಎಲ್ಲಿಗೆ ಹೋಗಬೇಕು? ಅವರ ಅಳಲನ್ನು ಯಾರು ಕೇಳಬೇಕು? ಬೆವರುಬಸಿದು, ಕಣ್ಣೀರು ಹರಿಸಿ ಮತ್ತು ರಕ್ತ ಚೆಲ್ಲಿ ದುಡಿಮೆ ಮಾಡುತ್ತಿರುವ ಮಂದಿಯನ್ನು ಯಾರು ಕೇಳಬೇಕು?.

ಹಾಲ ನೇಮ, ಹಾಲ ಕೆನೆಯ ನೇಮ
ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ.
ಬೆಲ್ಲದ ನೇಮ, ಬೆಣ್ಣೆಯ ನೇಮ.
ಅಂಬಲಿಯ ನೇಮದವರಾರನೂ ಕಾಣೆ.
ಕೂಡಲ ಸಂಗನ ಶರಣರಲ್ಲಿ
ಅಂಬಲಿ ನೇಮದಾತ ನಮ್ಮ ಮಾದಾರ ಚನ್ನಯ್ಯ.

ಬಸವಣ್ಣ ತನ್ನ ಸೂಕ್ಷ್ಮ ವಚನವೊಂದರಲ್ಲಿ ಹಾಲು, ಕೆನೆ, ಕಿಚ್ಚಡಿ, ಬೆಲ್ಲ, ಬೆಣ್ಣೆಗಳನ್ನು ಒಂದು

ಕಡೆ ಮತ್ತು ಅಂಬಲಿಯನ್ನು ಮತ್ತೊಂದು ಕಡೆಗಿಟ್ಟು ಅವುಗಳನ್ನು ಮುಖಾಮುಖಿಯಾಗಿಸಿದ್ದಾನೆ. ಅವನು ಇಲ್ಲಿ ಉಳ್ಳವರ-ಉಳಿದವರ ನಡುವಿನ ಭಿನ್ನತೆ, ಅಂತರದ ಬಗ್ಗೆ ಮಾತನಾ ಡುತ್ತಿದ್ದಾನೆ. ವಿಶ್ವ ಬಂಡವಾಳ ಹೂಡಿಕೆಗಾರರ ಸಮಾವೇಶ ವನ್ನು ಸಂಘಟಿಸಿರುವ ಜನರು ಹಾಲು, ಕೆನೆ, ಕಿಚ್ಚಡಿ, ಬೆಣ್ಣೆ, ಬೆಲ್ಲ ಮುಂತಾದ ಐಷಾರಾಮಿ ಸರಕುಗಳ ಬಗ್ಗೆ ಮಾತನಾಡುತ್ತಿದ್ದಾರೆ. ಸರ್ಕಾರವು ಅವುಗಳ ಪರವಾಗಿದೆ. ಅಲ್ಲಿ ಬಡಜನರ ಆಹಾರವಾದ ಅಂಬಲಿಯನ್ನು ಕುರಿ ತಂತೆ ಮಾತನಾಡುವವರು ಯಾರೂ ಇಲ್ಲ. ಅದರ ಬಗ್ಗೆಯೂ ಚಿಂತಿಸಬೇಕು ತಾನೆ?. ಅದು ಬಡವರನ್ನು, ದುಡಿಮೆಗಾರರನ್ನು, ಪರಿಶಿಷ್ಟರನ್ನು, ಮಹಿಳೆಯರನ್ನು ಪ್ರತಿನಿಧಿಸುವ ಸಂಗತಿಯಾಗಿದೆ. ಇಂದು ಸರ್ಕಾರಗಳಿಗೆ ಉಳ್ಳವರ ಹಿತಾಸಕ್ತಿಗಳು ಮುಖ್ಯವಾಗಿದ್ದಾವೆವಿನಾ ಉಳಿದವರ ದಂದುಗಗಳು ಮುಖ್ಯವಾಗಿಲ್ಲ.

ಪ್ರಸ್ತುತ ಪ್ರಬಂಧದಲ್ಲಿ ಕರ್ನಾಟಕದ ಸದ್ಯದ ಅಭಿವೃದ್ಧಿ ಸನ್ನಿವೇಶದಲ್ಲಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ಎಷ್ಟರ ಮಟ್ಟಿಗೆ ಉಪಯುಕ್ತ? ನಾವು ಮಾತನಾಡುವ ಬಡವರು, ವಂಚಿತರು, ಮಹಿಳೆಯರು, ಪರಿಶಿಷ್ಟರು ಮುಂತಾದವರ ಹಿತಾಸಕ್ತಿಗಳನ್ನು ಈ (ಐದು)ನಾಲ್ಕು ಲಕ್ಷ ಕೋಟಿ ಬಂಡವಾಳದ ಹೂಡಿಕೆಯು ಪೂರೈಸಬಲ್ಲದೆ? ಸಮಾನತೆ, ಸುಸ್ಥಿರನಡೆ, ಅಂಬಲಿ, ದುಡಿಮೆ ಮುಂತಾದ ಸಂಗತಿಗಳು ಇಂದು ಯಾಕೆ ಮೂಲೆಗುಂಪಾಗಿವೆ?. ನಮ್ಮ ಗ್ರಾಮೀಣರ ಬದುಕು ಮೂರಾಬಟ್ಟೆಯಾಗುತ್ತಿದೆ ಯಾಕೆ? ಒಂದುಕಡೆ ಸರ್ಕಾರವು ಸಾವಯವ ಕೃಷಿಯ ಬಗ್ಗೆ ಮಾತನಾಡುತ್ತದೆ. ಇನ್ನೊಂದು ಕಡೆ ಸಂಪೂರ್ಣವಾಗಿ ನಿರವಯವವಾಗಿರುವ ಕೈಗಾರಿಕೀಕರಣದ ಬಗ್ಗೆ ಮಾತನಾಡುತ್ತದೆ. ಇದು ಸರ್ಕಾರದ ಇಬ್ಬಗಿತನವನ್ನು ತೋರಿಸುತ್ತದೆ. ಇವೆರಡೂ ಒಟ್ಟಿಗೆ ನಡೆಯಲು ಸಾಧ್ಯವೆ?. ಅದಕ್ಕೆ ಒಂದು ನಿರ್ದಿಷ್ಟವಾದ ಧೋರಣೆಯಿಲ್ಲ. ಅದರ ಸಾವಯವ ಕೃಷಿಯ ಮಾತುಗಳು ಕೇವಲ 'ಮಾತುಗಳು' ಎಂಬುದು ಅದೇ ಸರ್ಕಾರವು ಸಂಘಟಿಸಿರುವ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶವು ಸಿದ್ಧ ಮಾಡಿ ತೋರಿಸಿದೆ.

ಐದು ಲಕ್ಷ ಕೋಟಿ ಹಣ ಬಂದುಬಿಟ್ಟರೂ ಅದರಿಂದ ಆರ್ಥಿಕ ಭದ್ರತೆಯನ್ನು ಸಾಧಿಸಿಕೊಳ್ಳುವುದು ಸಾಧ್ಯವೆ?. ನಮ್ಮ ಮುಖ್ಯಮಂತ್ರಿಗಳಂತೆ ನೀಲಿ ಕೋಟು ಧರಿಸಿಕೊಂಡು, ಬೂಟು ಹಾಕಿಕೊಂಡು, ಟೈ ಕಟ್ಟಿಕೊಂಡು ನಮ್ಮ ರೈತರು, ಕೂಲಿಕಾರರು, ದುಡಿಮೆಗಾರರು, ವಂಚಿತರು ಮುಂತಾದವರು ಕೂಡ ಮೆರೆದಾಡುವುದು ಸಾಧ್ಯವೆ? ಕರ್ನಾಟಕದ ಪ್ರಸ್ತುತ ಆರ್ಥಿಕ, ಸಾಮಾಜಿಕ, ಅಭಿವೃದ್ಧಿ ಸ್ಥಿತಿಗತಿಗಳ ಸಂದರ್ಭವನ್ನು ಗಮನಿಸದೆ ಸರ್ಕಾರವು ಬೃಹತ್ ಪ್ರಮಾಣದ ಬಂಡವಾಳ ಹೂಡಿಕೆಯ ಮೊರೆ ಹೋಗುತ್ತಿದೆ ಎಂದು ಹೇಳಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದ ಕೆಲವುಸಂಗತಿಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಜನರನ್ನು ಮೂಲೆಗುಂಪು ಮಾಡಿರುವ ಸಿದ್ಧಾಂತ

ನಮ್ಮ ಮುಖ್ಯಮಂತ್ರಿಗಳು ಒಂದು ಸಂದರ್ಭದಲ್ಲಿ ನಮ್ಮ ರಾಜ್ಯದ ಬಜೆಟ್ಟನ್ನು ಇನ್ನು ಒಂದೆರಡು ವರ್ಷಗಳಲ್ಲಿ 'ಒಂದು ಲಕ್ಷ ಕೋಟಿ'ಗೇರಿಸುವುದಾಗಿ ಘೋಷಿಸಿದ್ದರು. ಈಗ ವಿಶ್ವ ಬಂಡವಾಳ ಹೂಡಿಕೆಗಾರರ ಸಮಾವೇಶದ ಹಿನ್ನೆಲೆಯಲ್ಲಿ ಸರ್ಕಾರದ ವಕ್ತಾರರೆಲ್ಲರೂ ಮೂರು ಲಕ್ಷ ಕೋಟಿ, ನಾಲ್ಕುಲಕ್ಷ ಕೋಟಿ, ಐದುಲಕ್ಷ ಕೋಟಿ ಬಂಡವಾಳ ಹೂಡಿಕೆ ಬಗ್ಗೆ ಮಾತನಾಡುತ್ತಿದ್ದಾರೆ. ಈ ಬಂಡವಾಳ ಹೂಡಿಕೆಯಿಂದ ಲಕ್ಷಾಂತರ ಉದ್ಯೋಗಗಳು ಸಂಭವಿಸುತ್ತವೆ ಎಂದೂ ಹೇಳಲಾಗುತ್ತಿದೆ. ಇದರಿಂದ ಜಮೀನು ಕಳೆದುಕೊಳ್ಳುವ ರೈತರು ಕಳವಳಪಡಬೇಕಾಗಿಲ್ಲವೆಂದು ಸಾಂತ್ವನದ ಮಾತುಗಳನ್ನು ಆಡಲಾಗುತ್ತಿದೆ. ಈಗಾಗಲೆ 'ಜಮೀನು ಕೊಡಿರಿ: ಉದ್ಯೋಗ ಪಡೆಯಿರಿ' ಎಂಬ ಘೋಷಣೆಯನ್ನು ಸರ್ಕಾರವು ನೀಡಿಯಾಗಿದೆ. ಇದರಿಂದ ಸ್ಪಷ್ಟವಾಗುವ ಸಂಗತಿಯೆಂದರೆ ಈ ಸರ್ಕಾರವು ಅಭಿವೃದ್ಧಿಯನ್ನು ವರಮಾನದ ವರ್ಧನೆಗೆ ಸಂವಾದಿಯನ್ನಾಗಿ ಪರಿಭಾವಿಸಿಕೊಂಡಿದೆ. ಬಜೆಟ್ಟು ಒಂದು ಲಕ್ಷ ಕೋಟಿಯಾದರೆ ಅಥವಾ ಬಂಡವಾಳ ಹೂಡಿಕೆಯು ನಾಲ್ಕು ಲಕ್ಷ / ಐದು ಲಕ್ಷ ಕೋಟಿಯಾದರೆ ಅದನ್ನೇ ಅದು ಅಭಿವೃದ್ಧಿಯೆಂದು ತಿಳಿದಂತಿದೆ. ಇದು ಸರಿಯಲ್ಲ. ಅಭಿವೃದ್ಧಿಯೆಂಬುದು ವಿಸ್ತೃತವಾದ ಪರಿಭಾವನೆಯಾಗಿದೆ. ಸರ್ಕಾರವು ಪರಿಭಾವಿಸಿಕೊಂಡಿರುವ ಅಭಿವೃದ್ಧಿಯಲ್ಲಿ ಜನರು ಮುಖ್ಯವಾಗಿಲ್ಲ.

ಆದರೆ ಅದರಿಂದ ನಮ್ಮ ರಾಜ್ಯದಲ್ಲಿರುವ ಶೇ 60 ರಷ್ಟು ಗರ್ಭಿಣಿ ಮಹಿಳೆಯರ ರಕ್ತ ಹೀನತೆಯು ಕಡಿಮೆಯಾಗಿ ಬಿಡುತ್ತದೆಯೇ? ಅದರಿಂದ ನಮ್ಮ ರಾಜ್ಯದಲ್ಲಿನ 2010ರಲ್ಲಿನ 108,542ಶಾಲೆಯಿಂದ ಹೊರಗಿರುವ ಮಕ್ಕಳ ಸಮಸ್ಯೆಯು ಬಗೆಹರಿದು ಬಿಡುತ್ತದೆಯೇ? ಉಲ್ಬಣಗೊಳ್ಳುತ್ತಿರುವ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮತೋಲನವು ಇಲ್ಲವಾಗಿ ಬಿಡುತ್ತದೆಯೇ? ನಮ್ಮ ರಾಜ್ಯದಲ್ಲಿ 151 ಲಕ್ಷ ಅನಕ್ಷರಸ್ಥರಿದ್ದಾರೆ. ಅವರ ಬವಣೆ ಕೈಗಾರಿಕೀಕರಣದಿಂದ ನೀಗಿ ಬಿಡುತ್ತದೆಯೇ? ರಾಜ್ಯದಲ್ಲಿ ಸುಮಾರು 60 ಲಕ್ಷ ಭೂರಹಿತ ದಿನಗೂಲಿ ದುಡಿಮೆಗಾರರಿದ್ದಾರೆ.

ಅವರಿಗೆ ಈ ನಾಲ್ಕುಲಕ್ಷ ಕೋಟಿ ಬಂಡವಾಳ ಹೂಡಿಕೆಯಿಂದ ಮೇಲ್ಬರುವ ಉದ್ದಿಮೆಗಳಲ್ಲಿ ಉದ್ಯೋಗ ದೊರೆಯುತ್ತದೆಯೇ? 'ಜಮೀನು ನೀಡಿರಿ : ಉದ್ಯೋಗ ಪಡೆಯಿರಿ' ಎಂಬ ಘೋಷಣೆ ಕೇವಲ ಜನರನ್ನು ದಾರಿ ತಪ್ಪಿಸುತ್ತಿರುವ ಸಂಗತಿಯಲ್ಲವೇ? ಈ ನಾಲ್ಕುಲಕ್ಷ ಕೋಟಿ ಬಂಡವಾಳದ ಉದ್ದಿಮೆಗಳು ಯಾವ ಬಗೆಯ ಉದ್ಯೋಗ ನೀತಿಯನ್ನು ಅನುಸರಿಸುತ್ತವೆ? ಅವು ಅಳವಡಿಸಿಕೊಳ್ಳುವ 'ಹೈರ್ ಆಂಡ್ ಫೈರ್' ಉದ್ಯೋಗ ನೀತಿಯಿಂದ ಯಾರಿಗೆ ಪ್ರಯೋಜನವಿದೆ? ಇದನ್ನು ನಂಬಿ ಜಮೀನನ್ನು ಉದ್ದಿಮೆಗಳಿಗೆ ನೀಡುವವರು ಒಂದು ಹಂತದಲ್ಲಿ ಉದ್ಯೋಗ ಕಳೆದುಕೊಂಡರೆ ಏನು ಮಾಡಬೇಕು? ಸರ್ಕಾರವು ವಿಶ್ವ ಬಂಡವಾಳ ಹೂಡಿಕೆಗಾರರ ಸಮಾವೇಶ ಸಂಘಟಿಸುವ ಸಂದರ್ಭದಲ್ಲಿ ಇವೆಲ್ಲವನ್ನೂ ಯೋಚಿಸಿದೆಯೇ?. ಮುಖ್ಯಮಂತ್ರಿ ಅವರನ್ನು ಒಳಗೊಂಡು ಮಂತ್ರಿ-ಮಹೋದಯರು ಕೋಟು-ಬೂಟು-ಟೈ ಕಟ್ಟಿಕೊಂಡು ಸಮಾವೇಶದಲ್ಲಿ ಮಿಂಚಿಬಿಟ್ಟರೆ ಮುಗಿಯಿತೇ?. ಉದ್ದಿಮೆಗಳಿಗೆ ಜಲಾಶಯಗಳ ನೀರು ಮತ್ತು ರೈತರ ಭೂಮಿ ಹೋಗಿ ಬಿಟ್ಟರೆ ಈ ಸರ್ಕಾರವು ಮಾತನಾಡುತ್ತಿರುವ ಸಾವಯವ ಕೃಷಿಯನ್ನು ಎಲ್ಲಿ ಮಾಡಬೇಕು?

ನೆಲ, ನೀರು ಮತ್ತು ಜೀವ ಸಂಕುಲದ ಮೇಲೆ ಧಾಳಿ!

ಕರ್ನಾಟಕದಲ್ಲಿ ನಡೆದ ವಿಶ್ವ ಬಂಡವಾಳ ಹೂಡಿಕೆಗಾರರ ಸಮಾವೇಶವು ನಮ್ಮ ನೆಲ ಮತ್ತು ನೀರಿನ ಸಂಪತ್ತಿನ ಮೇಲಿನ ಧಾಳಿಯ ಉದ್ಘಾಟನೆಯ ಕ್ರಮವೆಂದು ಭಾವಿಸಬಹುದು. ಅದರಿಂದ ನಮ್ಮ ರಾಜ್ಯದ ವರಮಾನ ವರ್ಧನೆಯಾಗಬಹದು. ಉತ್ಪಾದನೆಯೂ ಹೆಚ್ಚಾಗಬಹುದು. ಉದ್ಯೋಗಗಳು ಅಪಾರವಾಗಿ ಸೃಷ್ಟಿಯಾಗಬಹುದು. ಆದರೆ ಜನರ ಬದುಕು ಇದರಿಂದ ಉತ್ತಮವಾಗುವುದು ಸಾಧ್ಯವಿಲ್ಲ. ಈ ಬಗ್ಗೆ ನಾವು ನಿದರ್ಶನಗಳಿಗಾಗಿ ಬೇರೆಲ್ಲೂ ಹೋಗಬೇಕಾಗಿಲ್ಲ. ಬಳ್ಳಾರಿ ಜಿಲ್ಲೆಯ ಉದಾಹರಣೆಯು ಜ್ವಲಂತವಾಗಿ ನಮ್ಮ ಮುಂದಿದೆ. ಬಳ್ಳಾರಿ ಜಿಲ್ಲೆಯ ಒಟ್ಟು ವರಮಾನವು 1999-2000ದಲ್ಲಿ (ಚಾಲ್ತಿ ಬೆಲೆಗಳಲ್ಲಿ)ರೂ3546.58 ಕೋಟಿಯಷ್ಟಿತ್ತು. ಆಗ ಅದರ ತಲಾ ವರಮಾನ ರೂ 17822. ತಲಾ ಆದಾಯದಲ್ಲಿ ಅದು ರಾಜ್ಯದ 27 ಜಿಲ್ಲೆಗಳ ಪೈಕಿ ಒಂಬತ್ತನೆಯ ಸ್ಥಾನ ಪಡೆದಿತ್ತು. ಆದರೆ 2007-2008ರಲ್ಲಿ ಅದರ ಒಟ್ಟು ವರಮಾನ ರೂ 10461.58 ಕೋಟಿಯಷ್ಟಾಗಿದ್ದರೆ ಅದರ ತಲಾ ವರಮಾನ ರೂ 47607ರಷ್ಟಾಗಿದೆ. ಈಗ ತಲಾ ವರಮಾನದಲ್ಲಿ ಅದು ರಾಜ್ಯದಲ್ಲಿ ಐದನೆಯ ಸ್ಥಾನದಲ್ಲಿದೆ. ಅಂದರೆ ಕಳೆದ ಒಂಬತ್ತು ವರ್ಷಗಳಲ್ಲಿ ಅದರ ಒಟ್ಟು ವರಮಾನವು ಶೇ53.94ರಷ್ಟು ಏರಿಕೆಯಾಗಿದ್ದರೆ ಅದರ ತಲಾ ವರಮಾನವು ಅದೇ ಅವಧಿಯಲ್ಲಿ ಶೇ189.59ರಷ್ಟು ಏರಿಕೆಯಾಗಿದೆ.

ಅದರ ತಲಾವರಮಾನವು ಶಿವಮೊಗ್ಗ(ರೂ34611), ಚಿಕ್ಕಮಗಳೂರು(ರೂ32285), ಧಾರವಾಡ (ರೂ41651), ಉತ್ತರ ಕನ್ನಡ(ರೂ30390) ಮುಂತಾದ ಮುಂದುವರಿದ ಜಿಲ್ಲೆಗಳಿಗಿಂತ ಅಧಿಕವಿದೆ. ಅಂದರೆ ಅದು ವರಮಾನದ ದೃಷ್ಟಿಯಿಂದ ಬಡ ಜಿಲ್ಲೆಯೇನಲ್ಲ. ಆದರೆ ಈ ಏರಿಕೆಯಾದ ವರಮಾನವು ಅಲ್ಲಿ ಜನರ ಬದುಕಾಗಿ ಪರಿವರ್ತನೆಯಾಗಿಲ್ಲ. ಅಲ್ಲಿನ ಜನರ ಧಾರಣಾ ಸಾಮರ್ಥ್ಯವು ಅತ್ಯಂತ ಕೆಳಮಟ್ಟದಲ್ಲಿದೆ. ಸಾಕ್ಷರತೆ ಮತ್ತು ಶಿಕ್ಷಣದಲ್ಲಿ

ಅದು ತೀವ್ರ ದುಸ್ಥಿತಿಯಲ್ಲಿದೆ. ಆರೋಗ್ಯದಲ್ಲೂ ಅದರ ಸ್ಥಿತಿಯು ಆಶಾದಾಯಕವಾಗಿಲ್ಲ. ರಾಜ್ಯಮಟ್ಟದ ಸಾಕ್ಷರತಾ ಪ್ರಮಾಣ(ಶೇ66.64) ಮತ್ತು ಬಳ್ಳಾರಿ ಜಿಲ್ಲೆಯ ಸಾಕ್ಷರತಾ ಪ್ರಮಾಣಗಳ(ಶೇ57.40) ನಡುವೆ ಶೇ9.24 ಅಂಶಗಳಷ್ಟು ಅಂತರವಿದೆ. ಈ ಜಿಲ್ಲೆಯ ಮಹಿಳಾ ಸಾಕ್ಷರತಾ ಪ್ರಮಾಣ ಶೇ45.28. ಈ ಕಾರಣಕ್ಕೆ ವರಮಾನ, ಶಿಕ್ಷಣ-ಆರೋಗ್ಯಗಳ ಕ್ಷೇತ್ರದಲ್ಲಿ ಸಾಧಿಸಿಕೊಂಡಿರುವ ಸಾಧನೆಯನ್ನು ಪ್ರತಿನಿಧಿಸುವ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಅದು ರಾಜ್ಯದಲ್ಲಿ ಹದಿನೆಂಟನೆಯ ಸ್ಥಾನದಲ್ಲಿದೆ. ಆದರೆ ಅದಕ್ಕಿಂತ ವರಮಾನದಲ್ಲಿ ಕೆಳಸ್ಥಾನದಲ್ಲಿರುವ ಶಿವಮೊಗ್ಗ(5), ಚಿಕ್ಕಮಗಳೂರು(9), ಹಾಸನ(11), ಉತ್ತರ ಕನ್ನಡ (7) ಮುಂತಾದವು ಮಾನವ ಅಭಿವೃದ್ಧಿಯಲ್ಲಿ ಅದಕ್ಕಿಂತ ಉನ್ನತ ಸ್ಥಾನದಲ್ಲಿವೆ.

ಅದೇ ರೀತಿಯಲ್ಲಿ ವಿಶ್ವ ಬಂಡವಾಳ ಹೂಡಿಕೆಗಾರರ ಸಮಾವೇಶದ ಫಲಶೃತಿಯಾಗಿ ನಾಲ್ಕುಲಕ್ಷ ಕೋಟಿ ಬಂಡವಾಳ ವಿನಿಯೋಜನೆಯಾದರೆ ಅದು ತನ್ನಷ್ಟಕ್ಕೆ ತಾನು ಜನರ ಬದುಕನ್ನು ಉತ್ತಮ ಪಡಿಸುವುದಿಲ್ಲ. ಬಂಡವಾಳ ವಿನಿಯೋಜನೆಯು ತನ್ನಷ್ಟಕ್ಕೆ ತಾನು ಜನರ ಬದುಕನ್ನು ಉತ್ತಮ ಪಡಿಸಿರುವುದಕ್ಕೆ ನಮಗೆ ನಿದರ್ಶನಗಳು ದೊರೆಯುವುದಿಲ್ಲ. ಈ ಬಗ್ಗೆ ಸರ್ಕಾರವು ಯೋಚಿಸಿದಂತೆ ಕಾಣುತ್ತಿಲ್ಲ. ಸರ್ಕಾರ ಮತ್ತು ಅದರ ವಕ್ತಾರರು ಬಂಡವಾಳ ವಿನಿಯೋಜನೆಯಿಂದ ಒದಗಬಹುದಾದ ಅನುಕೂಲಗಳ ಗುಣಗಾನ ಮಾಡುತ್ತಿದ್ದಾರೆ. ಆದರೆ ಅದರ ಜೊತೆಯಲ್ಲಿ ಅದು ಉಂಟು ಮಾಡಬಹುದಾದ ಅನಿಷ್ಟಕಾರಿ, ವಿನಾಶಕಾರಿ ಮತ್ತು ಅಪಾಯಕಾರಿ ದುಷ್ಪರಿಣಾಮಗಳ ಬಗ್ಗೆ ಅದು ಏನನ್ನು ಹೇಳುತ್ತಿಲ್ಲ. ಇದಕ್ಕಿಂತ ಮುಖ್ಯವಾಗಿ ಅದರಿಂದ ಉಂಟಾಗಬಹುದಾದ ದುಷ್ಪರಿಣಾಮಗಳನ್ನು ತಡೆಯಲು ಸರ್ಕಾರ ಏನು ಕ್ರಮ ವಹಿಸಿದೆ ಎಂಬುದನ್ನು ತಿಳಿದುಕೊಳ್ಳುವ ಹಕ್ಕು ಜನರಿಗಿದೆ. ಅದನ್ನು ಸರ್ಕಾರವು ಜನರಿಗೆ ತಿಳಿಸಿಕೊಡಬೇಕು. ಸರ್ಕಾರದ ಮಧ್ಯ ಪ್ರವೇಶವಿಲ್ಲದೆ ಜನರಿಗೆ ಕೇವಲ ಖಾಸಗಿ ಕೈಗಾರಿಕೋದ್ಯಮದಿಂದ ಪ್ರಯೋಜನವಿಲ್ಲ.

ಈ ಬೃಹತ್ ಉದ್ದಿಮೆಗಳನ್ನು ಸ್ಥಾಪಿಸಲು ಜಮೀನ್ನು ಬೇಕಾಗುತ್ತದೆ. ಅದೇನು ಆಕಾಶದಿಂದ ಬೀಳುವುದಿಲ್ಲ. ಸರ್ಕಾರವು ನಿರೀಕ್ಷಿಸಿರುವ ಒಟ್ಟು ಬಂಡವಾಳ ವಿನಿಯೋಜನೆಯಲ್ಲಿ ಶೇ60 ರಷ್ಟು ಉಕ್ಕು ಮತ್ತು ಕಬ್ಬಿಣ ಉದ್ದಿಮೆಗಳು ಪಡೆಯುತ್ತವೆ. ಇವು ಅಧಿಕಾಧಿಕವಾಗಿ 'ಜಮೀನು-ಸಾಂದ್ರ' ಮತ್ತು ಅಪಾರವಾಗಿ 'ನೀರು-ಸಾಂದ್ರ' ಉದ್ದಿಮೆಗಳು. ಈ ಬೃಹತ್ ಕಬ್ಬಿಣ ಮತ್ತು ಉಕ್ಕು ಉದ್ದಿಮೆಗಳು ಬಳ್ಳಾರಿ ಜಿಲ್ಲೆಯಲ್ಲಿ ಆರಂಭಗೊಳ್ಳುವ 'ಭಯ' ವಿದೆ. ಅವಕ್ಕೆ ನೀರನ್ನು ತುಂಗಭದ್ರಾ ಅಣೆಕಟ್ಟೆಯಿಂದ ನೀಡಬೇಕಾಗುತ್ತದೆ. ಈಗಾಗಲೆ ಅದರಿಂದ ಹತ್ತಾರು ಉದ್ದಿಮೆಗಳಿಗೆ ನೀರನ್ನು ನೀಡಲಾಗುತ್ತಿದೆ. ಮತ್ತೆ ಆರಂಭಗೊಳ್ಳಲಿರುವ ಎರಡು ಬೃಹತ್ ಉದ್ದಿಮೆಗಳಿಗೆ ಅಲ್ಲಿಂದಲೇ ನೀರನ್ನು ನೀಡುವುದಾದರೆ ಅದರ ಪರಿಣಾಮ ಕೃಷಿಯ ಮೇಲೇನಾಗುತ್ತದೆ? ಈ ಬಗ್ಗೆ ಸರ್ಕಾರವು ಪರ್ಯಾಲೋಚಿಸಿದಂತೆ ಕಾಣುತ್ತಿಲ್ಲ. ಜನರಿಗೆ ಅಗತ್ಯವಿರುವಷ್ಟು ಕುಡಿಯುವ ನೀರನ್ನು ನೀಡುವುದು ನಮಗೆ ಸಾಧ್ಯವಾಗಿಲ್ಲ. ರಾಜ್ಯದಲ್ಲಿ ನೀರಾವರಿಯ ಬೆಳವಣಿಗೆ ಸ್ಥಗಿತಗೊಂಡಿದೆ. ಈ ಸಂಗತಿಗಳ ಹಿನ್ನೆಲೆಯಲ್ಲಿ ನಾವು ನೀರು-ಸಾಂದ್ರ ಉದ್ದಿಮೆಗಳ ಮೇಲಿನ ಬಂಡವಾಳ ಹೂಡಿಕೆಯನ್ನು ಪರಿಗಣಿಸಬೇಕಾಗುತ್ತದೆ.

ಅದಕ್ಕಿಂತ ಅಧಿಕವಾಗಿ ಎರಡೂ ಉದ್ದಿಮೆಗಳಿಗೆ ಹತ್ತಾರು ಸಾವಿರ ಎಕರೆ ಜಮೀನು ಬೇಕಾಗುತ್ತದೆ. ಅದನ್ನು ರೈತರಿಂದ ಅಪಹರಿಸಿ ಕೊಳ್ಳುವುದಾದರೆ ಅದರ ಪರಿಣಾಮ ಕೃಷಿಯ ಮೇಲೆ ಏನಾಗುತ್ತದೆ?. ಜಮೀನು ಕಳೆದುಕೊಂಡ ಲಕ್ಷಾಂತರ ಸಂತ್ರಸ್ಥರಿಗೆ ಭದ್ರತೆಯನ್ನು ಸರ್ಕಾರ ಹೇಗೆ ನೀಡುತ್ತದೆ? ಅವರ ಬದುಕನ್ನು ಕಿತ್ತುಕೊಳ್ಳುವ ಸರ್ಕಾರವು ಅವರಿಗೆ ಬದುಕನ್ನು ನೀಡುವ ಜವಾಬುದಾರಿಯನ್ನು ಹೊರಬೇಕಾಗುತ್ತದೆ. ಇವೆರಡೂ ಸಂಗತಿಗಳು ಒಟ್ಟಿಗೆ ಸೇರಿ ಕೃಷಿಯನ್ನು ನಾಶ ಮಾಡುವ ಸಾಧ್ಯತೆಯಿದೆ. ಈ ಕಾರಣಕ್ಕೆ ಹೇಳಿದ್ದು ಈ ಸರ್ಕಾರದ ಸಾವಯವ ಕೃಷಿಯೆಂಬ ಘೋಷಣೆಯು ಕೇವಲ ಭಾವುಕ ಸಂಗತಿಯಾಗಿದೆ. ಸಂಪೂರ್ಣವಾಗಿ 'ನಿರವಯವ' ರೂಪವಾಗಿರುವ ಕೈಗಾರಿಕೋದ್ಯಮವು 'ಸಾವಯವ' ಕೃಷಿಗೆ ಸಂಪೂರ್ಣವಾಗಿ ವಿರುದ್ಧವಾದುದಾಗಿದೆ.

ಈ ವಿಶ್ವ ಬಂಡವಾಳ ಹೂಡಿಕೆಗಾರರು ನಮ್ಮ ನೆಲ, ನೀರು, ಜೀವಸಂಕುಲ, ಬೆಟ್ಟ-ಗುಡ್ಡಗಳು, ನದಿ-ಹೊಳೆಗಳನ್ನು, ಅರಣ್ಯ ಸಂಪತ್ತು, ಭೂಸಂಪತ್ತು - ಎಲ್ಲವನ್ನೂ ನಾಶ ಮಾಡುವುದಕ್ಕಾಗಿಯೇ ಬರುತ್ತಿರುವಂತೆ ಕಾಣುತ್ತಿದೆ. ಕಬ್ಬಿಣ ಮತ್ತು ಉಕ್ಕು ಉದ್ದಿಮೆಗಳು ಬಳಸುವ ಕಬ್ಬಿಣ ಅದಿರು 'ಬರಿದಾಗಬಹುದಾದ ಸಂಪನ್ಮೂಲ'. ಅಭಿವೃದ್ಧಿಯು ಇಂದಿನ ತಲೆಮಾರಿನ ಅಗತ್ಯಗಳನ್ನು ಪೂರೈಸುವುದರ ಜೊತೆಗೆ ಅದು ಮುಂದಿನ ತಲೆಮಾರಿನ ಅಗತ್ಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇದನ್ನೇ ಸುಸ್ಥಿರ ನಡೆಯ ಅಭಿವೃದ್ಧಿಯೆನ್ನಲಾಗಿದೆ. ಆದರೆ ಸರ್ಕಾರವು ಅಂತಹ ಅಂತರ ತಲೆಮಾರಿನ ಸಮಾನತೆಯ ಸಂಗತಿಯನ್ನು ಬಂಡವಾಳ ಹೂಡಿಕೆಗೆ ಸಂಬಂಧಿಸಿದಂತೆ ಗುರುತಿಸಿರುವಂತೆ ಕಾಣುತ್ತಿಲ್ಲ. ಪರಿಸರದ ಬಗ್ಗೆ ನಮ್ಮ ಕಾಳಜಿಯು ಕೇವಲ ಸಸಿಗಳನ್ನು ನೆಡುವುದಕ್ಕೆ ಸೀಮಿತವಾಗಿದೆ. ಸುಸ್ಥಿರನಡೆಯ ಅಭಿವೃದ್ಧಿಯೆಂಬುದನ್ನು ಸರ್ಕಾರವು ಸಾವಯವ ಕೃಷಿಗೆ ಸೀಮಿತಗೊಳಿಸಿಬಿಟ್ಟಿದೆ.

ಉದ್ಯೋಗ ಮತ್ತು ಮೀಸಲಾತಿ

ಸರ್ಕಾರವು ತಾನು ಮಾಡಿಕೊಂಡ ನಾಲ್ಕುಲಕ್ಷ ಕೋಟಿ ಬಂಡವಾಳ ಹೂಡಿಕೆಯ ಒಪ್ಪಂದಗಳ ಪರಿಣಾಮವಾಗಿ ರಾಜ್ಯದಲ್ಲಿ ಸುಮಾರು ಒಂಬತ್ತು ಲಕ್ಷ ಉದ್ಯೋಗಗಳು ಉಂಟಾಗುವ ಸಾಧ್ಯತೆಯಿದೆಯೆಂದು ಹೇಳಲಾಗುತ್ತಿದೆ. ಇದು ನಿಜವಿರಬಹುದು. ಆದರೂ ಇಲ್ಲಿ ಉದ್ಯೋಗ-ಬಂಡವಾಳ ನಡುವಿನ ಅನುಪಾತ ಬಹಳ ಅಧಿಕ. ಏಕೆಂದರೆ ಇಂದು ಉದ್ದಿಮೆಗಳು 'ಶ್ರಮ ಉಳಿತಾಯ ಉತ್ಪಾದನಾ ತಂತ್ರ'ವನ್ನು ಅಳವಡಿಸಿಕೊಳ್ಳುವುದು ಕಂಡು ಬರುತ್ತದೆ. ಉದ್ದಿಮೆಗಾರರಿಗೆ ಶ್ರಮಶಕ್ತಿಗಿಂತ ಯಂತ್ರಗಳ ಮೇಲೆ ವಿಶ್ವಾಸ ಜಾಸ್ತಿ. ಈ ಬಂಡವಾಳ ಹೂಡಿಕೆಯು ಸರ್ಕಾರವು ನಿರೀಕ್ಷಿಸಿದಷ್ಟು ಉದ್ಯೋಗಗಳನ್ನು ಉಂಟು ಮಾಡುವುದು ಅನುಮಾನ. ಅವು ಉದ್ಯೋಗವನ್ನು ಸೃಷ್ಟಿಸಿದರೂ ಅವು ಯಾವ ಬಗೆಯ ಉದ್ಯೋಗಗಳಾಗಿರುತ್ತವೆ? ಅಲ್ಲಿ ಉದ್ದಿಮೆಗಳು ಉದ್ಯೋಗ ಭದ್ರತೆಯನ್ನು ನೀಡುತ್ತವೆಯೇನು?. ಇಂದು ಉದ್ದಿಮೆಗಳಲ್ಲಿ ಕಾರ್ಮಿಕರು ಕನಿಷ್ಠ 10 ರಿಂದ 12 ಗಂಟೆಗಳ ಕಾಲ ಕಡ್ಡಾಯವಾಗಿ ದುಡಿಯಬೇಕಾಗಿದೆ.

ಇದನ್ನು ಅವರು ಪ್ರಶ್ನಿಸುವಂತಿಲ್ಲ. ಕಾರ್ಮಿಕ ಸಂಘಟನೆಗಳ ಹಲ್ಲುಗಳನ್ನು ಮುರಿಯಲಾಗಿದೆ ಮತ್ತು ನಾಲಗೆಯನ್ನು ಕಿತ್ತುಕೊಳ್ಳಲಾಗಿದೆ. ಇದಕ್ಕಿಂತ ಮುಖ್ಯವಾಗಿ ಉದ್ಯೋಗ ಭದ್ರತೆಯ ಪ್ರಶ್ನೆ. ಕಾರ್ಮಿಕ ಸುಧಾರಣೆಯ ಹೆಸರಿನಲ್ಲಿ ಕಾರ್ಮಿಕರ ಎಲ್ಲ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿದೆ. ಕಾರ್ಮಿಕ ಮುಷ್ಕರವೆನ್ನುವುದು ಇಂದು ಚರಿತ್ರೆಗೆ ಸೇರಿದ ಸಂಗತಿಯಾಗಿದೆ. ಉದ್ಯೋಗ ಭದ್ರತೆಯಿಲ್ಲ. ಕಾರ್ಮಿಕ ಕಾನೂನುಗಳಿಲ್ಲ. ಕಾರ್ಮಿಕರ ಹಿತರಕ್ಷಣೆಯೆಂಬುದಿಲ್ಲ. ಕಾರ್ಮಿಕರ ರಕ್ಷಣೆಗಾಗಿ ಕಾನೂನುಗಳ ಬೆಂಬಲವಿಲ್ಲ. ಇದು ಇಂದಿನ ಉದ್ದಿಮೆಗಳಲ್ಲಿನ ಉದ್ಯೋಗ ನೀತಿ. ಜಮೀನು ಕಳೆದುಕೊಂಡ ರೈತರಿಗೆ ಇಲ್ಲಿ ಉದ್ಯೋಗ ನೀಡುವುದಾಗಿ ಸರ್ಕಾರ ಭರವಸೆ ನೀಡುತ್ತಿದೆ. ಜನರನ್ನು ಮರುಳು ಮಾಡಲು - ಅವರ ಬೆಂಬಲಗಳಿಸಲು ಸರ್ಕಾರವು ಹಾಗೆ ಹೇಳಬೇಕಾಗುತ್ತದೆ. ಆದರೆ ವಾಸ್ತವವೇನೆಂದರೆ ಜಮೀನು ಕಳೆದುಕೊಂಡ ರೈತರು ಅತಂತ್ರರಾಗುತ್ತಾರೆ. ಅವರಿಗೆ ದೊರಕುವ ಉದ್ಯೋಗಗಳು ಸಣ್ಣಮಟ್ಟ ಪ್ರಕಾರದವಾಗಿರುತ್ತವೆ. ಅಲ್ಲಿ ಅವರನ್ನು ಯಾವಾಗ ಬೇಕಾದರೂ ಕೆಲಸದಿಂದ ಕಿತ್ತುಹಾಕಬಹುದು.

ಉದ್ಯೋಗಕ್ಕೆ ಸಂಬಂಧಿಸಿದಂತೆ ಬಹುಮುಖ್ಯವಾದ ಸಂಗತಿಯೆಂದರೆ ಮೀಸಲಾತಿ. ವಿಶ್ವ ಬಂಡವಾಳ ಹೂಡಿಕೆಗಾರರ ಸಮಾವೇಶದಲ್ಲಿ ಮತ್ತು ಅದಕ್ಕೆ ಹಿಂದಿನ ಸಮಾವೇಶ ಸಿದ್ಧತಾ ಗೋಷ್ಠಿಗಳಲ್ಲಿ ಸರ್ಕಾರವು ಉದ್ದಿಮೆದಾರರಿಗೆ ನೀಡುವ ರಿಯಾಯಿತಿ, ಮೂಲಭೂತ ಸೌಲಭ್ಯಗಳ ಬೆಳವಣಿಗೆ, ಪ್ರಾಕೃತಿಕ ಸಂಪನ್ಮೂಲಗಳ ಸರಬರಾಜು, ನೀರು ಮತ್ತು ವಿದ್ಯುತ್ತಿನ ಪೂರೈಕೆ ಮುಂತಾದ ಸಂಗತಿಗಳ ಬಗ್ಗೆ ವಿವರಣೆ ನೀಡಿತೇ ವಿನಾಃ ಉದ್ಯೋಗದ ಸಂಗತಿಯಾಗಲಿ ಅಥವಾ ಇಂದು ಬಿಸಿಬಿಸಿಯಾಗಿ ಚರ್ಚೆಯಾಗುತ್ತಿರುವ ಖಾಸಗಿ ಉದ್ದಿಮೆಗಳಲ್ಲಿ ಉದ್ಯೋಗಗಳ ಮೀಸಲಾತಿಯ ಪ್ರಶ್ನೆಯಾಗಲಿ ಅಲ್ಲಿ ಮುಖ್ಯವಾಗಲಿಲ್ಲ. ಮಾರುಕಟ್ಟೆ ವ್ಯಾಪ್ತಿಯು ಜಾಗತೀಕರಣದ ಹಿನ್ನೆಲೆಯಲ್ಲಿ ಹಿಗ್ಗುತ್ತಿದೆ. ಇದಕ್ಕೆ ಪ್ರತಿಯಾಗಿ ಸಾರ್ವಜನಿಕ ವಲಯದ ವ್ಯಾಪ್ತಿಯು ಕುಗ್ಗುತ್ತಿದೆ. ಇಂತಹ ಸಂದರ್ಭದಲ್ಲಿ ನಮ್ಮ ಸರ್ಕಾರವು ನಾಡಿನ ಪರಿಶಿಷ್ಟರಿಗೆ ಯಾವ ರೀತಿಯ ಉದ್ಯೋಗ ಭರವಸೆಯನ್ನು ನೀಡುತ್ತದೆ? ಖಾಸಗಿ ವಲಯದಲ್ಲಿ ಉದ್ಯೋಗದ ಮೀಸಲಾತಿಯನ್ನು ಕಡ್ಡಾಯ ಮಾಡುವ ಬಗ್ಗೆ ಯೋಚಿಸಬಹುದಿತ್ತು. ಅಂತಹ ಒಂದು ಶರತ್ತನ್ನು ಸರ್ಕಾರವು ಹೂಡಿಕೆದಾರರಿಗೆ ವಿಧಿಸಬಹುದಿತ್ತು. ಆದರೆ ಈ ಒಪ್ಪಂದದಲ್ಲಿ ಸರ್ಕಾರವು ಹೂಡಿಕೆದಾರರ

ವಿಶ್ವ ಬಂಡವಾಳ ಹೂಡಿಕೆಗಾರರು ನಮ್ಮ ನೆಲ, ನೀರು, ಜೀವಸಂಕುಲ, ಬೆಟ್ಟ-ಗುಡ್ಡಗಳು, ನದಿ-ಹೊಳೆಗಳನ್ನು, ಅರಣ್ಯ ಸಂಪತ್ತು, ಭೂಸಂಪತ್ತು - ಎಲ್ಲವನ್ನೂ ನಾಶಮಾಡುವುದಕ್ಕಾಗಿಯೇ ಬರುತ್ತಿರುವಂತೆ ಕಾಣುತ್ತಿದೆ. ಕಬ್ಬಿಣ ಮತ್ತು ಉಕ್ಕು ಉದ್ದಿಮೆಗಳು ಬಳಸುವ ಕಬ್ಬಿಣ ಅದಿರು 'ಬರಿದಾಗಬಹುದಾದ ಸಂಪನ್ಮೂಲ'. ಅಭಿವೃದ್ಧಿಯು ಇಂದಿನ ತಲೆಮಾರಿನ ಅಗತ್ಯಗಳನ್ನು ಪೂರೈಸುವುದರ ಜೊತೆಗೆ ಅದು ಮುಂದಿನ ತಲೆಮಾರಿನ ಅಗತ್ಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಮನವೊಲಿಸುವ ಕ್ರಮಗಳನ್ನು ಚರ್ಚಿಸಿತೆ ವಿನಾ ಉದ್ಯೋಗ ಮೀಸಲಾತಿಯಂತಹ ಸಾಮಾಜಿಕ ಹೊಣೆಗಾರಿಕೆಯ ಸಂಗತಿಯನ್ನು ಚರ್ಚಿಸಲಿಲ್ಲ.

ಇಲ್ಲಿ ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಗಾಳಿಗೆ ತೂರಲಾಗಿದೆ. ಬಡವರ, ವಂಚಿತರ, ಪರಿಶಿಷ್ಟರ, ಮಹಿಳೆಯರ ಸಂಗತಿಗಳು ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಚರ್ಚೆಗೆ ಬರಲಿಲ್ಲ. ಸರ್ಕಾರಕ್ಕೆ ರಾಜ್ಯದಲ್ಲಿನ ಒಂದೂ ಕಾಲು ಕೋಟಿಯಷ್ಟಿರುವ ಪರಿಶಿಷ್ಟರ ಸಂಗತಿಯು ಮುಖ್ಯವಾಗಲಿಲ್ಲ. ಇದು ಅತ್ಯಂತ ದುರದೃಷ್ಟದ ಸಂಗತಿ. ಸಮಾಜದಲ್ಲಿ ಯಾರು ನಿಕೃಷ್ಟೀಕರಣಕ್ಕೆ ಒಳಗಾಗಿರುತ್ತಾರೋ ಅವರ ಹಿತಾಸಕ್ತಿಯನ್ನು ಪೂರೈಸುವುದೇ ಸಾಮಾಜಿಕ ನ್ಯಾಯವೆಂದು ಜಾನ್ ರಾಲ್ಸ್ ಹೇಳುತ್ತಾನೆ. ಆದರೆ ನಮ್ಮ ಸರ್ಕಾರವು ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಇಂತಹ ಸಾಮಾಜಿಕ ನ್ಯಾಯದ ಸಂಗತಿಯನ್ನು ಚರ್ಚೆಯ ಮುಂಚೂಣಿಗೆ ತರಲಿಲ್ಲ.

ಲಿಂಗ ಸಂಬಂಧಗಳ ಪ್ರಶ್ನೆ

ಈ ಸರ್ಕಾರಕ್ಕೆ ನಮ್ಮನ್ನು ಕಾಡುತ್ತಿರುವ ಪ್ರಶ್ನೆಗಳ ಬಗ್ಗೆ ಕಾಳಜಿಯಿಲ್ಲ. ಜನರನ್ನು ಕಾಡುತ್ತಿರುವ ಪ್ರಶ್ನೆಗಳನ್ನು ಪಕ್ಕಕ್ಕೆ ತಳ್ಳಿ ತನಗೆ ಯಾವುದು ಸಮಸ್ಯೆಯೆಂದು ಕಂಡುಬರುತ್ತದೋ ಅದರ ಬಗ್ಗೆ ಅದು ಕಾಳಜಿವಹಿಸುತ್ತದೆ. ರಾಜ್ಯದಲ್ಲಿ ಲಿಂಗ ಅನುಪಾತವು ಕಡಿಮೆಯಿದೆ(965). ಅದರಲ್ಲೂ 0–6 ವಯೋಮಾನದ ಮಕ್ಕಳಲ್ಲಿ ಲಿಂಗ ಅನುಪಾತ 1991ರಲ್ಲಿ ಎಷ್ಟಿತ್ತೋ(960) ಅದಕ್ಕಿಂತ 2001ರಲ್ಲಿ ಅದು(950)ಕಡಿಮೆಯಾಗಿದೆ. ಸರ್ಕಾರವು ಪರಿಭಾವಿಸಿಕೊಂಡಿರುವ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶವು ಸಂಪೂರ್ಣವಾಗಿ ಪುರುಷಶಾಹಿ ಸ್ವರೂಪದಲ್ಲಿದೆ. ಅಲ್ಲಿ ಮಹಿಳಾ ಉದ್ದಿಮೆಗಾರರಿಗೂ ಅವಕಾಶ ನೀಡಲಾಗಿತ್ತು. ಆದರೆ ಲಿಂಗ ಸಂಬಂಧಿ ಪ್ರಶ್ನೆಗಳು ಅಲ್ಲಿ ಮುಖ್ಯವಾಗಲಿಲ್ಲ. ಈ ನಾಲ್ಕು ಲಕ್ಷ ಕೋಟಿ ಬಂಡವಾಳ ಹೂಡಿಕೆಗೆ ಸಂಬಂಧಿಸಿದಂತೆ ಉಂಟಾಗಲಿರುವ ಉದ್ಯೋಗಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ಬಗ್ಗೆ ಸರ್ಕಾರವು ಯೋಚಿಸಬಹುದಿತ್ತು.

ಮಹಿಳಾ ಉದ್ದಿಮೆಗಾರರಿಗೆ ನೀಡುವ ರಿಯಾಯತಿ ಬಗ್ಗೆ ಚರ್ಚೆ ಮಾಡಬಹುದಿತ್ತು. ಆದರೆ ಇಂತಹ ಸಂಗತಿಗಳ ಬಗ್ಗೆ ಅಲ್ಲಿ ಚರ್ಚೆಯೇ ನಡೆಯಲಿಲ್ಲ. ಇಂದು ಎಲ್ಲ ಕಡೆಯೂ ದುಡಿಮೆಯ ಮಹಿಳೀಕರಣ ಪ್ರಕ್ರಿಯೆಯನ್ನು ಗುರುತಿಸಲಾಗುತ್ತಿದೆ. ಆದರೆ ಅವರ ಉದ್ಯೋಗಗಳು ರೆಡಿಮೇಡ್ ಉಡುಪು ಉದ್ದಿಮೆಗಳಿಗೆ, ಎಲೆಕ್ಟ್ರಾನಿಕ್ಸ್ ಉದ್ದಿಮೆಗಳಿಗೆ, ಮಾಹಿತಿ ತಂತ್ರಜ್ಞಾನಕ್ಕೆ ಮೀಸಲಾಗಿ ಬಿಟ್ಟಿವೆ. ಒಂದು ರೀತಿಯ ಸಿದ್ಧ ಮಾದರಿಯ ರೂಪದಲ್ಲಿ ಅವರ ಉದ್ಯೋಗ ಬೆಳೆಯುತ್ತಿದೆ. ಇದನ್ನು ಮುರಿಯುವ ಬಗ್ಗೆ ನಾವು ಯೋಚಿಸಬೇಕಾಗಿದೆ. ಇಂತಹ ಸಮಾವೇಶದಲ್ಲಿ ಅವುಗಳು ಚರ್ಚೆಗೆ ಬಂದಿದ್ದರೆ ಅವುಗಳ ಪರಿಹಾರಕ್ಕೆ ದಾರಿಯನ್ನು ಹುಡುಕಿಕೊಳ್ಳುವ ಸಾಧ್ಯತೆಯಿತ್ತು. ಈ ಸಮಾವೇಶದಲ್ಲಿ ಕಾಣೆಯಾಗಿದ್ದ ಬಹುಮುಖ್ಯ ಸಂಗತಿಯೆಂದರೆ 'ಕೈಗಾರಿಕೀಕರಣದ ಸಾಮಾಜಿಕತೆ'. ಸಾಮಾಜಿಕ ಸಂಗತಿಗಳನ್ನು ಮೂಲೆಗೆ ತಳ್ಳಲಾಗಿದೆ. ಸಾಮಾಜಿಕತಗೆ ಬೆನ್ನು ತಿರುವಿದ ಕ್ರಮಗಳಿಂದ ನಾವು ಹೆಚ್ಚಿನದನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ.

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿನ ಹೂಡಿಕೆ!

ಸರ್ಕಾರ ಮತ್ತು ಅದರ ವಕ್ತಾರರು ಹೇಳುತ್ತಿರುವಂತೆ ನಾಲ್ಕು ಲಕ್ಷ ಕೋಟಿ ಬಂಡವಾಳ ಹೂಡಿಕೆಯಲ್ಲಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳ ಪಾಲು ನಿಕೃಷ್ಟ. ಅಭಿವೃದ್ಧಿಯನ್ನು ಕೇವಲ ವರಮಾನದ ವರ್ಧನೆಗೆ ಸೀಮಿತಗೊಳಿಸಿ ಕೊಂಡಿರುವುದರಿಂದ ಉಂಟಾಗಿರುವ ವೈರುಧ್ಯ ಇದು. ಆದರೆ ವರಮಾನ, ಸಾಕ್ಷರತೆ, ಶಿಕ್ಷಣ, ಆರೋಗ್ಯಗಳನ್ನು ಒಳಗೊಂಡಂತೆ ಅಭಿವೃದ್ಧಿಯನ್ನು ಪರಿಭಾವಿಸಿಕೊಂಡರೆ ಆಗ ನಮಗೆ ಶಿಕ್ಷಣ –ಆರೋಗ್ಯದ ಮೇಲಿನ ಬಂಡವಾಳ ಹೂಡಿಕೆಯ ಮಹತ್ವ ತಿಳಿಯುತ್ತದೆ. ಮಾನವ ಅಭಿವೃದ್ಧಿಯಲ್ಲಿ ಕರ್ನಾಟಕದ(7) ಸ್ಥಾನವು ಕೇರಳ(1) ಮತ್ತು ತಮಿಳುನಾಡು(3) ರಾಜ್ಯಗಳಿಗಿಂತ ಕೆಳಗಿದೆ. ವಿಶ್ವ ಬಂಡವಾಳ ಹೂಡಿಕೆಗಾರರ ಸಮಾವೇಶದಲ್ಲಿ ಸರ್ಕಾರವು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳ ಮೇಲಿನ ಹೂಡಿಕೆ ಬಗ್ಗೆ ಮಾತನಾಡಲಿಲ್ಲ. ಕರ್ನಾಟಕವು 2006ರಲ್ಲಿ ಸಾಧಿಸಿಕೊಂಡಿರುವ ಮಾನವ ಅಭಿವೃದ್ಧಿ ಸೂಚ್ಯಂಕ 0.658. ಇದು ಮೂರು ಸೂಚಿಗಳ ಸರಾಸರಿ ಸೂಚ್ಯಂಕವಾಗಿದೆ.

ಕರ್ನಾಟಕದ ಶೈಕ್ಷಣಿಕ ಸಾಧನೆ ಸೂಚ್ಯಂಕ 0.741 ಆದರೆ ಆರೋಗ್ಯ ಸಾಧನೆಯ ಸೂಚ್ಯಂಕ ಕೇವಲ 0.504. ವರಮಾನದ ಸೂಚ್ಯಂಕ 0.730 (0.741+0.504+0.730=0.1975/3=0.658). ಶೈಕ್ಷಣಿಕವಾಗಿ ಮತ್ತು ಆರೋಗ್ಯಭಾಗ್ಯದಲ್ಲಿ ಬಹಳ ಹಿಂದುಳಿದಿರುವ ಕರ್ನಾಟಕದಲ್ಲಿ ಬಂಡವಾಳ ಹೂಡಿಕೆಯನ್ನು ಕೇವಲ ಕೈಗಾರಿಕೆಯನ್ನು ಮಾತ್ರ ಗಮನದಲ್ಲಿಟ್ಟುಕೊಂಡು ನಡೆಸಲಾಗುತ್ತಿದೆ. ಇದರಿಂದ ಬಡವರ, ವಂಚಿತರ, ಪರಿಶಿಷ್ಟರ, ಮಹಿಳೆಯರ ಬದುಕು ಉತ್ತಮವಾಗುವುದಿಲ್ಲ. ಕೈಗಾರಿಕಾ ಬೆಳವಣಿಗೆಯನ್ನು ಸಾಧಿಸಿಕೊಂಡು ಬಿಟ್ಟರೆ ಬಡತನ, ಹಸಿವು, ಅನಕ್ಷರತೆ, ಅನಾರೋಗ್ಯ ಮುಂತಾದವು ತಮ್ಮಷ್ಟಕ್ಕೆ ತಾವು ಬಗೆಹರಿದು ಬಿಡುತ್ತವೆ ಎಂದು ನಂಬಲಾಗಿದೆ. ಇದು ಹುಸಿಯೆಂಬುದು ನಮಗೀಗ ಸ್ಪಷ್ಟವಾಗಿದೆ.

ಈ ಟ್ರಿಕಲ್ ಡೌನ್ ಸಿದ್ಧಾಂತವು ಯಾವತ್ತೂ ಎಲ್ಲಿಯೂ ನಿಜವಾಗಿಲ್ಲ ಎಂಬುದನ್ನು ಜೋಸೆಪ್ ಸ್ಟಿಗ್‌ಲಿಡ್ಜ್ ತನ್ನ ಪ್ರಸಿದ್ಧ ಕೃತಿ 'ಗ್ಲೋಬಲೈಸೇಶನ್ ಆಂಡ್ ಇಟ್ಸ್ ಡಿಸ್‌ಕಂಟೆಟ್ಸ್'(2000)ನಲ್ಲಿ ತೋರಿಸಿದ್ದಾನೆ. ಕೈಗಾರಿಕೆಗಳ ಮೇಲೆ ಬಂಡವಾಳ ಹೂಡಿಕೆಗೆ ಹೇಗೆ ಪ್ರಜ್ಞಾಪೂರ್ವಕ ಪ್ರಯತ್ನ ಮಾಡಲಾಗುತ್ತಿದೆಯೋ ಅದೇ ರೀತಿಯಲ್ಲಿ ಶಿಕ್ಷಣ, ಆರೋಗ್ಯ, ಲಿಂಗ ಸಮಾನತೆ, ಬಡತನ ನಿವಾರಣೆ, ಹಸಿವಿನ ನಿವಾರಣೆ, ಅನಕ್ಷರತೆ ನಿವಾರಣೆ ಮುಂತಾದ ಉದ್ದೇಶಗಳನ್ನು ಸಾಧಿಸಿಕೊಳ್ಳಲು ಪ್ರಯತ್ನಿಸ ಬೇಕಾಗುತ್ತದೆ. ಕರ್ನಾಟಕ ಸರ್ಕಾರವು ಸಂಘಟಿಸಿದ್ದ ವಿಶ್ವ ಬಂಡವಾಳ ಹೂಡಿಕೆಗಾರರ ಸಮಾವೇಶದಲ್ಲಿ ಇದರ ಬಗ್ಗೆ ಸ್ಥೂಲವಾಗಿಯಾದರೂ ಚರ್ಚೆ ನಡೆಯಲಿಲ್ಲ. ನಮ್ಮ 70 ಲಕ್ಷ ಸಾಗುವಳಿಗಾರರಿಗೆ, ನಮ್ಮಲ್ಲಿನ 60 ಲಕ್ಷ ದಿನಗೂಲಿ ದುಡಿಮೆಗಾರರಿಗೆ, ಅಸಂಘಟಿತ ವಲಯದಲ್ಲಿ ಬೆವರು ಹರಿಸುತ್ತಿರುವ ಮಹಿಳೆಯರಿಗೆ ನಮ್ಮ ಸರ್ಕಾರವು ಯಾವತ್ತೂ ಕೆಂಪು ಹಾಸು ಹಾಸಿ ಅವರ ಸಮಸ್ಯೆಗಳನ್ನು ಬಗೆಹರಿಸುವುದರ ಬಗ್ಗೆ ಪ್ರಯತ್ನಿಸಲಿಲ್ಲ. ಆದರೆ ಬಂಡವಾಳ ಹೂಡಿಕೆಗಾರರಿಗೆ ಅದ್ದೂರಿಯ ಸ್ವಾಗತ ನೀಡುತ್ತಿದೆ. ಬಂಡವಾಳ ಹೂಡಿಕೆಗಾರರ ಸೇವೆಗೆ ಸರ್ಕಾರವು ಸದಾ ಸಿದ್ಧವಾಗಿರುತ್ತದೆ.

ಇದರಿಂದ ಸ್ಪಷ್ಟವಾಗುವ ಸಂಗತಿಯೆಂದರೆ ನಮ್ಮ ಸರ್ಕಾರಕ್ಕೆ ರೈತರಿಗಿಂತ, ದುಡಿಮೆಗಾರರಿಗಿಂತ, ಅಸಂಘಟಿತ ವಲಯದಲ್ಲಿ ಬೆವರು, ಕಣ್ಣೀರು ಮತ್ತು ರಕ್ತ ಹರಿಸಿ ದುಡಿಯುತ್ತಿರುವ ಮಹಿಳೆಯರಿಗಿಂತ ಬಂಡವಾಳ ಹೂಡಿಕೆಗಾರರು ಮುಖ್ಯರಾಗಿದ್ದಾರೆ. ಅವರಿಗೆ ಸೇವೆ ಒದಗಿಸುವುದರಲ್ಲಿ ರವಷ್ಟೂ ಊನವಾಗಬಾರದು. ಈ ಬಗೆಯ ಅಭಿವೃದ್ಧಿ ನೀತಿಯಿಂದ ನಮ್ಮ ಜನರ ಬದುಕು ಉತ್ತಮವಾಗುವುದಿಲ್ಲ. ಅಲ್ಲಿ ಸಂಪತ್ತು ರಾಶಿರಾಶಿ ಬೀಳಬಹುದು. ಆದರೆ ಖಾಲಿಯಾದ ನಮ್ಮ ಗಣಿಗಳನ್ನು ಯಾರು ತುಂಬಬೇಕು? ಬರಿದಾದ ಅರಣ್ಯವನ್ನು ಯಾರು ಬೆಳಸಬೇಕು? ಬತ್ತಿ ಹೋದ ನದಿಗಳನ್ನು ಯಾರು ಪುನರ್ ನವೀಕರಣಗೊಳಿಸಬೇಕು? ಮಲಿನವಾದ ನಮ್ಮ ವಾಯುಮಂಡಲವನ್ನು ಯಾರು ಶುದ್ಧೀಕರಿಸಬೇಕು? ಬೀದಿಪಾಲಾಗುವ ನಮ್ಮ ರೈತಾಪಿ ಜನರನ್ನು ರಕ್ಷಿಸುವವರಾರು?. ತಾರತಮ್ಯ, ಅಸಮಾನತೆ, ದೌರ್ಜನ್ಯ ಎದುರಿಸುತ್ತಿರುವ ಮಹಿಳೆಯರ ಬದುಕನ್ನು ನೇರೂಪು ಮಾಡುವವರಾರು? ಬಳ್ಳಾರಿ ಜಿಲ್ಲೆಯಲ್ಲಿ ಅದಿರು ಬರಿದಾಗಿ ಬಿಡುತ್ತದೆ. ಆಮೇಲೆ ಅದು ಬರಡು ಜಿಲ್ಲೆಯಾಗಿ ಬಿಡುತ್ತದೆ. ತುಂಗಭದ್ರಾ ಅಣೆಕಟ್ಟೆಯ ನೀರೆಲ್ಲವೂ ಅಲ್ಲಿನ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗಳಿಗೆ ಸಾಕಾಗಿ ಬಿಡುತ್ತದೆ

ಆಗ ಅಲ್ಲಿ ಕೃಷಿಯು ಕೃಶವಾಗಿ ಬಿಡುತ್ತದೆ. ದಲಿತರು ಉದ್ಯೋಗಕ್ಕೆ ಯಾರನ್ನು ಅವಲಂಬಿಸಬೇಕು? ಇದನ್ನೆಲ್ಲ ಸರ್ಕಾರ, ಅದರ ರಾಜಕೀಯ ಮುತ್ಸದ್ದಿಗಳು ಯೋಚಿಸಬೇಕು. ನಮ್ಮ ಬಜೆಟ್ಟು ಒಂದುಲಕ್ಷ ಕೋಟಿಯಾಗಿ ಬಿಟ್ಟರೆ ಅಥವಾ ಬಂಡವಾಳ ಹೂಡಿಕೆಯು ನಾಲ್ಕೋ – ಐದೋಲಕ್ಷ ಕೋಟಿಯಾಗಿ ಬಿಟ್ಟರೆ ಜನರ ಬದುಕು ಉತ್ತಮವಾಗಿ ಬಿಡುವುದಿಲ್ಲ. ಜನರು ಘನತೆಯಿಂದ ಬದುಕುವಂತಾಗಬೇಕು. ರಾಷ್ಟ್ರಕವಿ ಕುವೆಂಪು ಅವರು ಹೇಳುವಂತೆ ಈ ಪ್ರಪಂಚದಲ್ಲಿ ಯಾರೂ ಮುಖ್ಯರಲ್ಲ. ಯಾರೂ ಅಮುಖ್ಯರಲ್ಲ. ಯಾರೂ ಯಕಶ್ಚಿತ್ತಲ್ಲ. ಈ ಸೂತ್ರವನ್ನು ನಮ್ಮ ಸರ್ಕಾರವು ಪಾಲಿಸಬೇಕು. ಅಭಿವೃದ್ಧಿಯಲ್ಲಿನ ಮುಖ್ಯ ಸಂಗತಿಯೆಂದರೆ ಏರಿಕೆಯಾದ ವರಮಾನವನ್ನು, ಉತ್ಪಾದನೆಯನ್ನು, ಉದ್ಯೋಗಗಳನ್ನು, ತಂತ್ರಜ್ಞಾನದಲ್ಲಿನ ಕ್ರಾಂತಿಯನ್ನು ಜನರ ಬದುಕನ್ನಾಗಿ ಪರಿವರ್ತಿಸಿಕೊಳ್ಳುವುದು ಹೇಗೆ ಎಂಬುದಾಗಿದೆ. ಈ ಪರಿವರ್ತನೆಯ ಪ್ರಕ್ರಿಯೆಯೇ ಅಭಿವೃದ್ಧಿ. ಬಂಡವಾಳ ಹೂಡಿಕೆಯೇ ಅಭಿವೃದ್ಧಿಯಲ್ಲ. □

ಮಹಿಳಾ ಉದ್ದಿಮೆಗಾರರಿಗೆ ನೀಡುವ ರಿಯಾಯತಿ ಬಗ್ಗೆ ಚರ್ಚೆ ಮಾಡಬಹುದಿತ್ತು. ಆದರೆ ಇಂತಹ ಸಂಗತಿಗಳ ಬಗ್ಗೆ ಅಲ್ಲಿ ಚರ್ಚೆಯೇ ನಡೆಯಲಿಲ್ಲ. ಇಂದು ಎಲ್ಲ ಕಡೆಯೂ ದುಡಿಮೆಯ ಮಹಿಳೀಕರಣ ಪ್ರಕ್ರಿಯೆಯನ್ನು ಗುರುತಿಸಲಾಗುತ್ತಿದೆ. ಆದರೆ ಅವರ ಉದ್ಯೋಗಗಳು ರೆಡಿಮೇಡ್ ಉಡುಪು ಉದ್ದಿಮೆಗಳಿಗೆ, ಎಲೆಕ್ಟ್ರಾನಿಕ್ಸ್ ಉದ್ದಿಮೆಗಳಿಗೆ, ಮಾಹಿತಿ ತಂತ್ರಜ್ಞಾನಕ್ಕೆ ಮೀಸಲಾಗಿಬಿಟ್ಟಿವೆ. ಒಂದು ರೀತಿಯ ಸಿದ್ಧ ಮಾದರಿಯ ರೂಪದಲ್ಲಿ ಅವರ ಉದ್ಯೋಗ ಬೆಳೆಯುತ್ತಿದೆ.

ಜಾತಿಗಣತಿಯ ಸುವರ್ಣಾವಕಾಶ

ಚಂದ್ರಭಾನ್ ಪ್ರಸಾದ್
ದಲಿತ್ ಡೈರಿ

ಅನು: ಸತ್ಯಪ್ರಕಾಶ್ ಎಂ ಆರ್

ಮಂಡಲ್ ರಾಜಕಾರಣ ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಕೊಳ್ಳಿ ಇಟ್ಟಿತ್ತು. ಮಂಡಲ್ ಆಯೋಗದಲ್ಲಿದ್ದ ಏಕೈಕ ದಲಿತ ಸದಸ್ಯ ಎಲ್.ಆರ್ ನಾಯಕ್ ಮಂಡಲ್ ಮೀಸಲಾತಿಯನ್ನು ತೀರ ಹಿಂದುಳಿದ ಕುಶಲಕರ್ಮಿಗಳಿಂದ ಕೂಡಿದ ಓಬಿಸಿ ವರ್ಗ ಹಾಗೂ ಮುಂದುವರೆದ/ ಭೂ ಮಾಲೀಕ ಓಬಿಸಿ ವರ್ಗ ಎಂದು ಎರಡು ಭಾಗಗಳಾಗಿ ವಿಂಗಡಿಸಬೇಕೆಂದು ವಾದಮಂಡಿಸಿದ್ದರು. ಸ್ವಾತಂತ್ರ್ಯಾ ನಂತರ ಹೊಸ ಆರ್ಥಿಕ ವ್ಯವಸ್ಥೆ ಅಸ್ತಿತ್ವಕ್ಕೆ ಬಂದ ಪರಿಣಾಮ ತಮ್ಮ ಕುಲಕಸುಬುಗಳಿಗೆ ಬೇಡಿಕೆ ಕಡಿಮೆಯಾಗಿ ಈ ಕುಶಲಕರ್ಮಿಗಳು ಅಭಿವೃದ್ಧಿಯಲ್ಲಿ ಹಿನ್ನಡೆ ಕಂಡರು. ಆದರೆ ಶೂದ್ರರೆಂದು ಕರೆಸಿಕೊಳ್ಳುವ ಓಬಿಸಿ ವರ್ಗ ಕೃಷಿಯಲ್ಲಿ ತೊಡಗಿಸಿಕೊಂಡಿದ್ದು ಜಮೀನ್ದಾರಿ ವ್ಯವಸ್ಥೆಯ ನಿರ್ಮೂಲನೆಯ ನಂತರ ಭೂಮಾಲೀಕರಾಗಿ ಪರಿವರ್ತಿತರಾದರು.

ಪ್ರತಿ ಐದು ವರ್ಷಕ್ಕೊಮ್ಮೆ ಸರ್ಕಾರ ಜಾನುವಾರುಗಳ ಗಣತಿ ಕೈಗೊಳ್ಳುತ್ತದೆ. 2008ರಲ್ಲಿ 17ನೆಯ ಜಾನುವಾರುಗಳ ಗಣತಿಯನ್ನು ಕೈಗೊಳ್ಳಲಾಗಿತ್ತು. ಸರ್ಕಾರ ಎಲ್ಲ ರೀತಿಯ ಜಾನುವಾರುಗಳ (ಎತ್ತು, ಎಮ್ಮೆ, ಹಸು, ಹಂದಿ, ಕತ್ತೆ, ಒಂಟೆ, ಮೇಕೆ, ಕುರಿ, ನಾಡ ಕೋಳಿ ಇತ್ಯಾದಿ) ಗಣತಿ ಕೈಗೊಳ್ಳುತ್ತದೆ.

ಜಾನುವಾರುಗಳ ಗಣತಿಯ ಅಗತ್ಯತೆಯನ್ನು ಮನಗಂಡಿರುವ ಸರ್ಕಾರ ಜಾತಿಗಣತಿ ಕೈಗೊಳ್ಳಲು ಯಾಕೆ ಹಿಂದೆ ಮುಂದೆ ನೋಡುತ್ತಿದೆಯೋ ಅರ್ಥವಾಗುತ್ತಿಲ್ಲ. ಸರ್ಕಾರ ಜಾತಿಗಣತಿ ಕೈಗೊಂಡು ಎಲ್ಲ ಜಾತಿಗಳ ಜನಸಂಖ್ಯೆ ಮತ್ತು ಜನಸಂಖ್ಯಾಧಾರಿತ ಮಾಹಿತಿ ಸಂಗ್ರಹಿಸಬೇಕು. ಕೇವಲ ಹಿಂದುಳಿದ ವರ್ಗಗಳ ಜಾತಿ ಗಣತಿಯಾದರೆ ಮಾತ್ರ ಸಾಲದು.

ಭಾರತೀಯ ಪ್ರಜಾತಂತ್ರ ವ್ಯವಸ್ಥೆ ಮತ್ತು ಸಾಮಾಜಿಕ ನ್ಯಾಯ ಪರಿಕಲ್ಪನೆಗೆ ಜಾತಿಗಣತಿ ವರವಾಗಿ ಪರಿಣಮಿಸಲಿದೆ. ಈ ಜಾತಿಗಣತಿ ಭಾರತದ ಹಿಂದುಳಿದ ವರ್ಗಗಳ ರಾಜಕಾರಣವನ್ನು ಸಂಪೂರ್ಣವಾಗಿ ಬದಲಾಯಿಸಲಿದೆ. ಮಂಡಲ್ ರಾಜಕಾರಣಕ್ಕೆ ತಕ್ಕ ಉತ್ತರ ನೀಡಲಿದೆ.

ಮಂಡಲ್ ರಾಜಕಾರಣ ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಕೊಳ್ಳಿ ಇಟ್ಟಿತ್ತು. ಮಂಡಲ್ ಆಯೋಗದಲ್ಲಿದ್ದ ಏಕೈಕ ದಲಿತ ಸದಸ್ಯ ಎಲ್.ಆರ್ ನಾಯಕ್ ಮಂಡಲ್ ಮೀಸಲಾತಿಯನ್ನು ತೀರ ಹಿಂದುಳಿದ ಕುಶಲಕರ್ಮಿಗಳಿಂದ ಕೂಡಿದ ಓಬಿಸಿ ವರ್ಗ ಹಾಗೂ ಮುಂದುವರೆದ/ ಭೂ ಮಾಲೀಕ ಓಬಿಸಿ ವರ್ಗ ಎಂದು ಎರಡು ಭಾಗಗಳಾಗಿ ವಿಂಗಡಿಸಬೇಕೆಂದು ವಾದಮಂಡಿಸಿದ್ದರು. ಸ್ವಾತಂತ್ರ್ಯಾನಂತರ ಹೊಸ ಆರ್ಥಿಕ ವ್ಯವಸ್ಥೆ ಅಸ್ತಿತ್ವಕ್ಕೆ ಬಂದ ಪರಿಣಾಮ ತಮ್ಮ ಕುಲಕಸುಬುಗಳಿಗೆ ಬೇಡಿಕೆ ಕಡಿಮೆಯಾಗಿ ಈ ಕುಶಲಕರ್ಮಿಗಳು ಅಭಿವೃದ್ಧಿಯಲ್ಲಿ ಹಿನ್ನಡೆ ಕಂಡರು. ಆದರೆ ಶೂದ್ರರೆಂದು ಕರೆಸಿಕೊಳ್ಳುವ ಓಬಿಸಿ ವರ್ಗ ಕೃಷಿಯಲ್ಲಿ ತೊಡಗಿಸಿ ಕೊಂಡಿದ್ದು ಜಮೀನ್ದಾರಿ ವ್ಯವಸ್ಥೆಯ ನಿರ್ಮೂಲನೆಯ ನಂತರ ಭೂಮಾಲೀಕರಾಗಿ ಪರಿವರ್ತಿತರಾದರು.

ಈ ನವ ಕುಲಕ್- ಓಬಿಸಿ ವರ್ಗ ಹೊಸ ಸಾಮಾಜಿಕ ಶಕ್ತಿಯಾಗಿ, ಹಾಗೂ ಶೋಷಕರಾಗಿ ದ್ವಿಜರ ಸ್ಥಾನಕ್ಕೆ ಬಂದು ಕುಳಿತರು. ಈ ಅಂಶವನ್ನು ನಾಯಕ್ ಬಹಳ ಗಂಭೀರವಾಗಿ ಆಯೋಗದ ಮುಂದೆ ಪ್ರಸ್ತಾಪಿಸಿದ್ದಾರೆ. ಕುಶಲ ಕರ್ಮಿಗಳ ಒಳಿತಿಗಾಗಿ ಹಾಗೂ ಮಂಡಲ್ ವರದಿಗೆ ಮಾನವೀಯ ಆಯಾಮ ನೀಡುವ ಉದ್ದೇಶದಿಂದ ನಾಯಕ್ ಓಬಿಸಿ ಕೋಟಾ ವರ್ಗೀಕರಣಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಆದರೆ ಅವರ ಪ್ರಸ್ತಾವನೆಯನ್ನು ಆಯೋಗದಲ್ಲಿದ್ದ ಪ್ರಬಲ ನವ-ಕುಲಕ್ ಲಾಬಿ ತಿರಸ್ಕರಿಸಿತು. ಇದರಿಂದ ಮನನೊಂದ ಎಲ್. ಆರ್ ನಾಯಕ್ ವರದಿಯ ಶಿಫಾರಸ್ಸುಗಳಿಗೆ ಸಹಿ ಮಾಡದೆ ಪ್ರತಿರೋಧ ವ್ಯಕ್ತಪಡಿಸಿದರು. ಆದರೆ ಸಾಮಾಜಿಕ ನ್ಯಾಯದ ಕಟ್ಟಾಳುಗಳು ನಾಯಕ್ ಅವರ ಕಾಳಜಿಯ ಬಗ್ಗೆ ಚರ್ಚೆ ಮಾಡುವ ಗೋಜಿಗೆ ಕೂಡ ಹೋಗಲಿಲ್ಲ. ಪರಿಣಾಮ ಶೋಷಕರಿಗೇ ಮೀಸಲಾತಿಯ ಸೌಲಭ್ಯಗಳು ದಕ್ಕಿತು. ಉದ್ದೇಶಿತ ಜಾತಿಗಣತಿ ಬಿ.ಬಿ ಮಂಡಲ್/ ವಿ.ಪಿ ಸಿಂಗ್ ಅವರ ಸಾಮಾಜಿಕ ನ್ಯಾಯ ಮಾದರಿಗೆ ಕೊರ್ಕ್‌ನೀಡಿ, ಒಟ್ಟಾರೆ ಪರಿಕಲ್ಪನೆಗೆ ಘನತೆ ತಂದು ಕೊಡಲಿದೆ.

ಮಂಡಲ್ ರಾಜಕಾರಣ ಮತ್ತು ನವ-ಕುಲಕ್ ಓಬಿಸಿ ವರ್ಗದ ಪ್ರಾಬಲ್ಯ ಕೆಲವು ನಂಬಿಕೆಗಳ ಮೇಲೆ ನಿಂತಿದೆ. ನವ-ಕುಲಕ್ ಓಬಿಸಿ ಜಾತಿಗಳ ಜನಸಂಖ್ಯೆ ಹೆಚ್ಚು ಎಂಬ ಅಪನಂಬಿಕೆ ಇದೆ: ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ "ಯಾದವರ ಪ್ರಾಂತ್ಯ" ಮತ್ತು "ಕುರ್ಮಿಗಳ ಪ್ರಾಂತ್ಯ"ಗಳೆಂದು ಕರೆಯಿಸಿಕೊಳ್ಳುವ ಸ್ಥಳಗಳಲ್ಲಿ ವಾಸ್ತವವಾಗಿ ಸದರಿ ಜಾತಿಗಳ ಜನಸಂಖ್ಯೆಯ ಪ್ರಮಾಣ ಒಟ್ಟಾರೆ ಜನಸಂಖ್ಯೆಯ ಐದನೇ ಒಂದರಷ್ಟಿರಬಹುದು. ಆದರೆ ರಾಜಕೀಯ ರಂಗದಲ್ಲಿ ಈ ಜಾತಿಗಳು ಒಟ್ಟಾರೆ ಓಬಿಸಿ ಜಾತಿಗಳ ಪ್ರತಿನಿಧಿಗಳಾಗಿ ದ್ವಿಜ ವಿರೋಧಿ ಸ್ಥಳವನ್ನು ಆವರಿಸಿಕೊಂಡಿವೆ.

ಹರಿಯಾಣ, ಮಹಾರಾಷ್ಟ್ರ, ಗುಜರಾತ್, ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಕೂಡ ಈ ಪ್ರಕ್ರಿಯೆಯನ್ನು ಕಾಣಬಹುದು. ಹರಿಯಾಣದಲ್ಲಿ ಜಾಟ್ ಜಾತಿಯ ಜನಸಂಖ್ಯೆ ಒಟ್ಟಾರೆ ರಾಜ್ಯದ ಜನಸಂಖ್ಯೆಯ ಶೇ.20ಕ್ಕಿಂತ ಕಡಿಮೆ ಇದ್ದರೂ ಅಲ್ಲಿ ಜಾಟ್, ಬಹುಸಂಖ್ಯಾತ ಜಾತಿ ಎಂಬ ಅಪನಂಬಿಕೆ ಇದೆ. ಮಹಾರಾಷ್ಟ್ರದಲ್ಲಿ ಮರಾಠರು ಬಹುಸಂಖ್ಯಾತ ಜಾತಿಯವರಲ್ಲದಿದ್ದರೂ ಅವರೇ ಬಹುಸಂಖ್ಯಾತರು ಎಂಬ ಅಪನಂಬಿಕೆ ಇರುವುದರಿಂದ ಪ್ರಾಬಲ್ಯ ಸಾಧಿಸಿದ್ದಾರೆ. ಇನ್ನು ಗುಜರಾತ್‌ನಲ್ಲಿ ಪಟೇಲ್, ಆಂಧ್ರಪ್ರದೇಶದಲ್ಲಿ ಕಮ್ಮ ಮತ್ತು ರೆಡ್ಡಿ, ಕರ್ನಾಟಕದಲ್ಲಿ ಒಕ್ಕಲಿಗ ಮತ್ತು ಗೌಡ ಇದೇ ರೀತಿ ಪ್ರಾಬಲ್ಯ ಸಾಧಿಸಿರುವ ಜಾತಿಗಳು. ಈ ಎಲ್ಲ ನವ-ಕುಲಕ್ ಜಾತಿಗಳಲ್ಲಿ ಕೆಲವು ಜಾತಿಗಳು ಓಬಿಸಿ ವರ್ಗದಲ್ಲಿ ಕಂಡುಬಂದರೆ, ಕೆಲವು ಓಬಿಸಿ ವರ್ಗದಿಂದ ಹೊರಗುಳಿದಿವೆ. ಈ ಎಲ್ಲ ಜಾತಿಗಳು ದ್ವಿಜ ವಿರೋಧಿ ರಾಜಕೀಯ ಸ್ಥಳವನ್ನು ತಮ್ಮದಾಗಿಸಿಕೊಂಡು ಹಿಂದುಳಿದಿರುವ ಓಬಿಸಿಗಳು ಮತ್ತು ದಲಿತರ ಪರವಾಗಿ ಮಾತನಾಡುವ ಮೂಲಕ ನೈತಿಕತೆ ಸಾಧಿಸಲು ಯತ್ನಿಸುತ್ತವೆ.

ಒಂದು ವೇಳೆ ಜಾತಿಗಣತಿಯನ್ನು ಕೈಗೊಂಡರೆ ಖಂಡಿತ ಎರಡು ನಾಟಕೀಯ ಬೆಳವಣಿಗೆಗಳು ನಡೆಯುತ್ತವೆ. ಮೊದಲನೆಯದಾಗಿ ಜಾತಿ ಗಣತಿ ನವ-ಕುಲಕ್ ಜಾತಿಗಳ ಅಸಲು ಜನಸಂಖ್ಯೆಯನ್ನು ಜನರ ಮುಂದಿಡುತ್ತದೆ. ತನ್ಮೂಲಕ ಓಬಿಸಿ ವರ್ಗದ ಕುಶಲಕರ್ಮಿಗಳಿಗೆ ಸಾಮಾಜಿಕ ನ್ಯಾಯದ ಸೌಲಭ್ಯ ಲಭಿಸಲು ಅನುವು ಮಾಡಿಕೊಟ್ಟಂತಾಗುತ್ತದೆ. ಹೀಗಾದಾಗ ಯಾದವ, ಕುರ್ಮಿ, ಜಾಟ್, ಪಟೇಲ್, ಮರಾಠ, ಮತ್ತು ದಕ್ಷಿಣದ ಶೂದ್ರ ಜಾತಿಗಳು ರಾಷ್ಟ್ರಮಟ್ಟದಲ್ಲಿ ತಮ್ಮ ಪ್ರಾಬಲ್ಯವನ್ನು ಕಳೆದುಕೊಳ್ಳುತ್ತವೆ. ಆದರೆ ಹಿಂದುಳಿದ ಕುಶಲಕರ್ಮಿಗಳು ರಾಷ್ಟ್ರಮಟ್ಟದಲ್ಲಿ ತಮ್ಮ ಕಸುಬುದಾರರೊಂದಿಗೆ ಗುರುತಿಸಿಕೊಳ್ಳಬಹುದು. ಉದಾಹರಣೆಗೆ ಉತ್ತರ ಭಾರತದ ಚಮ್ಮಾರರು ದಕ್ಷಿಣ ಭಾರತದ ಚಮ್ಮಾರರೊಂದಿಗೆ ಗುರುತಿಸಿಕೊಳ್ಳುವುದು ಸುಲಭ. ಇದರರ್ಥ ಏನೆಂದರೆ, ಮುಂದಿನದಿನಗಳಲ್ಲಿ ಹಿಂದುಳಿದ ಭೂರಹಿತ ಓಬಿಸಿ ಜಾತಿಯನಾಯಕರು ರಾಷ್ಟ್ರಮಟ್ಟದಲ್ಲಿ ಹಿಂದುಳಿದ ವರ್ಗಗಳ ನಾಯಕರಾಗಿ ಮಂಚೂಣಿಗೆ ಬರಬಹುದು.

ಕಾಂಗ್ರೆಸ್-ಬಿಜೆಪಿ ಜಾತಿಗಣತಿಯ ಈ ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ನವ-ಕುಲಕ್ ಓಬಿಸಿ ನಾಯಕತ್ವ ಕೂಡ ಜಾತಿಗಣತಿಯನ್ನು ಮುಕ್ತವಾಗಿ ಸ್ವಾಗತಿಸಬೇಕಿದೆ.

'ಎರಡನೆಯ ಪೂನಾ ಒಪ್ಪಂದ'

ಜೂನ್ ತಿಂಗಳಲ್ಲಿ ಮಹಾರಾಷ್ಟ್ರದ ಸುಮಾರು 150ಕ್ಕೂ ಹೆಚ್ಚು ಮಂದಿ ದಲಿತ ಉದ್ಯಮಿಗಳು ಪುಣೆಯ ದಲಿತ್ ಎಕ್ಸ್‌ಪೋ 2010ರ ವಾಣಿಜ್ಯ ಮೇಳದಲ್ಲಿ ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸುವ ಮೂಲಕ ಹೊಸ ಇತಿಹಾಸಕ್ಕೆ ನಾಂದಿ ಹಾಡಿದರು. ಮೇಳದಲ್ಲಿ ಭಾಗವಹಿಸಿದ್ದ ಸುಮಾರು ಎರಡು ಡಜನ್‌ಗೂ ಅಧಿಕ ದಲಿತ ಉದ್ಯಮಿಗಳು ಐಎಸ್‌ಓ-9001 ಪ್ರಮಾಣ ಪತ್ರ ಹೊಂದಿದ್ದು ಅಂತರಾಷ್ಟ್ರೀಯ ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸುವ ಅರ್ಹತೆ ಪಡೆದಿದ್ದಾರೆ. ಭಾರತೀಯ ದಲಿತ ವಾಣಿಜ್ಯ - ಕೈಗಾರಿಕಾ ಮಂಡಳಿ (ಡಿಐಸಿಸಿಐ) ವಾಣಿಜ್ಯ ಮೇಳವನ್ನು ಆಯೋಜಿಸಿತ್ತು. ಈ ಐತಿಹಾಸಿಕ ವಾಣಿಜ್ಯ ಮೇಳದ ರೂವಾರಿ ಡಿಐಸಿಸಿಐನ ಸಂಸ್ಥಾಪಕ ಅಧ್ಯಕ್ಷರಾದ ಯುವ ದಲಿತ ಉದ್ಯಮಿ ಮಿಲಿಂದ್ ಕಾಂಬಳೆ. "ಹೌದು, ನಮ್ಮಿಂದ ಸಾಧ್ಯ" ಎಂಬ ಘೋಷಣೆಯ ಮೂಲಕ ಕಾಂಬಳೆ ದಲಿತರು ಅಂತರಾಷ್ಟ್ರೀಯ ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸುವ ಸಾಮರ್ಥ್ಯ ಹೊಂದಿದ್ದಾರೆ ಎಂಬುದನ್ನು ಜಗಜ್ಜಾಹೀರುಗೊಳಿಸಿದರು.

ದಲಿತ್ ಎಕ್ಸ್‌ಪೋ-2010 ವಾಣಿಜ್ಯ ಮೇಳವನ್ನು ದಲಿತ ಚಳವಳಿಗಳ ಇತಿಹಾಸದಲ್ಲಿ ಮೈಲಿಗಲ್ಲಾಗಿ ನಿಂತಿರುವ ಪೂನಾ ಒಪ್ಪಂದಕ್ಕೆ ಹೋಲಿಸಬಹುದು. 1932ರ ಸೆಪ್ಟೆಂಬರ್ 24ರಂದು ಭಾರತೀಯ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿಗೆ ದಲಿತರು ಮತ್ತು ಮೇಲ್ಜಾತಿಯ ಹಿಂದೂಗಳು ಒಂದೇವೇದಿಕೆಯಲ್ಲಿ ಕೂತು ಈ ಒಪ್ಪಂದಕ್ಕೆ ಸಹಿ ಹಾಕಿದ್ದರು. ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಹಿಂದೂಗಳ ನಡುವೆ ನಡೆದ ಈ ಒಪ್ಪಂದದಲ್ಲಿ, ದಲಿತರಿಗೆ ಅನ್ಯಾಯವಾಗಿರುವುದನ್ನು ಮೇಲ್ಜಾತಿಗಳು ಅಧಿಕೃತವಾಗಿ ಒಪ್ಪಿಕೊಂಡು, ಅನ್ಯಾಯವನ್ನು ಸರಿಪಡಿಸುವುದಾಗಿ ಭರವಸೆ ನೀಡಿದರು.

1932ರಲ್ಲಿ ನಡೆದ ಎರಡನೆಯ ದುಂಡು ಮೇಜಿನ ಸಭೆಯಲ್ಲಿ ಅಂಬೇಡ್ಕರ್ ಅವರ ಹೋರಾಟದ ಫಲವಾಗಿ ಬ್ರಿಟಿಷ್ ಸರ್ಕಾರ ದಲಿತರಿಗೆ ಚುನಾವಣೆಯಲ್ಲಿ ಪ್ರತ್ಯೇಕ ಪ್ರಾತಿನಿಧ್ಯತೆ ನೀಡಿದ್ದನ್ನು ಪೂನಾ ಒಪ್ಪಂದದಲ್ಲಿ ಬಿಟ್ಟುಕೊಡ ಬೇಕಾಯಿತು. ಅದಕ್ಕೆ ಪ್ರತಿಯಾಗಿ ಶಾಸನಸಭೆ, ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿಯನ್ನು ನೀಡಲು ಒಪ್ಪಿಗೆ ನೀಡಲಾಯಿತು. ಪೂನಾ ಒಪ್ಪಂದದಿಂದ ದಲಿತರಿಗೆ ಒಂದು ದೃಷ್ಟಿಯಲ್ಲಿ ದೊಡ್ಡ ನಷ್ಟವಾಗಿದ್ದರೂ, ಮತ್ತೊಂದು ದೃಷ್ಟಿಯಲ್ಲಿ ಹೊಸ ದಲಿತ ಮಧ್ಯಮವರ್ಗದ ಸೃಷ್ಟಿಗೆ ಇದು ಕಾರಣವಾಗಿದ್ದು ಕೂಡ ಸುಳ್ಳಲ್ಲ.

ಸಾಮಾನ್ಯವಾಗಿ ಅಂಬೇಡ್ಕರ್ ಅವರೊಂದಿಗೆ ಯಾರನ್ನೂ ಹೋಲಿಸುವುದು ಸೂಕ್ತವಲ್ಲ. ಹಾಗೆಯೇ ಯಾವುದೇ ವಿದ್ಯಮಾನವನ್ನು ಐತಿಹಾಸಿಕ ಪೂನಾ ಒಪ್ಪಂದಕ್ಕೆ ಹೋಲಿಸಲು ಕೂಡ ಆಗುವುದಿಲ್ಲ. ಆದರೂ ದಲಿತ್ ಎಕ್ಸ್‌ಪೋ- 2010 ವಾಣಿಜ್ಯ ಮೇಳವನ್ನು 'ಎರಡನೆಯ ಪೂನಾ ಒಪ್ಪಂದ' ಎಂದು ಕರೆದರೆ ಬಹುಶಃ ತಪ್ಪಾಗುವುದಿಲ್ಲ. ದಲಿತ ಐಎಎಸ್ ಅಧಿಕಾರಿ ಡಾ. ಅಮರ್ ಸಿಂಗ್ ಅವರ ಪ್ರಯತ್ನದ ಫಲವಾಗಿ ನಡೆದ ಭೋಪಾಲ್ ಸಮ್ಮೇಳನದ ಆಶಯಗಳ ಮುಂದುವರೆದ ಭಾಗವೆಂದೂ ಸಹ ಇದನ್ನು ಕರೆಯಬಹುದು.

1932ರಲ್ಲಿ ನಡೆದ ಎರಡನೆಯ ದುಂಡು ಮೇಜಿನ ಸಭೆಯಲ್ಲಿ ಅಂಬೇಡ್ಕರ್ ಅವರ ಹೋರಾಟದ ಫಲವಾಗಿ ಬ್ರಿಟಿಷ್ ಸರ್ಕಾರ ದಲಿತರಿಗೆ ಚುನಾವಣೆಯಲ್ಲಿ ಪ್ರತ್ಯೇಕ ಪ್ರಾತಿನಿಧ್ಯತೆ ನೀಡಿದ್ದನ್ನು ಪೂನಾ ಒಪ್ಪಂದದಲ್ಲಿ ಬಿಟ್ಟುಕೊಡ ಬೇಕಾಯಿತು. ಅದಕ್ಕೆ ಪ್ರತಿಯಾಗಿ ಶಾಸನಸಭೆ, ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿಯನ್ನು ನೀಡಲು ಒಪ್ಪಿಗೆ ನೀಡಲಾಯಿತು. ಪೂನಾ ಒಪ್ಪಂದದಿಂದ ದಲಿತರಿಗೆ ಒಂದು ದೃಷ್ಟಿಯಲ್ಲಿ ದೊಡ್ಡ ನಷ್ಟವಾಗಿದ್ದರೂ, ಮತ್ತೊಂದು ದೃಷ್ಟಿಯಲ್ಲಿ ಹೊಸ ದಲಿತ ಮಧ್ಯಮವರ್ಗದ ಸೃಷ್ಟಿಗೆ ಇದು ಕಾರಣವಾಗಿದ್ದು ಕೂಡ ಸುಳ್ಳಲ್ಲ. ಸಾಮಾನ್ಯವಾಗಿ ಅಂಬೇಡ್ಕರ್ ಅವರೊಂದಿಗೆ ಯಾರನ್ನೂ ಹೋಲಿಸುವುದು ಸೂಕ್ತವಲ್ಲ. ಹಾಗೆಯೇ ಯಾವುದೇ ವಿದ್ಯಮಾನವನ್ನು ಐತಿಹಾಸಿಕ ಪೂನಾ ಒಪ್ಪಂದಕ್ಕೆ ಹೋಲಿಸಲು ಕೂಡ ಆಗುವುದಿಲ್ಲ. ಆದರೂ ದಲಿತ್ ಎಕ್ಸ್‌ಪೋ-2010 ವಾಣಿಜ್ಯ ಮೇಳವನ್ನು 'ಎರಡನೆಯ ಪೂನಾ ಒಪ್ಪಂದ' ಎಂದು ಕರೆದರೆ ಬಹುಶಃ ತಪ್ಪಾಗುವುದಿಲ್ಲ.

ಪೂನಾ ಒಪ್ಪಂದ ದಲಿತರಿಗೆ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳ ಬಾಗಿಲುಗಳನ್ನು ತೆರೆದರೆ, 'ಎರಡನೆಯ ಪೂನಾ ಒಪ್ಪಂದ' ದಲಿತರು ದೇಶದ ಖಾಸಗಿ ವಲಯದ ಜೊತೆಗೆ ಒಗ್ಗೂಡಲು ಅವಕಾಶ ಕಲ್ಪಿಸಿದೆ. ಭಾರತೀಯ ಉದ್ಯಮ ರಂಗದ ಹಿರಿಯ ಉದ್ಯಮಿ ಟಾಟಾ ಸಂಸ್ಥೆಯ ನಿರ್ದೇಶಕ ಡಾ. ಜಮ್‌ಷೆಡ್‌ಜಿ ಜೆ ಇರಾನಿ ಅವರು ವಾಣಿಜ್ಯ ಮೇಳವನ್ನು ಉದ್ಘಾಟಿಸಿದರು.

ಅಮೆರಿಕಾದ ಕೈಗಾರಿಕಾ ರಂಗದಲ್ಲಿ ಫೋರ್ಡ್ ಸಂಸ್ಥೆಗಿರುವ ಸ್ಥಾನಮಾನ ಭಾರತದಲ್ಲಿ ಟಾಟಾ ಸಂಸ್ಥೆಗಿದೆ. ಅಮೆರಿಕಾದ ಖಾಸಗಿ ರಂಗದಲ್ಲಿ ಕಪ್ಪು ಜನರಿಗೆ ಮೀಸಲಾತಿಯನ್ನು ನೀಡಿದ ಮೊದಲ ಸಂಸ್ಥೆ ಫೋರ್ಡ್. ಈಗ ಭಾರತದಲ್ಲಿ ಟಾಟಾ ಸಂಸ್ಥೆ ದಲಿತರು ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವ ನಿಟ್ಟಿನಲ್ಲಿ ಸಕ್ರಿಯವಾಗಿದೆ. ಜೂನ್ ಮೂರನೆಯ ವಾರದಲ್ಲಿ ಟಾಟಾದ ಮಾರಾಟಗಾರರ ಆಯ್ಕೆ ಮಂಡಳಿಯ ಮುಂದೆ ಪ್ರಸ್ತಾವನೆ ಸಲ್ಲಿಸಲು ಟಾಟಾದ ಪುಣೆಯ ವ್ಯವಸ್ಥಾಪನೆ ಸುಮಾರು ಒಂದು ಡಜನ್ ದಲಿತ ಉದ್ಯಮಿಗಳನ್ನು ಆಹ್ವಾನಿಸಿದೆ. ಇದು ನಿಜಕ್ಕೂ ಐತಿಹಾಸಿಕ ಬೆಳವಣಿಗೆ. ವಾಣಿಜ್ಯ ಮೇಳದಲ್ಲಿ ಭಾಗವಹಿಸಿದ್ದ ಸುಮಾರು ಒಂದು ಡಜನ್ ದಲಿತ ಉದ್ಯಮಿಗಳು ಈಗಾಗಲೇ ಮಧ್ಯವರ್ತಿಗಳ ಮೂಲಕ ಪೂರಕ ಉತ್ಪನ್ನಗಳನ್ನು ಟಾಟಾ ಸಂಸ್ಥೆಗೆ ಪೂರೈಸುತ್ತಿದ್ದಾರೆ. ಈ ಉದ್ಯಮಿಗಳು ಜಪಾನ್ ಮೂಲದ ಆಟೋಮೊಬೈಲ್ ಸಂಸ್ಥೆ ಸೇರಿದಂತೆ, ಕೆಲವು ದೊಡ್ಡ ಉದ್ಯಮ ಸಂಸ್ಥೆಗಳಿಗೆ ಬಿಡಿಭಾಗಗಳನ್ನು ಪೂರೈಸುತ್ತಿದ್ದಾರೆ.

ಸಾಮಾನ್ಯವಾಗಿ ಮಧ್ಯವರ್ತಿಗಳ ಮೂಲಕ ಬಿಡಿಭಾಗಗಳನ್ನು ಪೂರೈಸುವುದರಿಂದ ಲಾಭದ ಪ್ರಮಾಣ ಕಡಿಮೆಯಾಗುತ್ತದೆ. ಐತಿಹಾಸಿಕ ಕಾರಣಗಳಿಗಾಗಿ ಸಾಮರ್ಥ್ಯವಿದ್ದರೂ ಕೂಡ ದಲಿತರು ನೇರವಾಗಿ ಉತ್ಪನ್ನಗಳನ್ನು ಮಾರಾಟ ಮಾಡಲಾಗದೆ ಮಧ್ಯವರ್ತಿಗಳ ಮೊರೆ ಹೋಗಬೇಕಾಗಿದೆ. ಹೀಗಾಗಿ ದಲಿತ ಉದ್ಯಮಿಗಳಿಗೆ ಬೇಕಾಗಿರುವುದು ತರಬೇತಿ ಅಥವಾ ಸಾಲ ಸೌಲಭ್ಯವಲ್ಲ, ಅವರಿಗೆ ಬೇಕಾಗಿರುವುದು ಮಾರುಕಟ್ಟೆಯ ನೇರ ಪ್ರವೇಶ. ದಲಿತ ಉದ್ಯಮಿಗಳು ನೇರವಾಗಿ ಬಿಡಿಭಾಗಗಳನ್ನು ಪೂರೈಸುವ ಅವಕಾಶವಿರುವ 'ವಿತರಕರ ವೈವಿಧ್ಯತೆ' ನೀತಿಯನ್ನು ಜಾರಿಗೆ ತರುವ ಮೂಲಕ ಟಾಟಾ ಸಂಸ್ಥೆ ಆರ್ಥಿಕ ನ್ಯಾಯದ ದಿಶೆಯಲ್ಲಿ ಸ್ಪಷ್ಟ ಹೆಜ್ಜೆಯನ್ನಿರಿಸಿದೆ.

ವಾಣಿಜ್ಯ ಮೇಳದಲ್ಲಿ ಡಾ. ಇರಾನಿ ಅವರೊಂದಿಗೆ ನರೇಂದ್ರ ಜಾಧವ್, ಡಾ. ಅಮರ್ ಸಿಂಗ್, ಡಿ ಶ್ಯಾಂ ಬಾಬು, ಮಿಲಿಂದ್ ಕಾಂಬಳೆ ಹಾಗೂ ಥರ್ಮ್ಯಾಕ್ಸ್ ಸಂಸ್ಥೆಯ ಅನು ಅಗಾ ಅವರೂ ಉಪಸ್ಥಿತರಿದ್ದರು. ದಲಿತ ಉದ್ಯಮಿಗಳ ಉತ್ಪನ್ನಗಳನ್ನು ಹೊರಗುತ್ತಿಗೆಗೆ ಸ್ವೀಕರಿಸುವುದಾಗಿ ಇದೇ ಸಂದರ್ಭದಲ್ಲಿ ಥರ್ಮ್ಯಾಕ್ಸ್ ಸಂಸ್ಥೆ ಘೋಷಿಸಿತು. ಸುರೇಶ್ ಹಾವ್ರೆ ಅವರ ಹಾವ್ರೆ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್, ಅಜಿತ್ ಮರಾಠೆ ಅವರ ನಿರ್ಮಾಣ್ ಸಮೂಹ ಮತ್ತು ಆರ್. ಸೋನಾವನೆ ಅವರ ಲಿಂಕ್ ಆಲ್ ಇಂಡಿಯಾ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗಳೂ ಕೂಡ ದಲಿತರನ್ನು ತಮ್ಮ ವಿತರಣೆಯ ಸರಪಳಿಯಲ್ಲಿ ಸೇರ್ಪಡಿಸಿಕೊಳ್ಳುವುದಾಗಿ ಘೋಷಿಸಿದವು.

ಎಲ್ಲ ದೊಡ್ಡ ಬದಲಾವಣೆಗಳು ಸಣ್ಣದಾಗಿಯೇ ಆರಂಭವಾಗುವುದು. ದಲಿತ್ ಎಕ್ಸ್‌ಪೋ-2010 ಇಂತಹುದೇ ಒಂದು ದಿಟ್ಟ ಪ್ರಯತ್ನ. ಮಹಾರಾಷ್ಟ್ರ ಸರ್ಕಾರ ಮತ್ತು ಟಾಟಾ ಸಂಸ್ಥೆಯ ಸಹ ಪ್ರಾಯೋಜಕತ್ವದಲ್ಲಿ ಈ ವಾಣಿಜ್ಯ ಮೇಳವನ್ನು ಆಯೋಜಿಸಲಾಗಿತ್ತು. ಥರ್ಮ್ಯಾಕ್ಸ್ ಮತ್ತು ಫೋರ್ಬ್ಸ್ ಮಾರ್ಷಲ್ ಸಂಸ್ಥೆಗಳು ಕ್ರಮವಾಗಿ ಐದು ಮತ್ತು ನಾಲ್ಕು ಮಳಿಗೆಗಳನ್ನು ಪ್ರಾಯೋಜಿಸಿತ್ತು.

'ಎರಡನೆಯ ಪೂನಾ ಒಪ್ಪಂದ' ದಲಿತ ಬಂಡವಾಳಶಾಹಿ ವ್ಯವಸ್ಥೆಯನ್ನು ನಿರ್ಮಿಸುವ ನಿಟ್ಟಿನಲ್ಲಿ ಯಶಸ್ವಿ ಹೆಜ್ಜೆಯನಿರಿಸಿದೆ ಎಂಬ ಆಶಾವಾದ ನನ್ನದು.

ದಲಿತರ ದೇವತೆ ಇಂಗ್ಲಿಷ್ ಮಾತೆ

ಏಪ್ರಿಲ್ 30ರಂದು ದಲಿತರ ದೇವತೆ ಇಂಗ್ಲಿಷ್ ಮಾತೆಯ ಮಂದಿರಕ್ಕೆ ಗುದ್ದಲಿ ಪೂಜೆ ನೆರವೇರಿಸುವುದರೊಂದಿಗೆ ಹೊಸ ಇತಿಹಾಸಕ್ಕೆ ನಾಂದಿ ಹಾಡಲಾಯಿತು. ದೆಹಲಿಯಿಂದ ಸುಮಾರು 365 ಕಿ.ಮೀ ದೂರದಲ್ಲಿನ ಗ್ರಾಮವೊಂದರಲ್ಲಿ ಆಯೋಜಿಸಲಾದ ಅದ್ದೂರಿ ಸಮಾರಂಭದಲ್ಲಿ ಈ ಕಾರ್ಯವನ್ನು ಕೈಗೊಳ್ಳಲಾಯಿತು. ಸುಮಾರು 2,500ಮಂದಿ ಸಮಾರಂಭದಲ್ಲಿ ಭಾಗವಹಿಸಿದ್ದರು. ಇದರಲ್ಲಿ ಅರ್ಧದಷ್ಟು ಮಹಿಳೆಯರಿದ್ದರು. ದಲಿತರ ದೇವತೆ ಇಂಗ್ಲಿಷ್ ಮಾತೆಯ ಆಕರ್ಷಣೆಗೆ ಇದಕ್ಕಿಂತ ಸಾಕ್ಷಿ ಬೇಕೆ?

ಸಮಾರಂಭದಲ್ಲಿ ನನ್ನ ಮಿತ್ರರು ಇಂಗ್ಲಿಷ್ ಮಾತೆಯ ಬಗ್ಗೆ ಹಲವಾರು ಪ್ರಶ್ನೆಗಳನ್ನು ಎತ್ತಿದರು. "ಇಂಗ್ಲಿಷ್ ಭಾಷೆಯೇ ಏಕೆ ದಲಿತರ ದೇವತೆಯಾಗಬೇಕು?" "ನಾಸ್ತಿಕರಾಗಿ ತಾವು ಓರ್ವ ದೇವತೆಯನ್ನು ಪ್ರತಿಷ್ಠಾಪಿಸ ಹೊರಟಿರುವುದು ಸರಿಯೇ?"

ಆದರೆ ಎಲ್ಲದಕ್ಕಿಂತ ಕಠಿಣವಾದ ಪ್ರಶ್ನೆ ಹೀಗಿತ್ತು; "ನೀವು ದಲಿತ ಮಕ್ಕಳಿಗೆ ಇಂಗ್ಲಿಷ್ ಅಕ್ಷರಗಳನ್ನು ಹೇಗೆ ಕಲಿಸುತ್ತೀರಿ?" ಈ ಪ್ರಶ್ನೆಗೆ ಅಲ್ಲೇ ಹಲವಾರು ಪ್ರತಿಕ್ರಿಯೆಗಳು ಕೂಡ ಬಂದವು. "ಇಂಗ್ಲಿಷ್ ಮಾತೆಗೆ ಮಂದಿರವನ್ನು ಕಟ್ಟುವ ಹಣದಲ್ಲಿ ಒಂದು ಇಂಗ್ಲಿಷ್ ಶಾಲೆಯನ್ನು ಆರಂಭಿಸಬಹುದಿತ್ತು." "ಈಗಾಗಲೇ ಅಸ್ತಿತ್ವದಲ್ಲಿರುವ ನಳಂದ ಶಾಲೆಯನ್ನು ಇಂಗ್ಲಿಷ್ ಮಾಧ್ಯಮದ ಶಾಲೆಯಾಗಿ ಪರಿವರ್ತಿಸಲು ಹಣವನ್ನು ಬಳಸಬಹುದಿತ್ತು." "ಮಂದಿರ ಕಟ್ಟುವ ಬದಲು ಈ ಹಣವನ್ನು ದಲಿತ ಮಕ್ಕಳಿಗೆ ಇಂಗ್ಲಿಷ್ ಕಲಿಸಲು ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಬಳಸಬಹುದಿತ್ತು." "ಇಂಗ್ಲಿಷ್ ಮಾತೆಗೆ ಮಂದಿರ ಕಟ್ಟುವ ನಿರ್ಧಾರ ತೆಗೆದುಕೊಂಡಿರುವುದೇನೋ ಸರಿ. ಆದರೆ ಇದರ ಜೊತೆಗೆ ಮಂದಿರಕ್ಕೆ ಹೊಂದಿಕೊಂಡಂತೆ ಒಂದು ಸಣ್ಣ ಇಂಗ್ಲಿಷ್ ಕಲಿಕಾ ಕೇಂದ್ರವನ್ನು ಆರಂಭಿಸುವುದರ ಬಗ್ಗೆ ಯಾಕೆ ಚಿಂತಿಸಬಾರದು?"

ಸದುದ್ದೇಶದಿಂದ ಕೂಡಿದ ಈ ಪ್ರಶ್ನೆಗಳನ್ನು ಕೇಳಿದ ನನ್ನೆಲ್ಲ ಸ್ನೇಹಿತರಿಗೆ ಇಂಗ್ಲಿಷ್ ಮಾತೆಯ ಮಾಂತ್ರಿಕ ಶಕ್ತಿಯ ಬಗ್ಗೆ ಇನ್ನೂ ಅರ್ಥವಾದಂತಿಲ್ಲ.

ಎಲ್ಲ ರೀತಿಯ ಸಂಪನ್ಮೂಲಗಳನ್ನು ಹೊಂದಿರುವ ಸರ್ಕಾರಕ್ಕೇ ಇನ್ನೂ ದಲಿತ ಮಕ್ಕಳಿಗೆ ಇಂಗ್ಲಿಷ್ ಭಾಷೆಯನ್ನು ತಲುಪಿಸಲು ಸಾಧ್ಯವಾಗಿಲ್ಲ. ಹಾಗಿರುವಾಗ ವೈಯುಕ್ತಿಕವಾಗಿ ನಾನು ಈ ಕೆಲಸ ಮಾಡಲು ಸಾಧ್ಯವೇ? ಇಂಗ್ಲಿಷ್ ಮಾತೆಯ ಮಂದಿರ ನಿರ್ಮಾಣವಾಗುತ್ತಿರುವ ಗ್ರಾಮದಲ್ಲಿನ ಶಾಲೆಯನ್ನು ದತ್ತು ತೆಗೆದುಕೊಂಡು ಅಲ್ಲಿನ ಕೆಲವು ದಲಿತ ಮಕ್ಕಳಿಗೆ ಇಂಗ್ಲಿಷ್ ಭಾಷೆಯನ್ನು ಕಲಿಸುತ್ತಾ ನಾನು ಜೀವನ ಕಳೆಯಬಹುದು. ಆದರೆ ಸಮಸ್ಯೆ ಶುರುವಾಗುವುದೇ ಇಲ್ಲಿ. ಕೇವಲ ಒಂದು ಗ್ರಾಮದ ದಲಿತ ಮಕ್ಕಳಿಗೆ ಮಾತ್ರ ಇಂಗ್ಲಿಷ್ ಕಲಿಸಿದರೆ ಸಾಲದು. ದೇಶಾದ್ಯಂತ ಇರುವ ದಲಿತ ಮಕ್ಕಳಿಗೆ ಕೂಡ ಇಂಗ್ಲಿಷ್ ಭಾಷೆಯ ಅಗತ್ಯವಿದೆ ಅಲ್ಲವೇ?

"ದಲಿತರ ದೇವತೆ ಇಂಗ್ಲಿಷ್ ಮಾತೆ ಲಕ್ಷಾಂತರ ಮಂದಿ ದಲಿತರಿಗೆ ಇಂಗ್ಲಿಷ್ ಭಾಷೆಯ ಪರಿಚಯ ಮಾಡಿಸುತ್ತಾಳೆ" ಎಂಬ ಭರವಸೆ ನನಗಿದೆ. "ಇಂಗ್ಲಿಷ್ ಮಾತೆಗೆ

ದಲಿತರ ದೇವತೆ ಇಂಗ್ಲಿಷ್ ಮಾತೆಯ ಶಕ್ತಿ ಇರುವುದೇ ಇಲ್ಲಿ. ಕೆಲವೊಮ್ಮೆ ಕಾರ್ಯಾಚರಣೆಗಿಂತ ವಿಚಾರಗಳೇ ಜನರ ಅಭಿಪ್ರಾಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸರ್ಕಾರ, ಸರ್ಕಾರಿ ಸಂಸ್ಥೆಗಳು ಮತ್ತು ವಿವಿಧ ಸರ್ಕಾರೇತರ ಸಂಘ ಸಂಸ್ಥೆಗಳು ಬಹಳಷ್ಟು ಸಲ ಬೇಡಿಕೆಯನ್ನು ಸೃಷ್ಟಿಸದೆ, ಸೇವೆಯನ್ನು ಒದಗಿಸುತ್ತವೆ. ಇದರಿಂದಾಗಿ ಜನರ ಆತ್ಮವಿಶ್ವಾಸ ಕೂಡ ಕುಗ್ಗಿ ಹೋಗುತ್ತದೆ. ಇಂತಹ ಯೋಜನೆಗಳಿಂದಾಗಿಯೇ ಸ್ವಾತಂತ್ರ್ಯ ಬಂದು ಆರು ದಶಕಗಳು ಕಳೆದರೂ ದಲಿತರು ಇಂಗ್ಲಿಷ್ ಭಾಷೆಯ ಬಗ್ಗೆ ಆಸಕ್ತಿ ಬೆಳೆಸಿಕೊಂಡಿಲ್ಲ. ತಮ್ಮ ಮಕ್ಕಳಿಗೆ ಸುಲಭವಾಗಿ ಇಂಗ್ಲಿಷ್ ಕಲಿಕೆಗೆ ಅನುವು ಮಾಡಿಕೊಡಲು ಶಕ್ತರಾದ ಲಕ್ಷಾಂತರ ಮಂದಿ ದಲಿತ ಪೋಷಕರು ದೇಶದಲ್ಲಿದ್ದಾರೆ. ಆದರೆ ದಲಿತರಲ್ಲಿ ಇಂಗ್ಲಿಷ್ ಭಾಷೆಯ ಬೇಡಿಕೆ ಸೃಷ್ಟಿಸದ ಕಾರಣ, ಇವರೆಲ್ಲರೂ ಪ್ರಾದೇಶಿಕ ಭಾಷಾ ಮಾಧ್ಯಮದ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸುತ್ತಾ ಬಂದಿದ್ದಾರೆ.

ಮಂದಿರ ಕಟ್ಟುವುದರಿಂದ ಮಕ್ಕಳಿಗೆ ಶಾಲೆಯ ಕೊಠಡಿಗಳ ಕೊರತೆ ಇರುವುದಿಲ್ಲ. ಇಂಗ್ಲಿಷ್ ಮಾತೆಯ ಮೂರ್ತಿ ಪ್ರತಿಷ್ಠಾಪನೆಯಾಗುವುದರಿಂದ ದಲಿತ ಮಕ್ಕಳಿಗೆ ಇಂಗ್ಲಿಷ್ ಭಾಷೆ ಕಲಿಸಲು ಶಿಕ್ಷಕರು ಏಕೆ ಬೇಕು?"

"ಕಂಚಿನವಿಗ್ರಹವೊಂದು ಮಾತನಾಡಲು ಸಾಧ್ಯವೇ? ಎಂದು ನಿಮಗೆಲ್ಲಾ ಆಶ್ಚರ್ಯವಾಗುತ್ತಿದೆ ಅಲ್ಲವೇ? ಆದರೂ ಈ ಇಂಗ್ಲಿಷ್ ಮಾತೆಯ ಮೂರ್ತಿ ಲಕ್ಷಾಂತರ ಮಂದಿ ದಲಿತ ಮಕ್ಕಳಿಗೆ ಸಾಮೂಹಿಕವಾಗಿ ಇಂಗ್ಲಿಷ್ ಅಕ್ಷರ ಕಲಿಸಿಕೊಡಲಿದೆ ಎಂಬ ವಿಶ್ವಾಸ ನನಗಿದೆ. ದಲಿತರ ದೇವತೆ ಇಂಗ್ಲಿಷ್ ಮಾತೆಯನ್ನು ದಲಿತೇತರ ಮಕ್ಕಳು ಸ್ವೀಕರಿಸಿದರೆ ಅವರಿಗೂ ಇಂಗ್ಲಿಷ್ ಮಾತೆಯ ಕೃಪೆ ಸಿಗುವುದರಲ್ಲಿ ಸಂಶಯವಿಲ್ಲ.

ಇಂಗ್ಲಿಷ್ ಮಾತೆಯ ಮಂದಿರದ ಗುದ್ದಲಿ ಪೂಜೆ ಸಮಾರಂಭ ಏಪ್ರಿಲ್ 30ರಂದು ಸಂಜೆ 5 ಗಂಟೆಗೆ ಆರಂಭವಾಗಿ ರಾತ್ರಿ 9ರವರೆಗೆ ನಡೆಯಿತು. ಸುಮಾರು 10.30ರ ಹೊತ್ತಿಗೆ ನಾವು ನಮ್ಮ ಹೋಟೆಲ್‌ಗಳಿಗೆ ಹಿಂದಿರುಗಿದೆವು. ಮಧ್ಯರಾತ್ರಿ 12.30ರ ಶಹಜಹಾನ್‌ಪುರ್-ದೆಹಲಿ ರೈಲಿನಲ್ಲಿ ನನ್ನ ಕೆಲವು ಸ್ನೇಹಿತರೊಂದಿಗೆ ನಾವೂ ಕೂಡ ದೆಹಲಿಗೆ ತೆರಳಬಹುದಿತ್ತು.

ಆದರೆ ಡಿ ಶ್ಯಾಂ ಬಾಬು, ಸಸೆಕ್ಸ್ ವಿಶ್ವವಿದ್ಯಾನಿಲಯದ ಪ್ರೊ. ಮಾರ್ಕಸ್‌ವುಡ್, ಖ್ಯಾತ ದಲಿತ ವಿಮರ್ಶಕ ಇಶ್ ಕುಮಾರ್ ಗಂಗಾನಿಯಾ ಮತ್ತು ಕೆಲವು ಗೆಳೆಯರೊಂದಿಗೆ ನಾನು ಗ್ರಾಮದಲ್ಲಿಯೇ ತಂಗಿದೆ. ಮಂದಿರ ನಿರ್ಮಾಣವಾಗುತ್ತಿರುವ ಗ್ರಾಮದ ಜನತೆ ಒಟ್ಟಾರೆ ಈ ಯೋಜನೆಯ ಬಗ್ಗೆ ಹೊಂದಿರುವ ಅಭಿಪ್ರಾಯವನ್ನು ಸಂಗ್ರಹಿಸಲು ಹಿಂದಿನ ರಾತ್ರಿ ಗೆಳೆಯ ಅಮರ್ ಚಂದ್ ಜೌಹರ್‌ರನ್ನು ಗ್ರಾಮಕ್ಕೆ ಕಳುಹಿಸಿದ್ದೆ. ಮರುದಿನ ರಾತ್ರಿ 10 ಗಂಟೆಗೆ ಬಂದ ಅವರು "ಗ್ರಾಮದಾದ್ಯಂತ ಇಂಗ್ಲಿಷ್ ಮಾತೆ ಮತ್ತು ಮಂದಿರದ ಚರ್ಚೆಗಳು ನಡೆಯುತ್ತಿವೆ" ಎಂದು ತಿಳಿಸಿದರು.

ದಲಿತರ ದೇವತೆ ಇಂಗ್ಲಿಷ್ ಮಾತೆಯ ಶಕ್ತಿ ಇರುವುದೇ ಇಲ್ಲಿ. ಕೆಲವೊಮ್ಮೆ ಕಾರ್ಯಾಚರಣೆಗಿಂತ ವಿಚಾರಗಳೇ ಜನರ ಅಭಿಪ್ರಾಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸರ್ಕಾರ, ಸರ್ಕಾರಿ ಸಂಸ್ಥೆಗಳು ಮತ್ತು ವಿವಿಧ ಸರ್ಕಾರೇತರ ಸಂಘ ಸಂಸ್ಥೆಗಳು ಬಹಳಷ್ಟು ಸಲ ಬೇಡಿಕೆಯನ್ನು ಸೃಷ್ಟಿಸದೆ, ಸೇವೆಯನ್ನು ಒದಗಿಸುತ್ತವೆ. ಇದರಿಂದಾಗಿ ಜನರ ಆತ್ಮವಿಶ್ವಾಸ ಕೂಡ ಕುಗ್ಗಿ ಹೋಗುತ್ತದೆ. ಇಂತಹ ಯೋಜನೆಗಳಿಂದಾಗಿಯೇ ಸ್ವಾತಂತ್ರ್ಯ ಬಂದು ಆರು ದಶಕಗಳು ಕಳೆದರೂ ದಲಿತರು ಇಂಗ್ಲಿಷ್ ಭಾಷೆಯ ಬಗ್ಗೆ ಆಸಕ್ತಿ ಬೆಳೆಸಿಕೊಂಡಿಲ್ಲ. ತಮ್ಮ ಮಕ್ಕಳಿಗೆ ಸುಲಭವಾಗಿ ಇಂಗ್ಲಿಷ್ ಕಲಿಕೆಗೆ ಅನುವು ಮಾಡಿಕೊಡಲು ಶಕ್ತರಾದ ಲಕ್ಷಾಂತರ ಮಂದಿ ದಲಿತ ಪೋಷಕರು ದೇಶದಲ್ಲಿದ್ದಾರೆ. ಆದರೆ ದಲಿತರಲ್ಲಿ ಇಂಗ್ಲಿಷ್ ಭಾಷೆಯ ಬೇಡಿಕೆ ಸೃಷ್ಟಿಸದ ಕಾರಣ, ಇವರೆಲ್ಲರೂ ಪ್ರಾದೇಶಿಕ ಭಾಷಾ ಮಾಧ್ಯಮದ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸುತ್ತಾ ಬಂದಿದ್ದಾರೆ.

ದಲಿತರಲ್ಲಿ ಇಂಗ್ಲಿಷ್ ಭಾಷೆಯ ಬೇಡಿಕೆ ಸೃಷ್ಟಿಸುವ ನಿಟ್ಟಿನಲ್ಲಿ ದಲಿತರ ದೇವತೆ ಇಂಗ್ಲಿಷ್ ಮಾತೆ ನಿರ್ಣಾಯಕ ಪಾತ್ರ ವಹಿಸಲಿದ್ದಾಳೆ. ದಲಿತರಿಗೆ ಇಂಗ್ಲಿಷ್ ಭಾಷೆಯ ಅಗತ್ಯತೆ ಬಗ್ಗೆ ಅರಿವು ಮೂಡಿಸದೆ ಸರ್ಕಾರ ಅಥವಾ ಇತರ ಯಾವುದೇ ಸಂಘಸಂಸ್ಥೆಗಳು ಎಷ್ಟೇ ಶ್ರಮವಹಿಸಿದರೂ ಇಂಗ್ಲಿಷ್ ಭಾಷೆಯನ್ನು ಅವರಿಗೆ ಕಲಿಸಲು ಸಾಧ್ಯವಿಲ್ಲ.

2005ರಲ್ಲಿ ಇಂಗ್ಲಿಷ್ ಮಾತೆಯನ್ನು ದಲಿತರ ದೇವತೆಯಾಗಿ ಪ್ರತಿಷ್ಠಾಪಿಸಿದಾಗಿನಿಂದ ಬಹಳಷ್ಟು ಮಂದಿ ಸ್ನೇಹಿತರು ನನ್ನ ನಾಸ್ತಿಕವಾದದ ಬಗ್ಗೆ ಲೇವಡಿ ಮಾಡಿದ್ದಾರೆ. ಆದರೆ, ನನ್ನ ನಿಲುವು ಮಾತ್ರ ಸ್ಪಷ್ಟ. ವೈಯುಕ್ತಿಕವಾಗಿ ನಾನು ಆಸ್ತಿಕನಲ್ಲ. ಆದರೂ ಕೂಡ ದಲಿತರ ದೇವತೆ ಇಂಗ್ಲಿಷ್ ಮಾತೆಯನ್ನು ನಾನು ನಂಬುತ್ತೇನೆ.

ದ್ವಂದ್ವ ನಿಲುವು ಎನಿಸಿದರೂ ಕೂಡ ಇದು ಸತ್ಯ. ನಾನು ನಾಸ್ತಿಕ. ಈ ಭೂಮಿ ಮೇಲಿರುವ ಲಕ್ಷಾಂತರ ಮಂದಿ ನಾಸ್ತಿಕರಲ್ಲಿ ನಾನೂ ಕೂಡ ಒಬ್ಬ. ಆದರೆ ದುರದೃಷ್ಟವಶಾತ್ ಭೂಮಿ ಮೇಲೆ ಬಹುತೇಕ ಮಂದಿ ಆಸ್ತಿಕರೇ ಇರುವುದು. ಲಕ್ಷಕ್ಕೊಬ್ಬ ಕಟ್ಟಾ ನಾಸ್ತಿಕ ಇದ್ದರೆ ಇರಬಹುದು. ಕೇವಲ ಧರ್ಮ ಮಾತ್ರ ಮನುಷ್ಯರನ್ನು ನಂಬಿಕೆಯ ಪರಿಧಿಯಲ್ಲಿ ಬಂಧಿಸಿಟ್ಟಿಲ್ಲ. ಜೊತೆಗೆ ಇತರ

ಆಸ್ತಿಕರ ಇಂಗ್ಲಿಷ್ ಮಾತೆ

ಸೈದ್ಧಾಂತಿಕ ವ್ಯವಸ್ಥೆಗಳು ಕೂಡ ಇದೇ ಕೆಲಸವನ್ನು ಮಾಡಿವೆ. ಹೀಗಾಗಿ ಜಗತ್ತಿನಾದ್ಯಂತ ಲಕ್ಷಾಂತರ ಮಂದಿ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದೆ.

ಜನ ತಾವು ನಂಬಿದ ಧರ್ಮ ಮತ್ತು ಸಿದ್ಧಾಂತಗಳಿಗೆ ಯಾವಾಗಲೂ ಸೇವೆ ಸಲ್ಲಿಸುತ್ತಿರುತ್ತಾರೆ. ಬೌದ್ಧ ಧರ್ಮವನ್ನು ಹೊರತುಪಡಿಸಿ, ಉಳಿದೆಲ್ಲ ಧರ್ಮಗಳು ತಮ್ಮ ಅನುಯಾಯಿಗಳಿಂದ ಸೇವೆಯನ್ನು ಬಯಸುತ್ತವೆ. ಧಾರ್ಮಿಕ ವ್ಯವಸ್ಥೆಯ ಹೊರಗಿರುವ ಬಹಳಷ್ಟು ಸಿದ್ಧಾಂತಗಳು ಕೂಡ ತಮ್ಮ ಅನುಯಾಯಿಗಳಿಂದ ಸೇವೆಯನ್ನು ಬಯಸುತ್ತವೆ. ವಾಸ್ತವವಾಗಿ ಎಲ್ಲ ದೇವ-ದೇವತೆಗಳು ಭಕ್ತರ ಸೇವೆ ಮಾಡಬೇಕಿತ್ತು. ಆದರೆ ಯಾವ ದೇವ-ದೇವತೆಗಳು ಕೂಡ ಭಕ್ತರಸೇವೆ ಮಾಡುವುದಿಲ್ಲ. ಸಿದ್ಧಾಂತಗಳು ಕೂಡಹಾಗೆ. ಬಹಳಷ್ಟು ಸಿದ್ಧಾಂತಗಳು ಅನುಯಾಯಿಗಳ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ವಿಫಲವಾಗಿವೆ.

'ದಲಿತ್ ಡೈರಿ' ಅಂಕಣ ಕೂಡ ದಲಿತರ ಸೇವೆಗೆ ಮೀಸಲು. ಹೀಗಾಗಿ ದಲಿತರ ಸೇವೆ ಮಾಡಬೇಕಾದ ಜವಾಬ್ದಾರಿ ನನ್ನ ಮೇಲಿದೆ. ಬಹುತೇಕ ದಲಿತರು ಇತರರಂತೆ ಆಸ್ತಿಕರಾಗಿದ್ದಾರೆ. ಒಂದು ವೇಳೆ ನಾನು ನನ್ನ ವೈಯುಕ್ತಿಕ ನಂಬಿಕೆಯನ್ನು ದಲಿತರ ಮೇಲೆ ಹೇರಲು ಹೊರಟಿದ್ದರೆ ತಪ್ಪಾಗುತ್ತಿತ್ತು. ನಾನು ನಂಬುವ ನಾಸ್ತಿಕವಾದವನ್ನು ಅನುಸರಿಸಲು ಹೇಳಿ ಒಟ್ಟಾರೆ ಸಮುದಾಯಕ್ಕೆ ದ್ರೋಹ ಬಗೆಯುವುದಕ್ಕಿಂತ ಇಂಗ್ಲಿಷ್ ಮಾತೆಯನ್ನು ಆರಾಧಿಸಲು ದಲಿತರನ್ನು ಒತ್ತಾಯಿಸುವುದು ಸೂಕ್ತವೆಂದು ನನಗನಿಸುತ್ತದೆ. ಇದನ್ನು ದ್ವಂದ್ವ ನಿಲುವೆಂದು ಜನ ಜರಿದರೆ ನನಗೆ ಚಿಂತೆಯಿಲ್ಲ.

ಬಾಬಾ ಸಾಹೇಬ್ ಅಂಬೇಡ್ಕರ್ ಸ್ವಹಿತಕ್ಕಾಗಿ ಎಂದೂ ಕೆಲಸಮಾಡಲಿಲ್ಲ.ತಮ್ಮ ಅನುಯಾಯಿಗಳಿಂದಲೂ ಅವರು ಯಾವುದೇ ರೀತಿಯ ಸೇವೆಯನ್ನು ಬಯಸಲಿಲ್ಲ. ಬದಲಿಗೆ ಅಂಬೇಡ್ಕರರೇ ತಮ್ಮ ಅನುಯಾ ಯಿಗಳ ಸೇವೆಮಾಡುತ್ತಿದ್ದರು. ಬುದ್ಧಮಾಡಿದ್ದೂ ಇದನ್ನೇ. ಇಂಗ್ಲಿಷ್ ಮಾತೆ ದಲಿತರ ಉದ್ಧಾರಕ್ಕಾಗಿ ಹುಟ್ಟಿ ಕೊಂಡಿರುವ ದೇವತೆ. ಇಂಗ್ಲಿಷ್ ಮಾತೆ ತನ್ನ ಅನುಯಾಯಿಗಳಿಂದ ಯಾವುದೇ ರೀತಿಯ ಸೇವೆಯನ್ನು ಬಯಸುವುದಿಲ್ಲ.

ಬಹುತೇಕ ದಲಿತರು, ವಿಶೇಷವಾಗಿ ಮಹಿಳೆಯರು ಒಂದಲ್ಲಾ ಒಂದು ರೀತಿಯಲ್ಲಿ ಯಾವುದಾದರೂ ದೇವತೆಯನ್ನು ಪೂಜಿಸುತ್ತಿರುತ್ತಾರೆ. ದಲಿತ ಮಹಿಳೆಯರು ಆರಾಧಿಸುವ ದೇವತೆಯರು ಬಹುಪಾಲು ಹಿಂದೂ ಪರಂಪರೆಯ ಹಿನ್ನೆಲೆ ಹೊಂದಿರುವ ದಲಿತೇತರ ದೇವತೆಗಳೇ ಆಗಿರುತ್ತವೆ.

ಈ ಹಿನ್ನೆಲೆಯಲ್ಲಿ ಇಂಗ್ಲಿಷ್ ಮಾತೆ ಏಕಕಾಲಕ್ಕೆ ಹಲವಾರು ಕಾರ್ಯಗಳನ್ನು ಸಾಧಿಸುವ ಸಾಮರ್ಥ್ಯ ಹೊಂದಿದ್ದಾಳೆ. ಮೊದಲಿಗೆ ಈಗಾಗಲೇ ದಲಿತರ ಮನೆಯಲ್ಲಿ ಅಸ್ತಿತ್ವದಲ್ಲಿರುವ ದಲಿತೇತರ ದೇವತೆಗಳ ಸ್ಥಾನವನ್ನು ಇಂಗ್ಲಿಷ್ ಮಾತೆ ಆವರಿಸಲಿದ್ದಾಳೆ. ಇನ್ನು ಇಂಗ್ಲಿಷ್ ಮಾತೆ ಮೂಲತಃ ಬೌದ್ಧಿಕವಾಗಿ ಮತ್ತು ವೈಚಾರಿಕವಾಗಿ ಉನ್ನತ ಮಟ್ಟದಲ್ಲಿರುವುದರಿಂದ ಪೂಜಾ ವಿಧಿವಿಧಾನಗಳು ದೊಡ್ಡ ಪ್ರಮಾಣದಲ್ಲಿ ಕಡಿಮೆಯಾಗುತ್ತದೆ.

ಜನ ತಾವು ನಂಬಿದ ಧರ್ಮ ಮತ್ತು ಸಿದ್ಧಾಂತಗಳಿಗೆ ಯಾವಾಗಲೂ ಸೇವೆ ಸಲ್ಲಿಸುತ್ತಿರುತ್ತಾರೆ. ಬೌದ್ಧ ಧರ್ಮವನ್ನು ಹೊರತುಪಡಿಸಿ, ಉಳಿದೆಲ್ಲ ಧರ್ಮಗಳು ತಮ್ಮ ಅನುಯಾಯಿಗಳಿಂದ ಸೇವೆಯನ್ನು ಬಯಸುತ್ತವೆ. ಧಾರ್ಮಿಕ ವ್ಯವಸ್ಥೆಯ ಹೊರಗಿರುವ ಬಹಳಷ್ಟು ಸಿದ್ಧಾಂತಗಳು ಕೂಡ ತಮ್ಮ ಅನುಯಾಯಿಗಳಿಂದ ಸೇವೆಯನ್ನು ಬಯಸುತ್ತವೆ.

ಇಂಗ್ಲಿಷ್ ಮಾತೆ ದಲಿತರ ಮನೆಮನಗಳನ್ನು ಆವರಿಸಿಕೊಂಡ ನಂತರ ಇಂಗ್ಲಿಷ್ ಭಾಷೆ ಕೂಡ ದಲಿತರಿಗೆ ಸುಲಭವಾಗಿ ದಕ್ಕುತ್ತದೆ. ಇಂಗ್ಲಿಷ್ ಮಾತೆ ಪುರುಷರಿಗಿಂತ ದಲಿತ ಮಹಿಳೆಯರನ್ನು ಹೆಚ್ಚು ಆಕರ್ಷಿಸುತ್ತದೆ. ಮಕ್ಕಳು ಸಾಮಾನ್ಯವಾಗಿ ತಾಯಿಯ ಜೊತೆಗೆ ಹೆಚ್ಚು ಸಮಯ ಕಳೆಯುತ್ತಾರೆ. ಹೀಗಾಗಿ ತಾಯಿ ಮಾತನಾಡುವ ಭಾಷೆಯನ್ನೇ ಮಕ್ಕಳು ಕೂಡ ಮಾತನಾಡುತ್ತಾರೆ. ಹೀಗಾಗಿ ನಮ್ಮ ಮನೆಯ ಭಾಷೆಯನ್ನು ಮಾತೃಭಾಷೆ ಎಂದು ಕರೆಯುವುದು.

ದಲಿತ ಮಹಿಳೆಯರು ಇಂಗ್ಲಿಷ್ ಭಾಷೆಯನ್ನು ಅಳವಡಿಸಿಕೊಂಡರೆ, ತಮ್ಮ ಮಕ್ಕಳಿಗೆ ಸಬಲೀಕರಣದ ಹಲವಾರು ಪರಿಕರಗಳನ್ನು ಒದಗಿಸಿದಂತಾಗುತ್ತದೆ. ಇಂಗ್ಲಿಷ್ ಭಾಷೆಯ ವ್ಯಕ್ತಿತ್ವವನ್ನು ಗುರುತಿಸುವ ಮೊದಲು ನಾನು ಈ ಕುರಿತು ಸ್ವಲ್ಪ ಅಧ್ಯಯನವನ್ನು ಮಾಡಿದ್ದೆ. ಪ್ರಸ್ತುತ ಅಸ್ತಿತ್ವದಲ್ಲಿರುವ ಹಿಂದೂ ದೇವತೆಯರ್ಯಾರೂ ಅಕ್ಷರಸ್ಥರಲ್ಲ. ಆದರೆ ಇಂಗ್ಲಿಷ್ ಮಾತೆಯ ಬಳಿ ಪುಸ್ತಕ ಮತ್ತು ಲೇಖನಿ ಇರುವುದು ಅವಳು ಅಕ್ಷರಸ್ಥಳೆನ್ನುವುದನ್ನು ತೋರಿಸುತ್ತದೆ.

ದಲಿತರ ದೇವತೆ ಇಂಗ್ಲಿಷ್ ಮಾತೆ ಅಕ್ಷರಸ್ಥಳಷ್ಟೇ ಅಲ್ಲ, ವಿದ್ಯಾವಂತೆಯೂ ಹೌದು, ವಿದ್ವತ್ತಿನ ಪ್ರತಿರೂಪವೂ ಹೌದು. ಆಕೆ ತನ್ನ ಬಲಗೈಯ ತೋರು ಬೆರಳನ್ನು ಆಕಾಶಕ್ಕೆ ತೋರಿಸುತ್ತಿದ್ದು, ಎಡಗೈಯಲ್ಲಿ ಪುಸ್ತಕವೊಂದನ್ನು ಹಿಡಿದಿದ್ದಾಳೆ (ಬಹುಶಃ ಭಾರತೀಯ ಸಂವಿಧಾನ). ಆಕೆ ಅಂಬೇಡ್ಕರ್‌ರಂತೆ ಹ್ಯಾಟ್ ತೊಟ್ಟಿದ್ದು, ಅತ್ಯುತ್ತಮ ದಿರಿಸು ಧರಿಸಿದ್ದಾಳೆ.

ಹೀಗಾಗಿ ಇಂಗ್ಲಿಷ್ ಮಾತೆಯನ್ನು ನಿಸ್ಸಂಶಯವಾಗಿ ಅಂಬೇಡ್ಕರ್‌ವಾದಿ ಎನ್ನಬಹುದು. ಭಗವಾನ್ ಬುದ್ಧನ ತತ್ವವನ್ನು ಪ್ರತಿಪಾದಿಸುವ ಈಕೆ ಧಮ್ಮ ಚಕ್ರವನ್ನು ಹೊಂದಿದ್ದಾಳೆ. ಕಂಪ್ಯೂಟರ್ ಕೀ- ಬೋರ್ಡ್ ಮೇಲೆ ನಿಂತಿರುವುದರಿಂದ ಇಂಗ್ಲಿಷ್ ಮಾತೆ ಕಂಪ್ಯೂಟರ್ ಸಾಕ್ಷರತೆಯನ್ನು ಸಾಧಿಸಿರುವುದು ತಿಳಿದುಬರುತ್ತದೆ.

ಇಂಗ್ಲಿಷ್ ಮಾತೆ ಎಲ್ಲ ದಲಿತ ಮಹಿಳೆಯರನ್ನು ಹರಸುವುದರಿಂದ ದಲಿತ ಮಕ್ಕಳು ಇಂಗ್ಲಿಷ್ ಭಾಷೆಯ ಮೇಲೆ ಪ್ರೌಢಿಮೆ ಸಾಧಿಸುವುದರಲ್ಲಿ ಸಂಶಯವಿಲ್ಲ. □

ಜನಗಣತಿ: ಭಾಷೆಯನ್ನು ಹೊರಗಿಟ್ಟು ಸಾಧಿಸುವುದಾದರೂ ಏನನ್ನು?

(36ನೇ ಪುಟದಿಂದ)

ಮೀಸಲಾತಿಯ ಲಾಭಕ್ಕಾಗಿ ಇದುನಡದೇ ನಡೆಯುತ್ತದೆ. ಕರ್ನಾಟಕದ ಸಾದರ ಲಿಂಗಾಯತ ಸಮುದಾಯವು ಪ್ರವರ್ಗ2ರಲ್ಲಿ ಸೇರಿಕೊಳ್ಳಲು, ಪಂಚಮ ಸಾಲಿ ಲಿಂಗಾಯತರು ಓಬಿಸಿಯಲ್ಲಿ ಸೇರ್ಪಡೆಗೊಳ್ಳಲು ಹೊಂಚುಹಾಕಿದ್ದನ್ನು ನೆನಪಿಸಿಕೊಳ್ಳಬಹುದು.

ಪಕ್ಷ ಭಾಷೆಯನ್ನು ಆಧರಿಸಿ ಎರಡು ಬಾರಿ ಜನಗಣತಿ ನಡದಿದೆ. ಆದಾಗ್ಯೂ ಇದರಿಂದ ಯಾವುದೇ ಬಗೆಯ ಉಪಯೋಗವಾಗಿಲ್ಲ ಎಂಬುದು ಗಮನಾರ್ಹ ಸಂಗತಿ. ಜಾತಿಯಾಧಾರಿತ ಜನಗಣತಿಯೂ ಕೇವಲ ರಾಜಕೀಯ ಪ್ರೇರಿತವೋ ಅಥವಾ ಸಾಮಾಜಿಕ ನ್ಯಾಯವನ್ನು ಒದಗಿಸುವ ಕ್ರಮವೋ? ಎಂದು ಪ್ರತ್ಯೇಕವಾಗಿ ಚರ್ಚಿಸುವ ಜರೂರಿಲ್ಲ. ಏಕೆಂದರೆ, ಇವತ್ತು ಜಾತಿಯಾಧಾರಿತ ಮೀಸಲಾತಿಯ ಹಿಂದಿನ ಉದ್ದೇಶವೇ ರಾಜಕೀಯವಾದದ್ದು ಅನ್ನುವುದರಲ್ಲಿ ಯಾವುದೇ ಬಗೆಯ ಸಂಶಯಗಳಿಲ್ಲ. 1931ರ ಜಾತಿಯಾಧಾರಿತ ಜನಗಣತಿಯೂ ಸಂಸ್ಕೃತೀಕರಣ [Sanskritization]ಕ್ಕೆ ಕಾರಣವಾಯ್ತು ಎಂಬ ಆರೋಪವೂ ಇದೆ. ಅಂತೆಯೇ ಇವತ್ತಿನ ಜಾತಿಯಾಧಾರಿತ ಜನಗಣತಿಯೂ ನಿರ್‌ಸಂಸ್ಕೃತೀಕರಣ [Desanskritization]ಕ್ಕೆ ದಾರಿ ಮಾಡಬಹುದೆಂಬ ಆತಂಕಗಳಿವೆ.

ಮೀಸಲಾತಿಯ ಲಾಭಕ್ಕಾಗಿ ಇದು ನಡದೇ ನಡೆಯುತ್ತದೆ. ಉದಾ.ಗೆ ಕರ್ನಾಟಕದ ಸಾದರಲಿಂಗಾಯತ ಸಮುದಾಯವು ಪ್ರವರ್ಗ2ರಲ್ಲಿ ಸೇರಿಕೊಳ್ಳಲು, ಪಂಚಮ ಸಾಲಿ ಲಿಂಗಾಯತರು ಓಬಿಸಿಯಲ್ಲಿ ಸೇರ್ಪಡೆಗೊಳ್ಳಲು ಹೊಂಚುಹಾಕಿದ್ದನ್ನು ನೆನಪಿಸಿಕೊಳ್ಳಬಹುದು.ಒಬಿಸಿಎನ್ನುವ ಮೀಸಲಾತಿಯ ಸಂಯೋಜನೆಯೇ ಒಂದುದೊಂಬರಾಟ. ಸಾಮಾಜಿಕ-ಸಾಂಸ್ಕೃತಿಕವಾಗಿ ತಾವು ಮೇಲುವರ್ಗ ಎಂದು ಬೀಗುವ, ಶೈಕ್ಷಣಿಕ ಹಾಗೂ ಉದ್ಯೋಗಾವಕಾಶದಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ್ದೇವೆ ಎಂದು ಹಕ್ಕೊತ್ತಾಯಪಡಿಸುವ ಇಂತಹ ಸಮುದಾಯಗಳಿಗೆ ಮಾತ್ರ ಜಾತಿಯಾಧಾರಿತ ಜನಗಣತಿಯಿಂದ ಪ್ರಯೋಜನವಿದೆ. ಭಾಷೆಯನ್ನು ನೆಚ್ಚಿಕೊಂಡರೆ, ಈ ಬಗೆಯ ಲಾಭಗಳು, ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯ ಮುಂದಾಳುತನವನ್ನು ವಹಿಸಿಕೊಂಡ ವರ್ಗಗಳಿಗೆ ಮಾತ್ರ ಲಾಭವಾಗದೇ, ಆ ಇಡೀ ಭಾಷಾಸಮುದಾಯಕ್ಕೆ ಪ್ರಯೋಜನವಾಗುತ್ತದೆ. ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಜಾತಿಯಾಧರಿತ ಜನಗಣತಿಯಿಂದ ಹಿಂದುಳಿದ ಸಮುದಾಯಗಳು ಸಾಮಾಜಿಕ-ರಾಜಕೀಯ ಮುನ್ನೆಲೆಗೆ ಬರುತ್ತವೆ ಎನ್ನುವುದಾದರೆ, ಇಂತಹ ಪ್ರಯತ್ನಗಳಿಗೆ ನನ್ನದೇನೂ ಆಕ್ಷೇಪವಿಲ್ಲ. ಆದರೆ, ಭಾಷೆಯನ್ನು ಹೊರಗಿಟ್ಟು ನಮ್ಮ ಸಮುದಾಯಗಳು ಸಾಮಾಜಿಕ-ರಾಜಕೀಯವಾಗಿ ಮುಂದುವರೆಯುತ್ತವೆ ಎಂಬುದರಲ್ಲಿ ನನಗೆ ಸಂಶಯಗಳಿವೆ. □

ತನ್ನ ತಾ ಕಾಯದವ ಪರರ ಕಾಯ್ವನೇ?



ಸಿ.ಎಚ್.ರಾಜಶೇಕರ್

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಜೇತ ವನದಲ್ಲಿ ತನ್ನ ಅಪಾರ ಭಿಕ್ಷುಗಳೊಂದಿಗೆ ತಂಗಿದ್ದರು. ಅದಕ್ಕೂ ಪೂರ್ವ ಕಾಲದಲ್ಲಿ ಬೋಧಿಸತ್ವರು ವಾರಾಣಾಸಿಯ ಉದೀಚ್ಯ ಬ್ರಾಹ್ಮಣನೊಬ್ಬನ ಮನೆಯಲ್ಲಿ ಜನಿಸಿದ್ದರು. ಅಂದಿನ ಕಾಲದ ಬ್ರಾಹ್ಮಣರು ತಮ್ಮ ಸಂಪ್ರದಾಯದಂತೆ ಗಂಡು ಮಗು ಹುಟ್ಟಿದ್ದೆ ಆದರೆ ಆ ಮಗುವಿನ ನೆನಪು ಮತ್ತು ಭವಿಷ್ಯದ ದೃಷ್ಟಿಯಿಂದಾಗಿ ಅಗ್ನಿಯನ್ನು ಕಾಯ್ದು ಇರಿಸುತ್ತಿದ್ದರು. ಅದರಂತೆಯೇ ಬೋಧಿಸತ್ವರ ತಂದೆ ತಾಯಿಗಳೂ ಕೂಡ ಮಗುವು ಹುಟ್ಟಿದ ದಿನ ಅವರ ನೆನಪಿಗಾಗಿ ಅಗ್ನಿಯನ್ನು ತೆಗೆದಿರಿಸಿದ್ದರು. ಅವರು ಬೆಳೆದು ಹದಿನಾರು ವರ್ಷಕ್ಕೆ ಕಾಲಿರಿಸಿದ ನಂತರ ಅವರ ತಂದೆ ತಾಯಿಗಳು ಬೋಧಿಸತ್ವರನ್ನು ಉದ್ದೇಶಿಸಿ;

"ಮಗು, ನೀನು ಹುಟ್ಟಿದ ದಿನದಂದು ನಿನ್ನ ಶ್ರೇಯಸ್ಸನ್ನು ಕಾಪಾಡುವ ಸಲುವಾಗಿ ಅಗ್ನಿಯನ್ನು ತೆಗೆದಿರಿಸಿದ್ದೇವೆ. ನೀನು ಗೃಹಸ್ಥನಾಗ ಬಯಸಿದರೆ ತಕ್ಷಶಿಲೆಗೆ ಹೋಗಿ ಮೂರು ವೇದಗಳನ್ನು ಕಲಿ ಅಥವಾ ನೀನು ಮುಕ್ತಿಯನ್ನು ಬಯಸುವುದಾದರೆ ಸಂನ್ಯಾಸ ದೀಕ್ಷೆಯನ್ನು ಪಡೆದು ಈ ಅಗ್ನಿಯನ್ನು ತೆಗೆದುಕೊಂಡು ಕಾಡಿಗೆ ಹೋಗಿ ತಪಸ್ಸು ಮಾಡಿ ಮಹಾಬ್ರಹ್ಮನನ್ನು ಒಲಿಸಿ ಕೊಂಡು ಬ್ರಹ್ಮಲೋಕಕ್ಕೆ ಹೋಗು!" ಎಂದರು. ಆಗ ಬೋಧಿಸತ್ವರು;



"ಮಾತಾಪಿತರೇ, ನಾನು ಗೃಹಸ್ಥನಾಗಲಾರೆ. ನನಗೆ ಅಗ್ನಿಯನ್ನು ಕೊಡಿ. ನಾನು ಕಾಡಿಗೆ ಹೋಗಿ ಮಹಾಬ್ರಹ್ಮ ನನ್ನು ಒಲಿಸಿಕೊಳ್ಳುತ್ತೇನೆ!" ಎನ್ನಲು ಅವರು ಮಗನಿಗೆ ಆಶೀರ್ವದಿಸಿ ಕಾಡಿಗೆ ಕಳುಹಿಸಿ ಕೊಟ್ಟರು.

ಬೋಧಿಸತ್ವರು ಹಿಮಾಲಯದ ತಪ್ಪಲಲ್ಲಿ ಆಶ್ರಮವನ್ನು ನಿರ್ಮಿಸಿಕೊಂಡು ಅಗ್ನಿ ಪೂಜೆ ಮಾಡಿಕೊಂಡು ನಿಷ್ಠೆಯಿಂದ ತಪಸ್ಸನ್ನು ಆಚರಿಸಿಕೊಂಡು ಕಾಲ ಕಳೆಯುತ್ತಿದ್ದರು. ದಿನವು ಬಿಕ್ಷೆಗಾಗಿ ಪಕ್ಕದಲ್ಲಿದ್ದ ಹಳ್ಳಿಗೆ ಹೋಗಿ ಬಿಕ್ಷೆ ಬೇಡಿ ಅಲ್ಲಿನ ಜನರಿಗೆ ಒಳ್ಳೆಯ ಮತ್ತು ಕೆಟ್ಟ ವಿಚಾರಗಳ ಬಗ್ಗೆ ಉಪದೇಶ ನೀಡಿ ತಮ್ಮ ಆಶ್ರಮಕ್ಕೆ ಹಿಂದಿರುಗುತ್ತಿದ್ದರು. ಇವರಿಂದ ಉಪಕೃತನಾದ ರೈತನೊಬ್ಬ ದಕ್ಷಿಣೆ ರೂಪದಲ್ಲಿ ಇವರಿಗೆ ಒಂದು ಎತ್ತನ್ನು ಕೊಟ್ಟ. ಬೋಧಿಸತ್ವರು ಆ ಎತ್ತನ್ನು ಅಕ್ಕರೆಯಿಂದ ಸಾಕಿದ್ದರು. ಒಮ್ಮೆ ಬೋಧಿಸತ್ವರು ಹೀಗೆ ಯೋಚಿಸಿದರು. ನಾನು ಕಠಿಣವಾದ ಅಗ್ನಿ ಪೂಜೆಗೆ ತೊಡಗಿ ಹಲವು ವರ್ಷಗಳೇ ಉರುಳಿದವು. ನಾನೇಕೆ ಯಜ್ಞವನ್ನು ಮಾಡಿ ಮಹಾಬ್ರಹ್ಮನನ್ನು ಒಲಿಸಿಕೊಳ್ಳಬಾರದು ಎಂಬ ನಿರ್ಧಾರಕ್ಕೆ ಬದ್ಧರಾದರು.

ಹೀಗಿರಲು ಒಂದು ದಿನ ಯಜ್ಞಕುಂಡವನ್ನು ನಿರ್ಮಿಸಿದರು. ತಾನು ಸಾಕಿದ ಎತ್ತನ್ನು ಯಜ್ಞಕುಂಡಕ್ಕೆ ಬಲಿಯಾಗಿ ಅರ್ಪಿಸಲು ತೀರ್ಮಾನಿಸಿದರು. ಅದಕ್ಕೆ ಬೇಕಾದ ಸಕಲ ಸಿದ್ದತೆಯನ್ನು ಮಾಡಿಕೊಂಡರು. ಆದರೆ ಆಶ್ರಮದಲ್ಲಿ ಉಪ್ಪು ಇರಲಿಲ್ಲ. ಅಗ್ನಿದೇವತೆಯು ಗೋಮಾಂಸವನ್ನು ಉಪ್ಪಿಲ್ಲದೆ ಸಪ್ಪೆಯಾಗಿ ಸ್ವೀಕರಿಸುವುದಿಲ್ಲ ಎಂಬುದನ್ನು ಅರಿತಿದ್ದರು. ಸಂನ್ಯಾಸಿ ನಿಯಮದ ಪ್ರಕಾರ ಆಶ್ರಮದಲ್ಲಿ ಉಪ್ಪನ್ನು ಇಟ್ಟುಕೊಳ್ಳುವಂತಿಲ್ಲ. ಹಾಗಾಗಿ ಉಪ್ಪನ್ನು ತರುವ ಸಲುವಾಗಿ ಪಕ್ಕದ ಹಳ್ಳಿಗೆ ಹೋದರು.

ಅದೇ ಸಮಯದಲ್ಲಿ ಬೇಟೆಗಾರರ ತಂಡವೊಂದು ಬೇಟೆಯ ಸಲುವಾಗಿ ಕಾಡನ್ನು ಪ್ರವೇಶಿಸಿತು. ಎಲ್ಲಿಯೂ ಬೇಟೆ ಸಿಗದೆ ಅಲೆಯುತ್ತಾ ಆ ತಂಡವು ಬೋಧಿಸತ್ವರ ಆಶ್ರಮದ ಬಳಿ ಬಂದಿತು. ಯಜ್ಞಕುಂಡದ ಬಳಿ ಕಟ್ಟಿಹಾಕಿದ್ದ ಬಲಿಷ್ಠವಾದ ಎತ್ತನ್ನು ಕಂಡರು. ಗಿಡ ಮತ್ತು ಪೊದೆಗಳ ಮರೆಯಲ್ಲಿ ಅವಿತು ಆಶ್ರಮದಲ್ಲಿ ಯಾರಾದರು ಇರಬಹುದೆ ಎಂದು ಪರೀಕ್ಷಿಸಿದರು. ಯಾರ ಸುಳಿವು ಕಾಣಲಿಲ್ಲ. ಧೈರ್ಯವಾಗಿ ಆಶ್ರಮದ ಬಳಿ ಬಂದ ಆ ಬೇಟೆಗಾರರ ತಂಡವು ಎತ್ತನ್ನು ಬಿಚ್ಚಿಕೊಂಡು ಸಮೀಪದ ದಟ್ಟವಾದ ಪೊದೆಗಳ ಮರೆಗೆ ಎಳೆದುಕೊಂಡು ಹೋದರು. ಅದನ್ನು ಕಡಿದು ತುಂಡು ತುಂಡು ಮಾಡಿ ತಮಗೆ ಬೇಕಾದ ಆಕಾರಕ್ಕೆ ಮಾಂಸವನ್ನು ಕತ್ತರಿಸಿಕೊಂಡು ಪಾಲು ಮಾಡಿಕೊಂಡರು. ಬಳಿಕ ಬೇಡವಾದ ಅದರ ಬಾಲವನ್ನು ಮಾತ್ರ ಅಲ್ಲಿಯೇ ಬಿಸಾಕಿ ಹೊರಟು ಹೋದರು.

ಇತ್ತ ಉಪ್ಪನ್ನು ತರಲು ಸಮೀಪದ ಹಳ್ಳಿಗೆ ಹೋಗಿದ್ದ ಬೋಧಿಸತ್ವರು ಉಪ್ಪನ್ನು ತೆಗೆದುಕೊಂಡು ಆಶ್ರಮದ ಬಳಿ ಬಂದು ನೋಡುತ್ತಾರೆ, ಅಲ್ಲಿ ಯಜ್ಞಕುಂಡಕ್ಕೆ ಬಲಿ ಕೊಡಲು ಕಟ್ಟಿ ಹಾಕಿದ್ದ ತಮ್ಮ ಎತ್ತು ಕಾಣಲಿಲ್ಲ. ಎತ್ತಿ ಗಾಗಿ ಕೂಗುತ್ತ ಅಲೆಯುವಾಗ ಎತ್ತನ್ನು ಯಾರೋ ಕತ್ತರಿ ಹಾಕಿದ್ದನ್ನು ಗುರುತಿಸುತ್ತಾರೆ. ಅಲ್ಲಿ ಬಾಲ ಮಾತ್ರ ಉಳಿದಿರುತ್ತದೆ. ಅದನ್ನು ಗಮನಿಸಿದ ಅವರ ಮನಸ್ಸಿನಲ್ಲಿ ಹೀಗೊಂದು ಯೋಚನೆ ಹೊಳೆಯಿತು. ಅದೆಂದರೆ, ನನ್ನ ತಂದೆ ತಾಯಿಗಳು ನನ್ನ ಶ್ರೇಯಸ್ಸು ಮತ್ತು ಉನ್ನತಿಗಾಗಿ ಯಾವ ಅಗ್ನಿಯನ್ನು ರಕ್ಷಿಸಿ ಇಟ್ಟಿದ್ದರೋ, ನಾನು ಯಾವ ಅಗ್ನಿಗಾಗಿ ಗೃಹವನ್ನು ತೊರೆದು ಸಂನ್ಯಾಸಿಯಾ ದೆನೋ, ಯಾವ ಅಗ್ನಿಗಾಗಿ ನಿಯಮ ನಿಷ್ಠೆಯಿಂದ

"ಮಗು, ನೀನು ಹುಟ್ಟಿದ ದಿನದಂದು ನಿನ್ನ ಶ್ರೇಯಸ್ಸನ್ನು ಕಾಪಾಡುವ ಸಲುವಾಗಿ ಅಗ್ನಿಯನ್ನು ತೆಗೆದಿರಿಸಿದ್ದೇವೆ. ನೀನು ಗೃಹಸ್ಥನಾಗ ಬಯಸಿದರೆ ತಕ್ಷಶಿಲೆಗೆ ಹೋಗಿ ಮೂರು ವೇದಗಳನ್ನು ಕಲಿ ಅಥವಾ ನೀನು ಮುಕ್ತಿಯನ್ನು ಬಯಸುವುದಾದರೆ ಸಂನ್ಯಾಸ ದೀಕ್ಷೆಯನ್ನು ಪಡೆದು ಈ ಅಗ್ನಿಯನ್ನು ತೆಗೆದು ಕೊಂಡು ಕಾಡಿಗೆ ಹೋಗಿ ತಪಸ್ಸು ಮಾಡಿ ಮಹಾಬ್ರಹ್ಮನನ್ನು ಒಲಿಸಿ ಕೊಂಡು ಬ್ರಹ್ಮಲೋಕಕ್ಕೆ ಹೋಗು!" ಎಂದರು. ಆಗ ಬೋಧಿಸತ್ವರು; "ಮಾತಾಪಿತರೇ, ನಾನು ಗೃಹಸ್ಥನಾಗಲಾರೆ. ನನಗೆ ಅಗ್ನಿ ಯನ್ನು ಕೊಡಿ. ನಾನು ಕಾಡಿಗೆ ಹೋಗಿ ಮಹಾಬ್ರಹ್ಮ ನನ್ನು ಒಲಿಸಿ ಕೊಳ್ಳುತ್ತೇನೆ!"

ಸಿ. ಹೆಚ್. ರಾಜಶೇಖರ್

ತಪಸ್ಸು ಮಾಡಿದ್ದೆನೋ, ಆ ಮೂಲಕ ಮಹಾಬ್ರಹ್ಮನನ್ನು ಒಲಿಸಿಕೊಳ್ಳುವ ಸಲುವಾಗಿ ಯಜ್ಞಯಾಗವನ್ನು ಮಾಡಬೇಕೆಂದು ನಿರ್ಧರಿಸಿದ್ದೆ. ಅದಕ್ಕಾಗಿ ಯಜ್ಞಕುಂಡವನ್ನೂ ನಿರ್ಮಿಸಿ ಆ ಪರಬ್ರಹ್ಮನನ್ನು ತೃಪ್ತಿ ಪಡಿಸುವ ಸಲುವಾಗಿ ನಾನೇ ಸಾಕಿದ ಎತ್ತನ್ನು ಬಲಿಕೊಡಲು ಸಿದ್ದವಾಗಿದ್ದೆ. ಆದರೆ ಪರಬ್ರಹ್ಮನನ್ನು ತೃಪ್ತಿ ಪಡಿಸುವ ಸಲುವಾಗಿ ಉಪ್ಪನ್ನು ತರಲು ಪಕ್ಕದ ಹಳ್ಳಿಗೆ ಹೋಗಿದ್ದೆ. ಅಂತಹ ಸಂದರ್ಬದಲ್ಲಿ ಯಾರೋ ಆಶ್ರಮದ ಬಳಿ ಬಂದ ಬೇಟೆಗಾರರು ಯಜ್ಞಪಶುವಾದ ಎತ್ತನ್ನು ಕೊಂದು ಮಾಂಸವನ್ನು ತೆಗೆದುಕೊಂಡು ಹೋಗಿದ್ದಾರೆ.

ಅಂದರೆ ಇದರ ಅರ್ಥವೇನು? ಯಾವ ಪರಬ್ರಹ್ಮನು ತನಗಾಗಿ ಮೀಸಲಿಟ್ಟ ಎತ್ತನ್ನು ಸ್ವಯಃ ತಾನೇ ರಕ್ಷಿಸಿ ಕೊಳ್ಳಲಿಲ್ಲ. ಅಂದರೆ ಆತನನ್ನನ್ನು ಹೇಗೆ ರಕ್ಷಿಸಬಲ್ಲ? ನನ್ನ ಕಲ್ಯಾಣವನ್ನು ಮತ್ತು ಉನ್ನತಿಯನ್ನು ಹೇಗೆ ಮಾಡಬಲ್ಲ? ಹಾಗಾದರೆ ಈ ಅಗ್ನಿ ಪೂಜೆ ನಿರರ್ಥಕ ವಲ್ಲವೇ ಎಂಬುವ ಜ್ಞಾನೋದಯವಾಯಿತು.

ಬಳಿಕ ತಾವು ಹುಟ್ಟಿದ್ದ ಕಾಷಾಯವಸ್ತ್ರವನ್ನು ಬಿಚ್ಚಿ ಹಾಕಿದರು. ಗೃಹಸ್ಥರು ತೊಡುವ ಬಿಳಿ ಉಡುಗೆಯನ್ನು ತೊಟ್ಟರು. ತಮ್ಮ ತಂದೆ ತಾಯಿಗಳಿಂದ ತೆಗೆದುಕೊಂಡು ಬಂದು ಇದೂವರೆವಿಗೆ ಕಾಯ್ದಿಟ್ಟ ಅಗ್ನಿಯನ್ನು ಸಮೀಪದಲ್ಲಿ ಹರಿಯುತ್ತಿದ್ದ ಹೊಳೆಗೆ ಎಸೆದರು. ಆಶ್ರಮವನ್ನು ತೊರೆದು ಮುಂದಿನ ಸತ್ಯಾನ್ವೇಷಣೆಗಾಗಿ ಹೊರಡುವ ಮುನ್ನ ದಗದಗಿಸಿ ಹುರಿಯುತ್ತಿದ್ದ ಅಗ್ನಿಕುಂಡದ ಬಳಿ ನಿಂತ ಬೋಧಿಸತ್ವರು:

"ಅಯ್ಯಾ ಅಗ್ನಿಕುಂಡವೇ, ನಿನ್ನನ್ನು ಪೂಜಿಸುವ ಮೂಲಕ, ನಿನಗೆ ಪ್ರಾಣಿಬಲಿ ಅರ್ಪಿಸುವ ಮೂಲಕ ಆ ಪರಬ್ರಹ್ಮನು ಪ್ರಸನ್ನಗೊಳ್ಳುತ್ತಾನೆ. ಜ್ವಲಿಸುವ ಈ ಅಗ್ನಿಕುಂಡದಿಂದ ಎದ್ದು ಬಂದು ನನ್ನ ಕೈಹಿಡಿದು ಕಾಪಾಡುತ್ತಾನೆ. ಉದ್ದರಿಸಿ ನನ್ನ ಕಲ್ಯಾಣಕ್ಕೆ ಕಾರಣಕರ್ತನಾಗುತ್ತಾನೆ ಎಂದು ನಂಬಿದ್ದೆ. ನನ್ನ ಉನ್ನತಿಯಾಗುತ್ತದೆ ನಾನು ಸ್ವರ್ಗ ಸೇರುತ್ತೇನೆ ಮುಕ್ತಿ ಹೊಂದುತ್ತೇನೆ ಎಂದೆಲ್ಲ ಭ್ರಮಿಸಿದ್ದೆ.

ಆದರೆ ನಿನಗಾಗಿ ಮೀಸಲಿಟ್ಟ ಎತ್ತನ್ನೇ ನೀನು ಕಾಪಾಡುವಲ್ಲಿ ವಿಫಲನಾದೆ. ಹಾಗಿರುವಾಗ ನನ್ನನ್ನು ನೀನು ಹೇಗೆ ಕಾಪಾಡಬಲ್ಲೇ? ನಿನ್ನನ್ನು ಮತ್ತೇ ಪೂಜಿಸಿದ್ದೇ ಆದರೆ ನನ್ನ ಕಾಲ ಮತ್ತು ಶ್ರಮ ವ್ಯರ್ಥವಾಗುತ್ತದೆ ನಾನಿನ್ನು ಬರುತ್ತೇನೆ ವಂದನೆಯು ನಿನಗೆ...!"ಎನ್ನುತ್ತಾ ಅಲ್ಲಿಂದ ಮುನ್ನೆಡೆದರು. □

ಪ್ರಿಯರು ಕೊಟ್ಟ ವಿಷ ಸಾವು ತರದೇ ..!

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಜೇತವನದಲ್ಲಿ ತನ್ನ ಅಪಾರ ಭೀಕ್ಷು ಸಹೋದರರೊಂದಿಗೆ ತಂಗಿದ್ದರು. ಆ ಸಮಯದಲ್ಲಿ ಅನೇಕ ಭೀಕ್ಷುಗಳು ತನ್ನ ಸಂಬಂಧಿಗಳು ಕೊಟ್ಟ ವಸ್ತುಗಳನ್ನು,ಉಡುಗೊರೆಗಳನ್ನು – ರುಚಿಕರವಾದ ಆಹಾರಗಳನ್ನು ಬಹಳ ಹೆಮ್ಮೆಯಿಂದ ಪಡೆದು ಉಪಯೋಗಿಸುತ್ತಿದ್ದರು. ಜೊತೆಗೆ ಇದು ನನ್ನ ತಂದೆ ತಾಯಿ, ಸೋದರ ಸೋದರಿ, ಚಿಕ್ಕಪ್ಪ ದೊಡ್ಡಪ್ಪ ಅಥವಾ ಮಾವ ಕೊಟ್ಟದ್ದು ಎಂದು ಹೆಮ್ಮೆ ಕೊಚ್ಚಿಕೊಳ್ಳುತ್ತಿದ್ದರು. ಈ ವಿಷಯವು ಬುದ್ಧರಿಗೆ ತಿಳಿಯಲು ಒಮ್ಮೆ ಅವರನ್ನೆಲ್ಲ ಒಂದೆಡೆ ಕರೆದು ಈ ಬಗ್ಗೆ ವಿಚಾರಿಸಿದರು. ಅವರುಗಳು ನಿಜ ಸಂಗತಿಯನ್ನು ಒಪ್ಪಿಕೊಂಡರು.

ಅವರುಗಳನ್ನು ಉದ್ದೇಶಿಸಿದ ಬುದ್ಧರು:

"ಸಹೋದರರೇ, ನೀವುಗಳೂ ಕೂಡ ಸಾಮಾನ್ಯ ಜನರಂತೆ ನಂಬಿಕೆ, ಅಂಧಃಶ್ರದ್ದೆ ಮತ್ತು ಅಭಿಮಾನಕ್ಕೆ ಒಳಗಾಗಿ ಯೋಚಿಸದೆ, ಪರೀಕ್ಷಿಸದೆ ಏನನ್ನು ಸ್ವೀಕರಿಸುವುದು ಒಳಿತಲ್ಲ. ನೀಮಗೆ ಪ್ರೀಯರಾಗಲ್ಲಿ ಅಥವಾ ಅಪ್ರಿಯರಾಗಲ್ಲಿ ಯಾರು ಏನನ್ನು ಕೊಡಲು ಬಂದರು ಅದರ ಔಚಿತ್ಯವನ್ನು ಅರಿಯದೆ ಸ್ವೀಕರಿಸಬೇಡಿ. ಪರೀಕ್ಷಿಸದೆ ತೆಗೆದುಕೊಂಡ ವಸ್ತುವು ವರ್ತಮಾನದಲ್ಲಿ ಮತ್ತು ಭವಿಷ್ಯದಲ್ಲಿ ನಿಮಗೆ ದುಃಖವನ್ನು ತರದೆ ಬಿಡದು. ಪ್ರಿಯರು ಸಂಬಂಧಿಗಳೂ ಎಂಬ ಮಾತ್ರಕ್ಕೆ ಅವರುಗಳು ಕೊಟ್ಟ ವಿಷವು ಸಾವು ತರುವುದಿಲ್ಲವೆ?"ಎನ್ನಲು

"ಗುರುದೇವಾ, ಖಂಡಿತ ಸಾವು ತರುವುದು! ಎಂದರು." ಆಗ ಬುದ್ಧರು ಅವರುಗಳನ್ನು ಉದ್ದೇಶಿಸಿ ಒಂದು ಕಥೆಯನ್ನು ಹೇಳ ತೊಡಗಿದರು;

"ನಾನು ಜ್ಞಾನೋದಯಗೊಂಡು ಬುದ್ಧನಾಗುವುದಕ್ಕೂ ಮೊದಲು ಬೋಧಿಸತ್ವನಾಗಿದ್ದಾಗ. ಒಬ್ಬ ಶ್ರೀಮಂತ ಶ್ರೇಷ್ಠಿಯ ಮನೆಯಲ್ಲಿ ಜನಿಸಿದೆ. ನಮ್ಮ ಮನೆಗೆ ಹಾಲು ತಂದು ಕೊಡುವ ಒಬ್ಬ ಗೊಲ್ಲನಿದ್ದ. ಅವನು ಹಸುಕರುಗ ಳಿಗೆ ಹುಲ್ಲು ಸೊಪ್ಪು ಮತ್ತು ನೀರಿನ

ತೊಂದರೆ ತಪ್ಪುತ್ತದೆ ಎಂದು ಸಮೀಪದ ಅರಣ್ಯದ ನಡುವೆ ಗುಡಿಸಲು ಕಟ್ಟಿಕೊಂಡು ವಾಸಿಸತೊಡಗಿದ. ಹೀಗಿರಲು ಆತನಿಗೆ ಕಾಡಿನಲ್ಲಿ ಒಂದು ಸಿಂಹದ ಹೆಣ್ಣು ಮರಿಯು ದೊರೆಯಿತು. ಅದನ್ನು ಪ್ರೀತಿಯಿಂದ ಸಾಕಿ ದೊಡ್ಡದು ಮಾಡಿದ. ಅದು ಪ್ರಾಯಕ್ಕೆ ಬಂದ ನಂತರ ಸುಂದರ ಹೆಣ್ಣು ಸಿಂಹವಾಯಿತು. ಅದೇ ಅರಣ್ಯದಲ್ಲಿ ಇದ್ದ ಗಂಡು ಸಿಂಹವೊಂದು ಅದರಿಂದ ಆಕರ್ಷಣೆಯೊಂದಿತು. ಇದರ ಪರಿಣಾಮವಾಗಿ ಆ ಸಿಂಹವು ಗೊಲ್ಲನ ಕೊಟ್ಟಿಗೆಯ ಬಳಿ ಸುತ್ತಾಡತೊಡಗಿತು. ಇದರಿಂದ ಪ್ರಾಣಭೀತಿಗೆ ಒಳಗಾದ ಹಸುಗಳು ಹಾಲನ್ನು ಕೊಡುವುದರಲ್ಲಿ ಕಡಿಮೆ ಮಾಡಿದವು.

ಇದರಿಂದ ಶ್ರೇಷ್ಠಿಯ ಮನೆಗೆ ಬರುವ ಹಾಲು ಮತ್ತು ತುಪ್ಪದ ಪ್ರಮಾಣ ಕಡಿಮೆಯಾಗಲು ಈ ಬಗ್ಗೆ ವಿಚಾರಿಸಿದರು. ಆತ ಇರುವ ವಿಷಯವನ್ನು ತಿಳಿಸಿದನು. ಅದಕ್ಕೆ ಅವರೊಂದು ಉಪಾಯವನ್ನು ಹೇಳಿಕೊಟ್ಟರು. ಆತ ಅದರಂತೆ ತನ್ನ ಬಳಿ ಇದ್ದ ಹೆಣ್ಣು ಸಿಂಹದ ಮೈಗೆ ವಿಷವನ್ನು ಸವರಿ ತನ್ನ ಮನೆಯಿಂದ ಹೊರಗೆ ತಿರುಗಾಡಲು ಬಿಟ್ಟ. ಎಂದಿನಂತೆ ಆ ಗಂಡು ಸಿಂಹವು ಬಂದಿತು. ಸಮಯ ಸಾಧಿಸಿ ನಿಧಾನವಾಗಿ ಹೆಣ್ಣು ಸಿಂಹದ ಬಳಿ ಬಂದು ಸ್ನೇಹ ಸಂಪಾದಿಸಿ ಒಡನಾಟ ಬೆಳೆಸಿತು. ತನ್ನ ಪ್ರೀತಿಯನ್ನು ವ್ಯಕ್ತಪಡಿಸುವ ಸಲುವಾಗಿ ಅದರ ಮೈಯನ್ನು ನಾಲಿಗೆಯಿಂದ ನೆಕ್ಕ ತೊಡಗಿತು. ಸ್ವಲ್ಪ ಸಮಯದ ಬಳಿಕ ಅದಕ್ಕೆ ತಾನು ಮೋಸ ಹೋದ ಬಗ್ಗೆ ಅರಿವು ಮೂಡಿತು. ಅಷ್ಟರಲಿ ಕಾಲವು ಮಿಂಚಿತ್ತು. ಅದು ತನ್ನ ಕೊನೆ ಉಸಿರನ್ನು ಬಿಡುವ ಮುನ್ನ:

"ಪ್ರಿಯಳು ಕೊಟ್ಟ ವಿಷ ಕೂಡ ಮೃತ್ಯು ತರುವುದೆಂದು ನಿನ್ನಿಂದ ಅರಿತೆ!" ಎಂದಿತು. ಬುದ್ಧರು ತಮ್ಮ ಕಥೆಯನ್ನು ಹೀಗೆ ಮುಗಿಸಿದರು. □

'SAMVADA' Kannada Monthly, July 2010 RNI-KAR KAN/2002/9246 CPMG/KA/BGW-706/2009-11
Office of Posting: Mail Business Center, Bangalore GPO, Date of Posting: 1st & 7th of Every Month

ರಾಜ್ಯದ ಸಹಕಾರ ರಂಗದಲ್ಲಿ ಕ್ರಾಂತಿಕಾರಕ ಬದಲಾವಣೆಗಳು

ಶ್ರೀ ಬಿ.ಎಸ್. ಯಡಿಯೂರಪ್ಪ
ಮಾನ್ಯ ಮುಖ್ಯಮಂತ್ರಿಗಳು

ರಾಜ್ಯದ ಜನಸಾಮಾನ್ಯರ ಜನ ಜೀವನವನ್ನು ರೂಪಿಸುವುದರಲ್ಲಿ ಸಹಕಾರ ರಂಗ ವಹಿಸಿರುವ ಪಾತ್ರ ಗಣನೀಯವಾದದ್ದು. ಕೃಷಿಕರು, ಕೂಲಿಕಾರ್ಮಿಕರು, ಸಾಂಪ್ರದಾಯಿಕ ವೃತ್ತಿನಿರತರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗಗಳು ಇತ್ಯಾದಿ ಜನರ ಆರ್ಥಿಕ ಅವಶ್ಯಕತೆಗಳನ್ನು ಪೂರೈಸುವುದರಲ್ಲಿ ಮುಂಚೂಣಿಯಲ್ಲಿ ನಿಂತಿರುವ ಸಹಕಾರ ರಂಗವು ಪ್ರಸ್ತುತ ಸರ್ಕಾರದ ಆಡಳಿತಾವಧಿಯಲ್ಲಿ ಹಲವು ಅಭೂತಪೂರ್ವ ಕ್ರಮಗಳನ್ನು ಅನುಷ್ಠಾನಗೊಳಿಸಿ ರೈತರು ಹಾಗೂ ಸಂಬಂಧಿತ ಚಟುವಟಿಕೆಗಳಲ್ಲಿ ನಿರತರಾಗಿರುವ ಜನತೆಯ ಜೀವನದ ಗುಣಮಟ್ಟವನ್ನು ಹೆಚ್ಚಿಸಲು ನೆರವಾಗಿದೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ
ಮಾನ್ಯ ಸಹಕಾರ ಸಚಿವರು

ಸಹಕಾರ ಇಲಾಖೆಯ ಸಾಧನೆಗಳು

ರಾಜ್ಯದ ಕೃಷಿಕ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಯ ದೃಷ್ಟಿಯಿಂದ ಶೇ. **3** ಬಡ್ಡಿ ದರದಲ್ಲಿ ಸಹಕಾರ ಸಂಸ್ಥೆಗಳ ಮೂಲಕ **14.00** ಲಕ್ಷ ರೈತರಿಗೆ ರೂ. **3835.04** ಕೋಟಿ ಸಾಲ ನೀಡಲಾಗಿದೆ.

- ಒಂದು ವರ್ಷದ ಅವಧಿಯಲ್ಲಿ **10621** ಸ್ವ-ಸಹಾಯ ಗುಂಪುಗಳನ್ನು ರಚಿಸಲಾಗಿದೆ. ಶೇ. **4**ರ ಬಡ್ಡಿ ದರದಲ್ಲಿ ರೂ. **106.02** ಕೋಟಿ ಸಾಲ ನೀಡಲಾಗಿದೆ.

ರೈತರ ಸಾಲ ಮನ್ನಾ

ಸಾಲ ಮನ್ನಾ ಯೋಜನೆಯಲ್ಲಿ ಪ್ರಸಕ್ತ ಸಾಲಿನಲ್ಲಿ ರೂ. **85.60** ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

- **2.54** ಲಕ್ಷ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಹಾಗೂ ಮಹಿಳೆಯರನ್ನು ಸಹಕಾರ ಸಂಸ್ಥೆಗಳಲ್ಲಿ ಸದಸ್ಯರನ್ನಾಗಿಸಲು ರೂ. **3.00** ಕೋಟಿ ಸರ್ಕಾರದ ಷೇರು ಧನ ನೀಡಿಕೆ.

2009-10ನೇ ಸಾಲಿಗೆ ಯೋಜಿತ ಕಾರ್ಯಕ್ರಮಗಳು

- **3.75** ಲಕ್ಷ ರೈತರನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಹೊಸದಾಗಿ ಸದಸ್ಯರನ್ನಾಗಿ ನೋಂದಾಯಿಸಿ, ಸಾಲ ನೀಡಲು ಗುರಿ ಹಮ್ಮಿಕೊಳ್ಳಲಾಗಿದೆ.
- ಒಟ್ಟು ಕೃಷಿ ಸಾಲ ನೀಡಿಕೆಯಲ್ಲಿ ಶೇ.25ರಷ್ಟು ಹೊಸ ಸದಸ್ಯರಿಗೆ ಸಾಲ ನೀಡಲು ಉದ್ದೇಶಿಸಲಾಗಿದೆ.
- ಭೂ ಹಿಡುವಳಿ ಹೊಂದಿದ ಎಲ್ಲಾ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕುಟುಂಬಗಳನ್ನು ಸದಸ್ಯರನ್ನಾಗಿ ನೋಂದಾಯಿಸುವುದು ಹಾಗೂ ಕೃಷಿ ಸಾಲ ನೀಡುವ ಗುರಿ ಇಟ್ಟುಕೊಳ್ಳಲಾಗಿದೆ.

ಸರ್ಕಾರದ ಮಹತ್ವಾಕಾಂಕ್ಷೆಯ "ಯಶಸ್ವಿನಿ" ಯೋಜನೆಯ ಸಾಧನೆ

- ನೋಂದಣಿಯಾದ ಸದಸ್ಯರು : **30.59** ಲಕ್ಷ
- ಸದಸ್ಯರಿಂದ ಒಟ್ಟು ಸಂಗ್ರಹಣೆಯಾದ ಮೊತ್ತ : ರೂ. **3641.00** ಲಕ್ಷ
- ಸರ್ಕಾರವು ಯಶಸ್ವಿನಿ ಟ್ರಸ್ಟ್‌ಗೆ ಬಿಡುಗಡೆ ಮಾಡಿರುವ ಮೊತ್ತ : ರೂ. **3000 .00** ಲಕ್ಷ
- ಹೊರರೋಗಿ ಚಿಕಿತ್ಸೆ ಪ್ರಕರಣಗಳು : **1,81,000**
- ಶಸ್ತ್ರಚಿಕಿತ್ಸೆ ಪ್ರಕರಣಗಳು : **66,837**
- ಶಸ್ತ್ರಚಿಕಿತ್ಸೆಗೆ ಖರ್ಚಾದ ಮೊತ್ತ : ರೂ. **54.50** ಕೋಟಿ

ಸರ್ಕಾರದ ಇನ್ನಿತರ ಸಾಧನೆಗಳು

- **92,359** ರೈತರಿಗೆ ಬೆಳೆ ವಿಮೆ ಪರಿಹಾರವಾಗಿ ರೂ. **25.16** ಕೋಟಿಗಳನ್ನು ವಿತರಿಸಲಾಗಿದೆ.
- ಹೈದ್ರಾಬಾದ್ - ಕರ್ನಾಟಕದ ಗುಲ್ಬರ್ಗ ಜಿಲ್ಲೆಯಲ್ಲಿ ಸಮಗ್ರ ಸಹಕಾರ ಅಭಿವೃದ್ಧಿ ಯೋಜನೆಗಾಗಿ ರೂ. **227.54** ಲಕ್ಷ ಷೇರು ಬಂಡವಾಳ ಹಾಗೂ ರೂ. **79.00** ಲಕ್ಷ ಸಾಲ ಬಿಡುಗಡೆ ಮಾಡಲಾಗಿದೆ.
- ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಲಕ್ಕೆ ಸಹಕಾರ ಸಂಘಗಳ ಮೂಲಕ ರೈತರಿಗೆ ರಸಗೊಬ್ಬರವನ್ನು ಕಾಪು ದಾಸ್ತಾನು ಮಾಡಿ ವಿತರಿಸಲು ರೂ. **400** ಕೋಟಿ ಸಾಲವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಿಂದ ಪಡೆಯಲು ಸರ್ಕಾರವು ಖಾತರಿ ನೀಡಿದೆ ಹಾಗೂ ಈ ಉದ್ದೇಶಕ್ಕಾಗಿ ರೂ. 25 ಕೋಟಿ ಅನುದಾನವನ್ನು ನೀಡಿದೆ.
- ಸಹಕಾರ ಸಂಘಗಳ ನೌಕರರ ನಿವೃತ್ತಿ ವಯಸ್ಸನ್ನು **58** ವರ್ಷಗಳಿಂದ **60** ವರ್ಷಗಳಿಗೆ ಏರಿಕೆ ಮಾಡಲಾಗಿದೆ.

ಮೀನುಗಾರರ ಸಹಕಾರ ಸಂಘಗಳಿಗೆ ಪ್ರೋತ್ಸಾಹ

- ಮೀನುಗಾರರ ಸಹಕಾರ ಸಂಘಗಳಿಗೆ ಶೇ. 6 ರ ಬಡ್ಡಿ ದರದಲ್ಲಿ ಸಾಲ ವಿತರಿಸಲು ಕ್ರಮ. ಅವುಗಳಿಗೆ ಲೆಕ್ಕ ಪರಿಶೋಧನಾ ಶುಲ್ಕ ಪಾವತಿಯಿಂದ ವಿನಾಯಿತಿಗೆ ಆದೇಶ.

ಶ್ವೇತ ಕ್ರಾಂತಿಗೆ ಪ್ರೋತ್ಸಾಹ

- ರಾಜ್ಯದ ಹಾಲು ಉತ್ಪಾದಕರ ಸಹಕಾರ ಸಂಘಗಳ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ರೂ. 2 ರಂತೆ ಪ್ರೋತ್ಸಾಹ ಧನ.
- ಉತ್ತರ ಕರ್ನಾಟಕದಲ್ಲಿ ಹೈನುಗಾರಿಕೆ ಚಟುವಟಿಕೆಗಳನ್ನು ಅಭಿವೃದ್ಧಿ ಪಡಿಸಿ ಅಲ್ಲಿನ ಸಣ್ಣ ಮತ್ತು ಮಧ್ಯಮ ರೈತರುಗಳ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಲು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿಯ ಮುಖಾಂತರ ತಲಾ ರೂ. **50,000/-** ಷೇರು ಧನದೊಂದಿಗೆ **1000** ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸ್ಥಾಪಿಸಲು ಸರ್ಕಾರವು ಆದೇಶಿಸಿದೆ.

ಸಹಕಾರ-ಪ್ರಗತಿಯ ಮೂಲಾಧಾರ

ಕರ್ನಾಟಕ ವಾರ್ತೆ